ಕಾಡಿನಲ್ಲಿ ಕೈವಲ್ಯ

ಜಿ. ಎಚ್. ಹನ್ನೆರಡುಮಠ.

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ
ಮಂಡಳ, ಮೂರುಸಾವಿರಮಠ
ಹುಬ್ಬಳ್ಳಿ.
೧೯೭೮.



ಕಾಡಿನಲ್ಲಿ ಕೈವಲ್ಯ

ಜಿ. ಎಚ್. ಹನ್ನೆರಡುಮಠ.

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ
ಮಂಡಳ, ಮೂರುಸಾವಿರಮಠ
ಹುಬ್ಬಳ್ಳಿ.
೧೯೭೮.

ಶ್ರೀಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ: ೪೪

ಪ್ರಕಾಶಕರು:
ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ,
ಮೂರುಸಾವಿರಮಠ, ಹುಬ್ಬಳ್ಳಿ.

ಲೇಖಕರು:
ಪ್ರೊ. ಜಿ. ಎಚ್. ಹನ್ನೆರಡುಮಠ, ಎಂ.ಎ.
'ಕನ್ನಡ ವಿಭಾಗ'ದ ಮುಖ್ಯಸ್ಥರು:
ಶ್ರೀ ವಿಜಯ ಮಹಾಂತೇಶ್ವರ ಆರ್ಟ್ಸ-ಸಾಯನ್ಸ-ಕಾಮರ್ಸ ಕಾಲೇಜ,
ಇಲಕಲ್ಲ.

ಹಾಗೂ
ಸಂಪಾದಕರು: "ಪರಂಜ್ಯೋತಿ"
ಶ್ರೀ ಜಗದ್ಗುರು ಮೂರುಸಾವಿರಮಠ, ಹುಬ್ಬಳ್ಳಿ.

ಪ್ರಥಮ ಮುದ್ರಣ:
೨,೦೦೦ ಪ್ರತಿಗಳು, ೧೯೭೮ ಡಿಸೆಂಬರ, ೬.

ಬೆಲೆ - ಹತ್ತು ರೂಪಾಯಿ

ರಕ್ಷಾಕವಚ ಕಲೆ: ಶ್ರೀ ಕೆ. ಬಿ. ಕುಲಕರ್ಣಿ
ಸಂಯುಕ್ತ ಕರ್ನಾಟಕ ಸ್ಟಾಫ್ ಆರ್ಟಿಸ್ಟ, ಹುಬ್ಬಳ್ಳಿ.

ಮುದ್ರಕರು: ಆನಂದ ಪ್ರಿಂಟಿಂಗ್ ಪ್ರೆಸ್, ಇಲಕಲ್ಲ.


ಅರ್ಪಣೆ:

ಲೋಕಗುರುವಿಗೆ: ಶ್ರೀಗುರುವಿಗೆ

"ಹುಚ್ಚ" ನಿಗೆ....



ಕಾಡಿನಲ್ಲಿ ಕೈವಲ್ಯ ತಂದ ಯೋಗಿ...



ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರನ ಶ್ರೀಸಮಾಧಿ

ಆಶೀರ್ವಾದ

ಪೂಜ್ಯ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು: ಮೂರುಸಾವಿರಮಠ; ಹುಬ್ಬಳ್ಳಿ ಅವರಿಂದ

"ಕಾಡಿನಲ್ಲಿ ಕೈವಲ್ಯ" –ನಮ್ಮ ಮಠದ ಅತ್ಯಂತ ಹೆಮ್ಮೆಯ ಪ್ರಕಟನೆ. "ಚಿತ್ತರಗಿ ಚಿಜ್ಜ್ಯೋತಿ" ಯನ್ನು ಬರೆದ ಪ್ರೊ. ಜಿ. ಎಚ್. ಹನ್ನೆರಡುಮಠ ಅವರಿಗೆ ನಮ್ಮ ಮಠದ ಇತಿಹಾಸದ ಮೇಲೆ ಬೆಳಕು ಬೀರಬಲ್ಲಂತಹ ಕೃತಿಯೊಂದನ್ನು ರಚಿಸಲು ಹೇಳಿದೆವು. ಅವರು ನಮ್ಮ ನಿರ್ದೇಶನ ಹಾಗೂ ಅಪೇಕ್ಷೆಯಂತೆ ಉಜ್ವಲವಾಗಿ ಈ ಕಾದಂಬರಿಯನ್ನು ಸೃಷ್ಟಿಸಿದ್ದಾರೆ.

ಕಾಲಗರ್ಭದಲ್ಲಿ ನಮ್ಮ ಶ್ರೀ ಜಗದ್ಗುರು ಮೂರುಸಾವಿರಮಠದ ಅಧಿಕೃತ ದಾಖಲೆಗಳು ಹೂತುಹೋಗಿವೆ. ಪ್ರೊ. ವರದರಾಜ ಉಮರ್ಜಿ ಯವರ ಲೇಖನದ ಆಧಾರದ ಮೇಲೆ ನಮ್ಮ ಮಠಕ್ಕೆ ೧೧ನೆಯ ಶತಮಾನ ದಷ್ಟುಪೂರ್ವದ ಇತಿಹಾಸ ದೊರಕಿತು. ಅಲ್ಲದೆ ಕಲ್ಯಾಣಕ್ರಾಂತಿಯ ನಂತರ ಉಳವಿಗೆ ಹೊರಟ ಮೂರುಸಾವಿರಜಂಗಮರಿಗೆ ನಮ್ಮ ಮಠ ಆಶ್ರಯ ನೀಡಿ ತೆಂದು ಐತಿಹ್ಯವಿದೆ. ನಮ್ಮ ಮಠದ ಶಾಖಾಮಠವೊಂದರಲ್ಲಿ ಚನ್ನ ಬಸವಣ್ಣನವರು ಲಿಂಗಾರ್ಚನೆ ಮಾಡಿಕೊಂಡು ಉಳವಿಗೆ ಹೋದ ಸಂಗತಿ ತಿಳಿದು ಬಂದಿದೆ. ಆಗಿನ್ನೂ ಹುಬ್ಬಳ್ಳಿ ಚಿಕ್ಕ ಗ್ರಾಮವಾದ 'ಪೂವಳ್ಳಿ'. ಅದನ್ನೆ ಆಧಾರವಾಗಿರಿಸಿ; ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರನು (ಹುಚ್ಚೇಶ್ವರನು) ಮೂಲಪುರುಷನೆಂದು ಸ್ವೀಕರಿಸಿ, ಕಥೆಯಹಂದಿರವನ್ನು ಅರಳಿಸಲು ಪ್ರೊ. ಜಿ. ಎಚ್. ಹನ್ನೆರಡುಮಠ ಅವರಿಗೆ ಕೇಳಿದೆವು. ಅವರು ಒಪ್ಪಿಕೊಂಡು ತಮ್ಮ ಸಮರ್ಥವಾದ ಶೈಲಿಯಲ್ಲಿ "ಕಾಡಿನಲ್ಲಿ ಕೈವಲ್ಯ"ವನ್ನು ಮೂಡಿಸಿದ್ದಾರೆ. ಹನ್ನೆರಡುಮಠರ ಸಿದ್ಧಹಸ್ತದಿಂದ ಆ ಮಹಾನ್ ಸಿದ್ಧಿಪುರುಷನ ಜೀವನ ಇಲ್ಲಿ ಕಲಾಪೂರ್ಣವಾಗಿ ಅರಳಿದೆ.

ಈ ಮಹಾನ್ ಕೃತಿಯಿಂದ ಶ್ರೀ ಜಗದ್ಗುರು ಮೂರುಸಾವಿರಮಠದ ಧಾರ್ಮಿಕ–ಸಾಂಸ್ಕೃತಿಕ–ತಾತ್ವಿಕ ಪರಂಪರೆಯ ಗುಣೋನ್ನತಿ ಮಹೋನ್ನತಿಗಳು ಸರ್ವರಿಗೂ ಚಿರಪರಿಚಿತವಾಗಲೆಂದು ಹಾರೈಸುತ್ತೇವೆ. ಗ್ರಂಥಕರ್ತರಾದ ಪ್ರೊ. ಜಿ. ಎಚ್. ಹನ್ನೆರಡುಮಠ ಅವರಿಗೆ ಕರ್ತೃ ಜಗದ್ಗುರು ಗುರುಸಿದ್ಧೇಶ್ವರನು ಸರ್ವರೀತಿಯಿಂದಲೂ ಕಾಪಾಡಲೆಂದು ಹಾರೈಸುತ್ತೇವೆ.

ಹುಬ್ಬಳ್ಳಿ.
೧೪–೧೧–೭೮
ಗೌರಿಹುಣ್ಣಿವೆ

—ಶ್ರೀಮೂಜಗಂ

ಮೊದಲ ಮಾತು

ಈ ಕಾದಂಬರಿಗೆ ಪೂರ್ವದಲ್ಲಿ ಒಂದು ಮಾತು ಹೇಳಲೇಬೇಕೆಂದು ಅನಿಸುತ್ತದೆ. ನನ್ನೂರು ಹುಬ್ಬಳ್ಳಿ. ನಮ್ಮ ಮನೆತನದ ಹಿರಿಯರು ಕಾಲಾನುಕಾಲದಿಂದ ಕರ್ತೃ ಹುಚ್ಚೇಶ್ವರನ ನಿಷ್ಠಾವಂತ ಭಕ್ತರು. ಇದೇ ಗದ್ದುಗೆಗೆ ನಮ್ಮ ಅಮ್ಮ ಹರಕೆ ಹೊತ್ತು ಹಡೆದ ನಮ್ಮ ತಂದೆಯವರಿಗೆ "ಹುಚ್ಚಯ್ಯ" ಎಂದು ಹೆಸರಿಟ್ಟಳಂತೆ! ಅಲ್ಲದೇ ನಮ್ಮ ತಾಯಿಯವರು ಕೂಡ ಇದೇ ಗದ್ದುಗೆಗೆ ಬೇಡಿಕೊಂಡು, ಗಂಡು ಹುಟ್ಟಿದರೆ ನಿನ್ನ ಹೆಸರು ಇಡುವದಾಗಿ ಹರಕೆ ಹೊತ್ತು, ಹುಟ್ಟಿದ ನನಗೆ ಆ 'ಗುರುಸಿದ್ಧ' ನ ಹೆಸರನ್ನೇ ಇಟ್ಟರಂತೆ!! ಆ ನಮ್ಮ ಅಮ್ಮ ಲಿಂಗೈಕ್ಯ ಪರಮ್ಮನವರು ತಮ್ಮ ಇಡೀ ಜೀವನವನ್ನೇ; ಮೂರುಸಾವಿರಮಠಕ್ಕೆ ಸತತ ನಡೆದು ಕೊಂಡು; ಧಾರೆಯೆರೆದ ಪುಣ್ಯವಂತೆ. ಮೂರುಸಾವಿರಮಠದ ಭಕ್ತರ ಪರಂಪರೆಯಲ್ಲೇ 'ಶರಣೆ ಪರಮ್ಮ' ಎನಿಸಿಕೊಂಡವರು. ಪ್ರತಿದಿನ ಗದ್ದುಗೆಯ ದರ್ಶನವಿಲ್ಲದೇ ಬಾಯಿಗೆ ನೀರು ಹಾಕುತ್ತಿರಲಿಲ್ಲ. ಅಲ್ಲದೆ ನಮ್ಮ ತಂದೆಯವರು ಹುಬ್ಬಳ್ಳಿಯಲ್ಲಿದ್ದಾಗ ಗದ್ದುಗೆಯ ದರ್ಶನ ಎಂದೂ ತಪ್ಪಿಸುತ್ತಿರಲಿಲ್ಲ. ಬೇರೆ ಊರಿನಿಂದ ಹುಬ್ಬಳ್ಳಿಗೆ ಬಂದಾಗಲೂ ಮೊದಲು ಟಾಂಗಾದಲ್ಲಿ ಮೂರುಸಾವಿರಮಠಕ್ಕೆ ಬಂದು ದರ್ಶನ ಪಡೆದು; ಆನಂತರವೇ ಮನೆಗೆ ಬರುತ್ತಿದ್ದರು. ನನ್ನ ತಾಯಿಯವರಂತೂ ಈ ಗದ್ದುಗೆಯ ಮಾತು ಬಂದಾಗ ಇಂದಿಗೂ ಭಕ್ತಿಪರವಶರಾಗಿ ಮಾತಾಡುತ್ತಾರೆ. ಹೀಗೆ ಹಳೇ ಹುಬ್ಬಳ್ಳಿಯ ಹನ್ನೆರಡುಮಠಕ್ಕೂ ಹೊಸಹುಬ್ಬಳ್ಳಿಯ ಮೂರು ಸಾವಿರಮಠಕ್ಕೂ ಈ ಭಕ್ತಿಯ ಪ್ರಗಾಢ ಸಂಬಂಧ ಉಂಟು. ಇಂಥ ಒಟ್ಟುವಾದ ಪರಿಸರದಲ್ಲಿ ಮಗುವಾಗಿ ಬೆಳೆದು ಬಂದವನಾನು. ಆದ್ದರಿಂದ ಈ ಗ್ರಂಥ ಕರ್ತೃಗುರುಸಿದ್ಧೇಶನ ಶ್ರೀಪಾದಸನ್ನಿಧಿಯಲ್ಲಿಅರ್ಪಿಸಿದ ಸಂಪೂರ್ಣ ಸಮರ್ಪಣೆಯ ಕೃತಿ. ಇದೇ ಭಾವದಿಂದಲೇ ಇದನ್ನು ಬರೆದಿದ್ದೇನೆ. ಇದು ಆ ಮಹಾಶಕ್ತಿಯ ಸಮಾಧಿಗೆ ನನ್ನ ಶಬ್ದಾಂಜಲಿ ಮಾತ್ರ! ಇಲ್ಲಿ ಆತನ ಇತಿಹಾಸವನ್ನು 'ಏಕೆ' 'ಏನು' ಎಂದು ಕೆದಕಿ ಕೇಳುವ ಉದ್ದೇಶ ನನಗಿಲ್ಲ. ಇಲ್ಲಿ ಇತಿಹಾಸ ಮುಖ್ಯವಲ್ಲ; ಸಮರ್ಪಣೆ ಮುಖ್ಯ. ನಾನು ಚಿಕ್ಕವನಾಗಿ

ದ್ದಾಗ ಈ ಪುಣ್ಯಕ್ಷೇತ್ರದ ಬಗ್ಗೆ ಕೇಳಿದ ವದಂತಿ ಇಲ್ಲಿ ಕಥಾರೂಪ ತೊಟ್ಟಿದೆ. ಅಲ್ಲದೆ ಪೂಜ್ಯ ಜಗದ್ಗುರುಗಳವರು ನನಗೆ ಈ ಗ್ರಂಥರಚನೆಯಲ್ಲಿ ಹಾಗೂ ಇದರ ಐತಿಹಾಸಿಕ ಕಾಲಾವಧಿಯಲ್ಲಿ ಇದೇ ಮಾರ್ಗವನ್ನು ಅನುಸರಿಸ ಬೇಕೆಂದು ಸ್ಪಷ್ಟ ಸೂಚನೆಯನ್ನು ನೀಡಿದ್ದರಿಂದ ನಾನು ಸ್ವಂತಕ್ಕೆ ವಿಚಾರಿಸುವ ಪರಿಶ್ರಮವೇ ಕಡಿಮೆಯಾಯಿತು. ಅವರ ನಿರ್ದೇಶನವೇ ಈ ಪರಿವೇಷ ತೊಟ್ಟಿದೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜ ಯೋಗೀಂದ್ರ ಮಹಾಸ್ವಾಮಿಗಳು ನನಗೆ.... "ಹನ್ನೆರಡುಮಠರೇ.... ನಿಮ್ಮ 'ಚಿತ್ತರಗಿ ಚಿಜ್ಜ್ಯೋತಿ' ಶೈಲಿಯಲ್ಲಿ ಕೇವಲ ೩೬ ಪುಟಗಳಲ್ಲಿ ಮಠದ ಗದ್ದುಗೆಯ ಬಗ್ಗೆ ಬರೆಯಿರಿ...." ಎಂದರು. ಐತಿಹಾಸಿಕವಾಗಿ ಇದೇ ರೀತಿಬರೆಯಿರೆಂದು ಸರಿಯಾಗಿ ನಿರ್ದೇಶನ ಮಾಡಿದರು. ಆದರೆ ೩೬ ಪುಟಗಳ ಲೆಕ್ಕ ಬುಡಮೇಲಾಯಿತು. ನಾನೇ ಅವರಿಗೆ.... "ನನ್ನ ಲೆಕ್ಕಾಚಾರ ಬುಡಮೇಲಾಗಿ.... ಆ ಗ್ರಂಥ ತನ್ನಿಂದ ತಾನೇ ತನಗೆ ಬೇಕಾದಂತೆ ಬರೆಸಿ ಕೊಳ್ಳುತ್ತಿದೆ .. " ಎಂದು ಹೇಳಿದೆ. ಜಗದ್ಗುರುಗಳು ಸಮ್ಮತಿಸಿದರು. ಕರ್ತೃ ಗುರುಸಿದ್ಧೇಶ್ವರರು ಯಾರು, ಕಾಲ ಯಾವುದು; —ಇದರ ಬಗ್ಗೆ ಇನ್ನೂ ಸಂಶೋಧನೆಗಳು ನಡೆದಿವೆ,.... ನಡೆಯಬೇಕು. ಈ ಕಾದಂಬರಿ ರಚನೆಗೆ ಪೂಜ್ಯ ಜಗದ್ಗುರುಗಳು ತಾವು ಕೇಳಿ ತಿಳಿದುಕೊಂಡ ಐತಿಹ್ಯ ಗಳ ಹಾಗೂ ದಾಖಲೆಗಳ ಆಧಾರದಿಂದ ನನಗೆ ಇದರ ಕಾಲ-ದೇಶ-ವರ್ತ ಮಾನಗಳನ್ನು ನಿರ್ಧಿಷ್ಟಪಡಿಸಿ ಹೇಳಿದ್ದರಿಂದ ನನಗೆ ಹೆಚ್ಚಿನ ತೊಂದರೆ ಯಾಗಲಿಲ್ಲ. ಈ ವಿವರಗಳನ್ನು ಒದಗಿಸಿದ ಪೂಜ್ಯರಲ್ಲಿ ನಾನು ಋಣಿ ಯಾಗಿದ್ದೇನೆ. ಈ ಕೃತಿ ನನ್ನ ಭಕ್ತಿಕಲ್ಪನೆಯ ಸಮಗ್ರವಸ್ತುಸೃಷ್ಟಿ. ಕಾಲಾತೀತನಾದ ಯತಿಗೆ ಇದೊಂದು ಅಕ್ಷರಾರತಿ.

ಸಕಾಲಕ್ಕೆ ಅಚ್ಚು ಹಾಕಿಕೊಟ್ಟ ಇಲಕಲ್ಲಿನ "ಆನಂದ ಮುದ್ರಣಾ ಲಯ" ದ ಒಡೆಯರಿಗೆ ಧನ್ಯವಾದಗಳು.

ಇಲಕಲ್ಲ.

ನಿವಾಸ: "ಸುಪ್ರಮಾನಸಕುಟ್ಮಲಂ" —ಜಿ. ಎಚ್. ಹನ್ನೆರಡುಮಠ.

೩೧-೧-೧೯೭೮.

೧

ಇಗೋ ಗೋಪುರ ಗಡಿಯಾರ !

ಘಣಲ್....ಘಣಲ್....ಘಣಲ್....ಘಣಲ್.... ....

ಎಷ್ಟು ಬಾರಿಸಿತು ?

ಹನ್ನೆರಡು.... ಹನ್ನೆರಡು ಗಂಟೆ ....

ತುಂಬಿದ ಹುಬ್ಬಳ್ಳಿ. "ಹೂಗಳು ಬಳ್ಳಿಗಳು ತುಂಬಿದ ಹಳ್ಳಿ .... ಇದೇ ಹುಬ್ಬಳ್ಳಿ" ಎಂದರೆ ಕೇಳಿದವರು ನಕ್ಕಾರು! ಎಲ್ಲಿಯ ಹೂವು ? ಎಲ್ಲಿಯ ಬಳ್ಳಿ ? ಇದೋ.... ಬುಂಯ್‌ಗುಡುವ ಬಸ್ಸುಗಳು.... ರೊಂಯ್‌ಗುಡುವ ಟ್ರಕ್ಕುಗಳು.... ಹುಚ್ಚುನಾಯಿಗಳಂತೆ ಓಡಾಡುವ ಆಟೋರಿಕ್ಷಾಗಳು.... 'ಆ್ಯಕ್ಸಿಡೆಂಟಿಗೆ ರೆಡಿಯಾಗಿರುವ ಸೈಕಲ್ ಮೋಟಾರುಗಳು.... ಹಳ್ಳಿಯ ಕನ್ಯೆಯರಂತೆ ದಾರಿಕಂಡತ್ತ ನುಸುಳಿ

ಹೋಗುವ ಸೈಕಲ್ಲುಗಳು.... ಜನಪ್ರೋ ಜನ.... ಗದ್ದಲೋ ಗದ್ದಲ.... ಮಧ್ಯದಲ್ಲಿ ಗಗನಕ್ಕೆ ತಲೆಯೆತ್ತಿ ನಿಂತ ಗೋಪುರ ಗಡಿಯಾರ.... ಇಪ್ಪತ್ತ-ನೆಯ ಶತಮಾನದ ಭವ್ಯ ನವ್ಯ ದೇವಾಲಯ.... ಕಿಕ್ಕಿರಿದ ಜನಸಂದಣಿಯ ಮಧ್ಯದಲ್ಲಿ ವೈಭವದಿಂದ ಮೇಲೆದ್ದು ನಿಂದಿದೆ ಈ ಮಠ.... ಇಗೋ ಈ ಮೂರುಸಾವಿರ ಮಠ....

* * *

ಕಣ್ಣು ಮುಚ್ಚಿರಿ !

ಮುಚ್ಚಿದಿರಾ ... ?

ಇನ್ನು ನಿಮ್ಮ ಕಣ್ಣು ನೂರಾರು ವರ್ಷಗಳ ಹಿಂದಿನ ಇತಿಹಾಸ-ದಲ್ಲಿ....ಅರ್ಥಾತ್ ಭೂತಕಾಲದಲ್ಲಿ....ಇದೇ ಸ್ಥಳದಲ್ಲಿಯೇ ತೆರಿಯಿರಿ .. !।

ಕಣ್ಣು ತೆರೆದಿರಾ... ??

* * *

ಇಗೋ.... ಈಗ ನೋಡಿರಿ.... ಏನು ಕಾಣುತ್ತಿದೆ?... ಪ್ರಶಾಂತ ಸುಂದರ ಅರಣ್ಯ. ಹೂವಿನ ಹಸಿರು. ಹಸಿರಿನ ಉಸಿರು. ಎಲ್ಲೆಲ್ಲೂ ಕಾಡು. ಎಲ್ಲೆಲ್ಲೂ ಅರಣ್ಯ. ಎಲ್ಲೆಲ್ಲೂ ಏಕಾಂತ. ಪ್ರಶಾಂತ. ಸುಂದರ. ಮಧುರ. ಶೀತಲ. ಸುಗಂಧ. ಶ್ರೀಗಂಧ.

ತಪೋವನದ ವಾತಾಯನ. ಪಕ್ಕದಲ್ಲಿಯೇ ಹರವಾಗಿ ಹಿಗ್ಗಿದ ತುಂಬಿದ ಹೊಂಡ. ಹೊಂಡದ ತುಂಬಾ ನೀರು. ನೀರಿನ ತುಂಬಾ ಕಮಲಗಳು. ಕಮಲಗಳಲ್ಲಿ ತುಂಬಿ ತುಳುಕಿದ ಮಂದಮಾರುತ. ಮುಗ್ಧ ಮಾರುತ. ಸುತ್ತಲೂ ಎತ್ತರದ ಮರಗಳು. ಅವುಗಳನ್ನು ಅಪ್ಪಿ ಮುದ್ದಿಟ್ಟ ಬಳ್ಳಿಗಳು. ಗಿಡಗಳ ತುಂಬಾ ಹಣ್ಣುಗಳು. ಬಳ್ಳಿಗಳ ತುಂಬಾ ಹೂವು-ಗಳು. ಎಲ್ಲೆಲ್ಲೂ ಹೂವು... ಬಳ್ಳಿ.... ಹೂಬಳ್ಳಿಯಾಗಿದ್ದಾಳೆ ಈ

ಕಾನನ ಕುವರಿ. ಮಲೆನಾಡಿನ ಮುಗ್ಧ ಮುತ್ತೈದೆ. ಅಗೋ .... ಉತ್ತರ ದಿಕ್ಕಿನಲ್ಲಿರುವ ಪುಟ್ಟ ಗುಡ್ಡದಿಂದ ಸಾವಿರ ಸಾವಿರ ಗಿಳಿಗಳು ಹಿಂಡು ಹಿಂಡಾಗಿ .... ಗಗನಕ್ಕೆ ಗಲ್ಲ ಹಚ್ಚಿ.... ಗಾಳಿಗೆ ಗಾನ ಹೊಚ್ಚಿ ಬರುತ್ತಿವೆ ಇಗೋ .... ಇಲ್ಲಿಗೇ .... ಈ ಸರೋವರದ ಹಣ್ಣುಗಳನ್ನು ಮೆಲ್ಲಲೆಂದು ಬಿಲ್ಲಿನ ಚಿಟ್ಟಾಣಿಗಳಂತೆ ಸಡಗರದಿಂದ ಬರುತ್ತಿವೆ ಆ ಗಿಳಿ-ಗಳು. ಕಣ್ಣು ಕಂಡತ್ತ ವೃಕ್ಷಗಳು. ಕಿವಿ ಕೇಳ್ದತ್ತ ಪಕ್ಷಿಗಳು. ಆಲ-ಅರಳಿ-ಬಸರಿ-ಬೇವು-ಮಾವು-ಬಾರಿ-ಬೂರಲ-ಜಾಲಿ-ಹಲಸು-ಹುಣಿಸೆ- ಅತ್ತಿ-ಜಾಜಿ-ತೇಗು-ಬಿದಿರು-ಬಳುವಲ-ಬನ್ನಿ.... ನೂರೆಂಟು ಮರಗಳು. ಸುತ್ತೆಲ್ಲ ನೀರಿನ ಝುರಿಗಳು. ಝುರಿಗಳಗುಂಟ ಸೊಕ್ಕಿನಿಂದ ಬಲಿತು ಬೆಳೆದ ಬಳ್ಳಿಗಳು. ಜೇನ್ಗೊಣಗಳು ಜೋಕಾಲಿ ಕಟ್ಟಿವೆ. ಹಕ್ಕಿಗಳು ಬಗಾಟ ಬಗರಿ ಆಡಿವೆ. ಇದು ಕೇವಲ ನಿರ್ಜನಾರಣ್ಯ. ಶೂನ್ಯಕಾನನ. ಹುಲಿ-ಚಿರ್ಚ-ಕಾಡಹಂದಿ-ವನ್ಯಮೃಗಗಳ ಹೊರತು ಇಲ್ಲಿ ಮತ್ತಾರೂ ಇಲ್ಲ .... ಯಾರೂ ಇಲ್ಲ .... ಯಾರೂ ಇಲ್ಲ .... ಯಾರೂ ಇಲ್ಲ ....

* * *

ಯಾರೂ ಇಲ್ಲವೇ ?
ಏಕಿಲ್ಲ ?

ಅಗೋ ಹಳ್ಳದ ದಂಡೆಯ ಕಲ್ಲು ದಿಬ್ಬ. ಆ ಕಲ್ಬಂಡೆಯಲ್ಲಿ ಆಳ-ವಾದ ಗವಿ. ಸುತ್ತಲೂ ಬಿಲ್ವವೃಕ್ಷಗಳು. ತೆಂಗು. ಬಾಳೆ. ಮಲ್ಲಿಗೆ. ಮಾಮರ. ಆ ಗವಿಯಿಂದ ಓಂಕಾರ ಮಂತ್ರವೇ ಅವತಾರ ತಾಳಿದಂತೆ.... ಪಾತಾಳದಿಂದ ಸೂರ್ಯನೇ ಮಾನವರೂಪದಿಂದ ಮೇಲ್ಬಂದಂತೆ.... ಅಗೋ ಬಂದ ಬಂದ ... ವಿಚಿತ್ರ ವೇಷದ ಪ್ರಾಚೀನಯೋಗಿ! ಅರೆನಗ್ನ. ಜಟಾಜೂಟ. ಬರಿಮೈ. ಸೊಂಟಕ್ಕೆ ಕಾವಿಯ ಕಟ್ಟು. ಎದೆಯಲ್ಲಿ ಲಿಂಗದ ಸಂಟು. ಕೊರಳಲ್ಲಿ ರುದ್ರಾಕ್ಷಿಯ ಗಂಟು. ಕಣ್ಣಲ್ಲಿ ದೇವಕಾಂತಿ.

ಗಲ್ಲದಲ್ಲಿ ಮಂದಹಾಸ ಕಾಶ್ಮೀರದ ಕಸೂತಿಯಂತೆ ಹಾಸಿದೆ. ರೇಶಿಮೆಯ್ತ ಗಡ್ಡ.ನಕ್ಷತ್ರದ ಹಲ್ಲುಗಳು. ಯೋಗಿಯ ಮೂಗು. ಹಣೆಯಲ್ಲಿ ಬೆಳುದಿಂಗಳು ಸುರಿದು ಬಿದ್ದು ಭಸ್ಮವಾಗಿದೆ. ಗಡ್ಡ ಬಿಳಿದಾದರೂ ವಯಸ್ಸಿನ ಕಟ್ಟಳೆ ಇಲ್ಲ. ಕಾಲದ ಕಟ್ಟಿಲ್ಲ. ಮುಪ್ಪಿನ ಮೂಗುಮುರಿತವಿಲ್ಲ. ನಿಲವಿನಲ್ಲಿ ಶಿವನ ನಿಲವು. ರೂಪದಲ್ಲಿ ತಾಂಡವ ಭೈರವ. ಭಾವದಲ್ಲಿ ತಾಯಿ ಗಂಗಾದೇವಿ. ಹಠಯೋಗಿಯ ಉಗ್ರತೆ ಇದ್ದರೂ ಶಿವಯೋಗಿಯ ಶಾಂತಿ ಕಂಗೊಳಿಸಿದೆ. ಬಹುಶಃ ಈತ ಯೋಗಿ.... ಯೋಗಿ ಮಾತ್ರನಲ್ಲ.... ಹುಚ್ಚ.... ದೊಡ್ಡ ಹುಚ್ಚ .... ಹುಚ್ಚೇಶ್ವರ ಯೋಗಿ....!

ಶಿವಶಿವಾ!

ಯಾರು ಹುಚ್ಚರು?

ಅವನಿಗೆ ನಾವು ಹುಚ್ಚರೋ....ನಮಗೆ ಅವನು ಹುಚ್ಚನೋ....
ಎರಡೂ ಸರಿ ... ಎರಡೂ ಸರಿ....

* * *

ಬಹುಕಾಲದವರೆಗೆ ಸರೋವರದ ದಂಡೆಯ ಮೇಲೆ ಹೂಬಳ್ಳಿಗಳ ಸುಖಾಸನದ ಮೇಲೆ ಆ ಯೋಗಿ ಧ್ಯಾನ ನಿಮಗ್ನನಾಗಿ ಕುಳಿತ. ಹಿಂದೆ ಮಾಮರ. ಮೇಲೆ ಮಲ್ಲಿಗೆ ಬಳ್ಳಿ. ಮುಂದೆ ಸರೋವರ. ಅವನ ಕಣ್ಣುಗಳು ಅರ್ಧ ಮಾತ್ರ ಮುಚ್ಚಿವೆ. ಆ ಅರೆಗಣ್ಣಿನಿಂದ ಮುಂದಿರುವ ಶಾಂತ ಸರೋವರದ ಚಂಚಲ ತರಂಗಮಾಲೆಗಳ ಚಲುವನ್ನು ನೋಡುತ್ತಿರುವನೋ.... ಅಥವಾ.... ಒಳಗಿರುವ ಆತ್ಮಸರೋವರದ ಅಚಂಚಲ ತರಂಗಮಾಲೆಗಳ ಔನತ್ಯವನ್ನು ಅನುಭವಿಸುತ್ತಿರುವನೋ.... ಯಾರು ಬಲ್ಲರು ? ಇವನನ್ನು ತಿಳಿಯದೇ ಕಂಡವರು— ಹುಚ್ಚಾ ಎಂದಾರು! ತಿಳಿದು ಕಂಡವರು ಹುಚ್ಚರಾಗಿ ಬಾಯ್ಬಿಟ್ಟು ನಿಂದಾರು !!

ನಡುಮಧ್ಯಾಹ್ನದ ಬಿಸಿಗಾಳಿಗೆ ಪಕ್ಕಬೀಸಿ ಹಂಸೆಗಳು ತಂಪು

ತಂದವು. ಕೋಗಿಲೆಗಳು ಗಾನ ತಪಸ್ವಿನಿಯರಂತೆ ಗಾನಿಸಿ ವಾತಾವರಣ ದಲ್ಲಿ ಜೇನು ತುಂಬಿದವು. ಇ ಪ್ರಸನ್ನ ಪ್ರಕೃತಿಯೇ ಇಷ್ಟು ಚಂದ ! ಇನ್ನು ಈ ಚಲುವಿನ ಅನಂತ ಸೌಂದರ್ಯವನ್ನು ಆತ್ಮದ ತುಂಬಾ ಸೂರೆ ಮಾಡಿದ ಈ ಯೋಗಿ ಇನ್ನೆಷ್ಟು ಚಂದ !!

ಆಹಾ.... ನೋಡನೋಡುವಷ್ಟರಲ್ಲಿ ಕೆಂಧೂಳಿ ಪುಟಿದೆದ್ದು ಮುಸುಕಿತು ಮೈತುಂಬಾ ಧೂಳು ಚೆಲ್ಲಿತು. ಮಣ್ಣು ಚಿಮ್ಮಿತು. ಆ ಕ್ಷಣದಲ್ಲಿಯೇ ಧೂಳಿನೊಂದಿಗೆ ಧೂಳಿಯ ತೇರುಗಳಂತೆ ನೂರಾರು ಚಿಗುರೆ ಗಳು ಬೇಡಪಡೆಯ ಬಾಣಪಾತದ ಭಯಂಕರ ಸಂಕಟದಿಂದ.... ಜೀವ ಉಳಿದರೆ ಸಾಕೆಂದು .... ಕಾಲು ಮುರಿದರೂ ಮುರಿಯಲೆಂದು ಬಾಣ-ವೇಗದಿಂದಲೇ ನುಗ್ಗಿ ಹೋದವು. ಚಿಗುರೆಗಳು ಮಾಯವಾದವು. ಧೂಳು ಮಾತ್ರ ಪ್ರೇತದಂತೆ ತಪೋವನದ ವಾತಾವರಣವನ್ನು ಕಲಕು-ಮಲಕುಮಾಡಿತು. ಆದರೂ ಈ ಯೋಗಿ ಧ್ಯಾನ ಮಗ್ನತೆಯಿಂದ ಭಗ್ನ-ನಾಗಲಿಲ್ಲ. ಪದ್ಮಾಸನದಿಂದ ಕಂಪಿಸಲಿಲ್ಲ. ಆ ಕ್ಷಣದಲ್ಲಿ ಅದೇ ಧೂಳ ಮಧ್ಯದಲ್ಲಿ ಪ್ರಾಣ ಸಂಕಟದಿಂದ ಕಾಲು ಕುಂಟುತ್ತ ಉರುಳಿ ಬಿದ್ದ ಪುಟ್ಟ ಹೆಣ್ಣು ಚಿಗುರಿಯು ಮರಿಯೊಂದು ಕಣ್ಣೀರು ಸುರಿಸುತ್ತ ಯೋಗಿಯ ಮುಂದೆ ಜಾರಿ ಬಿತ್ತು. ಸಂಕಟದಿಂದ ನರಳಿತು. ಈಗ ಮಾತ್ರ ಯೋಗಿ ಥಕ್ಕನೆ ಎಚ್ಚತ್ತು ಎದ್ದ! ನೂರಾರು ಚಿಗುರೆಗಳ ಧೂಳಿ ಕಟ್ಟಿದ ಸಪ್ಪಳ-ದಿಂದ ಎಚ್ಚರವಾಗದ ಯೋಗಿ .... ಈಗ ಮಾತ್ರ.... ಒಂದು ಎಳೆಯ ಹರಿಣಿಯ ಸಂಕಟದ ಕೂಗಿನಿಂದ ಕರುಣೆದುಂಬಿ ತಕ್ಷಣವೇ ಮೇಲೆದ್ದ !! ಸಮಾಧಿಗಿಂತಲೂ ಕರುಣೆ ಮೇಲು ಧ್ಯಾನಕ್ಕಿಂತಲೂ ತಾಯ್ತನ ಮೇಲು!!

ಆ ಚಿಗರೆಮರಿ ಒಂದು ಸಲ ಪಿಳಿಪಿಳಿ ಕಣ್ಣು ಬಡೆದು ಯೋಗಿ-ಯನ್ನೊಮ್ಮೆ ಹುಳುಹುಳು ನೋಡಿತು. 'ಈತ ಬೇಡನಲ್ಲ.... ಶಿವ ಯೋಗಿ....' ಎಂದುಕೊಂಡಿತೋ ಏನೊ! ಮತ್ತೊಮ್ಮೆಗೆ ಮೆಲ್ಲನೆ ಅವನ ಬೆರಳುಗಳನ್ನು ಚರಚರ ನೀಪಿತು. ಹುಚ್ಚಯೋಗಿ .... 'ಕಂದವ್ವಾ....

ಅಂಜಬೇಡ ಕಂದವ್ವಾ.... ಶಿವಾ ದೊಡ್ಡಾವ.... ಶಿವಾ ದೊಡ್ಡಾವ.... ನಂಬು ಅವನ್ನ.... ಕಾಯ್ತಾನು.... ಕಾಯ್ತಾನು' ಎಂದು ಅದಕ್ಕೆ ಹೇಳಿದ. ಅದರ ಗಲ್ಲ -ಕಿವಿ ಮೂಗು-ತುಟಿ-ಬೆನ್ನುಗಳ ಮೇಲೆ ಸ್ವೇಚ್ಛೆಯಾಗಿ ಕೈಯಾಡಿಸಿ ತಾಯ್ತನದ ಕಳ್ಳು ತೋರಿದ. ಇವರೆಗೆ ಹೆದರಿ ಹೊಟ್ಟೆ ಹಾರುತ್ತಿದ್ದ ಆ ಮರಿ ಸಹಜಸ್ಥಿತಿಗೆ ಬರತೊಡಗಿತು. ಹುಚ್ಚಯ್ಯ ತನ್ನ ಕಮಂಡಲು ಎತ್ತಿ ಅದಕ್ಕೆ ತನ್ನ ಕೈ ಮುಟಿಗೆಯಿಂದ ಹನಿಹನಿ ನೀರು ಕುಡಿಸಿದ. ಮೈಯನ್ನು ಹಗುರವಾಗುವಂತೆ ತಿಕ್ಕಿ ತನ್ನ ಗವಿಯತ್ತ ಆ ಮರಿಯನ್ನು ಹೊತ್ತೊಯ್ದ.

ಗವಿಯಲ್ಲಿ ಆ ಹುಚ್ಚ ಇಳಿಯುವಾಗ ಆ ಮರಿ ಮತ್ತೊಮ್ಮೆ ಅಂಜಿತು. 'ಅಂಜಬೇಡವ್ವಾ.... ನನ್ನವ್ವಾ.... ಕಂದವ್ವಾ....!' ಎಂದು ಆತ ಮತ್ತೊಮ್ಮೆ ಮರಿಯನ್ನು ಲಾಲಿಸಿದ. ಆದರೂ ಆ ಪುಟ್ಟ ಕೂಸಿಗೆ ಅಂಜಿಕೆ ದೂರಾಗಲಿಲ್ಲ. ಸುತ್ತಲೂ ಕತ್ತಲೆಯ ಗವಿಯನ್ನು ಮತ್ತೆ ಮತ್ತೆ ನೋಡಿ ತನಗೆ ತಾನೇ ನಡುಗಿ ಅಂಜಿಕೊಂಡಿತು. ಆಳವಾದ ಗವಿ. ಆಳವಾದ ಮೆಟ್ಟಲು. ಪಾತಾಳದ ಗುಪ್ತದಾರಿ. ಇದೇನು ಹಾವಿನ ಹುತ್ತವೋ ... ಪಾತಾಳದ ನಾಗಲೋಕವೋ ಎಂಬಂತೆ ತೋರಿತು. ಉಳಿದವರು ಯಾರೇ ಬಂದರೂ ಒಂದು ಕಾಲು ಕಿತ್ತು ಇನ್ನೊಂದು ಕಾಲು ಇಡುವಾಗ ಬುಡುಕ್ಕನೆ ಉರುಳಿ ಬಿದ್ದಾರು. ಕತ್ತಲೋ ಕತ್ತಲು. ನಿಶ್ಶಬ್ದ. ನೀರವ. ಪಾತಾಳದ ಪಾತಾಳ. ಅದ್ಭುತ ಭಯಾನಕ ಗವಿ. ಆ ಯೋಗಿ ಗವಿಯೊಳಕ್ಕೆ ಇಳಿದೇ ಇಳಿದ. ಅವನ ಕೈಯಲ್ಲಿಯ ಚಿಗರಿಯ ಮರಿ ಚಳಿಹತ್ತಿದಂತೆ ಅಂಜಿ ನಡುಗಿತು. ಸಾವೇ ಬಂದಿತೆಂದು ಆ ಕತ್ತಲೆಯ ಕಂದಕವನ್ನು ಹೌಹಾರಿ ನೋಡಿತು. ಅದರ ಕರಾಳ ಕತ್ತಲೆಯನ್ನು ಕಂಡು ಮತ್ತೂ ಗಡಗಡ ನಡುಗಿತು. ತಕ್ಷಣವೇ ... ಭುಸ್ಸ್.... ಭುಸ್ಸ್.... ಎಂಬ ಭಯಂಕರ ಸಪ್ಪಳ ! ನೋಡನೋಡುವಷ್ಟರಲ್ಲಿ ಒಂದು ಭಾರೀ ಸರ್ಪ ಭುಸ್ಸೆಂದು ಆಸ್ಫೋಟಿಸುತ್ತ ಆ ಯೋಗಿಯ ಜಟಾಜೂಟಕ್ಕೆ ಹೆಡೆಯನ್ನು ಅಪ್ಪಳಿಸಿತು. ಇನ್ನೊಂದು ಸರ್ಪ ಇನ್ನೂ ಭಯಂಕರವಾಗಿ

ಭುಸುಗುಟ್ಟುತ್ತ ತನ್ನ ಕಾಳಿಂಗ ಹೆಡೆಯನ್ನು ಈ ಹೆಣ್ಣು ಚಿಗರೆ ಮರಿಯ ಡುಬ್ಬಕ್ಕೆ ಫಡಾರನೇ ಅಪ್ಪಳಿಸಿತು. ಹಾ ಎನ್ನುವಷ್ಟರಲ್ಲಿ ಚಿಗರೆಮರಿ ಚೀರುತ್ತ ಶಿವಯೋಗಿಯ ಕೈಯಿಂದ ಪಟ್ಟನೇ ಹಾರಿ ಜಿಗಿದು ನೆಲಕ್ಕೆ ಬಿದ್ದು ಮತ್ತೊಮ್ಮೆ ಕಾಲು ಮುರಿದುಕೊಳ್ಳುವಷ್ಟರಲ್ಲಿತ್ತು. ಆ ಹುಚ್ಚ ಯೋಗಿ ಬೀಳುವ ಮರಿಯನ್ನು ಪಟ್ಟನೇ ಹಿಡಿದ !! ಆ ಸರ್ಪಗಳಿಗೆ— ಹೋಗ್ರೆಪ್ಪಾ ಹೋಗ್ರಿ .... ಅತ್ಲಾಗ ಹೋಗ್ರಿ.... ಕೂಸು ಅಂಜತೈತಿ.... ಹೋಗ್ರಿ.... ಎಂದು ಆಜ್ಞಾಪಿಸಿದ. ಮತ್ತೆ ಗವಿ ಶಾಂತವಾಯಿತು. ಮೌನ ತಾಳಿತು. ಆ ಮರಿಯಂತೂ ಈ ಹುಚ್ಚನ ಕೈಯಲ್ಲಿ ಸಿಕ್ಕು ಸತ್ತೇ ಹೋದೆನೆಂದು ನಂಬಿತು.

ಹುಚ್ಚ ಎರಡು ಹೆಜ್ಜೆ ಇಳಿದು ಬಲ ಮಗ್ಗುಲಿಗೆ ಹೊರಳುವಷ್ಟರಲ್ಲಿ ಒಂದು ಗುಹಾಮಂದಿರದ ಕೋಣೆ ಕಂಡಿತು. ಅಲ್ಲೊಂದು ದೀಪ. ಹುಲಿಯ ಚರ್ಮ ಹಾಸಿದ ಗದ್ದುಗೆ. ಸುತ್ತಲೂ ಲಿಂಗಪೂಜೆಯ ಪರಿಕರಗಳು. ಮಣ್ಣಿನ ಪಾತ್ರೆಗಳು. ಮಣ್ಣಿನ ಬಟ್ಟಲು. ಅಲ್ಲಲ್ಲಿ ಪೂಜಿಸಿದ ಕಮಲ ಮಲ್ಲಿಗೆಗಳು. ಕಣಗಿಲಗಳು. ಬಿಲ್ವಪತ್ರಿಗಳು. ಸುಗಂಧ ಹರಡಿದ ಅವರ್ಣನೀಯ ಪರಿಮಳ. ಪ್ರಸನ್ನ ಪ್ರಶಾಂತ ಶಾಂತಿ. ಸಮಾಧಿಯ ಅವಿರಳ ಆನಂದವನ್ನೇ ಬಿಚ್ಚಿ ಇಟ್ಟಂತೆ ಯೋಗದ ಉಜ್ವಲ ಪರಿಸರ. ಆ ಹುಚ್ಚಯೋಗಿ ಹುಲಿಚರ್ಮದ ಮೇಲೆ ಕುಳಿತು ಮಗ್ಗುಲಿನ ಚಿಗರೆಯ ಚರ್ಮದ ಮೇಲೆ ಆ ಮರಿಚಿಗರೆಯನ್ನು ಮಲಗಿಸಿದ. ಅದು ಚಿಗರೆಯ ಚರ್ಮವಾದರೂ ತನ್ನ ತಾಯಿಯನ್ನೇ ಕಂಡಂತಾಯಿತು ಆ ಮರಿಗೆ. ಒಂದು ಸಲ ಚರ್ಮವನ್ನೇ ಮೂಸುನೋಡಿ ನೆಕ್ಕಿತು. ಆ ಯೋಗಿ ತನ್ನ ಕೈಯನ್ನು ಗವಿಯ ಮಾಡದಲ್ಲಿ ಚಾಚಿ ಒಂದು ಕಲ್ಲು ಬಟ್ಟಲ ಹೊರತಂದ. ಅದರಲ್ಲಿಯ ಜೇನುತುಪ್ಪವನ್ನು ಸಿಂಪಿಯ ಚಿಪ್ಪಿನಲ್ಲಿ ಹಾಕಿ ಚಿಗರೆಯ ಮರಿಯ ಬಾಯಿಗೆ ಹಚ್ಚಿದ. ಮೊದಮೊದಲು ಇದೇನು ಹಾವಿನ ಹಲ್ಲಿನ ವಿಷವೋ ಎಂದು ಅಂಜಿ ನಾಲಿಗೆಯನ್ನು ಒಳಗೆ

ಸೆಳೆದುಕೊಂಡ ಆ ಮರಿ.... ಈಗ ಜೇನುತುಪ್ಪದ ರುಚಿಹತ್ತಿ ಲೊಚಲೊಚನೆ ಸೀಪಿತು. ಸಿಂಪಿಯ ಚಿಪ್ಪನ್ನೇ ಚಪ್ಪರಿಸಿತು. ಆ ಋಷಿ ಮತ್ತೆ ಮತ್ತೆ ಜೇನುತುಪ್ಪ ತಂದು ಅದಕ್ಕೆ ಸೀಪಿಸಿದ. ಅದು ಮತ್ತೆ ಮತ್ತೆ ಲೊಚಗುಟ್ಟಿ ಸೀಪಿತು. ಮುಸಿಯು ಮಾಡದಲ್ಲಿಟ್ಟಿದ್ದ ಎಲ್ಲ ಜೇನುತುಪ್ಪವೂ ತೀರಿತು. ಈಗ ಮರಿ ತನ್ನ ಮೈಯನ್ನು ಗುಡುಗುದಿಸಿ ಅಲ್ಲಾಡಿಸಿ ದಿಟ್ಟತನದಿಂದ ಆ ದೀಪದ ಬೆಳಗಿನಲ್ಲಿ ಅಡ್ಡಾಡಿತು. ಪೆಟ್ಟಿನ ಕಾಲು ಸರಿಯಾಗಿತ್ತು. ಅಂಜಿಕೆ ದೂರ ಓಡಿತ್ತು. ಹಸುಗೂಸು ತಾಯಿಯ ಮೊಲೆಯನ್ನು ಅಪ್ಪಿದಂತೆ ಯೋಗಿಯ ಮೇಲೆ ಗೋಣು ಆಡಿಸಿ ಮನಬಂದಂತೆ ಸೀಪಿತು ಆಶ್ಚರ್ಯ.... ಅದು ಸೀಪಿ ಚಲ್ಲಾಡುತ್ತಿದ್ದಂತೆ ಈ ಶಿವಯೋಗಿ ಮತ್ತೆ ಧ್ಯಾನಮಗ್ನನಾಗಿಬಿಟ್ಟ ! ಇದೇನು ರಸಯೋಗವೋ ಋಷಿಯೋಗವೋ ಅವನಿಗೇ ಗೊತ್ತು !!

ಬಹುಕಾಲ ಜಾರಲಿಲ್ಲ. ಮತ್ತೆ ಭಯಂಕರ ಕೂಗುಗಳು ಎಲ್ಲಿಂದಲೋ ಕೇಳಿದವು. ಋಷಿ ಕಣ್ತೆರೆದ. ಮರಿಯನ್ನು ಆಲಿಂಗಿಸಿ ಮತ್ತೆ ಗವಿಯ ಮೇಲಕ್ಕೆ ಹತ್ತಿದ. ಮೆಟ್ಟಿಲುಗಳನ್ನು ಏರಿದ. ಮತ್ತೆ ಹೊರಗಿನ ಸೂರ್ಯಪ್ರಕಾಶದ ಕಣ್ಣುಕುಕ್ಕುವ ಲೋಕಕ್ಕೆ ಬಂದ. ಮತ್ತೆ ಅದೇ ಕಾನನ. ಅದೇ ಅರಣ್ಯ. ಆದರೆ ಈಗ ಹತ್ತೆಂಟು ಭಯಂಕರ ಕರಿಯ ಕರಾಳ ರಾಕ್ಷಸರು. ನೋಡಲು ಹಂಚಿನ ಮೈ. ಇದ್ದಲಿಯ ಕಣ್ಣಿಯಂತಾ ತುಟಿಗಳು. ಕೋಣವನ್ನು ನುಂಗುವ ಕಣ್ಣುಗಳು. ಹಸಿಮಾಂಸವನ್ನೇ ತಿನ್ನುವ ಹಲ್ಲುಗಳು. ಹೆಗ್ಗಣದ ಬಾಲದಂತಿದ್ದ ಮೀಸೆಗಳು. ಅವರಲ್ಲಿ ಒಬ್ಬ ದೊಡ್ಡ ರಾಕ್ಷಸಮಾನವ ಚೀರಿ ಹೇಳಿದ—

‘ಲೇ....ಲೇ....ಹುಚ್ಚಾ....ತಾ....ತಾ....ಆ ಮರಿ ತಾ....’

ಈ ಹುಚ್ಚ ಶಿವಯೋಗಿ ಶಾಂತವಾಗಿ ನಸುನಕ್ಕು ಮೆಲ್ಲನೆ ಕೇಳಿದ—

‘ಆ ಮರಿ ನಿನಗೆ ಯಾಕೆ ಬೇಕು ?’

ಆತ ಕೆಣಕಿ ಅರಚಿದ—

'ಥೂ.... ಅದೆಲ್ಲಾ ಬ್ಯಾಡಾ.... ತಾ ಅದನ್ನ ಮೊದ್ಲ.... ಇಲ್ಲಾಂದ್ರ ಹಲ್ಲ ಮುರುವ ದವಡಿ ಬಿಚ್ಚೇನಿ....'

ಈತ ಮತ್ತೂ ನಕ್ಕು ಹೇಳಿದ—

'ಹಾಗಾದರೆ ಹಾಗೇ ಮಾಡು....'

'ಅಲಾ ಇವನ.... ನೀ ಏನು ಹುಚ್ಚನೋ.... ಹುಂಬನೋ....'

'ಏನಾದರೂ ಅನ್ನು.... ಈ ಮರಿ ನಂದು....'

'ಹಾಂಗಾದ್ರ ನಿನ್ನ ಜೀವಾ ನಂದು....'

'ತಗೋ.... ತಗೋ.... ಬ್ಯಾಡಂತ ಯಾರು ಅಂದ್ರು.... ಕೋಣಪ್ಪಯ್ಯ....'

'ಹಾಂ.... ಹಾಂ.... ಕೋಣಪ್ಪಯ್ಯಾ! ... ನನ್ನ ಹೆಸರು ನಿನಗ ಹ್ಯಾಂಗ ಗೊತ್ತಾತೋ ಹುಚ್ಚಾ?'

'ನಾ ಹುಚ್ಚಪಾ.... ನಾ ಹುಚ್ಚಾ.... ಅದಕ್ಕs ಗೊತ್ತಾತು....'

'ಹಾಂ...?ಹಾಂ....?'

'ಏ ಕೋಣಪ್ಪಾ... ಈ ಚಿಗರಿಮರಿ ತೊಗೊಂಡು ನೀ ಏನ ಮಾಡ್ತೀದಿ?'

'ತಿಂತೇನಿ.... ತಿಂತೇನಿ....'

'ನಿನಗ ಪ್ಯಾಮುನ್ನಿ ಅಂತ ಮಗಳ ಅದಾಳಲ್ಲಾ....ಹೌದಿಲ್ಲೋ?'

'ಹಾಂ....? ಹಾಂ....? ನನ್ನ ಮಗಳ ಹೆಸರು ನಿನಗ ಹ್ಯಾಂಗ ಗೊತ್ತಾತೋ ಹುಚ್ಚಾ?'

'ನಾ ಹುಚ್ಚಪಾ ... ನಾ ಹುಚ್ಚಾ.... ಅದಕ್ಕs ಗೊತ್ತಾತು ...'

'ಛೇ.... ಛೇ.... ಛೇ.... ನೀ ಹುಚ್ಚಲ್ಲಪ್ಪೋ ನೀ ಹುಚ್ಚಲ್ಲಾ....'

'ನಾ ಹುಚ್ಚಪಾ ... ನಾ ಹುಚ್ಚಾ....'

'ಛೇ ... ಛೇ.... ಛೇ... ನೀ ಹುಚ್ಚಲ್ಲಪ್ಪೋ ನೀ ಹುಚ್ಚಲ್ಲಾ....'

'ನಾ ಹುಚ್ಚಪಾ.... ನಾನ ಹುಚ್ಚಾ....!'

'ನೀನಲ್ಲಪ್ಪೋ ಹುಚ್ಚಾ.... ನಾ ಹುಚ್ಚಾ.... ನಾ ಹುಚ್ಚಾ....'

'ನೋಡಪಾ ಕೋಣಪ್ಪಾ.... ನೀನು ಈ ಮರಿ ಕೊಂದಿ ಅಂದ್ರ ಇದರ ತಾಯಿಗೆ ನೋವು ಆಗತೈತಿ.... ಹೋದಿಲ್ಲೋ?'

'ಏ ಹುಚ್ಚಯ್ಯಾ.... ಹುಚ್ಚಯೋಗಿ.... ಇದು ಪರಾಣಿ.... ಪರಾಣಿ ಪರಾಣಿಗೆ ದುಃಖಾಗಿಕ್ಕಾ ಆಗೂದಿಲ್ಲಾ'

'ನೀನೂ ಪ್ರಾಣಿ.... ಕೋಣಪ್ಪಾ ನೀನೂ ಪ್ರಾಣಿ ....ನಿನ್ನ ಮಗಳು ಪ್ಯಾಮವ್ವಿ ಸತ್ಲು ಅಂದ್ರ ಏನ ಮಾಡ್ತಿ... ನಿನಗ ದುಃಖ ಆಗೂದಿಲ್ಲಾ?'

'ಆಕ್ಯಾಕ ಸಾಯ್ತಾಳೋ.... ಆಕ್ಯಾಕ ಸಾಯ್ತಾಳು?'

ಸಾಯೂದಿಲ್ಲಾ?'

'ಊಹುಂ... ಸಾಯೂದಿಲ್ಲಾ.... ಓಳ್ತನ್ನು....'

'ಓಳ್ತು ಒಡೀತು.... ಹಾವು ಹೊಡೀತು....'

'ಅಂ....?'

'ಓಳ್ತು ಒಡೀತು.... ಹಾವು ಹೊಡೀತು....'

'ಲೇ.... ಲೇ.... ಲೇ.... ನೀ ಹುಚ್ಚಾ.... ಸಣ್ಣ ಹುಚ್ಚಲ್ಲಾ.... ದೊಡ್ಡ ಹುಚ್ಚಾ.... ಹುಚ್ಚರ ಹುಚ್ಚಾ.... ತಾ.... ತಾ ನನ್ನ ಚಿಗರಿಮರಿ ....ತಿಂತೇನಿ.... ತಿಂತೇನಿ.... ತಾ.... ತಾ....'

ಆತ ಕಸಿದುಕೊಂಡೇಬಿಟ್ಟ. ಅಷ್ಟರಲ್ಲಿ ಹಿಂದಿನಿಂದ ಒಬ್ಬ

ಬೇಡರ ಹುಡುಗ ಭಯಂಕರವಾಗಿ ಓಡುತ್ತ ಬಂದು ಚೀರುತ್ತ ಹೇಳಿದ—

'ಏ.... ಏ .... ಕೋಣಪ್ಪಾ .... ಕೋಣಪ್ಪಾ.... ಹಾವು ಹೊಡೀತು.... ಹಾವು ಹೊಡೀತು....'

ಕೋಣಪ್ಪ ನಿಸುಂಭ ರಾಕ್ಷಸನಂತೆ ಅರಚಿ ಕೇಳಿದ—

'ಏನೋ.... ಏನೋ....'

'ಹಾವು ಹೊಡೀತು.... ನಿನ್ನ ಮಗ್ನ, ದ್ಯಾಮನ್ನಿಗೆ ಹಾವ್ ಹೊಡೀತು.... ಸತ್ಲ್ನ.... ಸತ್ಲ್ನ.... ಸತ್ತs ಹೋದ್ನ.... ಬಾ.... ಬಾ ..

ಕೋಣಪ್ಪ ಚೀರುತ್ತ ಓಡಿದ—

'ಅಯ್ಯಯ್ಯೋ.... ಈ ಹುಚ್ಚಾ ಹುಚ್ಚಲ್ಲಾ.... ಈ ಹುಚ್ಚಾ ಹುಚ್ಚಲ್ಲಾ....'

ತುಸು ಹೊತ್ತಿನ ಮೇಲೆ ಕೋಣಪ್ಪ ಹಾವು ಕಚ್ಚಿದ ತನ್ನ ಮುದ್ದಿನ ಮಗಳನ್ನು ಹೊತ್ತೋಡಿ ಬಂದು ಕರುಳಿನ ಸಂಕಟದಿಂದ ಚೀರುತ್ತ ಆ ಶಿಶುವನ್ನು ಈ ಹುಚ್ಚ ಶಿವಯೋಗಿಯ ಪಾದಕ್ಕೆ ಅರ್ಪಿಸಿದ—

'ಯಪ್ಪಾ.... ಹುಚ್ಚಯ್ಯಾ....ನೀ ಹುಚ್ಚಲ್ಲಪ್ರೋ ಹುಚ್ಚಲ್ಲಾ.... ಈ ಕೂಸು ಉಳುಸು.... ಉಳುಸು.... ನೀ ಕೇಳಿದ್ದ ಕೊಡ್ತೇನಿ....'

ಶಿವಯೋಗಿ ನಕ್ಕು ಹೇಳಿದ—

'ಸತ್ತ ಕೂಸನ್ನು ನಾನು ಹೇಗೆ ಬದುಕಿಸಲಪ್ಪಾ.... ಊಹುಂ.... ಒಯ್ದು ಬಿಡು.... ಬೇಕಾದರೆ ಈ ಚಿಗರಿಮರಿ ಒಯ್ದುಬಿಡು.... ಇದನ್ನು ತಿಂದು ಶಾಂತ ಆಗು....'

ಆತ ಮತ್ತೂ ದುಃಖಿಸುತ್ತ ಪ್ರಾರ್ಥಿಸಿದ—

'ಶಿವಯೋಗಿ.... ಹುಚ್ಚಶಿವಯೋಗಿ... ನನಗ ಹುಚ್ಚ ಹಿಡಿಸ ಬ್ಯಾಡಾ ತಂದೆ.... ನನಗ ಈಗ ಗೊತ್ತಾತು ....ಈಗ ಗೊತ್ತಾತು.... ನಾ ಈ ಚಿಗರಿಮರಿ ಕೊಂದೆ ಅಂದ್ರ ಇದರ ತಾಯಿಗೆ ಸಂಕಟಾ ಆಗತೈತಿ....

'ಛೇ.... ಛೇ.... ಛೇ.... ನೀ ಹುಚ್ಚಲ್ಲಪ್ರೋ ನೀ ಹುಚ್ಚಲ್ಲಾ....'

'ನಾ ಹುಚ್ಚಪಾ ... ನಾ ಹುಚ್ಚಾ....'

'ಛೇ ... ಛೇ.... ಛೇ... ನೀ ಹುಚ್ಚಲ್ಲಪ್ರೋ ನೀ ಹುಚ್ಚಲ್ಲಾ....'

'ನಾ ಹುಚ್ಚಪಾ.... ನಾನ ಹುಚ್ಚಾ....!'

'ನೀನಲ್ಲಪ್ರೋ ಹುಚ್ಚಾ.... ನಾ ಹುಚ್ಚಾ.... ನಾ ಹುಚ್ಚಾ....'

'ನೋಡಪಾ ಕೋಣಪ್ಪಾ.... ನೀನು ಈ ಮರಿ ಕೊಂದಿ ಅಂದ್ರ ಇದರ ತಾಯಿಗೆ ನೋವು ಆಗತ್ಕೈತಿ.... ಹೋದಿಲ್ಲೋ?'

'ಏ ಹುಚ್ಚಯ್ಯಾ.... ಹುಚ್ಚಯೋಗಿ.... ಇದು ಪರಾಣಿ.... ಪರಾಣಿ . ಪರಾಣಿಗೆ ದುಃಖಾನಿಕ್ಕಾ ಆಗೂದಿಲ್ಲಾ'

'ನೀನೂ ಪ್ರಾಣಿ.... ಕೋಣಪ್ಪಾ ನೀನೂ ಪ್ರಾಣಿ ....ನಿನ್ನ ಮಗಳು ದ್ಯಾಮವ್ವಿ ಸತ್ಲ ಅಂದ್ರ ಏನ ಮಾಡ್ತಿ... ನಿನಗ ದುಃಖ ಆಗೂದಿಲ್ಲಾ?'

'ಆಕ್ಯಾಕ ಸಾಯ್ತಾಳೋ.... ಆಕ್ಯಾಕ ಸಾಯ್ತಾಳು?'

ಸಾಯೂದಿಲ್ಲಾ?'

'ಊಹುಂ... ಸಾಯೂದಿಲ್ಲಾ.... ಓಳ್ತನ್ಸು....'

'ಓಳ್ತು ಒಡೀತು.... ಹಾವು ಹೊಡೀತು....'

'ಅಂ....?'

'ಓಳ್ತು ಒಡೀತು.... ಹಾವು ಹೊಡೀತು....'

'ಲೇ.... ಲೇ.... ಲೇ.... ನೀ ಹುಚ್ಚಾ.... ಸಣ್ಣ ಹುಚ್ಚಲ್ಲಾ.... ದೊಡ್ಡ ಹುಚ್ಚಾ.... ಹುಚ್ಚರ ಹುಚ್ಚಾ.... ತಾ.... ತಾ ನನ್ನ ಚಿಗರಿಮರಿ ....ತಿಂತೇನಿ.... ತಿಂತೇನಿ.... ತಾ.... ತಾ....'

ಆತ ಕಸಿದುಕೊಂಡೇಬಿಟ್ಟ. ಅಷ್ಟರಲ್ಲಿ ಹಿಂದಿನಿಂದ ಒಬ್ಬ

ಬೇಡರ ಹುಡುಗ ಭಯಂಕರವಾಗಿ ಓಡುತ್ತ ಬಂದು ಚೀರುತ್ತ ಹೇಳಿದ—

'ಏ.... ಏ .... ಕೋಣಪ್ಪಾ .... ಕೋಣಪ್ಪಾ.... ಹಾವು ಹೊಡೀತು.... ಹಾವು ಹೊಡೀತು....'

ಕೋಣಪ್ಪ ನಿಸುಂಭ ರಾಕ್ಷಸನಂತೆ ಅರಚಿ ಕೇಳಿದ —

'ಏನೋ.... ಏನೋ....'

'ಹಾವು ಹೊಡೀತು.... ನಿನ್ನ ಮಗ್ಳು, ದ್ಯಾಮವ್ವಿಗೆ ಹಾವ್ರ ಹೊಡೀತು.... ಸತ್ಲು.... ಸತ್ಲು.... ಸತ್ತs ಹೋದ್ಳು.... ಬಾ.... ಬಾ ..

ಕೋಣಪ್ಪ ಚೀರುತ್ತ ಓಡಿದ—

'ಅಯ್ಯಯ್ಯೋ.... ಈ ಹುಚ್ಚಾ ಹುಚ್ಚಲ್ಲಾ.... ಈ ಹುಚ್ಚಾ ಹುಚ್ಚಲ್ಲಾ....'

ತುಸು ಹೊತ್ತಿನ ಮೇಲೆ ಕೋಣಪ್ಪ ಹಾವು ಕಚ್ಚಿದ ತನ, ಮುದ್ದಿನ ಮಗಳನ್ನು ಹೊತ್ಕೊಂಡು ಬಂದು ಕರುಳಿನ ಸಂಕಟದಿಂದ ಚೀರುತ್ತ ಆ ಶಿಶುವನ್ನು ಈ ಹುಚ್ಚ ಶಿವಯೋಗಿಯ ಪಾದಕ್ಕೆ ಅರ್ಪಿಸಿದ—

'ಯಪ್ಪಾ.... ಹುಚ್ಚಯ್ಯಾ.... ನೀ ಹುಚ್ಚಲ್ಲಪ್ಪೋ ಹುಚ್ಚಲ್ಲಾ.... ಈ ಕೂಸು ಉಳುಸು.... ಉಳುಸು.... ನೀ ಕೇಳಿದ್ದ ಕೊಡ್ತೇನಿ....'

ಶಿವಯೋಗಿ ನಕ್ಕು ಹೇಳಿದ—

'ಸತ್ತ ಕೂಸನ್ನು ನಾನು ಹೇಗೆ ಬದುಕಿಸಲಪ್ಪಾ.... ಊಹುಂ.... ಒಯ್ದು ಬಿಡು.... ಬೇಕಾದರೆ ಈ ಚಿಗರಿಮರಿ ಒಯ್ದುಬಿಡು.... ಇದನ್ನು ತಿಂದು ಶಾಂತ ಆಗು....'

ಆತ ಮತ್ತೂ ದುಃಖಿಸುತ್ತ ಪ್ರಾರ್ಥಿಸಿದ—

'ಶಿವಯೋಗಿ.... ಹುಚ್ಚಶಿವಯೋಗಿ... ನನಗ ಹುಚ್ಚ ಹಿಡಿಸ ಬ್ಯಾಡಾ ತಂದೆ.... ನನಗ ಈಗ ಗೊತ್ತಾತು ....ಈಗ ಗೊತ್ತಾತು.... ನಾ ಈ ಚಿಗರಿಮರಿ ಕೊಂದೆ ಅಂದ್ರ ಇದರ ತಾಯಿಗೆ ಸಂಕಟಾ ಆಗತೈತಿ....

ನನ್ನಂಗ ಸಂಕಟಾ ಆಗತೈತಿ.... ನಾ ಕೊಲ್ಲಾಕ ಒಲ್ಲೆ .... ನಾ ಕೊಲ್ಲಾಕ ಒಲ್ಲೆ.... ನನ್ನ ಮಗಳ ಜೀವಾ ಉಳುಸು.... ತಂದೇ.... ನನ್ನ ಮಗಳ ಜೀವಾ ಉಳುಸು.... ನೀ ಕೇಳಿದ್ದ ಕೊಡತೇನಿ....'

'ಕೇಳಿದ್ದ ಕೊಡತೀಯಾ?'

'ಓಹೋ ಕೇಳಿದ್ದ ಕೊಡತೇನಿ.... ಆ ಗುಡ್ಡಾ ಕಿತ್ತ ತಂದ ಇಡೂ ಅಂದ್ರ ಇಡತೇನಿ.... ಈ ಅರಣ್ಯಾ ಸರಸೂ ಅಂದ್ರ ಸರಸತೇನಿ....'

'ಅದು ಬ್ಯಾಡಾ ನನಗ.... ಅದು ಬ್ಯಾಡಾ ನನಗ....'

'ಮತ್ತೇನು ಬೇಕು ಹೇಳು ನಿನಗ.... ಹೂ.... ಹೇಳು ಏನ ಬೇಕು?'

'ನಾ ಕೇಳಿದ್ದು ಕೊಡತೀಯಾ?'

'ಕೊಡತೇನಿ.... ಕೊಡತೇನಿ.... ಕೊಡತೇನಿ'

'ಹಾಂಗಾದ್ರ ಇಂದಿನಿಂದ ಪ್ರಾಣಿವಧಾ ಬಿಡು....ಮಾಂಸಾಹಾರಾ ಬಿಡು.... ಶಿವಧ್ಯಾನಾ ಮಾಡು....'

'ತಂದೇ.... ಒಪ್ಪಿದೆ.... ಒಪ್ಪಿದೆ.... '

ಕೋಣಪ್ಪ ಸಾಷ್ಟಾಂಗ ನಮಸ್ಕಾರ ಹಾಕುವಷ್ಟರಲ್ಲಿಯೇ ಅವನ ಮಗಳು....'ಯಪ್ಪಾ' ಎಂದು ಎದ್ದು ಬಂದು ಅಪ್ಪಿಕೊಂಡಳು!

ಶಿವಯೋಗಿ ನಕ್ಕು ಹೇಳಿದ--

'ಇಂದಿನಿಂದ ನೀನು ಕೋಣಪ್ಪನಲ್ಲ.... ಶಿವಪ್ಪ.... ಇವಳು ದ್ಯಾಮಿ ಅಲ್ಲ.... ಮಾದೇವಿ.... ಮಾದೇವಿ....!

ಶಿವಯೋಗಿ ಕೋಣಪ್ಪನಿಗೆ ಭಸ್ಮ ಹಚ್ಚಿದ. ಅವನ ಮಗಳಿಗೂ ಭಸ್ಮ ಲೇಪಿಸಿದ.

ಚಿಗರಿಯು ಮರಿ ಕುಣಿಯುತ್ತ ಹುಚ್ಚಯ್ಯ ಯೋಗಿಯ ತೊಡೆ ಯಿಂದ ಜಿಗಿದುಹೋಗಿ.... ಆ ಹೊಸರೂಪದ ಮಾದೇವಿಯ ತೊಡೆಯ

ಮೇಲೆ ಏರಿ ಹೋಗಿ ಅವಳ ಗಲ್ಲ ನೆಕ್ಕತೊಡಗಿತು!

ಶಿವಪ್ಪ ನೋಡಿ ಕಣ್ಣೀರು ಸುರಿಸಿದ!!

ಬೇಡನ ಕಣ್ಣಲ್ಲಿ ಮೊದಲ ಬಾರಿಗೆ ಕರುಣೆಯ ಕಣ್ಣೀರು ಮೂಡಿತು!!!

ಇದೆಂಥ ಪವಾಡ?

೨

ಹೂಬಳ್ಳಿ (ಪೂವಳ್ಳಿ) ಒಂದು ಪುಟ್ಟ ಹಳ್ಳಿ. ಗವಿಯಿಂದ ಆರು ಕೂಗಳತೆ ಪಶ್ಚಿಮಕ್ಕೆ ಬಂದರೆ ಅಲ್ಲೊಂದು ಕರಕಿ ಹಳ್ಳ... ಬಹಳ ಸುಂದರ ಕೊಳ್ಳ. ಮಲೆನಾಡ ಸೆರಗಿನ ಬೂದನಗುಡ್ಡದ ಹುಲಿಗಳಿಗೂ ಬೆಳುವಲ ಬಾಸಂಚಿನ ಉಣಕಲ್ಲಗುಡ್ಡದ ಜಿಂಕೆಗಳಿಗೂ ಇದೇ ವಿಶ್ರಾಂತಿ ಸ್ಥಾನ. ಜಲಶಯನ. ಪ್ರೇಮಶಯನ. ಕರಕಿ ಹಳ್ಳದ ಎರಡೂ ದಂಡೆಗೆ ಗಲಗು-ಜೇಕು-ಕರಕಿ-ಮಹಾಲಿಂಗನ ಬಳ್ಳಿಗಳು ಪ್ರೇಮಿಗಳಿಗೆ ಶಿವದ್ವಾರ ತೋರಿವೆ. ಹಳ್ಳದಾಟಿ ಒಂದೇ ಒಂದು ಕೂಗಳತೆ ಹೋದರೆ ಸಾಕು.... ಅದೇ ಹಳ್ಳಿ.... ಪುಟ್ಟ ಹಳ್ಳಿ.... ಗಿಳಿಯ ಮರಿಯಂಥಾ ಹಳ್ಳಿ.... ಕೋಗಿಲೆಯ ಕೂಗಿನಂಥಾ ಹಳ್ಳಿ....ಪೂವಳ್ಳಿ ... ಹೂಬಳ್ಳಿ. ಲಿಂಗವಂತರ ಕೇಂದ್ರ ರೇವಣ-ಸಿದ್ಧನ ಮಠದಲ್ಲಿದೆ. ಬ್ರಾಹ್ಮಣರ ಅಗ್ರಹಾರ ಹೆಗ್ಗೇರಿಯ ಕೆರಿಯ ಬಳಿ ಇದೆ. ಈ ಹಳ್ಳಿಯ ಪೂರ್ವಕ್ಕೆ ಬೆಳುವಲ ನಾಡ ಸುಂದರಿ ಮಲಗಿದ್ದಾಳೆ. ಪಶ್ಚಿಮಕ್ಕೆ ಮಲೆನಾಡರೂಪಸಿ ಮಲಗಿದ್ದಾಳೆ. ಪೂರ್ವಕ್ಕೆ ಹೋದರೆ

ಬಿಳಿಜೋಳ, ಹತ್ತಿಯ ಹೊಲಗಳು. ಪಶ್ಚಿಮಕ್ಕೆ ಹೋದರೆ ಭತ್ತ ತೆಂಗು ಕಬ್ಬಿನ ಬನಗಳು. ಕಳ್ಳಿಕಂಟೆಯಲ್ಲಿ ರತ್ನಪಕ್ಷಿಗಳು. ಮುಳ್ಳುಬೇಲಿಯಲ್ಲಿ ನವಿಲುಗಳು. ಜಾಲಿ ಜಿಡುಪಿನಲ್ಲಿ ಕೋಗಿಲೆಗಳು. ಹಳೆಯೂರು ಹೂಬಳ್ಳಿ ಒಂದು ಹಳ್ಳಿಯಲ್ಲ.... ಒಂದು ಸಂಸ್ಕೃತಿ... ಒಂದು ಶೀಲ.... ಒಂದು ಸನಾತನ ಸುಖ....ಒಂದು ಮುಕ್ತಿಯಭಾಷ್ಯ....ರೇವಣಸಿದ್ಧೇಶ್ವರನ ಆರಾಮುವಿರಾಮು!

ಪೂವಳ್ಳಿಯ ಶೆಟ್ಟರು ಸುಖವಂತರು. ಭಕ್ತಿವಂತರು. ರಸಿಕರೂ ಹೌದು. ಭಕ್ತರೂ ಹೌದು. ಶಿವಪೂಜೆಯೂ ಉಂಟು. ಪ್ರೇಮ-ಪೂಜೆಯೂ ಉಂಟು. ಕಾರಣ ಭಾರೀ ಮೊತ್ತದ ವ್ಯಾಪಾರ. ಯಾಲಕ್ಕಿ ಲವಂಗ-ದಾಲಚಿನ್ನಿ-ಶುಂಠಿಗಳನ್ನು ಬಯಲುನಾಡಿಗೆ ನೂರಾರು ಕಂಟಲಿ ದನಗಳ ಮೇಲೆ ಹೇರಿಸಿ ಕಳಿಸುತ್ತಾರೆ. ಹತ್ತಿಬಟ್ಟೆ ರೇಶಿಮೆಬಟ್ಟೆಗಳನ್ನು ಅಲ್ಲಿಂದ ತಂದು ಮಲೆನಾಡಿನ ಸಮುದ್ರದ ದಂಡೆಯವರೆಗೂ ಮಾರಾಟ ಮಾಡುತ್ತಾರೆ. ಐದಾರು ಜನ ಮುತ್ತಿನ ಗೊಂಬೆಗೆ ನತ್ತು ಇಟ್ಟಂತಾ ಹೆಂಡರು. ಸುಂದರ ಸೇವಿಕೆಯರು. ಸೇವಕರು. ಆಳುಹೋಳು. ಕುದುರೆಗಳು. ರಕ್ಷಣೆಗಾಗಿ ಪುಟ್ಟ ಬಿಲ್ಲುಗಾರ ಸೈನ್ಯ. ಬೇಡರ ಪಡೆ. ಬೆಳುವಲ ನಾಡಿನಲ್ಲಿ ಹೋದಾಗ ಗೋದಿಬಣ್ಣದ ಹೆಣ್ಣುಗಳ ಆಕರ್ಷಣೆ. ಸಮುದ್ರತೀರಕ್ಕೆ ಹೋದಾಗ ಕೆಂಪು ಬಣ್ಣದ ನಾರಿಯರ ಒಲವು. ಮನೆಯಲ್ಲಿ ಮಾತ್ರ ಶಿವಪೂಜೆ. ಅರ್ಧಮರ್ಧ ಕಾಮ. ಅರ್ಧಮರ್ಧ ಭಕ್ತಿ. ಒಲ್ಲದ ಯೋಗ. ಮುಗಿಯದ ಭೋಗ. ಹೆಸರು ಮಾತ್ರ ರುದ್ರಮುನಿ. ವಾಡಿಕೆಯಲ್ಲಿ ರುದ್ರಪ್ಪಶೆಟ್ಟರು.

ಒಮ್ಮೆ ಬಯಲು ನಾಡಿನ ವ್ಯಾಪಾರದಲ್ಲಿ ಸಾಕಷ್ಟು ಬಂಗಾರ ಸಂಪಾದಿಸಿಕೊಂಡು ಹೊರಳಿಬರುವಾಗ ಪೂವಳ್ಳಿಯ ಪಕ್ಕದ ಗವಿಯ ಅರಣ್ಯದಲ್ಲಿ ಹಾದು ಬಂದರು. ಅನೇಕ ಚಿರ್ಜಗಳು ಇವರನ್ನು ಸ್ವಾಗ-

ತಿಸಿದವು. ಬಿಲ್ಲುಗಾರರು ಬಿಲ್ಲಿನ ಮಳೆಗರೆದರು. ಚಿರ್ಜಗಳು ಓಡಿದವು. ಇನ್ನೇನು ಹೊಂಡಕ್ಕೆ ಇಳಿದು ನೀರು ಕುಡಿಯಬೇಕೆನ್ನುವಷ್ಟರಲ್ಲಿ ಹಿಂದಿ-ನಿಂದ ಗಂಭೀರ ಕೂಗು—

'ರುದ್ರಾ.... ರುದ್ರಾ.... ರುದ್ರಾ....'

ಶಟ್ಟರು ಹೊರಳಿ ನೋಡಿದರು. ಬಿಲ್ಲುಗಾರರು ಬಾಣ ಹೂಡಿ ನಿಂತರು. ಯಾರೂ ಇಲ್ಲ. ಏನೂ ಇಲ್ಲ. ಮತ್ತೆ ಶಟ್ಟರು ಸರೋವರದ ಕಮಲಗಳನ್ನು ನೂಕಿ ತಿಳಿನೀರಿಗೆ ಬೊಗಸೆ ಹಾಕಿದರು. ಮತ್ತೆ ಕೂಗು—

'ರುದ್ರಾ.... ರುದ್ರಾ.... ರುದ್ರಾ....'

ಶಟ್ಟರು ಹೌಹಾರಿದರು. ಬೊಗಸೆಯಿಂದ ನೀರು ಜಾರಿ ನೀರಿಗೆ ಬಿತ್ತು. ಬಿಲ್ಲುಗಾರರೂ ಅಂಜಿ ಅವರು ಹೂಡಿದ ಬಾಣಗಳು ಅವರ ಮೈಗೇ ಜಾರಿದವು. ಎಲ್ಲರೂ ಧ್ವನಿ ಬಂದತ್ತ ಹುಡುಕಿದರು. ಶಟ್ಟರು ಹೊನ್ನುಗಳ ಥಾಲಿಯನ್ನು ಮುಟ್ಟಿ ಮುಟ್ಟಿ ನೋಡಿದರು. ಹೊಂಡದ ದಂಡೆಯ ಕ್ಯಾದಗಿ ಪಳಿಯಲ್ಲಿ ಕೆಲವರು ಬಿಲ್ಲುಗಾರರು ಓಡೋಡಿ ಬಂದರು. ಯಾರೂ ಇಲ್ಲ. ಏನೂ ಇಲ್ಲ. ಮತ್ತೆ ಶಟ್ಟರು ನೀರಿಗೆ ಇಳಿದು ಬೊಗಸೆ ಹಾಕಿ ಕುಡಿಯಹೋದರು. ಆದರೆ ನೀರು ಕುಡಿಯಲು ಧೈರ್ಯವೇ ಬರಲಿಲ್ಲ. ಮೆಲ್ಲನೆ ಮೇಲೆದ್ದು ತಮ್ಮ ಕಂಟಲಿ ದನದ ಬಳಿ ಬಂದು ಡುಬ್ಬ ಏರಿದರು. ಇನ್ನೇನು ನಡೆಯಬೇಕೆನ್ನುವಷ್ಟರಲ್ಲಿ ಮತ್ತೆ ಧ್ವನಿ—

'ರುದ್ರಾ.... ಬಾ.... ಬಾ.... ಬಾ....'

ರುದ್ರಮುನಿ ಶಟ್ಟರು ಅಭದ್ರಮುನಿಗಳಾದರು! ಬೇಡರು ಪೈಬೆದರಿ ತಮ್ಮ ಹೆಂಡಿರನ್ನು ನೆನೆಯುತ್ತ ಕಬರಿಲ್ಲದೆ ಓಡಿದರು!! ಶಟ್ಟರಿಗೆ ನಿಲ್ಲಲೂ ಬರಲಿಲ್ಲ. ಕೂಡ್ರಲೂ ಬರಲಿಲ್ಲ. ಓಡಲೂ ಬರಲಿಲ್ಲ.

ಆಗ ಗವಿಯ ಬಾಗಿಲಿನಿಂದ ತೇಜಃಪುಂಜ ಮಹರ್ಷಿ ವಿಚಿತ್ರ ವೇಷದ ಲೀಲಾವಿಲಾಸದಿಂದ ಹೊರಬಂದ. ನೋಡಿದರೆ ಬುದ್ಧಿಹೀನ.

ವಿಚಾರ ಶೂನ್ಯ. ಹುಚ್ಚರಂತೆ ನೆಲ ನೋಡುತ್ತಾನೆ. ಒಮ್ಮೆ ಆಕಾಶ ನೋಡುತ್ತಾನೆ ಇನ್ನೊಮ್ಮೆ ನಗುತ್ತಾನೆ. ನಕ್ಕಾಗ ಅಂಜಿಕೆ ಬರುತ್ತದೆ. ಸುಮ್ಮನಾದಾಗ ಗಾಂಭೀರ್ಯ ಮೂಡುತ್ತದೆ. ಶೆಟ್ಟರಿಗೆ ಕಲ್ಲಭೂತ ಬಡಿದಂತೆ ನಿಂತಲ್ಲೇ ನಿಂತರು. ಓಡಬೇಕೆಂದರೆ ಕಾಲುಗಳು ನೆಲದಿಂದ ಕೀಳಲಿಲ್ಲ. ಚೀರಬೇಕೆಂದರೆ ತುಟಿ ಬಿಚ್ಚಲಿಲ್ಲ. ಉಸಿರಾಡಬೇಕೆಂದರೆ ಹೊಟ್ಟೆಯಲ್ಲಿ ಹುಣಸೀಕಪ್ಪ ತುಂಬಿದಂತಾಗಿದೆ. ನೋಡುತ್ತಲೇ ಸೆಟೆದು ನಿಂತರು. ಮಹಾಯೋಗಿಯೊಬ್ಬ ಸಿದಿಮಂತ್ರದಿಂದ ಮಂತ್ರಹಾಕಿ ನಿಲ್ಲಿಸಿದಂತೆ ಇವರು ಸೆಟೆಗೊಂಡು ನಿಂತೇನಿಂತರು. ಆ ಹುಚ್ಚಯೋಗಿ ಶೆಟ್ಟರನ್ನು ನುಂಗುವಂತೆ ಬಂದ. ಅವನು ಮಾನವನೋ.... ಪಿಶಾಚಿಯೋ.... ದೇವನೋ.... ಯಮಲೋಕದ ಯಮನೋ.... ಯಾರು ಬಲ್ಲರು! 'ಅಯ್ಯಯ್ಯೋ.... ನಾನು ಸತ್ತೇ ಹೋದೆ....' ಎಂದು ಶೆಟ್ಟರು ಹೊಟ್ಟೆಯಲ್ಲಿ ಚೇಳುಗಳು ಕಚ್ಚಿದಂತೆ ಸಂಕಟ ಪಟ್ಟರು!! ಗವಿಯ ಯೋಗಿ ನೇರವಾಗಿ ಬಂದು ಶೆಟ್ಟರ ಮುಂದೆ ಹೊಂಗಣ್ಣು ಹೂಡಿ ನಿಂತ. ಒಮ್ಮೆ ಕೂಗಿದ. ಇನ್ನೊಮ್ಮೆ ಕೇಕೆಹಾಕಿ ನಕ್ಕ. ಮತ್ತೊಮ್ಮೆ ಆಜ್ಞಾಪಿಸಿದ—

'ತಾ.... ತಾ.... ತಾ.... ತಾ....'

ಈಗ ರುದ್ರಪ್ಪಶೆಟ್ಟರಿಗೆ ಸ್ವಲ್ಪ ಗಂಟಲಲ್ಲಿ ಕಂಪನಶಕ್ತಿ ಬಂತು. ಮೆಲ್ಲನೆ ನಾಲಿಗೆ ತೊದಲಿ ಕೇಳಿದರು—

'ಏನು ಕೊಡಲಿ... ಏನು ಕೊಡಲಿ....'

ಯೋಗಿ ಮತ್ತೆ ಕೂಗಿದ—

'ಹೊನ್ನು ತಾ.... ಹೊನ್ನು ತಾ ... ತಾ.... ತಾ ...'

ಈಗ ಶೆಟ್ಟರ ಮೈಯಲ್ಲಿ ಮೈತುಂಬ ಶಕ್ತಿ ಬಂತು. ಈತ ಬಹುಶಃ ಹಾರಿಯ ದರೋಡೆಕೋರನಿದ್ದು ಋಷಿವೇಷದಿಂದ ಸುಲಿಗೆ ಮಾಡಲು ಬಂದಿರಬಹುದೆಂದು ಊಹಿಸಿ ಮೆಲ್ಲನೆ ತಮ್ಮ ಕಂಟಲಿದನದ ಹತ್ತಿರ ಬಂದರು. ಹೊನ್ನಿನ ಥಾಲಿಯನ್ನೆತ್ತಿ ಐದು ಬಂಗಾರದ ನಾಣ್ಯ

ಗಳನ್ನು ಆ ವಿಚಿತ್ರ ವ್ಯಕ್ತಿಯ ಕೈಯಲ್ಲಿ ಕೊಟ್ಟರು. ಆತ ಆ ಹೊನ್ನು ಗಳನ್ನು ಭರ್‍ರನೇ ತೂರಿ ನೀರಿಗೆ ಒಗೆದ. ಬಂಗಾರದ ನಾಣ್ಯಗಳು ಹೊಂಡದ ಪಾಲಾದವು! ಮತ್ತೆ ಕೂಗಿದ—

'ತಾ.... ತಾ ಹೊನ್ನು ತಾ....'

ಮತ್ತೆ ಶೆಟ್ಟರು ಐದು ಬಂಗಾರದ ತುಂಡುಗಳನ್ನು ಅವನ ಕೈಗಿತ್ತರು. ಆತ ಅವನ್ನು ಮತ್ತೆ ಹೊಂಡಕ್ಕೆ ತೂರಿ ಒಗೆದ! ಮತ್ತೆ ಕೂಗಿದ—

'ತಾ ... ತಾ.... ಹೊನ್ನು ತಾ....'

ಈ ಸಲ ಶೆಟ್ಟರು ಹತ್ತು ಬಂಗಾರದ ನಾಣ್ಯಗಳನ್ನು ಅವನ ಕೈಗಿತ್ತರು. ಆ ಪುಣ್ಯಾತ್ಮ ಅವನ್ನೂ ಹೊಂಡಕ್ಕೆ ಎರಚಿದ ! ಮತ್ತೂ ಕೂಗಿದ—

'ತಾ.... ತಾ ... ಹೊನ್ನು ತಾ....'

ಈಗ ಶೆಟ್ಟರಿಗೆ ಸಂಶಯ ಬಂತು! ಈತ ಕಳ್ಳನಲ್ಲ.... ಆದರೆ, ಹುಚ್ಚನಾದರೂ ಇರಬೇಕು; ಇಲ್ಲವೆ ಯೋಗಿಯಾದರೂ ಇರಬೇಕೆಂದು ಊಹಿಸಿದರು. ಎದೆಯ ಮೇಲಿನ ಲಿಂಗ. ರುದ್ರಾಕ್ಷಿ. ಹಣೆಯಲ್ಲಿ ಭಸ್ಮ. ಜಟಾಜೂಟ. ಇವೆಲ್ಲಾ ಯೋಗದ ಸೂಚನೆಗಳು. ಮೊಗದಲ್ಲಿ ಉಗ್ರಯೋಗಿಯ ವಿಚಿತ್ರ ಕಳೆ ಇದೆ. ಒಮ್ಮೆ ರುದ್ರ ರೂಪ. ಇನ್ನೊಮ್ಮೆ ಕೂಸಿನ ರೂಪ. ಒಮ್ಮೆ ಕೊಲೆಗಾರನ ರೋಷ. ಇನ್ನೊಮ್ಮೆ ತಾಯ್ತನದ ಪೀಯೂಷ. ಶೆಟ್ಟರು ಭ್ರಷ್ಟರಾಗಿದ್ದರೂ ವಿವೇಕಿಗಳು. ಸಂಯಮಹೀನ ರಾದರೂ ಧರ್ಮಸೂಕ್ಷ್ಮಗಳನ್ನು ಬಲ್ಲವರು. ಕಾಮಿಗಳಾದರೂ ದೇವರ ಬಗ್ಗೆ ಗೌರವ ಉಳ್ಳವರು. ಕೆಲಹೊತ್ತು ವಿಚಾರಿಸಿ ಕೈಮುಗಿದು ಹೇಳಿದರು—

'ಪುಣ್ಯಾತ್ಮಾ.... ಮಹಾತ್ಮಾ.... ನಾನು ಸೋತೆ.... ನಾನು ಸೋತೆ.... ನಾನು ಗಳಿಸಿದ ಎಲ್ಲಾ ಹೊನ್ನು ನಿನ್ನದು ತಂದೆ.... ಹೊನ್ನಿನ

ಮೋಹವೆಲ್ಲಾ ನಿನ್ನ ಪಾದಕ್ಕೆ ಅರ್ಪಣೆ.... ಇದು ನಿನ್ನದು.... ನಿನ್ನದು.... ಸರ್ವಾರ್ಥ ನೀನೇ.... ಪುರುಷಾರ್ಥ ನೀನೇ....'

ಎನ್ನುತ್ತ ಸಾಷ್ಟಾಂಗ ಹಾಕಿದರು. ಹುಚ್ಚಯೋಗಿ ಕುಣಿದಾಡಿದ. ಮತ್ತೆ ಕೂಗಿದ—

'ಹೆಣ್ಣು ತಾ.... ಹೆಣ್ಣು ತಾ....'

ಶಟ್ಟರು ತಬ್ಬಿಬ್ಬಾದರು! ಈತನಿಗೆ ಇನ್ನು ಹೆಣ್ಣು ಎಲ್ಲಿಂದ ತರಲಿ. ನಡುಗುತ್ತ ಕೈಮುಗಿದರು—

'ತಂದೇ.... ನನ್ನ ಹೆಂಡರು ಮನೆಯಲ್ಲಿದ್ದಾರೆ.... ವೇಶ್ಯಾ ಸ್ತ್ರೀಯರು ಸಾಕಷ್ಟು ಸಿಗುತ್ತಾರೆ....ತರಲೇ!'

ಯೋಗಿ ಕಾನನವೇ ನಡುಗುವಂತೆ ನಕ್ಕು ಹೇಳಿದ—

'ಮೂರ್ಖಾ.... ಹೆಣ್ಣು ತಾ.... ಹೆಣ್ಣು ತಾ....'

ಶಟ್ಟರು ಸಂಶಯದಿಂದ ತಮ್ಮ ಕಿವಿ ಝಾಡಿಸಿಕೊಂಡು ಕೇಳಿದರು—

'ಹೆಣ್ಣೋ.... ಹಣ್ಣೋ? ಏನು ಬೇಕು ಬುದ್ಧಿ?'

ಸಿಡಿಲಿನಂತೆ ಉತ್ತರ ಬಂತು—

'ಹೆಣ್ಣು.... ಹೆಣ್ಣು.... ಹೆಣ್ಣು.... ಹೆಣ್ಣು....'

ಶಟ್ಟರಿಗೆ ಈಗ ಫಕ್ಕನೇ ತತ್ತ್ವಸೂಕ್ಷ್ಮ ಹೊಳೆಯಿತು. ಹೊನ್ನು ಮಾಯೆಯಲ್ಲ... ಹೊನ್ನಿನ ಆಶೆ ಮಾಯೆ! ಹೆಣ್ಣು ಮಾಯೆಯಲ್ಲ.... ಹೆಣ್ಣಿನ ದಾಹ ಮಾಯೆ!! ಆದರೂ ಹೆಣ್ಣಿನ ಪ್ರೀತಿ ಕೊಡುವದು ಬಹಳ ಕಷ್ಟ. ಶಟ್ಟರು ಕಣ್ಣಲ್ಲಿ ಕಣ್ಣೀರಿಲ್ಲದಿದ್ದರೂ ದುಃಖಿಸುತ್ತ ಪ್ರಾರ್ಥಿಸಿದರು—

'ತಂದೇ.... ಇದೊಂದನ್ನು ಕೇಳಬೇಡಾ.... ಹೊನ್ನು

ನಿನಗಿರಲಿ.... ಹೆಣ್ಣು ನನಗಿರಲಿ.... ತಂದೇ ಬೇಡಾ.... ಬೇಡಾ.... ಕೇಳ ಬೇಡಾ....'

ಯೋಗಿ ಮತ್ತೆ ಕೂಗಿದ—

'ಹೊನ್ನು ಹುಳಾ.... ಹೆಣ್ಣು ಹೆಣಾ....'

ಶೆಟ್ಟರಿಗೆ ಹೆಣ್ಣಿಗಾಗಿ ಹೆಣವಾಗುವದು ಬೇಕಾಗಿರಲಿಲ್ಲ. ಕೊನೆಗೆ ನಿರ್ಧಾರ ತಂದುಕೊಂಡು ಹೇಳಿದರು—

'ತಂದೇ ... ಸಿದ್ಧ.... ಸಿದ್ಧನಿದ್ದೇನೆ.... ಹೆಣ್ಣಿನ ಪ್ರೀತಿ.... ಕಾಮದ ದಾಹ.. ಪರಸ್ತ್ರೀಯರ ದುಸ್ಸಂಗ.... ನಿನ್ನ ಪಾದಕ್ಕೆ ಅರ್ಪಿಸಲು ಸಿದ್ಧನಿದ್ದೇನೆ.... ಇನ್ನು ಮೇಲೆ ನನ್ನ ಧರ್ಮಪತ್ನಿಯರಲ್ಲಿ ಮಾತ್ರ ಪತೀತ್ವ ವನ್ನು ತೋರುತ್ತೇನೆ.... ಆದರೆ ನಾನು ಶೆಟ್ಟಿ.... ದೇವರಲ್ಲಿಯೂ ಫಾಯಿದೇ ಕೇಳುವ ಕೊಟ್ಟಿ.... ನಾ ಹೆಣ್ಣಿನ ಆಶಿ ನಿನ್ನ ಉಡೀಗೆ ಹಾಕ್ತೇನಿ.... ನೀನು ನನ್ನ ಉಡೀಗೆ ಹಾಕ್ತೀದಿ ಹುಚ್ಚಯ್ಯಾ.... ಹೇಳು ಮೊದ್ಲ?'

ಯೋಗಿ ಸಾರಿದ—

'ಗುರುದೀಕ್ಷೆ.... ಲಿಂಗದೀಕ್ಷೆ... ಜಂಗಮದೀಕ್ಷೆ....'

'ಹಾಗಾದರೆ ಹೆಣ್ಣು ನಾ ನಿನಗೆ ಕೊಟ್ಟೆ... ಕೊಟ್ಟೆ.... ಕೊಟ್ಟೆ ...'

'ನಾನೂ ನನ್ನನ್ನೇ ನಿನಗೆ ಕೊಟ್ಟೆ.... ಕೊಟ್ಟೆ... ಕೊಟ್ಟೆ'

ಯೋಗಿ ಶೆಟ್ಟರನ್ನು ಕೈ ಹಿಡಿದು ತನ್ನ ಗವಿಯಲ್ಲಿ ಭರಭರನೆ ಕರೆ-ದೊಯ್ದ. ರುದ್ರಪ್ಪಶೆಟ್ಟರು ನಡುಗುತ್ತಲೇ ಕತ್ತಲೆಯ ಪಾತಾಳಕ್ಕೆ ಇಳಿದರು ಆರೆಂಟು ಮೆಟ್ಟಿಲು ಕತ್ತಲೆಯ ಕಂದಕದಲ್ಲಿ ಇಳಿದಾಗ ಆ ಕಾಳಿಂಗ ಸರ್ಪ ಗಳು ಭುಸ್ಸೆಂದು ಬಂದು ಶೆಟ್ಟರ ಮೊಸೆಯ ಮೇಲೆ ರೊಪ್ಪೆಂದು ಹೆಡೆ-

ಗಳನ್ನು ಅಪ್ಪಳಿಸಿದವು. ಶೆಟ್ಟರು.... ಸತ್ತೆವ್ರೋ.... ಎಂದು ಚೀರಿದರು. ಮುನಿ ತಕ್ಷಣ ಅವರ ತಲೆಯ ಮೇಲೆ ಹಸ್ತ ಇರಿಸಿದ. ಆಗ ಶೆಟ್ಟರ ಭಯ ದೂರಾಯಿತು. ಶೆಟ್ಟರು ಶರಣರಾದರು! ಅವರ ವ್ಯಾಪಾರ ಶಿವವ್ಯಾಪಾರ ವಾಯಿತು!! ಜೀವನ ಶಿವಯೋಗವಾಯಿತು!!!

೩

ದಿನಗಳು ಜಾರಿದವು. ಬೇಡರ ಕೋಣಪ್ಪ ಈಗ ಸೇವೆಯ ಶಿವಪ್ಪನಾಗಿ ಆ ತಪೋವನದಲ್ಲಿ ಪರ್ಣಕುಟೀರಗಳನ್ನು ಕಟ್ಟುತ್ತಿದ್ದಾನೆ. ಮಾದೇವಿ ಹೂಮಾಲೆಗಳನ್ನು ಹೆಣೆದು;ಆಶ್ರಮವನ್ನು ಅಲಂಕರಿಸುತ್ತಿದ್ದಾಳೆ. ಕಡುಕಾಡಾರಣ್ಯ. ಆಗೊಮ್ಮೆ ಈಗೊಮ್ಮೆ ದೂರದ ಯೋಗಿಗಳು ಬರುವರು. ಇಲ್ಲಿ ವಾಸಮಾಡುವರು. ಆದರೆ ಈ ಹುಚ್ಚಯೋಗಿಯ ಆಶ್ರಮದಲ್ಲಿ ಬಂದು ರಾತ್ರಿ ಕಳೆಯುುವಷ್ಟರಲ್ಲಿ ಅಬ್ಬಡ ಜಬ್ಬಡ ಆಗಿ ಓಡಿ ಹೋಗುತ್ತಿದ್ದಾರೆ. ಕಂಡಕಂಡವರು ಈ ಪುಣ್ಯಾರಣ್ಯದಲ್ಲಿ ಪಾದ ಊರಲಾರರು. ಊರಿದರೆ ಪರಿಣಾಮ ಕಾದು ಬರುತ್ತದೆ.

ಕೆಲವರು ಹೇಳುತ್ತಾರೆ--

‹ಅದು ಸಿದ್ಧನ ಸರೋವರ... ಅಲ್ಲಿ ಹೋದವರು ಸತ್ತೇ ಹೋಗುತ್ತಾರೆ....’

ಮತ್ತೆ ಕೆಲವರು —

'ಅಯ್ಯಯ್ಯೊ.... ಅದು ಅಡವಿಸಿದ್ಧನ ಕಲ್ಗವಿ.... ಆತಾ ಮಣ್ಣು ಕೊಟ್ರೆ ಬಂಗಾರಾ ಕೊಡ್ತಾನು .... ಬಂಗಾರಾ ಕೊಟ್ರೆ ಮಣ್ಣು ಕೊಡ್ತಾನು....'

ಇನ್ನು ಕೆಲವರು—

'ಆತಾ ಅಡವೀ ಸಿದ್ಧಾ ಅಲ್ಲಾ.... ಯಾ ದೇಶದ್ದೋ ಗುರು ಸಿದ್ಧಾ.... ಹುಚ್ಚ ಗುರುಸಿದ್ಧಾ.... ಅನ್ನಿಲ್ಲಾ ನೀರಿಲ್ಲಾ.... ಹಣ್ಣಿಲ್ಲಾ ಹಾಲಿಲ್ಲಾ.... ಗಾಳಿ ಕುಡುದು ಹಾವಿನ ಹುತ್ತಿನ್ಯಾಗ ಶಿವಾ ಕುತ್ತಾಂಗ ಕುಂದ್ರತಾನು....'

ಒಬ್ಬೊಬ್ಬರು ಹೀಗೂ ಹೇಳುವದುಂಟು—

'ಆತಾ ಅರೆಬತ್ಲೇ ಶರಣಾ.... ಮೈ ಅರೆಬತ್ಲೆ ... ಮನಾ ಬಟಾ ಬತ್ಲೇ.... ಕುಲಗೇಡಿ ಕಾವಿಗೋಳ್ಗೆ ಬೆಂಕಿಬಾನಾ.... ಸಜ್ಜನ್ರಿಗೆ ಮುದ್ದೀ ಸಕ್ರಿ.... ಮಾತುಮಾ.... ಮ್ಯಾ ಮಾತುಮಾ....'

ಒಟ್ಟಿನಲ್ಲಿ ಅತಿಮಾನವ ಮಹಾಮಾನವನಾಗಿ ಆತ ಲೋಕಕ್ಕೆ ತೋರತೊಡಗಿದ. ಕೆಲವರಿಗೆ ಬ್ರಹ್ಮರಾಕ್ಷಸ. ಕೆಲವರಿಗೆ ಅಡವಿಸಿದ್ಧ. ಕೆಲವರಿಗೆ ಸುಡುಗಾಡು ಸಿದ್ಧ. ಕೆಲವರಿಗೆ ರುದ್ರಯೋಗಿ. ಮತ್ತೆ ಕೆಲವರಿಗೆ ಶಿವಯೋಗಿ. ಶಾಂತಯೋಗಿ. ಲೀಲಾಲೋಲ ವಿಚಿತ್ರಯೋಗಿ!

ಯಾವುದು ಸತ್ಯ ?

* * *

ಒಂದು ದಿನ ಮಾದೇವಿ ಆ ಗವಿಹೊಂಡದ ಆಶ್ರಮದಲ್ಲಿ ಶಿವ ಲಿಂಗಪುಷ್ಪಗಳನ್ನು ತಂದು ಮಾಲೆ ಮಾಡುತ್ತಿದ್ದಾಳೆ. ನಡುನಡುವೆ ಕೆಂಪು ಕಮಲ ನೀಲಕಮಲಗಳನ್ನು ಪವಣಿಸುತ್ತಿದ್ದಾಳೆ. ಆ ಹುಚ್ಚಯೋಗಿಯ ಗವಿಗೆ ಪುಷ್ಪತೋರಣಗಳನ್ನು ಅಳವಡಿಸುತ್ತಿದ್ದಾಳೆ. ಈಗವಳು ಸುಂದರಿ.

ಹದಿನಾಲ್ಕರ ಸೋಬಾನ ಸುಂದರಿ. ಮೊಗ್ಗು ಅರಳಿದೆ. ಗಂಧ ಕೆರಳಿದೆ. ಎದೆಯಲ್ಲಿ ಯೌವನ ಜೋಕಾಲಿ ಕಟ್ಟಿದೆ. ಇವಳು ಮಾಲೆ ಮಾಡುತ್ತಿರುವ ನೀಲಕಮಲಗಳಿಗಿಂತ ನೀಲವಾಗಿವೆ ಇವಳ ಕಣ್ಣುಗಳು. ಈ ಕೆಂಪು ಕಮಲಗಳಿಗಿಂತಲೂ ಕೆಂಪಾಗಿವೆ ಈ ಕೋಮಲ ಗಲ್ಲಗಳು. ತಂದೆಯ ಬಣ್ಣವೇ ಬೇರೆ. ಮಗಳ ಬಣ್ಣವೇ ಬೇರೆ. ತಾಯಿಯ ರೂಪವನ್ನೇ ಹೋತು ಹುಟ್ಟಿರುವ ಹುಡುಗಿ; ಪಾಪ ತಾಯಿ ಇಲ್ಲದ ತಬ್ಬಲಿ. ಹುಟ್ಟಿ ದಂದಿನಿಂದಲೂ ಇವಳಿಗೆ ತಂದೆಯೇ ತಾಯಿ. ಈಗಂತೂ ಶಿವಯೋಗಿಯೇ ನಿಜವಾದ ತಾಯಿ. ಶಿವಲಿಂಗಪುಷ್ಪದ ಶಿವಕಾಂತಿಚಲುವು ಇವಳ ಮೈಯಲ್ಲಿ ಕಳಸಕಟ್ಟಿದೆ. ಹಣೆಯಲ್ಲಿ ಭಸ್ಮ ಉಕ್ಕಿದೆ. ಎದೆಯಲ್ಲಿ ಲಿಂಗ ನಕ್ಕಿದೆ. ಕಾಮಕ್ಕೂ ಪ್ರೇಮಕ್ಕೂ ಯೋಗಕ್ಕೂ ಹುರಿಕಟ್ಟಾಗಿದ್ದಾಳೆ ಹುಡುಗಿ.

ಸಮೀಪದಲ್ಲಿ ಇವಳ ತಂದೆ ಶರಣಶಿವಪ್ಪ ಮತ್ತೊಂದು ಪರ್ಣ ಕುಟೀರವನ್ನು ಕಟ್ಟುತ್ತಿದ್ದಾನೆ.

ಅಷ್ಟರಲ್ಲಿ ಗವಿಯಲ್ಲಿ ಗಹಗಹಿಸಿ ನಕ್ಕ ಸದ್ದಾಯಿತು. ಮಾದೇವಿ ಕೈಮುಗಿದು ನಿಂತಳು. ಶಿವಪ್ಪ ಶಿರಬಾಗಿ ನಿಂತ. ಕೂಡಲೆ ಮಿಂಚಿನ ವೇಗದಿಂದ ಒಂದೇ ಒಂದು ಹಾರಿಕೆಗೆ ಆ ಗುಜ್ಜಯೋಗಿ ಓಡಿಬಂದು ಈ ಸುಂದರಿ ಮಾದೇವಿಯನ್ನು ಅಪ್ಪಿಕೊಂಡ. ಮರುಕ್ಷಣದಲ್ಲಿ ಇವಳನ್ನು ಹೆಗಲಮೇಲೆ ಹೊತ್ತುಕೊಂಡು ಅಷ್ಟೇವೇಗದಿಂದ ಓಡಿ ಗವಿಯ ಆಳಕ್ಕೆ ಇಳಿದು ಹೋದ. ಮಾದೇವಿ ಅಂಜಲಿಲ್ಲ! ತಂದೆ ಶಿವಪ್ಪ ಮಾತ್ರ.... ಯೋಗಿಗಳು ಹೀಗೇಕೆ ಮಾಡಿದರು.... ಮಗಳನ್ನು ಏಕೆ ಹೊತ್ತೊಯ್ದರು ....ಎಂದು ಶಂಕಿಸುತ್ತ ಮೂಗುಬೆರಳಾಗಿ ನಿಂತ!!

ಅಷ್ಟರಲ್ಲಿ ಪಶ್ಚಿಮದ ದಿಬ್ಬದ ದಾರಿಯಿಂದ ಹತ್ತಾರು ಕುದುರೆ ಗಳ ಖುರಪುಟಗಳ ಸದ್ದು ಕೇಳಿತು. ಬಿಚ್ಚುಗತ್ತಿಯ ರಾಕ್ಷಸವೇಷದ ಕ್ರೂರಸೈನಿಕರು ಆ ತಪೋವನವನ್ನೇ ಹೊಲೆಕಲಸುವಂತೆ ಆರ್ಭಟಿಸಿ

ಬಂದರು. ಸರೋವರದ ಪರ್ಣಕುಟೀರದ ಬಳಿಗೆ ಕುದುರೆಗಳು ಥಕ್ಕನೇ ನಿಂತವು. ಆ ಕ್ರೂರ ಪುರುಷರಲ್ಲಿ ಅಗ್ರಗಣ್ಯ ನೋಡಲು ಹುಳಪಲ್ಲೆ ಬಣ್ಣದವ. ಅಡ್ಡಾದಿಡ್ಡಿ. ಹರಕುಗಡ್ಡ. ಗೂಗಿಕಣ್ಣು. ಹದ್ದಿನ ಮೂಗು. ಸುಟ್ಟ ಬದನೆಕಾಯಿಯಂತಾ ತುಟಿ. ಕುದುರೆಯ ಮೇಲಿಂದ ಶಿವಪ್ಪನ ಎದುರಿಗೆ ಛಂಗನೇ ಜಿಗಿದು ಕೇಳಿದ—

'ಲೇ.... ಯಾರು ನೀ ... ಬಾ ಇಲ್ಲೆ....'

ಶಿವಪ್ಪ ನಡುಗುತ್ತ ಕೇಳಿದ—

'ಏನು ಬುದ್ಧಿ.... ಏನು ಬುದ್ಧಿ....?'

ನಾವ ಬುದ್ಧಿ ಅಲ್ಲಾ.... ತೆಂಕಣರಾಜ್ಯದ ರಾಕ್ಷಸಮಲ್ಲನ ಅರಸುಮನೆತನದವರು.... ಹುಂ ಹೇಳು... ಇಲ್ಲಿ ಒಬ್ಬ ಮಹಾರೂಪವತಿ ಬಂದಾಳಂತ.... ಎಲ್ಲಿ ಅವಳು.... ಎಲ್ಲಿ ಅವಳು?'

'ನನಗೆ ಗೊತ್ತಿಲ್ಲ ದೊರೆ....'

'ಗೊತ್ತು.... ಗೊತ್ತು.... ಅವಳು ನಿನ್ನ ಮಗಳೆಂದು ಕೇಳಿ ಬಂದೇವಿ.... ಅವಳನ್ನ ಕೊಡು.... ಇಲ್ಲಾ ಅಂದ್ರ ನಿನ್ನ ರುಂಡಾ ಕೊಡು....'

'ಬೇಕಾದ್ದು ಮಾಡ್ರಿ.... ಅವಳಿಲ್ಲಾ.... ಅವಳಿಲ್ಲಾ....'

'ಇಲ್ಲಾ?.... ಹಾಂಗಾದ್ರ ಇಕಾ ಬಿತ್ತು ನೆಲಕ್ಕ ನಿನ್ನ ರುಂಡಾ...'

'ಬೀಳ್ಲಿ.... ಬೀಳ್ಲಿ.... ಬೀಳ್ಲಿ....'

ಆ ವೈರಿನಾಯಕ ಖಡ್ಗವನ್ನು ಬೀಸಿ ಶರಣ ಶಿವಪ್ಪನ ರುಂಡ ಹಾರಿಸುವಷ್ಟರಲ್ಲಿ ಗವಿಯಿಂದ ಕೂಗು ಬಂತು—

'ಇದ್ದಾಳೆ.... ಇದ್ದಾಳೆ.... ಇಲ್ಲೇ ಈ ಗವಿಯಲ್ಲಿದ್ದಾಳೆ.... ಬರ್ರಿ.... ಬರ್ರಿ....'

ಈ ಹುಚ್ಚನ ಮಾತು ಕೇಳಿ ಆ ಕ್ರೂರ ಕಾಮಿಗೆ ಸಂತೋಷ ಉಕ್ಕಿ ಬಂತು. ಆನಂಪದಿಂದ ಹುಚ್ಚನತ್ತ ನೋಡಿ ಹೇಳಿದ—

'ಭಲಾ.... ಭಲಾ... ಏನು ಬೇಕು ನಿನಗೆ ಬಹುಮಾನ....'

ಹುಚ್ಚ ಕೂಗಿದ—

'ರಕ್ತಾ.... ರಕ್ತಾ.... ರಕ್ತಾ....'

ಸೈನಿಕ ಗಹಗಹಿಸಿ ನಕ್ಕ. ಈತ ಹುಚ್ಚ. ಹುಚ್ಚನ ಮಾತು ಹುಣಸೀಕಪ್ಪಕ್ಕಿಂತ ಕೀಳು! ಅದರ ಬಗ್ಗೆ ಗಮನಿಸದೇ ಗವಿಯಲ್ಲಿ ನುಗ್ಗಿ ಹೋದ. ಸರ್ಪಗಳು ಭುಸ್ಸೆಂದು ಬಂದವು. ಕಣ್ಣು ಕಪ್ಪಡಿಗಳು ಕಣ್ಣಿಗೆ ಹಾದವು. ಹಲ್ಲಿಗಳು ಲೊಚಗುಟ್ಟಿದವು. ಹೆಗ್ಗಣಗಳು ಕಾಲಲ್ಲಿ ತೊಡ. ರಿದವು. ಎಂದಿಗೂ ಅಂಜದ ಆ ಸೇನಾನಾಯಕ ಅಂಜಿ ನಡುಗಿದ. ಓಡಿ ಬಂದ. ಹುಚ್ಚಯೋಗಿಯನ್ನೇ ಹಿಂಡುವಂತೆ ನೋಡಿ ಕೂಗಿದ—

'ಕೊಡೂ ... ಕೊಡೂ ... ಆ ಹುಡುಗೀ ಕೊಡೂ'

ಈಗ ಶಿವಯೋಗಿಹುಚ್ಚ ಈ ಮಾನವಹುಚ್ಚನನ್ನು ಕೈಹಿಡಿದು ಕೆಳಗೆ ಕರೆದೊಯ್ದ. ಸರ್ಪಗಳನ್ನು ಸರಿಸಿದ. ಭರಭರನೆ ತಗ್ಗಿನ ಕುಳಿಯಲ್ಲಿ ಇಳಿದ. ಕಾಮುಕ್ಕೆ ನಾಚಿಕೆಯೆಲ್ಲಿ? ಮನೆಯೇನು? ಮಠವೇನು? ಗುಡಿಯೇನು? ಗವಿಯೇನು? ಆತ ಹುಚ್ಚನನ್ನು ಹಿಂಬಾಲಿಸಿ ಒಳ ಹೊಕ್ಕ. ಒಳಗೆ ಒಂದು ದೊಡ್ಡ ದೀಪ ಉರಿಯುತ್ತಿದೆ. ದೀಪದ ಗವಿಯ ಬಾಗಿಲಲ್ಲಿ ಆ ತ್ರಿಲೋಕ ಸುಂದರಿ ಕುಳಿತಿದ್ದಾಳೆ! ಹುಚ್ಚ ಹೇಳಿದ—

'ಹೋಗು.... ಒಳಗೆ ಹೋಗು.... ಅವಳನ್ನು ಅಪ್ಪು .... ಮುದ್ದಾಡು.... ಮುದ್ದಾಡು....'

ಹುಚ್ಚಯೋಗಿಯು ಕಾಮುಕನನ್ನು ಕಾಮಿನಿಯ ಬಳಿಗೆ ಕಳಿಸಿ ಗವಿಯ ಹೊರಗೆ ಬಂದ! ಶರಣ ಶಿವಪ್ಪ ಅಳುತ್ತ ನಿಂತ. ಸೈನಿಕರು ಕುಣಿದಾಡಿದರು. ಕೇಕೆ ಹಾಕಿದರು. ಹೆಣ್ಣಿನ ಮಾನಭಂಗದ ಮದೋನ್ಮತ್ತ

ಆನಂದದಿಂದ ಆ ತಪೋವನವನ್ನು ಹೊಳೆಗಲಿಸಿ ಕೂಗಿದರು. ಮರುಕ್ಷಣ ದಲ್ಲಿಯೇ ಒಳಗೆ ಹೋದ ಆ ಮಹಾಕಾಮುಕ ಆರ್ತಸಂಕಟದಿಂದ ಭಯಂಕರವಾಗಿ ಚೀರುತ್ತ ಹೊರಗೋಡಿ ಬಂದ. ಬಂದವನೇ ಹುಚ್ಚನ ಪಾದಕ್ಕೆ ಹುಚ್ಚನಂತೆ ಬಿದ್ದು ಹಣೆ ಜಜ್ಜಿ ಹೇಳಿದ—

'ತಂದೇ.... ತಂದೇ.... ಮಹಾತ್ಮಾ... ಆ ಹುಡಿಗೆ ಹುಡಿಗೆ ಯಲ್ಲ.... ಹುಡಿಗೆಯಲ್ಲ.... ನನ್ನ ತಾಯಿ.... ನನ್ನ ಹಡೆದ ತಾಯಿ.... ಅವಳಿಗೆ ನನ್ನ ತಾಯಿರೂಪ ಬಂದಿದೆ.... ನನ್ನ ತಾಯಿರೂಪ ಬಂದಿದೆ...'

ಹುಚ್ಚ ಬಡಬಡಸಿದ—

'ಲೋಕವೇ ತಾಯಿ.... ವಿಶ್ವವೇ ಲಿಂಗ....'

ಕಾಮುಕ ಸೇನಾನಿ ಈಗ ಕೂಸಿನಂತೆ ಅಳತೊಡಗಿದ. ಬಿಕ್ಕು ತ್ತಲೇ ಹೇಳಿದ—

'ಮಹಾತ್ಮಾ... ನನ್ನ ತಾಯಿ ತೀರಿಕೊಂಡು ಆರು ತಿಂಗಳಾದವು.... ಇಂದು ನನಗೆ ನನ್ನ ತಾಯಿ ದರ್ಶನ ಮಾಡಿಸಿದೆ.... ನನ ಉದ್ಧಾರಾ ಮಾಡಿದೆ.... ಏನು ಕೊಡಲಿ ನಿನಗೆ.... ಏನು ಕೊಡಲಿ ನಿನಗೆ....?'

ಹುಚ್ಚ ಹೇಳಿದ—

'ರಕ್ತಾ.... ರಕ್ತಾ.... ನಿನ್ನ ರಕ್ತಾ....'

'ಅಂದರೆ ....?'

'ರಕ್ತಾ.... ರಕ್ತಾ.... ನಿನ್ನ ರಕ್ತಾ....'

'ತಗೋ ತಂದೇ.... ತಗೋ.... ಈ ರುಂಡವನ್ನೇ ಕಡಿದು ಕೊಟ್ಟೇನು.... ರಕ್ತಾ ಸುರಿದೇನು...'

'ರುಂಡ ಬೇಡಾ.... ರಕ್ತಾ.... ರಕ್ತಾ.... ರಕ್ತಾ....'

'ಅಂದರೇನು ತಂದೇ?'

ಹುಚ್ಚ ಗಹಗಹಿಸಿ ನಕ್ಕ. ಸಮೀಪದಲ್ಲಿಯೇ ಇದ್ದ ಶರಣ ಶಿವಪ್ಪ ಸೇನಾನಿಗೆ ಕೈಮುಗಿದು ಹೇಳಿದ—

'ದೊರೆಗಳೆ.... ರಕ್ತಾ ಅಂದರೆ ರಕ್ತ ಅಲ್ಲ... ರಕ್ತದ ಗುಣಾ ಕೊಡ್ರಿ.... ರಕ್ತದ ಗುಣಾ ಅಂದ್ರ ವೈರಾ ಈರ್ಷಾ ಕಾಮಾ ಕ್ರೋಧಾ... ಅವನ್ನ ಕೊಡ್ರಿ....'

ಈಗ ಸೇನಾನಿ ಕೈಮುಗಿದು ಪ್ರಾರ್ಥಿಸಿದ—

'ಹುಚ್ಚುವೇಷದ ನಿರುಪಮ ಶಿವಯೋಗಿ.... ನಾನು ಮೂರ್ಖ .... ಕ್ರೂರಿ.... ಕಟುಕಿ ... ಕಾಮುಕ.... ಭ್ರಾಮುಕ.... ನೀವು ಹೇಳಿದ್ದನ್ನು ಕೂಡಲೇ ಕೊಡುವ ಶಕ್ತಿ ನನ್ನಲ್ಲಿಲ್ಲ.... ರುಂಡವನ್ನು ಕೊಡುವದು ಸುಲಭ .. ಆದರೆ ರಕ್ತದ ಈ ಗುಣಗಳನ್ನು ಕೊಡುವದು ಕಠಿಣ....ಆದರೂ ಪರಸ್ತ್ರೀಯ ಕಾಮುವನ್ನು.... ನಿರ್ಗತಿಕರ ಮೇಲಿನ ಕ್ರೌರ್ಯವನ್ನು.... ಇಗೋ ನಿಮ್ಮ ಪಾದಕ್ಕೆ ಇಂದು ಸಮರ್ಪಿಸಿದ್ದೇನೆ.... ಸ್ವೀಕರಿಸಿರಿ.... ಸ್ವೀಕರಿಸಿರಿ ...'

ಹುಚ್ಚಯೋಗಿ ಹುಳುಹುಳು ನಕ್ಕ. ಅಷ್ಟರಲ್ಲಿ ಗವಿಯ ಬಾಗಿಲಿಗೆ ಅದೇ ಆ ಸುಂದರಿ.... ಮಾದೇವಿ.... ಅದೇ ಮೊದಲ ಸಮ್ಮೋಹಕ ರೂಪದಲ್ಲಿ ತುಂಬಿದ ಚೆಲುವಿಯಾಗಿ ಬಂದು ನಿಂತಿದ್ದಾಳೆ! ನಿಂತು ನಗುತ್ತಿದ್ದಾಳೆ!!

ಸೈನಿಕರು ಅವಳನ್ನು ನೋಡುವ ಬದಲು ಕೈಮುಗಿದರು!!!

ಸೇನಾನಿ ಹುಳುಹುಳು ನೋಡಿ ಗಳಗಳ ಅತ್ತ!!!

೪.

ಚಿಗರಿಯು ಮರಿ ಈಗ ಮರಿಯಲ್ಲ. ದೊಡ್ಡದಾಗಿ ಮತ್ತೆ ಮರಿ ಹಾಕಿದೆ. ಈಗ ಅದು ತನ್ನ ಮರಿಗಳಿಗೆ ಮಾತ್ರ ತಾಯಿಯಲ್ಲ; ಈ ಆಶ್ರಮಕ್ಕೆ ತಾಯಿ. ಹುಚ್ಚನ ಪುಣ್ಯಾರಣ್ಯದ ವನದೇವಿ. ಆಶ್ರಮದ ಪರ್ಣಕುಟೀರಗಳಲ್ಲಿ ಅಂಜಿಕೆ ಇಲ್ಲದೆ ಓಡಾಡುತ್ತಿದೆ. ಶಿವಯೋಗಿಯ ಪಾದಗಳನ್ನು ನೆಕ್ಕುತ್ತದೆ. ಶರಣಶಿವಪ್ಪನ ತ್ರಿಲೋಕಸುಂದರಿ ಮಗಳು ಮಾದೇವಿ ಈಗ ಈ ಚಿಗರೆಯ ಬೆಲ್ಲದ ಗೆಳತಿ. ಹುಚ್ಚಯೋಗಿಗಳು ನೋಡಲು ಹುಚ್ಚರಾದರೂ ನುಡಿಯಲ್ಲಿ ವೇದಗಳನ್ನು ಉರುಳಿಸುತ್ತಾರೋ ಏನೋ! ಈ ಚಿಗರಿಗೆ 'ಮಾಯಾ' ಎಂದು ಹೆಸರಿಟ್ಟಿದ್ದಾರೆ!! ಅದರ ಎರಡು ಹೆಣ್ಣುಮರಿಗಳಿಗೆ 'ಸಂಗಾ' 'ನಿಸ್ಸಂಗಾ' ಎಂದು ಕರೆಯು ತ್ತಿದ್ದಾರೆ!!!

ಮಾದೇವಿ ಹೆಣ್ತನದ ಗಣಿ. ಕೇಶರಾಶಿಯಲ್ಲಿ ಕಣಹಬ್ಬಗೈದ ತ್ರಿವೇಣಿ. ಕಣ್ಣುಗಳು ಕಾನನದ ನಂದಾದೀಪಗಳು. ತುಟಿಯಲ್ಲಿ ತಂಗಾಳಿ. ಉಸಿರಲ್ಲಿ ಬಿಸಿಗಾಳಿ. ಅಂಗಾಂಗಗಳಲ್ಲಿ ಪ್ರೇಮಸ್ಫುರಣ. ಆದರೂ ಅವಳ ಚಲನೆಯಲ್ಲಿ ಚಾಂಚಲ್ಯವಿಲ್ಲ. ಕಣ್ಣುಕುಡಿನೋಟದಲ್ಲಿ ಕಾಮದ ಕಿಡಿ ಇಲ್ಲ ವಕ್ರ ಮೈಯ ಸೊಬಗಿನಲ್ಲಿ ಸೋಗುಲಾಡಿತನವಿಲ್ಲ. ಹಣೆಯಲ್ಲಿ ತುಂಬಿದ ಭಸ್ಮ ಶ್ರೀಮಂತಸುಂದರವಾಗಿದೆ. ಎದೆಯಲ್ಲಿ ಎದ್ದುಕಾಣುವ ಲಿಂಗ ಧೀಮಂತ ಧೀಸ್ಫುರಣವಾಗಿದೆ. ಕಾನನದ ಕೈವಲ್ಯಸಿಥಿಯಾಗಿದ್ದಾಳೆ ಈ ಮಾದೇವಿ! ಮಾದೇವಿಯ ಗೆಳತಿ 'ಮಾಯಾ'!! ಯೋಗಿಣಿ-ವಿರಹಿಣಿ ಯರ ಮಹಾಸಂಗಮವೋ ಎನ್ನುವಂತಿದೆ. ಈ ಸುಂದರ ಸರೋವರ!!!

ಒಂದು ದಿನ ಮಾದೇವಿ ಮಲ್ಲಿಗೆಯ ಬಳ್ಳಿಗಳಿಗೆ ನೀರುಣಿಸುತ್ತ ನಡುಮಧ್ಯಾನ್ಯದ ಬಿಸಿಲಲ್ಲಿ ಬಾದಾಮಿವೃಕ್ಷದ ತಂಪಿನಕೆಳಗೆ ನಿದ್ರಾಮಗ್ನ ಳಾಗಿದ್ದಾಳೆ. ಆಗೊಂದು ಅಪೂರ್ವ ಕನಸು ಕಂಡಳು. ಕನಸಿನಲ್ಲಿ ಕೈಲಾಸ! ಕೈಲಾಸದಲ್ಲಿ ಶಿವಾಲಯ. ಶಿವಾಲಯದಲ್ಲಿ ಶಿವನ ಸಿಂಹಾಸನ. ಸಿಂಹಾಸನದ ಮೇಲೆ ಶಿವ-ಪಾರ್ವತಿಯರು. ಒಮ್ಮೆ ಮಾದೇವಿಗೆ ಶಿವ ಪಾರ್ವತಿಯರು ಕಾಣುತ್ತಾರೆ. ಇನ್ನೊಮ್ಮೆ ಅವರು ಮಾಯವಾಗಿ ಶೂನ್ಯ ಸಿಂಹಾಸನ ತೋರುತ್ತದೆ. ಮತ್ತೊಮ್ಮೆಗೆ ಆ ಸಿಂಹಾಸನದಲ್ಲಿ ಹುಚ್ಚ ಶಿವಯೋಗಿಯ ರೂಪ ತೋರುತ್ತದೆ. ಸುತ್ತಲೂ ಶಿವಗಣವೃಂದ ಓಂಕಾರದ ಝೇಂಕಾರ ಮಾಡುತ್ತದೆ. ಈಗ ಮಾದೇವಿ ಆ ಅಮರ ಸಿಂಹಾಸನದ ಎದುರು ವಿಶ್ವಸಮ್ಮೋಹಿನಿಯಾಗಿ ಮಾಯಾನರ್ತನ ನರ್ತಿಸು ತ್ತಿದ್ದಾಳೆ. ದಿಗಂತಗಳು ಹೂಮಳೆ ಸುರಿಸುತ್ತಿವೆ. ಗಣಪತಿ ಕುಣಿಯು- ತ್ತಿದ್ದಾನೆ. ಷಣ್ಮುಖ ಹಾಡುತ್ತಿದ್ದಾನೆ. ಕಿನ್ನರ ಕಿಂಪುರುಷರು ಕಿನ್ನರಿ ನುಡಿಸುತ್ತಿದ್ದಾರೆ. ಬೃಂಗಿ ಮೃದಂಗ ಬಾರಿಸುತ್ತಿದ್ದಾನೆ. ಏನಿದು ನರ್ತನ? ವಿಶ್ವ ವಿಚಿತ್ರ ವಿನೂತನ ನರ್ತನ? ಓಂಕಾರದಲ್ಲಿ ಸಾಕಾರ ಹಾಡಿದೆ! ಶೂನ್ಯದಲ್ಲಿ ಸೌಂದರ್ಯ ಕುಣಿದಿದೆ!! ಮುಕ್ತಿಯ ಶಿಖರದಿಂದ ಪ್ರೇಮದ ಗಂಗಾನದಿ ಹುಟ್ಟಿ ಹರಡಿದೆ!!!

ಈಗ ಒಬ್ಬ ಅಪೂರ್ವ ಸುಂದರ ಗಂಧರ್ವ ತರುಣ ಪ್ರತ್ಯಕ್ಷನಾದ. ಮೋಹಕ ರೂಪ. ಹೆಣ್ಣಿನ ಕಣ್ಣಿಗೆ ಆಕರ್ಷಕ ಕಾಮಪುಂಗವ. ನೋಡಲು ರಾಜಕುಮಾರ. ವೀರ ಧೀರ. ಎದೆಯಲ್ಲಿ ಪ್ರೇಮಿ. ಕಣ್ಣಲ್ಲಿ ಕಾಮಿ. ಮಾದೇವಿಯ ಬಳಿಬಂದು ಪ್ರಾರ್ಥಿಸಿದ--

'ನನಗೆ ನೀನು ಬೇಕು.... ಮಾದೇವಿ.... ನನಗೆ ನೀನು ಬೇಕು....'

ಮಾದೇವಿಯಿಂದ ಉತ್ತರ ಬಂತು --

'ದೂರ ನಿಲ್ಲು.... ಇದು ಪುಣ್ಯಕ್ಷೇತ್ರ .... ಪಾವನ ಸುಕ್ಷೇತ್ರ ...

ಕಾಮಕ್ಕೆ ಕೊಂಬಿಲ್ಲ.... ಪ್ರೇಮಕ್ಕೆ ಇಂಬಿಲ್ಲ....'

'ಇಲ್ಲಾ.... ಹಾಗೆನ್ನದಿರು.... ನೀನು ಹೇಳಿದಂತೆ ಹಾಡುವೆ.... ಕೇಳಿದಂತೆ ಕುಣಿವೆ....'

'ಊಹುಂ ಇದು ನಾಟಕರಂಗವಲ್ಲ.... ನಡೆ.... ನಡೆಯಾಚೆ....'

'ಇಲ್ಲ... ಇಲ್ಲ.... ನೀನಿಲ್ಲದೆ ನನಗೆ ಉಳಿಗಾಲವಿಲ್ಲ.... ನನ್ನ ಪುರುಷ ಸೌಂದರ್ಯಕ್ಕೆ ನಿನ್ನ ಶಕ್ತಿಯ ವಿಕಾಸಬೇಕು ... ಶಕ್ತಿಯ ಆಶ್ರಯ ಬೇಕು...'

'ನಿನಗೆ ಆಶ್ರಯ ನೀಡಲಾರೆ.... ನೀಡಿ ಕೆಡಲಾರೆ....'

'ಬೇಡುವದು ನನ್ನ ಧರ್ಮ ನೀಡುವದು ನಿನ್ನ ಧರ್ಮ.... ಪುರುಷ ನಾನು.... ಪ್ರಕೃತಿ ನೀನು....'

'ನನಗೆ ನಿನ್ನ ಧರ್ಮಬೇಡ ... ಉಪದೇಶ ಬೇಡ ..'

'ಹೆಣ್ಣು ಹೆಣ್ಣಿನ ಧರ್ಮ ಬಿಟ್ಟಾಗ ಧರ್ಮ ಬರುತ್ತದೆ.... ಹೇಳುತ್ತದೆ.... ಮಾದೇವಿ ಮರೆಯದಿರು ನಿನ್ನ ವಿಶ್ವಲೀಲಾ ವಿನೋದ.... ತಾ.... ನಿನ್ನ ಕೈ ತಾ.... ನಾನು ಆನಂದ ತತ್ವ .. ನೀನು ನರ್ತನ ತತ್ವ ... ನಾನು ಕಾರಣ... ನೀನು ಕಾರ್ಯ '

'ನಿನ್ನ ತತ್ವ ತಂತಿ ಇಲ್ಲದ ತಂಬೂರಿ .. ಹಾಳೂರಿನ ಜೋಗುಳ .... ನಡೆ.... ನಡೆಯಾಚೆ....'

ಆತ ಕಂಬನಿ ಸುರಿಸಿದ! ಕೈಮುಗಿದು ಶೂನ್ಯಸಿಂಹಾಸನಕ್ಕೆ ಪ್ರಾರ್ಥಿಸಿದ!!

'ಓ ಶಿವಯೋಗಿ.... ಹರಿಸು .. ವರಿಸು.... ಸ್ಫುರಿಸು....'

ತಕ್ಷಣ ಹುಚ್ಚಯೋಗಿ ಕಾಣಿಸಿದ. ಆವನಿಂದ ಶಬ್ದ ಮೂಡಿತು –

'ಇದು ಪುರುಷ ತತ್ವದ ಕೂಗು.... ಉತ್ಕ್ರಾಂತಿಯ ಕೂಗು ... ಕೂಗಿಗೆ ಒಲವು ಓಗೊಡಲಿ.... ಪ್ರೇಮ ಸೆರಗು ಹಾಸಲಿ.... ಕಾಮ

ತೋರಣ ಕಟ್ಟಲಿ.... ನಿಮಗೆ ಯೋಗದ ಆಶೀರ್ವಾದವಿದೆ..... ಅರಳಲಿ ಜೀವನ.... ಉರುಳಲಿ ಸಂಸಾರಚಕ್ರ.....'

ತಕ್ಷಣವೇ ಪುರುಷ ಬಂದು ಮಾದೇವಿಯನ್ನು ಆಲಿಂಗಿಸಿದ. ಅವಳು ರೋಮಾಂಚಿತಳಾಗಿ ಎಚ್ಚತ್ತಳು. ಕಣ್ತೆರೆದಾಗ ಇನ್ನೊಂದು ಆಶ್ಚರ್ಯ! ಅವಳ ಎದುರಿಗೇ ಹುಚ್ಚೇಶ್ವರ ಶಿವಯೋಗಿ ಮುಗ್ಧ ನಗೆ ಚಿಮ್ಮಿ ತನ್ನ ವಿಚಿತ್ರ ಶೈಲಿಯಲ್ಲಿ ನಿಂತಿದ್ದಾನೆ!! ಮಾದೇವಿ ಅವನ ಶ್ರೀಪಾದಕ್ಕೆ ಕರುಳಿನ ಹೂಮಾಲೆ ಅರ್ಪಿಸಿ ಪ್ರಾರ್ಥಿಸಿದಳು—

'ತಂದೇ.... ಇದೇನು ನಿನ್ನ ಲೀಲೆ....? ನನಗೆ ನಿನ್ನ ಶ್ರೀಪಾದ ಬೇಕು.... ನಿನ್ನ ಮುಕ್ತಿ ಬೇಕು.... ತೋರಬೇಡ ತಂದೆ ಕನಸಿನ ಕಾಮ.... ಕನಸಿನ ಸಂಸಾರ.... ಸುಳ್ಳಿನ ಭವಭವಾಂತರ....'

ಶಿವಯೋಗಿ ಮಂದಹಾಸ ಬೀರಿ ಹೇಳಿದ—

'ಮಗಳೇ.... ಮುಕ್ತಿಗಿಂತಲೂ ಭಕ್ತಿ ದೊಡ್ಡದು... ವೈರಾಗ್ಯಕ್ಕಿಂತಲೂ ಸಂಸಾರಯೋಗ ದೊಡ್ಡದು....'

'ಏನಿದು ತಂದೆ.... ತಳ್ಳುವಿರಾ ನನ್ನನ್ನು ಸಂಸಾರದ ದಳ್ಳುರಿಯ ಕಿಚ್ಚಿನಲ್ಲಿ?'

'ಕಿಚ್ಚು ಬಹಳ ಸುಖಾ ಮಗು.... ಕಿಚ್ಚು ಬಹಳ ಸುಖಾ....'

'ಅಂದರೆ?'

'ಮುದ್ದು ಕೂಸು ನೀನು.... ಈ ಜೀವನವೇ ಬೆಂಕಿ.... ಬೆಂಕಿಯನ್ನು ಕುಡಿ.... ಬೆಂಕಿಯಲ್ಲಿ ಬಾಳು....'

'ಇದೇನು ತಂದೆ?'

'ಹೌದು ಮಗು.... ಬೆಂಕಿ ಬೆಂಕಿಯಲ್ಲ.... ಬೆಂಕಿ ಶಕ್ತಿ.... ಬೆಂಕಿ ಭಕ್ತಿ.... ಅದೇ ಕಾಯಕ ಮಗಳೇ.... ಅದೇ ಕಾಯಕ....'

'ಕಾಯಕವೆಂದರೆ?'

'ಕೈವಲ್ಯದ ಜೊಚ್ಚಿಲು ಕೂಸೇ ಕಾಯಕ.... ಕಾಯಕವಿಲ್ಲದೇ ಜೀವನಕ್ಕೆ ಕಾರಣವೂ ಇಲ್ಲ ಕಾರ್ಯವೂ ಇಲ್ಲ....'

'ನನಗೆ ಅರ್ಥವಾಗುವಂತೆ ಹೇಳಿರಿ ತಂದೆ?'

'ಮಗು.... ಸತ್ತು ಗೆಲ್ಲುವವರು ಶರಣರಲ್ಲ.... ಇದ್ದು ಗೆಲ್ಲು ವವರು ಶರಣರು....'

'ಮತ್ತೂ ಕಠಿಣ.... ಮತ್ತೂ ಗಹನ ನಿಮ್ಮ ಮಾತು.... ಮಗು ವಿಗೆ ತಂಬಿಟ್ಟು ತಿನ್ನಿಸುವಿರಾ?'

'ಕೇಳವ್ವಾ.... ನಾನು ಹುಚ್ಚ ... ನಾನು ಏನು ಹೇಳುತ್ತೇನೋ ನನಗೇ ತಿಳಿಯದು.... ಆತ್ಮ ಅನ್ನುತ್ತದೆ.... ಬಾಯಿ ಬಡಬಡಿಸುತ್ತದೆ....'

'ಆತ್ಮಜ್ಞಾನಿಗಳು ತಂದೆ ತಾವು....'

'ಕೇಳು ಮಗು ಆತ್ಮ ಸಂದೇಶ.... ಶಿವನಾಗುವದಕ್ಕಿಂತ ಶಿವಭಕ್ತ ನಾಗುವದು ಮೇಲು ... ಮುಕ್ತಿಯನ್ನು ಬೇಡುವದಕ್ಕಿಂತ ಭಕ್ತಿಯನ್ನು ಸಂಪಾದಿಸುವದು ಮೇಲು....'

'ಎಷ್ಟು ಚಂದ ಮಾತು ನಿಮ್ಮದು?'

'ಅಷ್ಟೇ ಅಲ್ಲ.... ಶಿಲೆಯ ಮೇಲಿನ ಕಾಮಿಯಾಗುವದಕ್ಕಿಂತ ಮಲೆಯ ಮೇಲಿನ ಯೋಗಿಯಾಗುವದು ಮೇಲು....'

'ಅಂದರೆ?'

'ಪುಕ್ಕಟೆ ಗಡ್ಡೆಗೆಣಸು ತಿಂದು ಗುಡ್ಡದ ಯೋಗಿಯಾಗು-ವದಕ್ಕಿಂತ.... ಸಂಸಾರದಲ್ಲಿದ್ದು ಸದ್ಗತಿ ಸಾಧಿಸುವದು ಮೇಲು.... ಅದೇ ಜೀವನಯೋಗ.... ಕಲಾತ್ಮಕವಾದ ಸಂಸಾರಯೋಗ....'

'ಸಂಸಾರದ ವಿಷಚಕ್ರಕ್ಕೆ ಸಂಸಾರಯೋಗವೆನ್ನುವಿರಾ?'

'ಸಂಸಾರವೇ ಶಿವಪೂಜೆಯಾದಾಗ ಇನ್ನೆಲ್ಲಿಯ ಚಕ್ರ ಮಗಳೆ?'

ಉಸಿರು ಪರಿಮಳವಾಗಬೇಕು. ಮಾತು ಮಂತ್ರವಾಗಬೇಕು. ನೋಟ ಶಿವನ ಬೇಟವಾಗಬೇಕು. ಶ್ರೀಗಿರಿಯ ಶ್ರೀಶೈಲ ಎದೆಯಲ್ಲಿ ಏಳಬೇಕು. ಆಗ ದೇಹವೇ ದೇಗುಲವವ್ವಾ. ತನುವೇ ಶಿವಾಲಯ ತಾಯಿ....'

'ಹೊಸಾ ಮಾತು.... ಹೊಸಾ ಸುದ್ದಿ....'

'ಅಲ್ಲಲ್ಲ.... ಹೊಸದಲ್ಲ ಚಿನ್ನಾ.... ನೀನು ಚಿನ್ನ ಸುಟ್ಟಂತೆ ಸುಡಬೇಕು ಬೆಂಕಿಯ ಕುಲುಮೆಯಲ್ಲಿ....'

'ಬೆಂಕಿ ಬಿದ್ದಿದೆ ಮಗಳೆ.... ನಿನ್ನಲ್ಲಿ ಜ್ಞಾನದ ಬೆಂಕಿ ಬಿದ್ದಿದೆ . ಕಾನನ ಉರಿಯುತ್ತಿದೆ.... ಪ್ರಕಾಶ ನಗುತ್ತಿದೆ....'

'ತಂದೇ....'

'ಸಾಕು ಮಗು.... ಶಿವನ ಸಂಕಲ್ಪವೇ ಭವಿಷ್ಯದ ಬಾಳಿನ ಬೀಜವಾಗಲಿ.... ಶರಣರು ಕರಗಸದ ಮೇಲೆ ಬಾಳಿದ ಸತ್ಯವಂತರು ನೋಡವ್ವಾ .... ಸತ್ಯಶುದ್ಧ ಕಾಯಕದಿಂದಲ್ಲದೇ ಬಾಳರು ... ನಿತ್ಯಸಂಸಾರವಿಲ್ಲದೇ ತಾಳರು....'

'ಶರಣರಿಗೆ ಸಂಸಾರವೇಕೆ ತಂದೆ?'

'ಹುಚ್ಚವ್ವಾ.... ನಾನು ಹುಚ್ಚ.... ನೀನೂ ಹುಚ್ಚಿ.... ಸಂಸಾರವೆಂದರೆ ಕಾಮವೆಂದು ಮೂರ್ಖರು ಹೇಳುತ್ತಾರೆ.... ಸಂಸಾರವೆಂದರೆ ಕ್ಷುದ್ರ ಆಶೆಗಳ ಕಿನ್ನೆಲವೆಂದು ಮೂಢರು ಹಳಿಯುತ್ತಾರೆ.... ಆದರೆ ಅದು ತಪ್ಪು ತಪ್ಪು.... ಶುದ್ಧ ತಪ್ಪು ...'

'ಸಂಸಾರವೆಂದರೆ ಇನ್ನೇನು?'

'ಸಂಸಾರ.... ಸತ್ತ ಶಿವನನ್ನು ಎಚ್ಚರಿಸುವ ಕರ್ಮೋದ್ಯೋಗ ಭೂಮಿ. ಕಾಯಕದ ರಣರಂಗ. ನಿರಾಕಾರದ ಓಂಕಾರಕ್ಕೆ ಸಂಸಾರ ಬಣ್ಣಹೊಂಬಣ್ಣಗಳ ವೈವಿಧ್ಯಪೂರ್ಣ ಸುಗ್ಗಿಯ ಹಬ್ಬ ಮಗಳೆ. ಸಂಸಾರ ಸಾವಿನ ಸೋಬಾನವಲ್ಲ. ಜಂಗಮಲಿಂಗದ ಕಲಾಶಾಲೆ. ಉಚ್ಚೈಮಾಂಸ

ಗಳ ಕಾಕಪಿಂಡವಲ್ಲ. ಬ್ರಹ್ಮಾಂಡವನ್ನು ಪಿಂಡಾಂಡದಲ್ಲಿ ಹಿಡಿದಿಟ್ಟ ಚೈತನ್ಯಕುಂಡ....'

'ನಿಮ್ಮ ಎತ್ತರ ನನಗೆ ಹೊಳೆಯದು ತಂದೆ.... ಹಾಲ್ಗೂಸು ಹಸುಗೂಸು ನಾನು.... ತುತ್ತು ಮಾಡಿ ಉಣ್ಣಿಸಿರಿ....'

'ನಾನೇನು ಮಾಡಲಿ ಮಗಳೆ.... ಹುಚ್ಚಯ್ಯ ನಾನು.... ಒಳಗಿನ ಆತ್ಮ ನಗಾರಿ ಬಾರಿಸುತ್ತದೆ.... ನಾಲಿಗೆ ನುಡಿದುಬಿಡುತ್ತದೆ....'

'ನಗಾರಿ ಬೇಡ ತಂದೆ.... ಕೊಳಲಿನ ಉಲಿಯಾಗಿ ಹೇಳಿರಿ.... ನನ್ನ ನಿಲುವಿಗೆ ನಿಮ್ಮ ಶಬ್ದವನ್ನು ಕರಗಿಸಿ ಹೇಳಿರಿ...'

'ಹೌದವ್ವಾ ಹೌದು.... ಕೇಳು ಈ ಹುಚ್ಚನ ಹುಚ್ಚು ಮಾತು .... ಸಂಸಾರವೂ ಶಿವಪೂಜೆಯಾಗಬೇಕು.... ಇಲ್ಲಿಯ ಭೋಗಗಳೂ ಶಿವಭೋಗವಾಗಬೇಕು.... ಲಿಂಗಭೋಗವೇ ಭೋಗವಾಗಬೇಕು....'

'ಸುಳ್ಳು, ತಂದೇ ಸುಳ್ಳು. ನೀವು ನನ್ನನ್ನು ಪರೀಕ್ಷಿಸಲು ಹಿಗೇ ಹೇಳುತ್ತಿರುವಿರಿ....'

'ಇಲ್ಲ ನನ್ನ ಮಗಳೆ.... ಇದು ಈ ಹುಚ್ಚನ ಮಾತಲ್ಲ.... ಈ ಹುಚ್ಚನೊಳಗಿನ ಮಹಾಹುಚ್ಚನ ಮಾತು....'

'ಅಂತೂ ಆ ಹುಚ್ಚ ಎಲ್ಲರಿಗೂ ಹುಚ್ಚು ಹಿಡಿಸುತ್ತಾನೆ ಅಲ್ಲವೇ?'

'ಹುಚ್ಚು ಬೇಕು ಮಗು ಹುಚ್ಚು ಬೇಕು. ಚಿನ್ಮಯ ಜ್ಞಾನದ ಹುಚ್ಚು ಬೇಕು. ಆತ್ಮ ಪರಂಜ್ಯೋತಿಯ ಹುಚ್ಚು ಬೇಕು. ಆ ಹುಚ್ಚಿನ ಮುಂದೆ ಲೋಕವೇ ಹುಚ್ಚು'

'ಅಂತೂ ಈ ಹುಚ್ಚಿನ ಹುಚ್ಚಿನಲ್ಲಿ ನನ್ನನ್ನು ಹುಚ್ಚಳನ್ನಾಗಿ ಮಾಡುತ್ತಿರುವಿರಿ....'

'ಎಲ್ಲರೂ ಹುಚ್ಚರು ತಾಯಿ ಲೋಕದಲ್ಲಿ ಎಲ್ಲರೂ ಹುಚ್ಚರು.... ನನಗೆ ಮುಕ್ತಿಯ ಹುಚ್ಚು.... ನಿನಗೆ ಭಕ್ತಿಯ ಹುಚ್ಚು.... ಕೆಲ

ವರಿಗೆ ಹೆಣ್ಣಿನ ಹುಚ್ಚು... ಮತ್ತೆ ಕೆಲವರಿಗೆ ಹೊನ್ನಿನ ಹುಚ್ಚು... ಮಣ್ಣಿನ ಹುಚ್ಚು.... ಅಧಿಕಾರದ ಹುಚ್ಚು... ಲಂಚದ ಹುಚ್ಚು.... ರಾಜಕೀಯದ ಹುಚ್ಚು.... ರಕ್ತದ ಹುಚ್ಚು.... ಯುದ್ಧದ ಹುಚ್ಚು.... ಅನೇಕರಿಗೆ ಆಲಸಿಗರಾಗಿ ತಿಂದು ತಿರುಗುವದೇ ಹುಚ್ಚು .... ಪುಂಡು ಮೇಯುವದೇ ಹುಚ್ಚು.... ಎಲ್ಲರೂ ಹುಚ್ಚರು ತಾಯಿ ಲೋಕದಲ್ಲಿ ಎಲ್ಲರೂ ಹುಚ್ಚರು....'

'ನನಗೆ ನಿಮ್ಮ ಹುಚ್ಚು ತಂದೆ... ನನಗೆ ನಿಮ್ಮ ಹುಚ್ಚು....'

'ಆಗಲವ್ವಾ.... ಈ ಹುಚ್ಚನ ಭಕ್ತರೆಲ್ಲಾ ನನ್ನ ಮಕ್ಕಳು.... ನನ್ನನ್ನು ನೆನೆದವರ ಎದೆಯಲ್ಲಿ ಮೂಡುವೆ.... ಅವರ ಸಂಕಟಗಳನ್ನು ದೂಡುವೆ.... ಅವರ ಜೀವನದ ದಾರಿಯಲ್ಲಿ ಮುಳ್ಳು ಕಿತ್ತು ಮಲ್ಲಿಗೆ ಹೂವು ತೂರುವೆ....'

'ಸತ್ಯವೇ?'

'ಶಿವನಾಣೆಗೂ ಸತ್ಯ ತಾಯಿ ...'

'ನಿನ್ನ ಭಕ್ತರಿಗೆ ನಿನ್ನ ಸಂದೇಶವೇನು ತಂದೆ?'

'ಕಾಯಕ.... ಶಿವಪೂಜೆ.... ಜಂಗಮಾರಾಧನೆ.... ಲೋಕ ಸೇವೆ....'

'ಶಿವಶಿವಾ.... ಶಿವಶಿವಾ....!'

'ಬಾಳು ಮಗು ... ಬಾಳಿ ಬೆಳಗು....'

'ಶಿವಶಿವಾ.... ಶಿವಶಿವಾ.... ತಂದೇ.... ನಿಮ್ಮ ಮಾತು ಮಹಾ ಸತ್ಯ.... ನಿಮ್ಮ ಭಕ್ತವಾತ್ಸಲ್ಯಕ್ಕೆ ನಾನೇ ಸಾಕ್ಷಿ....'

'ನಿಜವೇ?'

'ನನಗೇ ಕೇಳುತ್ತೀರಲ್ಲಾ ತಂದೆ.... ನಾನೊಂದು ಕಾಡುಕಲ್ಲಾ ಗಿದ್ದೆ.... ಕಲ್ಲು ಕಟೆದು ಲಿಂಗ ಮಾಡಿದಿರಿ.... ನಾನೊಂದು ಕಾಡುಕುಸುಮ

ವಾಗಿದ್ದೆ... ಕುಸುಮವನ್ನು ನಿಮ್ಮ ಶ್ರೀಪಾದ ಸನ್ನಿಧಿಯಲ್ಲಿ ಅಲಂಕರಿಸಿದಿರಿ....'

'ನಿನ್ನ ಹೂವಿಗೆ ಭೃಂಗ ಬರಲಿ.... ಸಂಸಾರದ ಗಾನ ಗುಂಯ್ ಗುಟ್ಟಲಿ....'

'ಇನ್ನು ನನಗೆ ಅಂಜಿಕೆ ಇಲ್ಲ.... ಸಂಸಾರವೇ ಶಿವಯೋಗವೆಂದ ಬಳಿಕ ನಾನೇಕೆ ಅಂಜಲಿ.... ಭೋಗವೇ ಲಿಂಗಭೋಗವೆಂದಬಳಿಕ ನಾನೇಕೆ ನಡುಗಲಿ ...ಇನ್ನು ಕಾಯಕ ನನ್ನದು.... ಕಾಯಕದಿಂದ ಬಂದ ಪ್ರಸಾದಭೋಗ ನಿಮ್ಮದು.... ಬರಲಿ ನೂರು ನೂರು ಜನ್ಮ.... ಆದರೆ ನಿನ್ನ ಗುರು ಕರುಣೆ ಇರಲಿ ... ಕಾಯಕದ ಕೈವಲ್ಯ ತೋರಲಿ....'

'ಅಂತೂ ಈ ಹುಚ್ಚನನ್ನು ಇಂದು ಅಲ್ಲಾಡಿಸಿಬಿಟ್ಟೆ.... ಗಿಡವನ್ನು ಅಲ್ಲಾಡಿಸಿ ಹಣ್ಣುಗಳನ್ನು ಕೆಡವಿಕೊಂಡೆ.... ಯಾರಿಗೂ ಬಗ್ಗದ ಈ ಬಡವ ನಿನಗೆ ಬಗ್ಗಿ ಒಲಿದ ...'

'ತಾಯಿ ನೀವು.... ತಂದೆ ನೀವು.... ನಿಮ್ಮನ್ನು ಕೇಳದೆ ಇನ್ನಾರನ್ನು ಕೇಳಲಿ?'

'ಸೋಲಿಸಿದೆ ಮಗು.... ನನ್ನನ್ನು ಸೋಲಿಸಿದೆ.... ಈ ಹುಚ್ಚನಿಗೆ ಇನ್ನೂ ಹುಚ್ಚು ಹಿಡಿಸಿದೆ....'

'ಅದು ನಿಮ್ಮ ದೊಡ್ಡಗುಣ.... ತಾಯಿಗುಣ.... ನಿಮ್ಮ ಈ ಗುಣವನ್ನು ನನಗೆ ಮಾತ್ರವಲ್ಲ.... ನಿಮ್ಮನ್ನು ಅರ್ಥಮಾಡಿಕೊಂಡ ಭಕ್ತರ ಮನಮನಕ್ಕೂ ಕರುಣಿಸಿರಿ.... ಮನೆಮನೆಗೂ ತುಂಬಿರಿ....'

'ಆಗಲಿ ಕಂದಾ ... ಅವರಿಗಾಗಿ ತೊಟ್ಟಿಲು ತೂಗುವೆ.... ಜೆಳ್ಳಿ ಬಟ್ಟಲದಲ್ಲಿ ಉಡುವೆ.... ಕೂಗಿದರೆ ಓಗೊಡುವೆ....'

'ಧನ್ಯ.... ಧನ್ಯ ತಂದೆ....ನಾನು ಧನ್ಯಳು.... ನಿಮ್ಮನ್ನು ನಂಬಿದವರೆಲ್ಲಾ ಧನ್ಯರು.... ನಾನು ಬಾಳಿದ ವಿಶ್ವವೇ ಧನ್ಯ....'

ಧ್ಯಾನಮಗ್ನಳಾಗಿ ಕುಳಿತಳು ಮಾದೇವಿ! ಒಮ್ಮೆ ಕಣ್ಮುಚ್ಚಿ ಕಣ್ತೆರೆದಳು. ಆಗ ಅಶೋಕವೃಕ್ಷದ ಮಲ್ಲಿಗೆ ಬಳ್ಳಿಯಿಂದ ಯಾರೋ ಒಬ್ಬರು ಬಂದರು. ಕಣ್ಣು ಮಿಟುಕಿಸಿ ನೋಡಿದಳು. ಅಪರೂಪದ ಪುರುಷ ರೂಪ! ಆ ಪುರುಷಪುಂಗವ ಇವಳನ್ನೇ ನಿರುಕಿಸಿ ನೋಡುತ್ತ ಚಿಣಿಗೆಯ ಹಾವು ಕೇದಿಗೆಯ ಪಳಿಯಿಂದ ಜಿಗಿದು ಬಂದಂತೆ ಬಲು ಬೆಡಗಿನಿಂದ ಬಂದ. ವೀರಯೋಧ. ಹುರಿಕಟ್ಟು ಮೈಕಟ್ಟು. ತೆರೆದ ಖಡ್ಗ. ಚಲ್ಲಿದ ಮುಂಗುರುಳು. ಹರಡಿದ ರೇಶಿಮೆಯ ದವಾಲಿ. ಸಮೀಪ ಬಂದ! ಆತ ಬಂದಾಗ ಅವನನ್ನು ನೋಡಿ ಎದೆ ಹವ್ವನೆ ಹಾರಿ ಮಾದೇವಿ 'ಅವ್ವಾ' ಎಂದು ಕೂಗಿದಳು!! ಕಾರಣ ಕನಸಿನಲ್ಲಿ ಇವಳನ್ನು ಕಂಡು ಕೇಳಿ ಮೋಹಿಸಿ ಕೊನೆಗೆ ಅಪ್ಪಿಕೊಂಡ ಆ ಗಾಂಧರ್ವನೇ ಇವನಾಗಿದ್ದಾನೆ!!! ಏನಿದು ವಿಚಿತ್ರ?

ಮಾದೇವಿ ಓಡಿಹೋಗಿ ಹುಚ್ಚಯೋಗಿಯನ್ನು ಅಪ್ಪಿಕೊಳ್ಳ ಹೋದಳು. ಆದರೆ ಆ ಹುಚ್ಚ ಇವಳ ಬುದ್ಧಿಯನ್ನು ನಿಚ್ಚಳಗೊಳಿಸಿ ಆಗಲೇ ಗವಿಯ ಕುಂಡಕ್ಕೆ ಇಳಿದು ಹೋಗಿದ್ದ! ಮತ್ತೊಮ್ಮೆ ಮಾದೇವಿ ಪುರುಷದರ್ಶನದ ಕಳವಳ-ಆನಂದ-ಭಯ-ಆಶ್ಚರ್ಯಗಳ ತುಮುಲ ಸಂಕಟದಿಂದ ಒಂದು ಬಗೆಯ ವಿಚಿತ್ರ ಧ್ವನಿ ತಂದು ಚೀರಿಬಿಟ್ಟಳು! ಆಗ ಆ ಪುರುಷಕಾಮನಿಂದ ಒಂದೊಂದೇ ಮಾತುಗಳು ಕಾಮನ ಬಾಣದಂತೆ ಉದುರಿದವು—

'ಅಂಜದಿರು ಸುಂದರಿ.... ನಾನು ಮಲೆನಾಡಿನ ರಾಜಕುಮಾರ.... ನಮ್ಮ ವೈರಿನಾಯಕನೊಬ್ಬ ನಿಮ್ಮನ್ನು ಪೀಡಿಸಬಂದು ಓಡಿಹೋದ ಸಂಗತಿ ತಿಳಿಯಿತು.... ಹೇಳು.... ಏನಾದರೂ ರಕ್ಷಣೆ ಬೇಕೆ ನಿನಗೆ.... ಏನು ಬೇಕಿದ್ದರೂ ಕೇಳು....'

ಅವಳು ನಾಚಿ ಕೇಳಿದಳು—

'ಏನು ಬೇಕೆಂದು ಕೇಳಲಿ?'

'ನಾನು ರಾಜಕುಮಾರ.... ಬೇಡಿದವರಿಗೆ ಬೇಡಿದ್ದನು ನೀಡುವೆ....'

'ಆಗಲಿ.... ಒಪ್ಪಿದೆ.... ನನ್ನ ತಂದೆಯವರನ್ನು ಕೇಳಿ ನಿಮ್ಮನ್ನೇ ಬೇಡುವೆ....'

'ಹಾಂ....? ನನ್ನನ್ನೇಕೆ ಬೇಡುವಿ?'

'ಹಾಂ.... ಅಲ್ಲಲ್ಲ.... ಆ ಮಾತು ಹಾಗಲ್ಲ.... ನಮ್ಮ ತಂದೆ ಯವರನ್ನು ಕೇಳಿ ನಿಮ್ಮ ಹತ್ತರ ಕೇಳುವೆ ಅಂದೆ....'

'ಹಾಂ.... ಹೀಗೋ.... ಆಗಲಿ.... ಆಗಲಿ.... ಹೇಗಾದರೂ ಕೇಳು.... ಏನಾದರೂ ಕೇಳು....'

'ಮಾತು ಮಾತಿನ ಮಧ್ಯದಲ್ಲಿ ಮಾಯೆ ಕುಣಿಯಿತು! ಯೌವನದ ಮಧ್ಯದಲ್ಲಿ ವಿಶ್ವಲೀಲೆ ಬಾಣ ಬಿಟ್ಟಿತು!!

'ಅವಳ ಎದೆ ಕಂಪಿಸಿತು! ಅವನ ಎದೆ ತಲ್ಲಣಿಸಿತು!! ಕಣ್ಣು ಕಣ್ಣು ತಳಕಿಕ್ಕಿನೋಡಿದಾಗ ಕಂಬನಿ ತೋರಣ ಕಟ್ಟಿತು. ವನದ ಕೋಗಿಲೆ ಕೂಗಿತು.

ಏಕೆ ಕೂಗಿತು?

೫

ಹೊಬಳ್ಳಿ ಪುರದ ರುದ್ರಪ್ಪಶೆಟ್ಟರು ತಮ್ಮ ಚಿಕ್ಕಹೆಂಡತಿ ಪ್ರಭಾ-ವತಿಯೊಂದಿಗೆ ತಮ್ಮ ಖಾಸಗಿ ಅಂತಃಪುರದಲ್ಲಿ ಪವಡಿಸಿದ್ದಾರೆ. ನಡು ರಾತ್ರಿಯಲ್ಲಿ ಪ್ರಭಾವತಿ ಬುದುಂಗನೇ ಏಳುತ್ತ ಬಡಬಡಿಸಿದಳು—

'ಬೆಳಕು.... ಬೆಳಕು.... ಬೆಳಕು....'

ಶಟ್ಟರೂ ಅವಸರದಿಂದ ಕೇಳಿದರು—

'ಏನು.... ಏನು.... ಏನು....'

ಅವಳು ನಡುಗುತ್ತಲೇ ಹೇಳಿದಳು—

'ಬೆಳಕು.... ಬೆಳಕು.... ಮಹಾಬೆಳಕು....'

'ಎಲ್ಲಿ... ಎಲ್ಲಿದೆ ಬೆಳಕು.... ನೋಡು ಪ್ರಭಾ.... ಬರೀ ಕತ್ತಲು.... ಕಗ್ಗತ್ತಲು ...'

'ಅಲ್ರೀ....ಎಂಥಾ ಬೆಳಕಂತೀರಿ....! ಅವ್ವವ್ವವ್ವಾ.... ನಾ....ವಲ್ಲಿರೀ... !!'

'ಎಲ್ಲಿ.... ಯಾವಾಗ....?'

'ಇಲ್ಲೇ.... ಇದ್ದ ಈಗ.... ನಿಮಗ ಕಾಣಲಿಲ್ಲೇನ್ರಿ?'

'ಇಲ್ಲಾ.... ಇಲ್ಲಾ.... ಇಲಿ ಯಾಲಕ್ಕಿ ಚೀಲಾ ತಿನ್ನಾಕತ್ತಿದ್ವು ....ನನಗ ಅರ್ಧಾ ಎಚ್ರಾ.... ಅರ್ಧಾ ನಿದ್ರಿ.... ಯಾಕ ಚೀರೀದಿ.... ಏನ ಕನಸು.... ಭೂತೋ.... ಪಿಶಾಚೋ?'

'ಶಿವಶಿವಾ.... ಓಳ್ತನ್ರಿ.... ತಪ್ಪಾಪತೂ ಅನ್ರಿ....'

'ಯಾಕ?'

'ಭೂತಲ್ರೀ... ಆ ಶಿವಯೋಗಿ.... ಹುಚ್ಚ ಶಿವಯೋಗಿ....'

'ಹಾಂ.... ಹಾಂ.... ಅವರ ಕನಸ್ಸ? ಓಳ್ತು.... ಓಳ್ತು ... ತಪ್ಪಾತು ... ತಪ್ಪಾತು....'

'ಕನಸಿನ್ಯಾಗ ಅವರ ಸರೋವರಾ.... ಆಶ್ರಮಾ.... ಆ ಗವಿ.... ಎಲ್ಲಾ ಕಂಡ್ವು....'

'ಮತ್ತ ಆ ಯೋಗಿಗೋಳು?'

‘ಊಹುಂ.... ಅವರು ಕಾಣಲಿಲ್ಲಾ.... ಆದ್ರ ಗವಿಯಿಂದ ಆಕಾಶದಾಗ ಕೈಲಾಸಗಿರಿತನಾ ಬೆಳಕು ಭಗ್ಗಂತ ಹಬ್ಬಿತ್ತು.... ಆ ಬೆಳಕಿನ್ಯಾಗ ನೂರಾರು ಸೂರ್ಯಾ ಚಂದ್ರಾ ತೇಲಾಡತಿದ್ವು.... ನನ್ನ ಕಣ್ಣು ಕುಕ್ಕಿ.... ಬೆಳಕು.... ಬೆಳಕು ಅಂತ ಚೀರಿದೆ....’

‘ಶಿವಶಿವಾ.... ಶಿವಶಿವಾ.... ಭಾರೀ ಕನಸು.... ಭಾರೀ ಕನಸು....’

‘ಆ ಮಾತುಮುಸ್ರಿ ಎಂಥಾ ದೊಡ್ಡಾವ್ರಿದ್ದಾರ್ರೀ!’

‘ದೊಡ್ಡಾವ್ರೇನು.... ದೊಡ್ಡದೊಡ್ಡಾವ್ರು ನನ್ನ ತಲ್ಯಾಗಿನ ಕೆಟ್ಟ ಸುಳಿಗೋಳ್ನ ಕೀಳಾಕ ಕೂವತ್ತು ಮೀರಿ ಹೆಣಗಾಡೀದ್ರು.... ಯಾರಿಗೂ ಬಗ್ಗಿದ್ದಿಲ್ಲಾ ನಾ.... ಆದ್ರ ಆ ಹುಚ್ಚಯೋಗಿ ಮುಂದ ನನ್ನ ಹೆಣಾ ನನ್ನ ಮುಂದ್ಽ ಕುಣದಂಗಾತು....’

‘ಹೌದ್ರಿ.... ನಿಮ್ಮ ಕೆಟ್ಟ ಚಟಾ ಎಲ್ಲಾನೂ ಅವ್ರು ಕಳದ್ರು .... ನೀವು ಊರಿಗೊಂದು ಸೂಳಿ ಮಾಡಿದ್ರಿ.... ಮತ್ತ.... ಮತ್ತ....’

‘ಹಾಂ.... ಹಾಂ.... ಹಾಂ.... ಓಕ್ತನ್ನು.... ಓಕ್ತನ್ನು.... ನಿಲ್ಸು .... ನಿಲ್ಸು.... ಅಂಥಾವೆಲ್ಲಾ ಬಾಯಿಂದ ಅಪಶಬ್ದಾ ಅನಬಾರ್ದು.... ಶಿವಾಽನ್ನು ಶಿವಾ ಅನ್ನು....’

‘ಹೀಂಗ .. ನಿಮ್ಮನ್ನ ಶುದ್ಧ ಮಾಡೀದ್ರು.... ಕಳ್ಳ ಭಕ್ತರ್ನ ಖರೇ ಭಕ್ತರ್ನ ಮಾಡೀದ್ರೂ.... ಪುಂಡಹೋರೀಗತೆ ನೀವು ಮೆರೀತಿದ್ರಿ.... ಊರಿಗೆ ಒಜ್ಜಿ ಆಗಿ ಉರೀತಿದ್ರಿ....’

‘ಹಾಂ.... ಹಾಂ.... ಹಾಂ.... ಹಿಂದಿನ ಹೆಗ್ಗಣಾ ಎಬ್ಬಿಸಬ್ಯಾಡಾ.... ಹಳೇಭೂತಾ ಕರಸಬ್ಯಾಡಾ....’

‘ಆ ಭೂತಾ.... ಹೆಗ್ಗಣಾ.... ಎಲ್ಲಾ ನಿಮ್ಮನ್ನ ಬಿಟ್ಟೋಡಿ ಹೋದ್ವು.... ಈಗ ಎದ್ರು ಶಿವಾ ಅಂತೀರಿ.... ಕೂತ್ರ ಹರಾ ಅಂತೀರಿ....

ಆವಾಗ ಬುರುಬುರಿ ಹತ್ತೀದ ಅಕ್ಕಡೀ ಕಾಳಾಗಿದ್ರಿ .. ಈಗ ಜೇನುತುಪ್ಪ ದಾಗ ನೆನದ ಉತ್ತತ್ತ್ಯಾಗೀರಿ....'

'ಹೌದು ಪ್ರಭಾ.... ಅವ್ರು ದೊಡ್ಡೋರು... ಮಾತುಮುಸ್ರು....'

'ಆದ್ರ ನನ್ನ ಕನಸಿನ್ಯಾಗ ಯಾಕ ಮಿಂಚಮಿನುಗಿ ಬೆಳಗೀದ್ರೂ ಅಂತ?'

'ಏನೋ ಯಾರು ಬಲ್ಲರು.... ಅವನೇಬಲ್ಲಾ.... ಶಿವಬಲ್ಲಾ....'

'ಬಂಜಿ ಹೆಣ್ಣಂತ ನನಗ ಸರೀಕದಾರು ನತ್ತಿನ್ಯಾಗ ಮೂಗ ಮುರೀತಾರು.... ಬಂಜೀ ಭಾಗ್ಯಕ್ಕ ಭಗವಂತಾ ಗಂಜೀಬಟ್ಲಾ ಕೊಡ ತಾನೋ ಏನೋ?'

'ನಾ ಹ್ಯಾಂಗ ಹೇಳ್ಲಿ.... ರೊಕ್ಕದಾಗ ಶಟ್ಟಿ, ... ಶಿವತತ್ವದಾಗ ಶಟ್ಟೆಲ್ಲಾ.... ಆತಾ ಲೋಕದ ಶಟ್ಟಿ.... ನಮ್ಮ ಪಾಪಾ ಪುಣ್ಣೇ ಅಳದು.... ತಾಪಾ ದೀಪಾ ಕೊಡ್ತಾನು....'

'ಸೆಟ್ಟೆನಬ್ಯಾಡ್ರಿ ಆ ಶಿವಯೋಗಿಗೆ....'

'ಸೆಟ್ಟೆಲ್ಲಾ.... ಸೆಟ್ಟರ ಸೆಟ್ಟಿ.... ಮಹದೇವ ಸೆಟ್ಟಿ....'

'ಹೌದ್ರಿ.... ಆತಾ ಸದ್ಗುರು.... ಜಗದ್ಗುರು....'

'ಹಾಂ.... ಈಗ ಸರೀ ಹೋತು ನೋಡು ಪದಾ.... ಆತ ಜಗದ ಶಟ್ಟಿ.... ಜಗದ್ಗುರು....'

'ಅಲ್ರಿ ನಾ ಒಂದ ಮಾತ ಕೇಳ್ತೇನಿ.... ಹೇಳ್ತೀರಾ?'

'ಏನ ಕೇಳ್ತೀದಿ?'

'ನದೀ ಮೂಲಾ ಋಷಿಮೂಲಾ ಕೇಳಬಾರ್ದಂತ.... ಅದಕ್ಕ ಹ್ಯಾಂಗ ಕೇಳ್ಲೀ ಅಂತ ಎದೀ ಹಾರತೈತಿ....'

ಇರ್ಲಿ ಕೇಳು....'

‘ಆ ಹುಚ್ಚ ಮಾತುವುನ್ರು.... ಎಲ್ಲೀಯವ್ರೂ.... ಯಾಊರವ್ರೂ ....ಯಾ ದೇಶದವ್ರೂ... ತಾಯಾರು.... ತಂದ್ಯಾರು.... ಅವರ ಖರೇ ಹೆಸರೇನು ಅಂತ?’

‘ಒಂದ ಮಾತ ನಿಜಾ ಹೇಳ್ತೇನಿ.... ಅವ್ರು ಕಾಲಾದೇಶಾ ವರ್ತ ಮಾನಾ ಮೀರಿನಿಂತಂತಾ ಶರಣ್ರು.... ಅವರ್ನ ಯಾ ಕಾಲಕ್ಕರೆ ಹಾಕು.... ಯಾ ದೇಶಕ್ಕರೆ ಹಾಕು.... ಅವ್ರು ಆ ಕಾಲದವ್ರಲ್ಲಾ.... ಆ ದೇಶ ದವ್ರಲ್ಲಾ ...’

‘ಅಂದ್ರ? ’

‘ಅವ್ರು ಕಾಲದ ಆಸ್ತಿ ಅಲ್ಲಾ.... ಯುಗದ ಆಸ್ತಿ.... ದೇಶದ ಆಸ್ತಿಅಲ್ಲಾ.... ಜಗದ ಆಸ್ತಿ.... ಅದಕ್ಕಂತ್ಹೇಳೇ ಅವ್ರು ಜಗದ್ಗುರು.... ’

‘ ಹೀಂಗಂತೀರೇನು?’

‘ ಹೌದೌದು.... ’

‘ ಆದ್ರ ನನ್ನ ಹಿರೇ ಅಕ್ಕಾ ಹೇಳ್ತಿದ್ಲು.... ಅವ್ರು ಮಲ್ಲಾಡದಿಂದ ಬಂದಾರಂತ.... ’

‘ಹತ್ತಮಂದಿ ಹತ್ತ ನಮೂನಿ ಹೇಳ್ತಾರು... ಒಬ್ರು ಮಲ್ಲಾಡ ದವ್ರು ಅಂತಾರು.... ಒಬ್ರು ಉಳುವಿ ಕಡೀಲಿಂದ ಬಂದಾವ್ರು ಅಂತಾರು.... ಕೆಲವ್ರು ಶ್ರೀಶೈಲದವ್ರು ಅಂತಾರು.... ಇನ್ನ ಕೆಲವ್ರು ಹಿಮಾಲಯದಿಂದ ಬಂದಾರೂ ಅಂತಾರು ... ಏನಕೇನಮಂದಿ ಅವ್ರು ಅಲ್ಲೇ ಅದ್ಯ ಗವಿಯಾಗ ಸಾವಿರಾರ ವರ್ಷದಿಂದ ... ಮರಣಾಮೀರಿ ಶರಣಾ ಆಗಿ ಅದಾರೂಅಂತ ಅಂತಾರು....’

‘ಶಿವಶಿವಾ.... ಶಿವಶಿವಾ....’

‘ಆವರು ಹುಟ್ಟಿದೋರಲ್ಲಾ.... ಭೂಮಿವ್ಯಾಗ ಹುಟ್ಟಿದೋ

ರಲ್ಲಾ....'

'ಅಂದ್ರ ಏನ್ರಿ? '

'ತಾಯಿ ಹುಟ್ಟು ಮೆಟ್ಟ.... ಲೋಕಕ್ಕ ತಾಯಾಗಿ ಬಂದೋರು'

'ಆದ್ರ.... ಚೂರಚಾರರೆ ಅವರ ಹೆಸರು ದೆಸೀ ತಿಳಿದಿರಬೇಕಲ್ರಿ ನಿಮಗ? '

ಊಹುಂ.... ಎಳ್ಳನ್ಯಾಗಿನ ಎಣ್ಣಿಯಷ್ಟೂ ಇಲ್ಲಾ.... ತಕ್ಕಡ್ಯಾಗಿನ ಗಸಿಯಷ್ಟೂ ಇಲ್ಲಾ....'

'ಹೀಂಗೇನ್ರಿ? '

'ಆದ್ರ ... ಅವರ ಹೆಸರು ಗುಟ್ಟನಿಂದ ಗಬಕ್ಕಂತ ಹಿಡಕೊಂಡಾನು ಆ ಪುಣ್ಯಾತ್ಮಾ ಶಿವಪ್ಪಾ.... ಮಾದೇವಿ ಅಪ್ಪಾ....'

'ಹ್ಯಾಂಗ....'

'ಯೋಗಿಗಳು ಮಾತಾಡ್ತಾ ಮಾತಾಡ್ತಾ.... ನಾ ಹುಚ್ಚಾ.... ಹುಚ್ಚಗುರುಸಿದ್ಧಾ ಅಂತ ಅಂದ್ರಂತ.... ಅದಕ್ಕಂತ ಹೇಳಿ ಆತಾ ಗುರುಸಿದ್ಧಾ.... ಹುಚ್ಚಗುರುಸಿದ್ಧಾ....'

'ಶಿವಶಿವಾ.... ಹುಚ್ಚಗುರುಸಿದ್ಧಾ ಅಲ್ರಿ.... ಜಗದ್ದುರು ಗುರು-ಸಿದ್ಧಾ ಅನ್ರಿ....'

'ಏನಂದ್ರೇನು.... ಶೂನ್ಯದಾಗ ನಿಶ್ಶೂನ್ಯ ಆದಾವಾ.... ಆತಂದ್ರ ಒಂದ ಶೂನ್ಯಸಿಂಹಾಸನಾ.... ಶಬ್ದಾಗಿಬ್ದಾ ಸಮುದ್ರದಾಗೀನ ತಿಮಿಂಗಿಲ ಇದ್ದಂಗ.... ಏಳತಾವು ಮುಳಗತಾವು.... ಆದ್ರ ಆತಾ ಗುರುಸಿದ್ಧಾ.... ಶೂನ್ಯ ಸಿಂಹಾಸನದ ಹುಚ್ಚಗುರುಸಿದ್ಧಾ.... ರಾಜಯೋಗೀಂದ್ರಾ....'

'ಹಾದಾದ್ರಿ.... ನಿಮ್ಮ ಮಾತಂದ್ರ ಲಿಂಗದಾಗ ಶಿವಾ ಕಂಡಂಗ.... ಕೈಯಾಗ ಪಾರೋಪ್ದೇವಿ ಮೂಡಿದಂಗ....'

'ಹಾಂಗಲ್ಲಾ.... ತಕ್ಕಡ್ಯಾಗ ಬಂಗಾರಾ ತೂಗಿದಂಗ.... ಲೆಕ್ಕ

ದಾಗ ಕೋಟಿಹೊನ್ನ ಹೆಚ್ಚಾದಂಗ....'

'ನೀವು 'ಶಟ್ರು.... ಶಟ್ಟೀ ತಕ್ಕಡಿ.... ಶಟ್ಟೀ ಲೆಕ್ಕಾ ಯಾಕ ಬಿಟ್ಟೇರಿ?.... ಹೊನ್ನ ಬಿಟ್ಯಾ.... ಹೆಣ್ಣ ಬಿಟ್ಯಾ ಅಂತ ಆ ಹುಚ್ಚ ಶಿವ ಯೋಗಿ ಹತ್ರ ಪ್ರತಿಜ್ಞಾ ಮಾಡಿ ಬಂದೀರಿ.... ಈಗ ಮತ್ತ ಲೆಕ್ಕದಾಗ ಕೋಟಿಹೊನ್ನ ಬೆಳಸಾಕತ್ತೀರಿ....'

'ತಪ್ಪಾತು... ತಪ್ಪಾತು.... ದೊಡ್ಡ ತಪ್ಪಾತು....'

'ಗಲ್ಲಾ ಗಲ್ಲಾ ಬಡಕೋಳ್ರಿ....'

'ಹೂಂ.... ಬಡಕೊಂಡೆ ನೋಡು....'

'ಇನ್ನೊಮ್ಮೆ ಬಡಕೋಳ್ರಿ....'

'ಸಾಕು.... ಸಾಕು.... ಒಂದ ಸಲಾ ಬಡಕೊಂಡ್ರ ಸಾಕು'

'ಇನ್ನ ನೀವು ಹೊನ್ನ ಗಳಸ್ರಿ... ಹೊನ್ನ ಉಳಸ್ರಿ.... ಸಂಸಾರಕ್ಕ ತಕ್ಕಷ್ಟ ಇಟಗೊಂಡ ಮಿಕ್ಕಿದ್ದೆಲ್ಲಾ ಆಶ್ರಮದಾಗ ಗುರುಲಿಂಗಜಂಗಮ ಕಾರ್ಯಕ್ಕ ಅಣಿ ಮಾಡ್ರಿ... ನಿತ್ಯ ದಾಸೋಹಾ ನಡಸ್ರೀ....'

'ಓಹೋ.... ಒಪ್ಪೀದೆ.... ಒಪ್ಪೀದೆ.... ಒಪ್ಪೀದೆ....'

'ರಾತ್ರೀ ಒಪ್ಪಿ ಮುಂಜೇಲೆ ಮರತೀರಿ....'

'ಇಲ್ಲಿಲ್ಲಾ.... ಖರೇವಂದ್ರ ಒಪ್ಪೀದೆ.... ನಾನs ನಿನಗ ಹೇಳ ಬೇಕಂತಿದ್ದೆ.... ಈಗ ನೀನs ನನಗ ಹೇಳಿಬಿಟ್ಟೆ....'

'ಅಲ್ಲಾ.... ಇನ್ನೊಂದ ಮಾತು....'

'ಹುಂ ಕೇಳು.... ಕೇಳೂದೆಲ್ಲಾ ಇಂದ ಕೇಳೀಬಿಡು.... ಮುಗದ ಹೋಗ್ಲಿ....'

'ಅಲ್ರೀ.... ನೀವು ಆ ಶಿವಪ್ಪಾ ಆ ಮಾದೇವಿ.... ಅಂದ್ರೆಲ್ರಿ.... ಅವು ಮೊದ್ಲ ಬ್ಯಾಡ್ರು ಇದ್ರಂತ.... ಈಗ ಶರಣ್ರು ಆಗ್ಯಾರಂತ....'

‘ಶರಣ್ರು ಅಷ್ಟsಅಲ್ಲಾ.... ಶಿವಶರಣ್ರು... ನಮ್ಮಂಗ ವ್ಯಾಪಾರಿ ಶರಣ್ರಲ್ಲಾ.... ಪ್ರಾಣಾ ಕೇಳೀದ್ರ ಪಟ್ಟನ ಪ್ರಾಣಾ ಕೊಡು ಶರಣ್ರು.... ಶಿವಯೋಗಿಗೆ ಸರ್ವಾರ್ಪಣಾ ಮಾಡ್ಯಾರ....’

‘ಸರ್ವಾರ್ಪಣಾ ಅಂದ್ರೇನ್ರೀ?’

‘ಯಾರಿಗ್ಗೊತ್ತು.... ಒಟ್ಟಿನ ಮ್ಯಾಲೆ ಬಲ್ಲೋರು ಹೇಳ್ತಾರು.... ಸರ್ವಾರ್ಪಣಾ ಅಂದ್ರ ಸರ್ವವೂ ಅರ್ಪಣಾ....’

‘ಇದಕ್ಕಿಂತ ಹೆಚ್ಗೀ ಗೊತ್ತಿಲ್ಲೇನ್ರಿ ನಿಮಗ?’

‘ಇದಕ್ಕಿಂತ ಹೆಚ್ಗೀ ಅರ್ಥಾ ಅದರಾಗ ಇಲ್ಲs ಇಲ್ಲಾ.... ಸರ್ವಾರ್ಪಣಾ ಅಂದ್ರ ಒಟ್ಟಿನಮ್ಯಾಲೆ ಸರ್ವಾರ್ಪಣಾ ಅಂತ....’

‘ನಾ ಹೇಳ್ತೀನಿ ಕೇಳ್ರಿ.... ಇದರಾಗೇನೈತಿ.... ಸರ್ವಾರ್ಪಣಾ ಅಂದ್ರ.... ನಾನು-ನನ್ನದು-ಬಂಗಾರಾ-ಸಿಂಗಾರಾ-ಮಡದಿ-ಮಕ್ಕಳು -ಸೊಕ್ಕು-ಸೆಡವು-ಕೋಪಾ-ತಾಪಾ-ಕಾಮಾ-ಗೀಮಾ ಎಲ್ಲಾನೂ ಆ ತಂದೀ ಪಾದಕ್ಕ ಅರ್ಪಣಾ ಮಾಡ್ಬೇಕು ಅಂತ....’

‘ಕಾಮಾ ಗೀಮಾ ಅಂದೆಲ್ಲಾ.... ಆ ಗೀಮಾ ಅಂದ್ರೇನು?’

‘ನಿಮ್ಮ ತಲಿ.... ಇನ್ನ ಉಳ್ಕಿ ಚಿಲ್ಲರೆ ಗಿಲ್ಲರೆ ಎಲ್ಲಾ ಸ್ವಾರ್ಥ್ಯಾ ನೂ ಸದ್ಗುರುವಿನ ಪಾದಕ್ಕ ಅರ್ಪಣಾ ಅಂತ....’

‘ಅಬಬಬಬಬಬಬ’

‘ಇನ್ನ ಶಿವಾ ಅಂತ ನಿದ್ದೀ ಮಾಡ್ರಿ’

‘ಹುಂ... ಆಗ್ಲಿ.... ಹೊತ್ತಬ್ಹಾಳಾತು.... ಕಣ್ಣಾಗ ರಾತ್ರಿ ಕಾರಿಮುಳ್ಳ ಚುಚ್ತು.... ನೀ ಮಲಗಿನ್ನ....’

‘ಹಾಂ ... ಹಾಂ.... ತಡೀ ಇನ್ನsಟು.... ನೆನಪಾತು....’

‘ಮತ್ತೇನ ನೆನಪಾತು?’

‹ಮತ್ತೇನ ಅಂತೀರೆಲ್ರಿ.... ನಾ ಕೇಳಿದ ಪ್ರಶ್ನಿ ಹುಂಚಿಕಪ್ಪದಗತೆ ಪಟಕ್ನ ಹಾರಿಸಿ ಬಿಟ್ರೆಲ್ಲಾ...'

'ಯಾ ಪ್ರಶ್ನಿ?'

‹ಆ ಶರಣಶಿವಪ್ಪಾ.... ಆ ತಾಯಿ ಮಾದೇವಿ....'

‹ಹಾಂ.... ಹಾಂ.... ಆಕಿ ತಾಯಿ ಅಲ್ಲಾ.... ಹುಡುಗಿ.... ತ್ರಿಲೋಕಸುಂದರಿ....'

‹ಥೂ.... ಜಗದಾಗಿನ ಹೆಣ್ಣೆಲ್ಲಾ ತಾಯಿ ಪಾರೋದ್ದೇವಿ ಸಮಾನಾ.... ಸುಂದ್ರಿ ಗಿಂದ್ರಿ ಅನಬ್ಯಾಡ್ರಿ ...'

‹ಹಾಂ.... ಹಾಂ.... ಆ ತಾಯಿ ಮಾದೇವಿ ... ಮಹಾ-ರೂಪವತಿ ... ಅಂತಹೇಳಿ ಮನ್ನೆ ಹಾಂಗ ಅದ್ಭುತಾ ಭಯಂಕರಾ ಎಲ್ಲಾ ಸುದ್ದಿ ಆತು....'

‹ಏನ ಅದ್ಭುತಾ.... ಏನ ಭಯಂಕರಾ.... ಏನ ಸುದ್ದಿ? '

‹ಛೇ.... ಛೇ.... ಛೇ.... ಭಾರೀ ಭಾರೀ ಭಯಂಕರಾ'

‹ಅಂದ್ರ.... ಜಡ್ಡಗಿಡ್ಡ ಆಗಿತ್ತೇನ್ರೀ ಆಕಿಗೆ? '

‹ಥೂನಿನ.... ಜಡ್ಡಲ್ಲಾ.... ಕಂಕಣಾ.... ಕಂಕಣಾ... ಕಂಕಣ-ಬಲಾ....'

'ಹೌದಾ?'

'ಹೂಂ... ಹೌದು.... ಮಲೆನಾಡಿನ ಮಹಾರಾಜಂತ.... ದೊಡ್ಡ ಮಂಡಲಾಧಿಪತಿಯಂತ.... ಅವರ ಮಗಾ ರಾಜಕುಮಾರಂತ.... ಇಡೀ ರಾಜ್ಯಕ್ಕ ಒಬ್ಬನsa ಒಬ್ಬ ಮಗಾ ಅಂತ....'

'ಇಡೀ ರಾಜ್ಯಕ್ಕ ಒಬ್ಬನ ಮಗಾ?'

‹ಊಹುಂ.... ರಾಜರೀಗೆ ಒಬ್ಬನ ಒಬ್ಬ ಮಗಾ ಅಂತ....

ಸುಂದಾನ್ರ ಅಂದ್ರ ಸುಂದ್ರಾ.... ಚಂದ್ರಾ ಅಂದ್ರ ಚಂದ್ರಾ...'

'ಗುಣಾ ಹ್ಯಾಂಗಃತ?'

ಗುಣಾ ಗಣಪತೆಂತ.... ಅಂದ್ರ ಗಣಪತಿಗತೆ ಹೊಟ್ಟೆಲ್ಲಾ.... ಗಣಪತೀಗತೆ ಶುಭವಂತಾ.... ಪ್ರಜಾಕೋಟಿಗೆ ನಿರ್ವಿಘ್ನ ವೀರಂತ'

'ಹೆಸರು?'

'ವಿಘ್ನೇಶ್ವರ ಅಂತ....'

'ಮುಂದೇನಾತು?'

'ರಾಜಕುಮಾರಾ.... ಹುಚ್ಚಯೋಗಿಗಳ ಪಾದಕ್ಕ ಹಣಿ ಹಚ್ಚಿ ಪ್ರಾರ್ಥನಾ ಮಾಡೀದ್ನಂತ.... ಮಹಾತ್ಮರೇ.... ನಾನು ಚಿಕ್ಕವ.... ಅಜ್ಞಾನಿ.... ಅವಿವೇಕಿ.... ತಿಳಿಯದೇ ಆ ಕಾನನಸುಂದರಿ ಮಾದೇವೀನ್ನ ಬಯಸೇನಿ.... ಅವಳ ಗುಣಕ್ಕ ಮಾರು ಹೋಗೇನಿ.... ನನ್ನ ಅಪರಾಧಾ ಮನ್ನಸ್ರೀ.... ದಾರಿ ತೋರ್ರಿ.... ಕಾಪಾಡ್ರಿ.... ಅಂತ ಬೇಡಿಕೊಂಡ ನಂತ....'

'ಮುಂದ?'

'ಹುಚ್ಚಯೋಗಿಗೋಳು ಮಾತಾಡ್ಲಿಲ್ಲಂತ.... ನಕ್ರಂತ.... ನಗ ನಗತಾ ಅವನತಲೀಮ್ಯಾಲ ಆಶೀರ್ವಾದಾ ಮಾಡೀದ್ರಂತ.... ಆವಾಗ ಅವ್ರ ಕೈಯಾಗಿಂದ ಅಕ್ಷತೆಕಾಳು ಸುರಿಮಳಿ ಆಗಿ ಸುರದು ರಾಜಕುಮಾರನ ತಲಿ ಮ್ಯಾಗ ಬಿದ್ದ್ವಂತ....'

'ಶಿವಶಿವಾ.... ಎಂಥಾ ವಿಚಿತ್ರ ಅಂತೀರಿ ಇದು....'

'ಇನ್ನೂ ಕೇಳು.... ಆ ರಾಜಕುಮಾರ ಅವಳ್ನ ಆಗಿಂದಾಗ ಧರ್ಮಪತ್ನಿ ಅಂತ ಸ್ವೀಕಾರ ಮಾಡಿ.... ಅವಳನ್ನ ಲೋಕಾರೂಢಿಲಿಂದ ಲಗ್ನಾ ಆಗೂಸಲುವಾಗಿ ತನ್ನ ರಾಜ್ಯಕ್ಕ ಹಿರೇರ ಕೂಡ್ಸಿ ಕರಕೊಂಡ ಹೋದ್ನಂತ'

'ಮುಂದೇನಾತ್ರಿ?'

'ಮುಂದಿಂದು ನಾಳೆ ಗೊತ್ತಾಗತೈತಿ.... ಲಗ್ನಾತೋ ಇಲ್ಲೋ ಅಂಬೂದು'

'ಹಾಂಗಾದ್ರ ಬೆಳಕ ಗಡಾನ ಆಗ್ಲಂತ ಗುಡ್ಡ್ಯಾಗಿನ ರೇವಣಸಿದ್ಧಗ ಸೆರಗೊಡ್ಡಿ ಬೇಡ್ತೇನ್ರಿ....

'ಮಾತು ಮಾತಿನ ಮಧ್ಯದಲ್ಲಿ ನಿದ್ರೆ ಸೆರಗು ಹೊಚ್ಚಿ ಸೋಬಾನ ಹಾಡಿತು. ದಂಪತಿಗಳು ಶಿವನಿದ್ರೆಯಲ್ಲಿ ತೇಲಿಹೋದರು!

೬

ಸಿದ್ಧ ಪರ್ವತದ ಭೈರವರುದ್ರ ರುಂಡಗಳನ್ನು ಧರಿಸಿದ ಮಹಾ ಮಾಯಾವಿ. ಜಗತ್ಪ್ರಸಿದ್ಧ ರುದ್ರಕಪಾಲಿಯ ಶ್ರೇಷ್ಠಶಿಷ್ಯ. ಹಠಯೋಗ ಲಯಯೋಗ ತಂತ್ರಯೋಗಗಳೊಂದಿಗೆ ಮಾಂತ್ರಿಕವಿದ್ಯೆಯಲ್ಲಿ ಗುರುವನ್ನೇ ಸೋಲಿಸಿದ್ದಾನೆ. ಆತ ಭೂತಪ್ರೇತಪಿಶಾಚಿಗಳನ್ನು ಒಲಿಸಿಕೊಂಡಿರುವ ನಂತೆ. ಅವನು ಹಾಂ ಅಂದರೆ ನೂರಾರು ದೆವ್ವಗಳು ಹೂಂ ಎಂದು ಕೈ ಮುಗಿದು ನಿಲ್ಲುತ್ತವಂತೆ. ಅಷ್ಟೇ ಅಲ್ಲ ಅವನ ಜೋಳಿಗೆಯಲ್ಲಿ ಹತ್ತೆಂಟು ಖಾನೆಗಳಿದ್ದು ಪ್ರತಿಯೊಂದು ಖಾನೆಯಲ್ಲಿಯೂ ಒಂದೊಂದು ಗಂಡುಬ್ರಹ್ಮ ರಾಕ್ಷಸ ಹಾಗೂ ಒಂದೊಂದು ಹೆಣ್ಣುಬ್ರಹ್ಮರಾಕ್ಷಸಿ ವಾಸವಾಗಿವೆಯಂತೆ. ಕೇವಲ ಬೂದಿ ತೂರಿದರೆ ಹುಲಿಹೋಗಿ ಇಲಿ, ಇಲಿಹೋಗಿ ಹುಲಿ. ಕಾಶೀರಾಜ್ಯದ ರಾಜಕುಮಾರಿಗೆ ಆತ ಬೂದಿ ಎರಚಿದಾಗ ಆವಳು ನಾಯಿ

ಕುನ್ನಿ ಆಗಿ ಅವನ ಜೋಳಿಗೆಯಲ್ಲಿ ಬಂದು ಕುಳಿತಳಂತೆ. ಇಂಥಾ ಅವಿವಾಹಿತ ಸುಂದರಿಯರನ್ನು ರುಂಡಮಾಲಿರುದ್ರನ ಪ್ರೀತ್ಯರ್ಥವಾಗಿ ದಿನವೂ ಮಾಯಾಮೋಸದಿಂದ ದೆವ್ವಗಳ ಸಹಾಯದಿಂದ ಕರೆತಂದು, ಅವರಲ್ಲಿ ಸಮ್ಮೋಹಿನಿ ಯಕ್ಷಿಣಿಯನ್ನು ಪ್ರವೇಶಗೊಳಿಸಿ, ಭೋಗಿಸಿ ಆನಂದ ಪಡುವದು ಆ ಭೈರವರುದ್ರನ ವಹಿವಾಟ! ಅವನನ್ನು ಕೊಲ್ಲಲು ರಾಜ ಮಹಾರಾಜರೂ ಅಂಜುತ್ತಾರೆ. ಯಾಕೆಂದರೆ ಅವರ ರಾಣಿವಾಸದ ರಾಜ ಪುತ್ರಿಯರೂ ರಾಣಿಯರೂ ಇವನ ಮಂತ್ರವಿದ್ಯೆಗೆ ಎಲ್ಲಿ ಕುನ್ನಿಯುಮರಿ ಆಗುವರೋ ಎಂಬ ಅಂಜಿಕೆ ಅವರಿಗೆ!

* * *

ಮಲೆನಾಡಿನ ರಾಜಕುಮಾರನೇನೋ ಮಾದೇವಿಯನ್ನು ಆದಿನ ಒಲಿದು, ಅವಳನ್ನು ತನ್ನ ಬಾಳಿನ ಮುತ್ತೈದೆಮಣಿಯಾಗಿ ಅಲಂಕರಿಸಿ ಕೊಳ್ಳಲೆಂದು ಹತ್ತಾರು ಹಿರಿಯರೊಂದಿಗೆ ತನ್ನ ಸುರಪುರ ಸೇರಿದ. ಆದರೆ ಸುರಪುರದ ರಾಜ ಮಹಾಮಂಡಲೇಶ್ವರ ತ್ರಿಲೋಕಪಾಲ ತನ್ನ ಮಗನ ಈ ಕೀಳು ಸಂಬಂಧಕ್ಕೆ ಓಗೊಡದೆ ನಗರಕ್ಕೆ ಬಂದ ಹಿರಿಯರನ್ನು ಅಂಜಿಸಿ ಓಡಿಸಿದ. ಮಾದೇವಿ ಹಾಗೂ ಅವಳ ತಂದೆ ಶರಣಶಿವಪ್ಪ ಇಬ್ಬರೇ ಅರಮನೆಯ ಅತಿಥಿಗೃಹದಲ್ಲಿ ಬಂಧಿಯಾಗಿ ಉಳಿದರು. ಅರ-ಮನೆಯಲ್ಲಿ ತಂದೆಮಗನಿಗೆ ಅಂತಃಕಲಹ ಪ್ರಾರಂಭವಾಯಿತು. ಮಗ ತಂದೆಗೆ ಕೊನೆಗೊಮ್ಮೆ ಪ್ರಾರ್ಥಿಸಿದ—

‹ಅಪ್ಪಾ.... ನೀನು ರಾಜ.... ನಾನು ನಿನ್ನ ರಾಜಕುಮಾರ.... ನೀನು ಇದನ್ನು ಕೀಳು ಸಂಬಂಧವೆನ್ನುವದಾದರೆ ನನಗೆ ನೀನು ಬೇಡ.... ನಿನ್ನ ರಾಜ್ಯಬೇಡ.... ಅವಳೊಂದಿಗೆ ದುಡಿದು ಉಣ್ಣುತ್ತೇನೆ'

ತಂದೆಯೂ ಆಕ್ರೋಶ ಮಾಡಿದ—

'ಹೋಗು ಹೋಗು.... ನೀ ಸತ್ತರೆ ಲೋಕ ಸಾಯುವದಿಲ್ಲ'

ಮಗ ಕೂಗಿದ—

'ಅಪ್ಪಾ.... ನೀನು ನನ್ನನ್ನು ಕೊಲ್ಲು ಕಡಿ ತುಳಿ.... ಆದರೆ ಆ ಮಾದೇವಿ ದೊಡ್ಡ ಋಷಿಯ ಶಿಷ್ಯಳು.... ಮಹಾಯೋಗಿಯ ಭಕ್ತಳು....'

'ಯಾ ಯೋಗಿಲೇ.... ಊರಿಗೊಬ್ಬ ಯೋಗಿ ಹಳ್ಳಿಗೊಬ್ಬ ಸೋಗಿ'

'ಸೋಗಲ್ಲಪ್ಪಾ ಶಿವಯೋಗಿ.... ಶುದ್ಧ ಶಿವಯೋಗಿ.... ಹುಚ್ಚರಿಗೆ ಹುಚ್ಚಾ.... ಜಾಣರಿಗೆ ಜಾಣಾ ...'

ಮಾತು ಮುಗಿಯಿತು. ಮೂರು ಹಗಲು ಮೂರು ರಾತ್ರಿ ಜಾರಿದವು. ಮೂರುದಿನದಲ್ಲಿ ಮಹಾಮಂಡಲೇಶ್ವರ ತ್ರಿಲೋಕಪಾಲ ತನ್ನ ಜಾಣಮಂತ್ರಿ ಧೂರ್ತಕರ್ಣನ ಸಹಾಯದಿಂದ ಸಾವಿರ ಹೊನ್ನು ಕೊಟ್ಟು ಸಿದ್ಧಪರ್ವತದ ಭೈರವರುದ್ರನನ್ನು ಕರೆಸಿಕೊಂಡ. ಮಾದೇವಿಗೆ ಬೂದಿ ತೂರಿ ಹುಚ್ಚು ಹಿಡಿಸು.... ಇಲ್ಲಾ ಯಕ್ಷಿಣಿ ಮೋಹಾ ಮಾಡಿ ಒಯ್ಯಿ.... ಅಥವಾ ನಾಯಿಕುನ್ನಿಮಾಡಿ ಜೋಳಿಗ್ಯಾಗ ಹಾಕೊಂಡು ಸಾಗಿಸು ಎಂದು ಕೇಳಿಕೊಂಡ. ಭೈರವರುದ್ರ ಈ ಕೆಲಸವನ್ನು ಬಾರಿ ಹಣ್ಣು ತಿಂದಂತೆ ಮಾಡಮುಗಿಸುವದಾಗಿ ಆಶ್ವಾಸನೆ ನೀಡಿದ.

ಅದೇದಿನರಾತ್ರಿ. ಸೈನಿಕರು ಮಾದೇವಿ ಮಲಗಿದ ರಾಜ ಮಂದಿರದ ಅತಿಥಿಗೃಹದ ಕಿಡಕಿ ಮುರಿದರು. ಮಂತ್ರಿ ಧೂರ್ತಕರ್ಣ ನೊಂದಿಗೆ ಭೈರವರುದ್ರ ಆ ಕಿಡಿಕಿಗೆ ಬಂದ. ಜೋಳಿಗೆಯಿಂದ ಬೂದಿತೆಗೆದು ಅದನ್ನು ತೂರಹೋದ. ಮಂತ್ರಿ ಕೂಡಲೇ ಹೇಳಿದ—

'ತಡೀಪಾ ತಡಿ ಆಟು.... ನಾ ದೂರ ನಿಲ್ತೇನಿ.... ಮತ್ತ ನನ್ನೂ ನಾಯಿಗೀಯಿ ಮಾಡೀ ಎಲ್ಲಿರೆ....'

ಮಂತ್ರಿ ದೂರ ನಿಂತ. ಈತ ಹಿಡಿಬೂದಿ ಕಿಡಕಿಯಿಂದ ಒಳಗೆ ಒಗೆದ. ಏನೂ ಆಗಲಿಲ್ಲ. ನಾಯಿಯೂ ಆಗಲಿಲ್ಲ. ಕುನ್ನಿಯೂ ಆಗಲಿಲ್ಲ. ಬೂದಿಮಾತ್ರ ನೆಲಕ್ಕೆ ಬಿತ್ತು. ಇದೇನೆಂದು ತಿಳಿಯದೆ ಮಂತ್ರಿ ಧೂರ್ತಕರ್ಣ ಬಳಿಗೆ ಬಂದು ಮೆಲ್ಲನೆ ಕೇಳಿದ—

'ಏನಪಾ.... ಏನಮಾಡೀದಿ.... ಏನಾತು?'

ಮಾಯಾವಿ ಹೇಳಿದ—

'ನನ್ನ ಜೋಳಿಗ್ಯಾಗಿನ ನೂರು ದೆವ್ವಗೋಳ್ನ ಒಮ್ಮೆಲೇ ಒಳಗ ಕಳಿಸೀದ್ಯಾ.... ಹುಃ.... ತಡೀ ಆಟು.... ನೋಡೂವಂತಿ. ದೆವ್ವನ ಆಟಾ.... ಎಲ್ಲಾ ದೆವ್ವಾ ಇಲ್ಲೇ ಬರ್ತಾವು....'

ಶಿವಶಿವಾ.... ದೆವ್ವನ ಆಟವೇ! ಧೂರ್ತಕರ್ಣ ಪುಕ್ಕಲುಕರ್ಣನಾಗಿ ಮೆಲ್ಲನೆ ಅಲ್ಲಿಂದ ಕಾಲ್ಕಿತ್ತು ಮನೆಗೋಡಿ ಹೋದ. ಮಂತ್ರವಾದಿಯ ಮಂತ್ರ ನಾಟಲಿಲ್ಲ. ದೆವ್ವಗಳೆಲ್ಲಾ ಜಲ್ಲಾಪಿಲ್ಲಿಯಾಗಿ ಓಡಿಹೋದವೋ ಏನೋ! ಅವನು ಕಳಿಸಿದ ಯಕ್ಷಿಣಿ ವಿದ್ಯೆಯ ಮೋಹಕ್ಕೆ ಮಾದೇವಿ ಬಲಿಯಾಗಲಿಲ್ಲ. ಆನಂದದಿಂದ ನಿದ್ರೆ ಮಾಡಿದಳು. ಮಂತ್ರವಾದಿ ಬೆವರಿದ. ಬೆದರಿದ. ಮೆಲ್ಲನೆ ಕಿಡಕಿಯಿಂದ ಒಳಗಿಳಿದು ಹೋಗಿ ನೋಡಿದ. ನೆಲದ ಮೇಲೆ ಮಲಗಿದ ಮಾದೇವಿಯ ಎದೆಯ ಮೇಲೆ ಲಿಂಗವಿದೆ. ಮಂಚದ ಮೇಲೆ ಮಲಗಿದ ಶರಣಶಿವಪ್ಪನ ಕೊರಳಲ್ಲಿ ಲಿಂಗರುದ್ರಾಕ್ಷಿ ಇವೆ. ಮೊಟ್ಟಮೊದಲ ಬಾರಿಗೆ ತನ್ನ ಮಾಯಾವಿದ್ಯೆ ಸೋಲುತ್ತಿರುವದನ್ನು ನೋಡಲು ಅವನಿಗೆ ಸಹಿಸಲಾಗಲಿಲ್ಲ. ಮಾದೇವಿಯನ್ನು ಕುನ್ನಿಮಾಡಲೋ ಏನೊ ಕೈಯಲ್ಲಿಯ ಜಾದೂಕಟ್ಟಿಗೆ ಇನ್ನೊಮ್ಮೆ ಅವಳ ಮೇಲೆ ಆಡಿಸಿದ. ಇನ್ನಿಷ್ಟು ಬೂದಿ ಅವಳ ಮುಖಕ್ಕೆ ಊದಿದ. ಅವನ ಕೈಯಿಂದ ಬಿದ್ದ ಬೂದಿಗೆ ಅವಳು ಒಂದು ಸಲ ಶೀತಳು. ಅಷ್ಟೇ! ಮತ್ತೆ ಶಿವಾ ಅಂದು ಮಲಗಿಬಿಟ್ಟಳು!! ಈಗ ಮಾಯಾವಿ ಸೋತ. ಸೋತ ಮಾತ್ರವಲ್ಲ ತತ್ತರಿಸಿ ನಡುಗಿದ. ಅವನ ಜೋಳಿಗೆಯ ಖಾನೆಗಳಲ್ಲಿ ಕುಳಿತಿದ್ದ ಆ ಎಲ್ಲ ಗಂಡು ಹೆಣ್ಣು ಬ್ರಹ್ಮರಾಕ್ಷಸರು ಮೇಲೆದ್ದು ಬಂದು ಹೊರಳಿ ಅವನ

ನಾಲಿಗೆಯನ್ನೇ ಕೀಳತೊಡಗಿದವು. ಕೆಲವು ಗಂಟಲು ಹರಿದವು. ಇನು ಕೆಲವು ಕುತ್ತಿಗೆಗೆ ಕೈಹಾಕಿದವು. ರಕ್ತ ಕಾರುತ್ತ ಮಾಯಾವಿ ಭೈರವರುದ್ರ ತನ್ನ ಪ್ರೀತಿಯ ಜೋಳಿಗೆಯನ್ನು ಅಲ್ಲೇ ಒಗೆದು ರಪಾಟಕಿತ್ತ!

ಮತ್ತೇನು? ಬೆಳಗಾಗುವಷ್ಟರಲ್ಲಿ ಮಂತ್ರವಾದಿ ಸುರಪುರ ರಾಜಧಾನಿ ಬಿಟ್ಟು ಓಡಿ ಹೋಗಿದ್ದ! ರಾಜರು ಮಂತ್ರಿಗಳು ಸೈನಿಕರನ್ನು ಅಟ್ಟಿ ಹುಡುಕಿಸಿದರೂ ಸಿಗದಂತೆ ಪಲಾಯನ ಮಾಡಿದ್ದ!!

* * *

ಬೆಳಗಾಯಿತು!

ಅಬ್ಬಾ.... ರಾಜನ ರಾಣಿವಾಸದ ನಾಲ್ಕಾರು ರಾಣಿಯರಿಗೆ ದೆವ್ವ ಬಡಿದಿವೆ. ಅವರು ಬಡಬಡಿಸುತ್ತ ಕುಣಿಯುತ್ತಿದ್ದಾರೆ. ಹಾಡುತ್ತಿದ್ದಾರೆ. ಅಳುತ್ತಿದ್ದಾರೆ. ಎಲ್ಲಾ ದೆವ್ವಗಳ ದಬ್ಬಾಳಿಕೆ! ಸ್ವತಃ ರಾಜ ಕಾಣಬಾರದ ಕನಸು ಕಂಡು ರಾತ್ರಿಯಲ್ಲಿ ಅಂತಃಪುರದ ಮಂಚದಿಂದ ಓಡಿಹೋಗಿ ಕಿಡಕಿಯಿಂದ ಗೋಡೆ ಜಿಗಿದು ಮೈತುಂಬಾ ಘಾಯಮಾಡಿಕೊಂಡು.... ಪಟ್ಟಿ ಕಟ್ಟಿಕೊಂಡು.... ಶಿವಾ ಎಂದು ನರಳುತ್ತ ಮಲಗಿದ್ದಾನೆ. ಬೆಳಗಾಗುವಷ್ಟರಲ್ಲಿ ಮಂತ್ರವಾದಿಯ ಮಂತ್ರವೆಲ್ಲಾ ಹಿಮ್ಮಂತ್ರವಾಗಿ ಹೋದ ಸುದ್ದಿ ಪ್ರಜಾಕೋಟಿಗೆ ಹಬ್ಬಿತು. ಸ್ವತಃ ರಾಜ ಮಗನಲ್ಲಿ ಕ್ಷಮೆ ಕೋರಿದ. ಕುಂಟುತ್ತಲೇ ಬಂದು ಮಹಾದೇವಿಯನ್ನು ಕಂಡ. ಮತ್ತೂ ಆಶ್ಚರ್ಯ! ನಿನ್ನೆ ರಾತ್ರಿ ತಾನು ಕಂಡ ಘೋರ ಕನಸಿನ ಮೊದಲು ಬಿದ್ದ ಕನಸಿನಲ್ಲಿ ನೋಡಿದ ಕೈಲಾಸದ ರುದ್ರಕನ್ಯೆ ಇವಳೇ!! ಆ ರೂಪ ಈ ರೂಪ ಎಲ್ಲಾ ಒಂದೇ ಸುರೂಪ!!!

* * *

ವಿವಾಹ ವೈಭವದಿಂದ ನೆರವೇರಿತು. ಮಹಾದೇವಿ ರಾಣಿ-ಯಾದಳು. ರಾಜರಾಜೇಶ್ವರಿ ಮಹಾದೇವಿಯಾದಳು!

ಸ್ವತಃ ತ್ರೀಲೋಕಪಾಲ ಮಹಾಮಂಡಲೇಶ್ವರ, ಅವನ ಮಗ ರಾಜಕುಮಾರ ವಿಘ್ನೇಶ್ವರ, ಸೊಸೆ ಮಹಾದೇವಿ, ಮಂತ್ರಿಧೂರ್ತಕರ್ಣ ಎಲ್ಲರೂ ಹತ್ತು ಕುದುರೆ ಹತ್ತು ಆನೆ ಹತ್ತು ರಥಗಳಲ್ಲಿ ನೂರಾರು ರತ್ನಾ ಹಾರ ವಸ್ತ್ರಗಳೊಂದಿಗೆ ಹೂಬಳ್ಳಿ ಪುರಕ್ಕೆ ಬಂದು ಅರಣ್ಯದ ದಾರಿ ನಡೆದು ಆ ಗವಿಯ ಮಹಾಯೋಗಿ ಹುಚ್ಚೇಶ್ವರ ಲೀಲಾಪುರುಷನನ್ನು ಕಾಣ ಬಂದರು. ಆದರೆ ಅವರು ಅಲ್ಲಿ ಕಂಡದ್ದೇ ಇನ್ನೊಂದು ಆಶ್ಚರ್ಯ! ಇವರಿಗಿಂತಲೂ ಮೊದಲು ಅಲ್ಲಿಗೆ ಆ ಮಹಾಮಂತ್ರವಾದಿ ಸಿದ್ಧಪರ್ವತದ ಭೈರವರುದ್ರ ಬಂದು ಶಿವಯೋಗಿಯ ಪಾದಕ್ಕೆ ಬಿದ್ದು, ಕ್ಷಮೆ ಕೇಳಿ ಕೊಂಡು, ತಲೆಬೋಳಿಸಿಕೊಂಡು ಶಿಷ್ಯನಾಗಿದ್ದಾನೆ!!

ಧೂರ್ತಕರ್ಣಮಂತ್ರಿ ಹುಚ್ಚೇಶ್ವರ ಯೋಗಿಗಳ ದರ್ಶನಕ್ಕೆ ಹೋಗುವ ಮುನ್ನ ಆ ಮಂತ್ರವಾದಿಯನ್ನು ಇನ್ನೊಮ್ಮೆ ನೋಡಿ ಕೇಳಿದ—

'ಏನಪ್ಪಾ ಮಂತ್ರವಾದಿ... ದಯವಿಟ್ಟು ನಿನ್ನ ಬೂದಿಗೀದಿ ನನ ತಲಿಮ್ಯಾಲ ಹಾಕಬ್ಯಾಡಪಾ....'

ಭೈರವರುದ್ರ ನಕ್ಕು ಹೇಳಿದ —

'ಅಂಜಬೇಡಾ ಮಂತ್ರಿಯ್ಯಾ.... ನಾ ಎಲ್ಲಾರ ತೆಲಿಮ್ಯಾಗ ಬೂದಿಹಾಕೀದ್ರ.... ನನ್ನ ತೆಲಿಮ್ಯಾಗ ಈ ಯೋಗಿ ಬೂದಿ ಹಾಕ್ಯಾನು....'

'ಯಾ ಬೂದಿ?'

'ಮಾಯಾ ಬೂದಿ ಅಲ್ಲಾ... ಶಿವಯೋಗದ ಬೂದಿ....'

'ಅಂದ್ರ?'

'ನಾ ಇಲ್ಲೀ ತನಾ ಜಗತ್ತಿನ್ಯಾಗ ಮಾಯಾಶಕ್ತೀನ ದೊಡ್ದು

ಅಂತ ಅದರ ಆರಾಧನಾ ಮಾಡಿದ್ದೆ.... ಈಗ ಈ ಮಹಾಯೋಗಿ ನನ್ನ ಬಾಳಿನಲ್ಲಿ ಹೊಸಾ ಬೆಳಕಿನ ಬಾಗಿಲು ತೆರೆದ.... ಹೊಸಾ ಜಗತ್ತು ತೋರಿಸಿದ....'

'ಯಾವುದು ಅದು ಹೊಸಾ ಜಗತ್ತು?'

'ಶಿವಯೋಗ.... ಗುರುಲಿಂಗಜಂಗಮದ ಮಹಾಯೋಗ...'

ಧೂರ್ತಕರ್ಣ ಮಂತ್ರಿಗೆ ಈ ಮಾತು ಅರ್ಥವಾಗದಿದ್ದರೂ ಅರ್ಥ ವಾದವನಂತೆ ತಲೆಹಾಕಿ ಮುಂದೆ ಹೋದ.

* * *

ಲೋಕನಿಂದ ಲೋಕಗುರು ಹುಚ್ಚಯೋಗಿಗೆ ಲೋಕದ ಮಾಯೆ ಎಲ್ಲಿ? ಆದರೂ ಮಲೆನಾಡಿನ ರಾಜ ತ್ರಿಲೋಕಪಾಲ ಮಹಾ ಮಂಡಲೇಶ್ವರ ಶಿವಯೋಗಿಯ ಶ್ರೀಪಾದಕ್ಕೆ ಹತ್ತು ಮಣ ಬಂಗಾರ, ಹತ್ತು ಮಣ ಮುತ್ತು ರತ್ನ, ಹತ್ತು ಆನೆ, ಹತ್ತು ಕುದುರೆ ಹಾಗೂ ಹತ್ತು ಹತ್ತು ರಥಗಳನ್ನು ಮುಂದಿಟ್ಟು ಸ್ವೀಕರಿಸಬೇಕೆಂದು ಪ್ರಾರ್ಥಿಸಿದ. ಹುಚ್ಚೇಶ್ವರ ಯೋಗಿಗಳು ನಕ್ಕು ಹೇಳಿದರು.--

'ಇದೇನಪಾ ರಾಜಾ ... ಯಾರ ಹೆಣಕ್ಕ ಈ ಮಣ್ಣು ತಂದಿ?'

ರಾಜ ನಡುಗಿ ಸುತ್ತಲೂ ನೋಡಿ ಕೇಳಿದ -

'ಯಾವ ಹೆಣಾ.... ಯಾವ ಮಣ್ಣು ಬುದ್ಧೀ ...'

'ಹುಚ್ಚಪ್ಪಾ.... ಕೇಳಪ್ಪಾ ಕೇಳು.... ಶುದ್ಧ ಕಾಯಕದಿಂದ ಬಂದುದೇ ಶಿವಪ್ರಸಾದ.... ಸುಳ್ಳು ವೈಭವದಿಂದ ಬಂದದ್ದು ಮಣ್ಣು.... ಹೆಣಕ್ಕೆ ಹಾಕುವ ಮಣ್ಣು....'

'ಇದೇನು ತಂದೇ?'

'ಮಣ್ಣಪಾ ಮಣ್ಣು... ಇದೆಲ್ಲಾ ಮಣ್ಣು....'

'ಕ್ಷಮಿಸಿ ಪ್ರಭುದೇವಾ.... ನಾನು ಮಣ್ಣಿನಲ್ಲಿ ಮೂಡಿ ಮಣ್ಣಿನಲ್ಲಿ ಆಳಿ ಮಣ್ಣಿಗಾಗಿ ಬಾಳಿದ್ದೇನೆ.... ಮಣ್ಣೇ ಮಹವೆಂದು ಬಾಳಿದ ದುಷ್ಕರ್ಮಿ ನಾನು.... ಕ್ಷಮಿಸಿರಿ.... ಕ್ಷಮಿಸಿರಿ....'

'ಹುಚ್ಚಪ್ಪಾ.... ಒಂದು ತಪ್ಪಿಗೆ ಇನ್ನೊಂದು ಕೂಡಿಸಿದೆಯಲ್ಲಪಾ... ಕೇಳಪಾ ಕೇಳು.... ಶುದ್ಧಕಾಯಕದಿಂದ ಬಂದುದೇ ಪ್ರಸಾದಾ .. ಕಾಯಕವಿಲ್ಲದೆ ಪುಕ್ಕಟೆ ಬಂದು ಬಿದ್ದ ಸಾಮ್ರಾಜ್ಯವೂ ಮಣ್ಣು ...'

'ಹಾಗಾದರೆ ನಾನು ಮಣ್ಣಿನ ರಾಜನೇ'

'ಮಣ್ಣೇ ಸರ್ವಸ್ವವೆಂದು ತಿಳಿದರೆ ನೀನು ಮಣ್ಣಿನ ರಾಜನೇ ಸರಿ.... ಮಣ್ಣಿನಲ್ಲಿ ಕಾಯಕಧರ್ಮವನ್ನು ಕಂಡರೆ.... ಲೋಕಸೇವೆಯನ್ನು ಕಂಡರೆ ಆಗ ನೀನು ಮಣ್ಣಿನ ದಾಸಯ್ಯನಲ್ಲ.... ವಿಶ್ವಲಿಂಗದ ಭಕ್ತ.... ಜಂಗಮಚೈತನ್ಯದ ಆರಾಧಕ'

'ಎಂಥಾ ದೊಡ್ಡ ಮಾತು ಬುದ್ಧಿ....'

'ಹೌದಪಾ ರಾಜಪ್ಪಾ....ಹೌದು.... ಬ್ಹಾಳಜನಾ ರಾಜರು ರಾಜ ಪ್ರಭುತ್ವದಲ್ಲಿ ಏರಿಹೋದ ದೊಡ್ಡ ದೊಡ್ಡೋರು ತಾವು ದೊಡ್ಡೋರಂತ ತಿಳಿದು ಬಿಡ್ತಾರು.... ದೇಶಾ ಆಳೂದೂ ಒಂದು ಶಿವಪೂಜಿಪಾ.... ದೊಡ್ಡ ಶಿವಪೂಜಿ ಅದೂ ಒಂದು ಪರಿಶುದ್ಧ ಕಾಯಕಾ ಅಂತ ತಿಳಿದ್ರ ಇಷ್ಟೆಲ್ಲಾ ಕೌದಿರೌದಿ ರಾಡಿಕೀಡಿ ರಾಜಕೀಯದಾಗ ಯಾಕ ಆದೀತು?'

'ಹೌದ್ರಿ ತಂದೆ ಆದ್ರ ನಿಮ್ಮಂಥೋರು ರಾಜಕೀಯದಾಗ ಯಾರ ಇರ್ತಾರ್ರಿ . ಬರೇ ರಕ್ತಾ.... ರಂಗು.... ಗುಂಗು.... ಇದೇ ರಾಜಕೀಯ ರಾಮಾಯಣಾ ...'

'ಅಂತ ಹೇಳಿ ಅವರು ರಾವಣನಂಗ ಉರುಳಿ ಹೋಗತಾರಪಾ.... ಮನಶಾ ಸತ್ರೂ ಬಾಳಬೇಕು.... ಅದsು ನೋಡಪಾ ಶರಣತತ್ವಾ.... ಭೋಗಾ ಬಾಳ ಮೆಟ್ಟಿ ಸಾವು ತರತೈತಿ.... ಯೋಗಾ ಸಾವು ಮೆಟ್ಟಿ ಬಾಳು ತರತೈತಿ .. ತಿಳೀತೇನಪಾ ರಾಜಪ್ಪಾ....'

'ತಂದೇ.... ಇದೆಲ್ಲಾ ಹೇಳೋರು ನೀವ.... ತಿಳಿಸೋರು ನೀವ ತಿಳಿಸಿದಂಗ ನಡಿಸಿಕೊಡೋರು ನೀವ.... ನಾ ಒಂದ ನಿಮ್ಮ ಕೈಯಾಗಿನ ಹುಲ್ಲುಕಡ್ಡಿ ಬುದ್ಧಿ....'

'ಆಬಬಬಬಬಬ.... ನನ್ನ ಮಾತ ನನ್ನ ಮ್ಯಾಲೆ ಲಗಾಟಾ ಹೊಡಿಸೀದೆಲ್ಲೋ ರಾಜಣ್ಣಾ....'

ಈಗ ಧೂರ್ತಕರ್ಣ ಮಂತ್ರಿ ನಡುವೆ ಬಾಯಿ ಹಾಕಿ ಹೇಳಿದ—

'ಹೌದ್ರಿ ತಂದೆ.... ನಮ್ಮ ಮಾರಾಜ್ರು ಭ್ಹಾಳ ಶ್ಯಾಣ್ಯಾರು.... ಭ್ಹಾಳ ಬುದ್ಧಿವಂತ್ರು....'

'ಹೌದಪಾ.... ಅವರ ಕರ್ಣದಾಗ ನಿನ್ನಂಥೋರು ಧೂರ್ತ ಮಂತ್ರಿಗೋಳು ಕಡ್ಡೀ ಆಡಸ್ತೀರಿ ಅಂದವ್ಯಾಗ.... ಭ್ಹಾಳ ಬುದ್ಧಿ ವಂತ್ರು....'

ಈ ಮಾತು ಕೇಳಿ ಧೂರ್ತಕರ್ಣ ತನ್ನ ಕಿವಿಯಲ್ಲಿ ಬೆರಳು ತಿಕ್ಕಿ ಕೊಂಡ. ರಾಜ ತನ್ನ ಕಿವಿ ಕೆರೆದುಕೊಂಡ. ಮತ್ತೆ ಹುಚ್ಚಯೋಗಿ ಹೇಳಿದ—

'ನೋಡಪಾ ರಾಜಪ್ಪಾ.... ನಾ ಹುಚ್ಚಾ ... ಹುಚ್ಚಂದ್ರ ಹಳೇ ಹುಚ್ಚಾ ... ಈ ಗವಿಗುಂಡಬಿಟ್ಟು ಇನ್ನೊಂದು ಬುವಿ ಕಂಡಿಲ್ಲಾ....'

'ತಾವು ತ್ರಿಲೋಕ ಜ್ಞಾನಿಗಳು ತಂದೆ.... ಗವಿಗುಂಡಿನ ಬಳಿ ಇದ್ದೇ ಸರ್ವವನ್ನೂ ಕಾಣುವ ಜ್ಞಾನಿಗಳು ...'

'ಯಾ ಜ್ಞಾನೋ ಏನೊ.... ಜ್ಞಾನ ಅನ್ನೂ ಶಬ್ದಾನsು ನಮಗ

ಗೊತ್ತಿಲ್ಲಾ....'

ಈಗ ಮಂತ್ರವಾದಿ ಭೈರವರುದ್ರ ನಡುವೆ ಬಾಯಿ ಹಾಕಿದ—

'ತಾವು ಶಬ್ದಾತೀತರು.... ಶಬ್ದಾತೀತರು....'

'ಹೌದಪಾ.... ನಾವು ಶಬ್ದಾತೀತರು.... ನೀನು ಮಾತ್ರ ಭೂತಾತೀತ.... ಪ್ರೇತಾತೀತ....'

'ನಗೆಯಾಡುತ್ತೀರಲ್ಲಾ ತಂದೆ.... ನಿಮ್ಮ ಬೆಂಕಿ ನನ್ನ ಭೂತಾ ಗೀತಾ ಗ್ವಾತಾಮಾಡೀದ್ದು....

'ಹ್ಹಹ್ಹಹ್ಹಹ್ಹಹ್ಹ....'

ಎಲ್ಲರೂ ಗೊಳ್ಳನೇ ನಕ್ಕರು. ಮತ್ತೂ ಮತ್ತೂ ನಕ್ಕರು. ಈಗ ಹುಚ್ಚಯೋಗಿ ನಗುನಗುತ್ತ ಒಮ್ಮೆಲೇ ನಗುನಿಲ್ಲಿಸಿ ಗಂಭೀರನಾಗಿ ರಾಜನಿಗೆ ಹೇಳಿದ—

'ನೋಡಪಾ ರಾಜಪ್ಪಾ .. ನೀವು ಈಗ ನಗತೀರಲ್ಲಾ ಹೀಂಗೆ ನಗತೈತಿ ವಿಶ್ವಾ.... ನಗೀ ಅಂದ್ರ ಮಂತ್ರಾ.... ನಗೀ ಅಂದ್ರ ಶಿವಾ.... ಆದ್ರ ಈ ನಗೀಯೊಳಗ ಹೊಗೀ ಕೂಡೀದ್ರ ನುಗ್ಗಿನೆಗ್ಗಿ ಕಾಯಾಗತೈತಿ.... ಸಂತ್ಯಾಗ ಮುತ್ತೈದಿ ಬಳಿ ಒಡಕೊಂಡಂಗ ಆಗತೈತಿ....'

'ಹೌದ್ರಿ ತಂದೆ.... ವೈರಾ ಈರ್ಷಾ ಕಾಮಾ ಕ್ರೋಧಾ ನಗಲಿಕ್ಕೆ ಹುಟ್ಟಿದೋರನ್ನ ಅಳಾಕ ಹಚ್ಚತಾವು....'

'ಅದಕ್ಕsಪಾ ... ಧರ್ಮಾಕರ್ಮಾ ಅಂಬೂದು.... ಕರ್ಮಾ ಕೊಳೀತೈತಿ.... ಧರ್ಮಾ ತೊಳೀತೈತಿ....'

'ಕರ್ಮದಿಂದ ಧರ್ಮಕ್ಕ ದಾರಿ ಯಾವುದ್ರೀ ತಂದೆ?'

'ಐತೆಪಾ ಐತಿ.... ಷಟ್‌ಸ್ಥಲಾ ಅಂತ ಐತಿ.... ನನ್ನಂಥಾ ಹುಚ್ಚಗ ಹೇಳಾಕ ಬರೂದಿಲ್ಲಾ.... ನಾ ಪಂಡೀತಲ್ಲಾ.... ಗಿಂಡೀತಲ್ಲಾ.... ಒಟ್ಟನ್ಯಾಗ್ಯಲೆ ಜೀವತತ್ವದಿಂದ ದೇವತತ್ವಕ್ಕ ಏರೂದss ಷಟ್‌ಸ್ಥಲಾ....'

'ತಿಳೀಲಿಲ್ರಿ....'

'ನಾನೇನ ನಿನ್ನ ಸಾಲಿ ಕಲಸೂ ಗುರೂ ಏನಪಾ ರಾಜಪ್ಪಾ.... ಗಡ್ಡಿಗೆಣಸ ತಿಂದ ಕಡ್ಯಾಗಿ ಬಾಳೇನಿ.... ಭಕ್ತಾ.... ಮಹೇಶಾ.... ಪ್ರಸಾದಿ ... ಪ್ರಾಣಲಿಂಗಿ.... ಶರಣಾ ... ಐಕ್ಯಾ.... ಅಂತ ಆರ ಹಂತ ಅದಾವಪಾ.... ಇವಕ್ಕ ಆರ ಮೆಟ್ಲರೆ ಅನ್ನು.... ಆರ ಸ್ಥಿತಿನರೆ ಅನ್ನು.... ಗಿಡಾ ಒಂದು ಟೊಂಗಿ ಹನ್ನೊಂದು.... ಕಾಯಿ ನೂರೊಂದು.... ಹೂವು ಅನಂತಾ.... ಹಾಂಗ ಶಿವಯೋಗಾ ಒಂದು.... ಸಾಧನಾ ಆರು.... ಆರರಾಗ ನೂರೊಂದು ... ಆರುಸ್ಥಲಾ ಏರಿ ಮೀರಿದವಾ ಸ್ಥಲಗೆದ್ದ ನಿಸ್ಥಲಾ.... ಸ್ಥಲಬ್ರಹ್ಮಾ...'

'ನನಗ ತಿಳೀಲಿಲ್ರಿ....'

'ನೀ ಹೀಂಗ ತಿಳೀಲಿಲ್ರಿ ಅಂಬೂದss ಭಕ್ತಸ್ಥಲದ ಬಿಂಕಾ.... ತಿಳಿವಿನ್ಯಾಗ ಭಕ್ತಿ ಬಲೀತು ಅಂದ್ರ ಮಹೇಶ ಸ್ಥಲಾ.... ಬಲತ ಭಾವ ನೆಲೆಸಿ ನಿಂತೂ ಅಂದ್ರ ಪ್ರಸಾದಾ.... ನೆಲಿಸಿ ನಿಂತುದ್ದು ಉಸುರು ಪರಿ ಮಳಾ ಮಾಡಿ ಜೀವಾಳ ಶಿವಾಳ ಮಾಡ್ತೂ ಅಂದ್ರ ಪ್ರಾಣಲಿಂಗಿ.... ಸಿದ್ಧ ಸ್ಥಿತಿ ಬಂತೂ ಅಂದ್ರ ಶರಣಾ...'

'ಇನ್ನ ಐಕ್ಯಾ?'

'ಐಕ್ಯಂದ್ರ ತುಂಬಿದ ಕೊಡಾ ತುಳ್ಕಿದಂಗ.... ಕೊಡಾ ತುಂಬೀದ್ರ ಶರಣಾ.... ಕೊಡಾ ತುಳುಕಿ ಹೋದ್ರ ಐಕ್ಯಾ.... ಲಿಂಗೈಕ್ಯಾ....'

'ಯಾವುದು ಶ್ರೇಷ್ಟಾ ಬುದ್ಧಿ....'

'ಎಲ್ಲಾನೂ ಒಂದಪಾ.... ಎಲ್ಲಾನೂ ಒಂದ.... ಆದ್ರ ಲೌಕಿಕಕ್ಕ ಭಕ್ತಿ ಶ್ರೇಷ್ಟಾ.... ಪಾರಮಾರ್ಥಕ್ಕ ಜ್ಞಾನ ಶ್ರೇಷ್ಟಾ.... ಲೋಕಾ ಪರಮಾತ್ಮಾ ಕೂಡಿ ಬಾಳೂ ಶರಣಸ್ಥಲಕ್ಕ ಭಕ್ತಿ ಜ್ಞಾನ ಶ್ರೇಷ್ಟಾ....'

'ಶಿವಶಿವಾ.... ಶಿವಶಿವಾ....'

'ಭಕ್ತಿಜ್ಞಾನದ ಯಾಡೂ ಹಿರೇಹೊಳಿಗೋಳು ಲಿಂಗದಾಗ ಸಂಗಮಾ ಆದ್ವಾ ಅಂದ್ರ.... ಅದs ಶಿವಯೋಗಾ.... ಅದs ಶಿವಾನುಭವಾ... ಅದs ಶರಣಸ್ಥಿತಿ....'

'ಜಂಗಮಂದ್ರ?'

'ಆ ಸ್ಥಿತಿ ಮುಟ್ಟಿ.... ಲೋಕಕ್ಕ ಬೆಳಕಾದಾವಾ ಜಂಗಮಾ....'

'ಗುರು ಅಂದ್ರ?'

'ಗುರುವೇ ಜಂಗಮ.... ಜಂಗಮವೇ ಲಿಂಗ....'

'ಶಿವಶಿವಾ ... ಶಿವಶಿವಾ ...'

'ಗುರು ಜ್ಞಾನಕ್ಕ ದೀಪಾ....ಜಂಗಮಾ ಅನುಭವಕ್ಕ ದೀಪಾ....'

'ತಿಳೀಲಿಲ್ರಿ....'

'ತಿಳ್ಯಾಕ ಇದು ಗಣೀತ ಅಲ್ಲಪಾ.... ಸುಮ್ನ ಶಿವಾ ಅಂದು ಕೈ ಮುಗುದು ಬಾಳೂದು ಕಲಿ... ಆಗ ಒಂದೊಂದ ಬಾಗಲದಾಗಿಂದ ಒಂದೊಂದ ಬೆಳಕ ಮೂಡಿ ಬರತೈತಿ.... ನಿನ್ನ ಎಲ್ಲೆ ಒಯ್ಯಬೇಕೊ ಅಲ್ಲೆ ಒಯ್ಯಿತೈತಿ '

ಈಗ ಸಿದ್ಧಪರ್ವತದ ಭೈರವರುದ್ರ ಉದ್ಗಾರವೆತ್ತಿದ—

'ಧನ್ಯನಾದೆ ತಂದೆ ... ಧನ್ಯನಾದೆ....'

ಯೋಗಿ ಅವನಿಗೆ ಮತ್ತೆ ಮಾತು ಒಗೆದ—

'ನೋಡಪಾ ಸಿದ್ಧಾ.... ನೀನಂತೂ ಈ ಆಶ್ರಮಕ್ಕ ಬಂದು ತಲೀ ಬೋಳಿಸಿಕೊಂಡಿ.... ಅದ್ರ ಮತ್ತ ಸರೂರಾತ್ರ್ಯಾಗ ಜೋಳಿಗಿ ನೆನಪಾಗಿ ಸುಡಗಾಡಕ್ಕ ನಡದೀಪಾ.... ಹುಷಾರಿ....'

'ಕ್ಷಮಿಸಿ ತಂದೆ.... ಕಾಪಾಲಿ ಪಂಥದ ಹುಚ್ಚು ತಲೆಗೇರಿ ಮಾಡಬಾರದ್ದನ್ನೆಲ್ಲಾ ಮಾಡಿದೆ.... ನಿಮ್ಮ ಪಾದ ನನ್ನ ಉಳಿಸಿತು ... ನಿಮ್ಮ

ಪುಣ್ಯಾ ನನ್ನ ಉಳಿಸಿತು....'

'ನನ್ನ ಪುಣ್ಯಾ ಅಲ್ಲಪಾ ... ಈ ಧೂರ್ತಕರ್ಣ ಮಂತ್ರೀ ಪುಣ್ಯಾ....'

ಎಲ್ಲರೂ ಮತ್ತೆ ಗೊಳ್ಳನೇ ನಕ್ಕರು. ಧೂರ್ತಕರ್ಣ ಈಗ ದೇವಕರ್ಣನಾಗಿ ಗಲ್ಲಗಲ್ಲ ಬಡಿದುಕೊಂಡ!

ರಾಜ ಮೆಲ್ಲನೆ ಮಾತು ಎತ್ತಿದ—

'ಬುದ್ಧೀ.... ಒಂದು ಸಣ್ಣ ಕೆಲಸಕ್ಕ ತಮ್ಮ ದಯಾಬೇಕು....'

ಯೋಗಿಗಳು ಅವನು ಏನು ಕೇಳುತ್ತಾನೆಂಬುದನ್ನು ಮೊದಲೇ ಜ್ಞಾನದೃಷ್ಟಿಯಿಂದ ತಿಳಿದಂತೆ ನಸುನಕ್ಕು ಕೇಳಿದರು—

'ಹಾಂ.... ಹೌದು ಹೌದು.... ಹೇಳಪಾ ಹೇಳು.... ಏನು....'

ಬುದ್ಧೀ.... ತಮ್ಮ ಪಾದಕ್ಕ ಅರ್ಪಿಸಾಕ ಹತ್ತು ಆನಿ ಹತ್ತು ಕುದರಿ ಹತ್ತು ರಥಾ ಹೊನ್ನು ಮುತ್ತು ರತ್ನಾ ತಂದಿದ್ದೆ.... ತಾವು ಅದಕ್ಕ ಮಣ್ಣಂದ್ರಿ....'

'ಕೇಳಪಾ.... ಯಾ ವಸ್ತೂ ಎಲ್ಲಿ ಎದಕ್ಕ ಸಲ್ಲಬೇಕೊ ಅಲ್ಲೀಗೆ ಸಲ್ಲಬೇಕು.... ಕಟ್ಟೀಕಲ್ಲು ಕಟ್ಟೀಗೆ ಸಲ್ಲಬೇಕು.... ಅದು ಪ್ರಜಾಕೋಟಿ ಹಣಾ.... ಪ್ರಜಾ ಅಂದ್ರ ಪ್ರಜಾಲಿಂಗಾ... ಲೋಕಲಿಂಗಾ.... ಜಂಗುವ ಲಿಂಗಾ ಆ ಲಿಂಗಕ್ಕ ಆ ದುಡ್ಡು ಅರ್ಪಣಾ ಮಾಡಪಾ.... ಮತ್ತ ನಿನ ರಾಣಿಗೀಣಿವಾಸಕ್ಕ ಖರ್ಚಮಾಡಿಗೀಡಿ ಮತ್ತ....'

'ಇಲ್ಲ ಬುದ್ಧಿ.... ಇಲ್ಲಾ.... ಅವ್ರ ಕಡೀಕ ಒಂದ್ಸ ಒಂದು ಮಾತು ನಡೀಸಿಕೊಡ್ರಿ....'

'ಏನಪಾ?'

'ಈ ಹತ್ತು ಆನಿಗೋಳು ನಿಮ್ಮ ಮಠಕ್ಕ ಸಲ್ಲಲಿ.... ಇಲ್ಲೆಲ್ಲಾ ಅಡವೀ ತೊಪ್ಲಾ ಸಾಕಷ್ಟ ಐತಿ.... ನಿಮ್ಮ ಆಶ್ರಮಕ್ಕ ಶೋಭಾ

ತರ್ತಾವು....'

'ಆಗ್ಲಿಪಾ ರಾಜಪ್ಪಾ.... ಆ ಹತ್ತು ಆನಿ ನಮ್ಮ ಆಶ್ರಮದಾಗ ಬಿಟ್ಟುಹೋಗು ...'

'ಧನ್ಯನಾದೆ ಬುದ್ಧೀ.... ಧನ್ಯನಾದೆ ತಂದೇ....'

'ಆದ್ರ ಆನಿ ಕಾಯಾಕ ಮಾವುತ್ರು ಬೇಕಲ್ಲಪಾ.... ಹತ್ತ ಆನೀಗೆ ಹತ್ತು ಮಾವೂತ್ರನ್ನ ಬಿಟ್ಟುಹೋಗು...'

'ಆಗ್ಲಿರಿ ಬುದ್ಧೀ.... ಆಗ್ಲಿರಿ ತಂದೇ....'

'ಹೂಂ ನಿಲ್ಲು.... ಆ ಮಾವೂತ್ರಿಗೆ ಅಡಗಿ ಉಡುಗಿ ಮಾಡಾಕ ಅವರ ಹೆಂಡ್ರೂ ಮಕ್ಳುಗಿಕ್ಳು ಎಲ್ಲಾರ್ನೂ ಕಳುಸು....'

ಈಗ ರಾಜ ಉಗುಳು ನುಂಗಿಕೊಳ್ಳುತ್ತ ಹೇಳಿದ—

'ಆಗ್ಲಿರಿ.... ಆಗ್ಲಿರಿ....'

'ಮತ್ತ ಆ ಹೆಂಡ್ರಿಗೆ ಮಕ್ಳಿರ್ತಾವು.... ಅವಕ್ಕ ಹತ್ತ ತೊಟ್ಲಾ ಬಟ್ಲಾ ತಂದು ಈ ನನ್ನ ಆಶ್ರಮದ ಗವೀಸುತ್ತ ಕಟ್ಟಿಬಿಡು.... ನನ್ನ ಕೈಯಾಗ ಹತ್ತದಾರಾ ಜೋಡಿಸಿಕೊಂಡು ... ತೊಟ್ಲಾ ತೂಕ್ಕೊಂತ ಕೂಡ್ರತೇನಿ...'

ಎಲ್ಲರೂ ಗೊಳ್ಳನೇ ನಕ್ಕರು! ರಾಜ ಗಲ್ಲಗಲ್ಲ ಬಡಿದುಕೊಂಡು ತನ್ನ ಅಪರಾಧವನ್ನು ಮನ್ನಿಸಲು ಪ್ರಾರ್ಥಿಸಿದ!!

ಈಗ ಮುನಿಗಳ ದೃಷ್ಟಿ ವಿಶ್ವೇಶ್ವರ ರಾಜಕುಮಾರನ ಮಡದಿ ರಾಜರಾಜೇಶ್ವರಿ ರಾಣಿ ಮಾದೇವಿಯ ಬಳಿ ಹೋಯಿತು. ಮೆಲ್ಲನೆ ಕೇಳಿದರು—

'ಏನವಾ ಮಾದೇವಕ್ಕಾ.... ಲಗ್ನಾದ ಮ್ಯಾಗ ನನ್ನ ಮರ್ತs ಬಿಟ್ಟೀನವಾ....?'

ಅವಳು ರೋಮರೋಮ ರೋಮಾಂಚಿತಳಾಗಿ ಕೈಮುಗಿದು

ಕಂಬನಿ ಮಿಡಿದು ಹೇಳಿದಳು—

'ಇಲ್ಲ ಅಪ್ಪಾಜಿ.... ಇಲ್ಲ ಅಪ್ಪಾಜಿ....'

'ಹಾಂಗಾದ್ರ ಹಾಡವ್ವಾ.... ಒಂದು ಹೌದಂಬೂ ಹಾಡು ಹೌದಂಬೂವಂಗ ಹಾಡು....'

ಆವಳು ವಿಶ್ವಮಾಯಾಮೋಹಕ ಕಂಠದಲ್ಲಿ ಅನಂತ ಭಕ್ತಿಗಳ ಭಾವಸ್ಫುರಣಗಳನ್ನು ಝೇಂಕೃತಿಗೈದು ಕರುಣಾರಸಭರಿತ ಉತ್ಕಂಠದಿಂದ ಹಾಡತೊಡಗಿದಳು—

ಓ ಯೋಗಿ ಗುರುಸಿದ್ಧ ಹುಚ್ಚೇಶ ವರಸಿದ್ಧ
ನೀನಾರು ಹೇಳಯ್ಯ ಯಾರು ನೀನು
ಯಾವ ಕಲ್ಪದ ಕಾವ್ಯ ಯಾರ ಶಿಲ್ಪದ ಸೇವ್ಯ
ಆರೂಢ ಗತಿಗೂಢ ಹೌದೆಯೇನು

ಓಂಕಾರ ಒಡೆದಾಗ ಚಿಜ್ಞಾನ ಸಿಡಿದಾಗ
ಮೊದಲು ಮೂಡಿದ ಬೆಗಗು ನೀನೆಯೇನು
ಲೋಕಲೋಕದ ಆತ್ಮ ಸತ್ಯಸತ್ಯದ ಆತ್ಮ
ಪುಣ್ಯಾತ್ಮ ಶುದ್ಧಾತ್ಮನೇನು ನೀನು

ಲೋಕಕ್ಕೆ ಹುಚ್ಚಾಗಿ ಹುಚ್ಚರಾ ಎಚ್ಚರಿಸಿ
ಹುಚ್ಚೇಶ ಜಗದೀಶನಾದೆಯೇನು
ಗೂಢಗೂಢದ ಗವಿಯ ಶೂನ್ಯಶೂನ್ಯದ ಛವಿಯು
ಈ ಮಣ್ಣು ಈ ಜಗಕೆ ತಂದೆಯೇನು

ತಾಯಿಯೆಂಬಾ ಶಬ್ದ ನಿನ್ನ ಹೊಟ್ಟೆಯ ಶಬ್ದ
ಜಗತಾಯಿ ಮಹತಾಯಿ ಎನ್ನಲೇನು
ಜಗದ ಸದ್ಗುರು ಮೂರ್ತಿ ಲೋಕಲೋಕದ ಕೀರ್ತಿ
ನೀನೊಬ್ಬನೇಯೆಂದು ಹೇಳಲೇನು

ಓ ಉಘೇ ಉಜ್ಜೈನೀಶ ಓ ಉಘೇ ಗುರುಸಿದ್ಧ
ಹೂಬಳ್ಳಿ ಪುರಪುಣ್ಯ ತೋರಿಬಾರಾ
ಉಘೆಯುಘೇ ಘನಲಿಂಗ ಉಘೆಯುಘೇ ಘನಸಂಗ
ಜಗದ ಜಗದ್ಗುರು ತಂದೆ ಬೆಳಗಿಬಾರಾ

ಹಾಡು ನಿಂತಿತು. ಭಾವ ನಿಂತಿತು. ಗಾಳಿ ನಿಂತಿತು. ಉಸಿರು ಪರಿಮಳ ಸುರಿದು ಹುಚ್ಚಯೋಗಿ ಅಕ್ಕರತೆಯಿಂದ ಹೇಳಿದ—

'ನೋಡವಾ ತಂಗಿ.... ನಾ ಯಾರು ಅಂತ ನೀ ಕೇಳ್ತೀದಿ.... ನೀ ಯಾರು ಅಂತ ನಾ ಕೇಳ್ತೇನಿ.... ನನಗ ನೀ ಉತ್ರಾ.... ನಿನಗ ನಾ ಉತ್ರಾ....'

'ಅಂದ್ರ ಬುದ್ಧಿ?'

'ಈ ಉತ್ರಾ ತಿಳಿದಷ್ಟೂ ಭಗವಂತ ಹತ್ರಾ....'

ಯೋಗಿ ಗಹಗಹಿಸಿ ನಗತೊಡಗಿದ! ಯೋಗಿಯ ಅರ್ಥ ತಿಳಿಯದಿದ್ದರೂ ಭಾವ ಹೊಳೆದು ಎಲ್ಲರೂ ನಕ್ಕರು!!

ಮಾದೇವಿಯ ಗಾನವೇ ಮಹಾಮಂಗಳ ಹಾಡಿತು!!!

೭

ಮಾದೇವಿ ಇಂದು ಹೊರಟಿದ್ದಾಳೆ ಪತಿಗೃಹಕ್ಕೆ. ಹೂಬಳ್ಳಿ ಗ್ರಾಮವೇ ಆವಳನ್ನು ಬೀಳ್ಕೊಡಲು ಗವಿಯ ಗುರುಸಿದ್ಧಯೋಗಿಯ ಬಾಗಿಲಿಗೆ ಬಂದಿದೆ.

ತಂದೆ ಶರಣಶಿವಪ್ಪ ಮುದ್ದುಮಗಳನ್ನು ಕಳಿಸಿಕೊಡಲು ಸಾಧ್ಯವಾಗದೆ ನೆಲಕ್ಕೆ ಕಣ್ಣೀರಿನ ಅಭಿಷೇಕ ಮಾಡುತ್ತಿದ್ದಾನೆ. ತಾಯಿ ಇಲ್ಲದ ತಬ್ಬಲಿಮಗಳು. ಆದಿನ ದ್ಯಾಮವ್ವಿ! ಗುರುವಿನ ಅನುಗ್ರಹದಿಂದ ಮಾದೇವಿಯಾದಳು!! ಈಗ ಅದೇ ಸದ್ಗುರುವಿನ ಮಹಾಕೃಪೆಯಿಂದ ರಾಜರಾಜೇಶ್ವರಿ ಮಹಾದೇವಿಯಾಗಿದ್ದಾಳೆ!!!

ಆದಿನ ಪುಟ್ಟ ಹೆಣ್ಣು ಚಿಗರೆ! ಇಂದು ಈ ಋಷ್ಯಾಶ್ರಮದ 'ಮಾಯಾ' ಹರಿಣಿ!! ಈಗ ಈ ಚಿಗರೆಗೆ ಸಂಗಾ ನಿಸ್ಸಂಗಾ ಎಂಬ ಎರಡು ಬೆಳೆದ ಮಕ್ಕಳು. ತಾಯಿ ಹರಿಣಿ ಹಾಗೂ ಎರಡೂ ಮಕ್ಕಳು ಹುಲ್ಲನ್ನು ತಿನ್ನದೆ ನೀರ್ಗುಡಿಯದೆ ವನದೇವಿ ಮಾದೇವಿಯನ್ನು ಪತಿಗೃಹಕ್ಕೆ ಬೀಳ್ಕೊಡಲು ಸಿದ್ಧವಾಗಿವೆ. ಪ್ರಾಣಿಗಳಾದರೂ ಕಣ್ಣಲ್ಲಿ ಕಣ್ಣೀರು. ಮಾನವತೆಯ ಅಭಿಷೇಕ. ಇಂದಿನ ಮಾದೇವಿ ಈ ವನಕುಟೀರದಲ್ಲಿ ನಾಳೆ ಇಲ್ಲ. ಮಹಾರಾಜನ ಅಂತಃಪುರಕ್ಕೆ ರಾಣಿಯಾಗಿ ಸಾಗಲಿದ್ದಾಳೆ. ಹುಚ್ಚ ಗುರು ಸಿದ್ಧೇಶ್ವರನ ಈ ಪರ್ಣವರ್ಣಶಾಲೆ, ಚಿತ್ರಚೈತ್ರವನ, ಆತ್ಮಾನಂದ ಸದೃಶ ಸರೋವರಗಳೆಲ್ಲ ಶೋಕಿಸುತ್ತವೆ. ಕಂಬನಿ ಸುರಿಸುತ್ತಿವೆ. ಓ ಶಿವಶಿವಾ! ಆನಂದ ಅಳುತ್ತಿದೆ!! ಶಿವಯೋಗ ವಿಯೋಗವನ್ನು ಅನುಭವಿಸುತ್ತಿದೆ!!!

ಆದರೆ ಯೋಗಿ ಎಲ್ಲಿ? ಶಿವಯೋಗಿ ಎಲ್ಲಿ?

. ಮಹಾಮಂಡಳೇಶ್ವರ ತ್ರಿಲೋಕಪಾಲ, ಮಂತ್ರಿಧೂರ್ತಕರ್ಣ' ರಾಜಕುಮಾರ ವಿಘ್ನೇಶ್ವರ, ಮಡದಿ ಮಾದೇವಿ ಸೆರಗೊಡ್ಡಿ ಗವಿಯ ಬಾಗಿಲಿಗೆ ಪ್ರಾರ್ಥಿಸುತ್ತ ನಿಂತಿದ್ದಾರೆ. ಪ್ರಯಾಣದ ಅವಸರಕ್ಕಾಗಿ ಆನೆಗಳು ಬೃಂಹಿಸುತ್ತಿವೆ. ಕುದುರೆಗಳು ಹೇಂಕರಿಸುತ್ತಿವೆ. ರಥಗಳು ಓಡಲೆಂದು ತರವರಿಸುತ್ತಿವೆ. ಆದರೆ ಯೋಗಿ ಬರಲಿಲ್ಲ! ಶಿವಯೋಗಿ ಬರಲಿಲ್ಲ!!

ಹೂಬಳ್ಳಿಯ ರುದ್ರಪ್ಪಶಟ್ಟರ ಚಿಕ್ಕ ಹೆಂಡತಿ ಪ್ರಭಾವತಿ ನತ್ತು ಬೆವರಿ ಅತ್ತು, ಕೈತುಂಬ ಕಳಸಕನ್ನಡಿ ಹಿಡಿದು, ತುಂಬಿದ ಸೆರಗಿನಲ್ಲಿ ಗವಿಯ ಬಾಗಿಲಿಗೆ ಬಾಗಿ ನಿಂತಿನ್ದ್ದಾಳೆ. ರುದ್ರಪ್ಪಶಟ್ಟರು ಶಿವಮನೆತನ ದಲ್ಲಿ ಮಗುತನತುಂಬಿ ಕಂದವ್ಮರಾಗಿ ನಿಂತಿದ್ದಾರೆ.

ಮಹಾಮಂಡಲೇಶ್ವರ ತ್ರಿಲೋಕಪಾಲರು ರುದ್ರಪ್ಪಶಟ್ಟರಿಗೆ ಹೇಳಿದರು—

'ಶಟ್ಟರೇ.... ನಾವು ನಮ್ಮ ರಾಜೈಶ್ವರ್ಯವನ್ನು ಶಿವಯೋಗಿ ಗಳಿಗೆ ಅರ್ಪಿಸಲೆಂದು ಕೇಳಿದರೆ ಅವರು ಮಣ್ಣು ಎಂದು ತಳ್ಳಿ ಬಿಟ್ಟರು.... ನನ್ನ ಅಹಂಕಾರ ದೂರ ಮಾಡಿದರು ...'

'ಹೌದು ಪ್ರಭು ..'

'ನೋಡಿ ಶಟ್ಟರೆ.... ನನ್ನ ಖಜಾನಿ ಇನ್ನು ನನ್ನ ಖಜಾನಿ ಅಲ್ಲ. ಶಿವನ ಖಜಾನಿ.... ಶಿವಭಕ್ತರ ಖಜಾನಿ.... ವಿಲಾಸಕ್ಕೆ ವೆಚ್ಚ ವಾಗುವ ನನ್ನ ಮೇಲಾದಾಯವನ್ನೆಲ್ಲ ನಿಮ್ಮಲ್ಲಿಗೆ ಕಳಿಸುತ್ತೇನೆ....'

'ಆದರೆ... ಇವರು?'

'ಅದನ್ನೇ ನಾವು ಹೇಳುವದು... ಶಿವಯೋಗಿಗಳ ದರ್ಶನಕ್ಕೆ ಬರುವ ಯಾಥ್ರಾರ್ಥಿಗಳಿಗೆ ಅರವಟಿಗೆ-ಪ್ರಸಾದಛತ್ರ- ವಸತಿ ಕೆರೆಕಟ್ಟೆ-ಬಾವಿ-ವಿದ್ಯಾಶಾಲೆ-ತಾಳೋಲೆಗಳ ಅಭ್ಯಾಸಕ್ಕೆಂದು ಒಂದು ಓಲೆಮಠ-ಇನ್ನೊಂದು ವಿಶಾಲವಾದ ಭವ್ಯವಾದ ಅನುಭವ ಮಂಟಪ ಹೀಗೆ ನಿಮಗೆ ಹೇಗೆ ಸರಿಕಾಣುತ್ತೋ ಹಾಗೆ ಕಟ್ಟಿಸುತ್ತ ಹೋಗಿರಿ.... ನಾವು ಧನ ಸಹಾಯ ಕಳಿಸುತ್ತ ಹೋಗುತ್ತೇವೆ...'

'ಆಗಲಿ.... ಆಗಲಿ.... ಈ ಆಶ್ರಮದ ಸರೋವರಕ್ಕೆ ಸ್ನಾನಕಟ್ಟೆ, ಹೆಚ್ಚಿನ ಕುಟೀರಗಳ ನಿರ್ಮಾಣ ನನ್ನ ಪಾಲಿನ ಸೇವೆಗೆ ಬಿಡಿರಿ....'

'ಆಗಲಿ ಶಿವಯೋಗಿಯ ಸೇವೆಗೆ ಯಾವಯಾವ ಕಾಲಕ್ಕೆ ಯಾರ

ಯಾರ ಹಣ ಸಲ್ಲುವ ಪುಣ್ಯ ಮಾಡಿದೆಯೋ ಅದು ಸಲ್ಲಲಿ.... ಸದುಪ. ಯೋಗವಾಗಲಿ ....'

ಯೋಗಿ ಬರಲಿಲ್ಲ! ಶಿವಯೋಗಿ ಬರಲಿಲ್ಲ!!

ಮಾದೇವಿ ಸ್ವಯಂ ತಾನೇ ಗವಿಗುಂಡದಲ್ಲಿ ಇಳಿದು ಹೋಗಲು ನಿರ್ಧರಿಸಿದಳು. ಅವಳ ಮಾವ ಮಹಾಮಂಡಳೇಶ್ವರ ತ್ರಿಲೋಕಪಾಲನೂ ಅವಳ ಹಿಂದೆಯೇ ಸಾಗಿದ. ಇಬ್ಬರೂ ಗವಿಯಲ್ಲಿಳಿದರು. ಕತ್ತಲೆ ಕಂಡರು. ಕೆಲಕಾಲದಲ್ಲಿಯೇ ಕಾಲುಕಾಲಲ್ಲಿಯೇ ಸರ್ಪಗಳು ತೊಡರಿಕ್ಕಿ ಭಸುಗುಡುತ್ತ ಮೈಮೇಲೆ ಏರಿದವು. ಕಣ್ಣಾಪ್ಪಡಿಗಳು ಕಣ್ಣಿಗೆ ಅಪ್ಪಳಿಸಿದವು. 'ಶಿವಶಿವಾ.... ನನ್ನಿಂದ ಸಾಧ್ಯವಿಲ್ಲ ... ಸಾಧ್ಯವಿಲ್ಲ....'ವೆನ್ನುತ್ತ ರಾಜತ್ರಿಲೋಕಪಾಲ ಸತ್ತೇನೆಂಬ ಕಬರಿಲ್ಲದೆ ಕಲ್ಲುಕಲ್ಲಿಗೆ ದಢಾರನೆ ಹಾಮು ಹೊರಬಂದ. ಇದನ್ನು ಕಂಡ ದೂರ್ತಕರ್ಣ ಮಂತ್ರಿ ಭೈರವರುದ್ರ ಕಪಾಲಿಗೆ ಹೇಳಿದ—

'ಭೈರವರುದ್ರಾ.... ನೀ ಹೋಗಸಾ.... ಒಳಗ ಸಣ್ಣಬಾಲಿ ಹೋಗ್ಯೈತಿ.... ಆಸರಕ್ಕ ನೀ ಹೋಗು.... ನಿನಗ ಆಗದಿದ್ರ ನಾ ಹೋಗತೇನಂತ....'

ಭೈರವರುದ್ರ.... 'ಆಗಲಿ....' ಎಂದು ಒಳಗೆ ಹೊಕ್ಕ. ಆದರೇನು.... ಸರ್ಪವೊಂದನ್ನು ಹೆಗಲಲ್ಲಿ ಕುಳ್ಳಿರಿಸಿಕೊಂಡು ಹೊರಗೆ ಬಂದು ಹೇಳಿದ—

'ಮಂತ್ರಿಗಳೆ.... ನನಗೆ ಸಾಧ್ಯವಿಲ್ಲ.... ಅಲ್ಲಿ ಸರ್ಪಕಾವಲಿದೆ.... ಇಗೋ ಸುತ್ತು ಹಾಕಿದ ಸರ್ಪ.... ಇನ್ನು ಬಂತು ನಿಮ್ಮ ಸರದಿ.... ಹೋಗಿ ಬನ್ನಿ....'

ಮಂತ್ರಿ ಗಡಗಡ ನಡುಗುತ್ತ ನಿಂತುಬಿಟ್ಟ! ಭೈರವರುದ್ರನನ್ನು ಸುತ್ತು ಹಾಕಿದ ಸರ್ಪ ಮೆಲ್ಲನೆ ಇಳಿದು ಮತ್ತೆ ಗವಿಯ ಗುಂಡಕ್ಕೆ ಸುಳಿದುಹೋಯಿತು!!

ಗವಿಯಾಳದ ಗವಿಯಲ್ಲಿ ಇಳಿದು ಮಾದೇವಿ ಪ್ರಗಾಢ ಕತ್ತಲೆಯಲ್ಲಿ ಕಲ್ಪಡಿಯ ಹಾವುಗಳನ್ನು ಲೆಕ್ಕಿಸದೆ ಗೂಢಗವಿಯ ಬಳಿಗೆ ಬಂದಳು. ಒಳಗೆ ನಂದಾದೀಪ. ಅನಂತ ಆನಂದ. ಓಂಕಾರ. ನಿರಾಕಾರದ ಶೂನ್ಯಾವತಾರ. ಸಮಾಧಿಸ್ಥಿತಿ. ಕಣ್ತೆರೆದರೆ ಕೈವಲ್ಯ. ಕಣ್ಮುಚ್ಚಿದರೆ ಕೈಲಾಸ. ಉಸಿರು ಪರಿಮಳ. ಗಾಳಿ ಓಂಕಾರ.

ಮಾದೇವಿ ಆ ಗುಪ್ತಗವಿಯ ಬಾಗಿಲಿಗೆ ಬಂದು ಕೈಮುಗಿದು ನೋಡುತ್ತಾಳೆ.... ಬರೀ ಬೆಳಗು.... ಬಚ್ಚಬರಿಯ ಅಚ್ಚಪ್ರಕಾಶ....! ಎಲ್ಲಿಯ ಶಿವಯೋಗಿ? ಎಲ್ಲಿಯ ಹುಚ್ಚಯೋಗಿ? ಕೇವಲ ಬೆಳಗು! ಬೆಳಗಿನೊಳಗಿನ ಮಹಾಬೆಳಗು!!

ಇದು ಕನಸೊ ನನಸೊ ಎಂದು ಕಣ್ಣು ಬಡಿದು ನೋಡಿದಳು. ಒಮ್ಮೆ ಇನ್ನೊಮ್ಮೆ ನೋಡಿದಳು. ಶಿವಶಿವಾ.... ಕೇವಲ ನಿರಾಕಾರ! ಹುಚ್ಚನನ್ನು ನುಂಗಿದ ಬಚ್ಚಬರಿಯ ಬೆಳಗು!!

ಮಾದೇವಿ ಮುಗ್ಧಭಾವದಿಂದ ಕಣ್ಮುಚ್ಚಿ ಕಂಬನಿಗರೆದು ಹೊಸ್ತಿಲಿಗೆ ಹಣೆಹಚ್ಚಿ ಪ್ರಾರ್ಥಿಸಿದಳು—

'ದಯೆದೋರು ಅಪ್ಪಯ್ಯಾ.... ಕರುಣೆಗೈ ನನ್ನಯ್ಯಾ.... ನಿನ್ನ ಮುದ್ದುಮಗಳು ನಾನು.... ನೀ ಸಾಕಿದ ಶಿಸು.... ನಿನ್ನಾಶ್ರಮದ ಕಂದವ್ವ.... ಕಳಿಸಿಕೊಡು ತಂದೆ.... ನನ್ನವರು ಕರೆಯಬಂದಿದ್ದಾರೆ... ರಥಹೂಡಿ ಕೈಚಾಚಿ ನಿಂತಿದ್ದಾರೆ.... ಕಳಿಸಿಕೊಡು ನನ್ನಯ್ಯಾ.... ಕಳಿಸಿಕೊಡು ಅಪ್ಪಯ್ಯಾ....'

ಕಂಬನಿಗಳನ್ನು ಮಳೆಗರೆದು ಸುರಿಸುತ್ತ ಎದೆತುಂಬಿ ಬಿಕ್ಕಿಬಿಕ್ಕಿ ಅಳುತ್ತ ಮಾದೇವಿ ತಲೆಯೆತ್ತಿ ನೋಡಿದಳು. ಕಣ್ಣೀರಿನ ಮಂಜುಮಂಜಿನಲ್ಲಿ ಅಗೋ ಕಂಡರು ಶಿವಯೋಗಿಗಳು! ಹಾ.... ಎಂದು ಕಣ್ಣು ತಿಕ್ಕಿ ಬಟ್ಟಲಗಣ್ಣು ಮಾಡಿ ಮಾದೇವಿ ನೋಡಿದಳು. ಶಿವಯೋಗಿ! ಹುಚ್ಚ ಶಿವಯೋಗಿ!! ಕೈಯಲ್ಲಿ ಸುಂದರ ಶಿವಲಿಂಗ. ಧ್ಯಾನಮಗ್ನ. ಸಮಾಧಿ

ಮಗ್ನ. ಯೋಗಶಿಖರದಿಂದ ಮೆಲ್ಲನೆ ಇಳಿದುಬಂದು ಹೇಳಿದರು—

‘ಮಗಳೆ.... ನಾನು ಯೋಗಿ.... ನಾನು ವಿರಕ್ತ.... ನನ್ನನ್ನು ನಿನ್ನ ಮಗುತನದ ಕರುಳ ಬಳ್ಳಿಯಿಂದ ಬಂಧಿಸದಿರು ಮಗಳೆ....’

‘ಅಪ್ಪಾಜಿ.... ಮಗಳೇ ಎಂದು ನೀವೇ ಕರೆದಿರಲ್ಲ.... ನಿಮ್ಮ ಮಗಳು ನಾನು.... ಹುಚ್ಚು ಮಗಳು.... ಅವರು ಕರೆಯಬಂದಿದ್ದಾರೆ.... ಕಳಿಸಿಕೊಡು ಅಪ್ಪಾಜಿ....’

‘ಮಗು.... ನಿನ್ನ ಮಗುತನದ ಎಳೆಯ ವಾತ್ಸಲ್ಯ ನನ್ನನ್ನು ಬಂಧಿಸಬಾರದೆಂದು ನಾನು ಅಂಜಿ ಯೋಗ ಸಮಾಧಿಯಲ್ಲಿ ಏರಿ ಹೋಗಿದ್ದೆ .... ಆದರೆ ನಿನ್ನ ಕರುಳಿನ ಕಕ್ಕುಲಾತಿ ತುಂಬಿದ ಗಾಢಭಕ್ತಿ ನನ್ನನ್ನು ಎಳೆದು ತಂದಿತು ಮಗಳೆ.... ಯೋಗ ಶಿಖರದಿಂದ ಕರೆದು ತಂದಿತು....’

‘ಅಪ್ಪಾಜಿ....’

‘ಹೋಗಿ ಬಾ ಮಗಳೆ...’

‘ನಿಮ್ಮನ್ನು ಬಿಟ್ಟು ಹೋಗಲೆ.... ನಿಮ್ಮ ಆಶ್ರಮವನ್ನು ಬಿಟ್ಟು ಹೋಗಲೆ?’

‘ಹೌದು ಮಗು.... ಹೌದು ಕಂದಾ.... ಪುರುಷನಿಗೆ ಒಂದು ಆಶ್ರಮ.... ಸ್ತ್ರೀಗೆ ಎರಡು ಆಶ್ರಮ....’

‘ನನ್ನನ್ನು ಹೊರಳಿ ನಿಮ್ಮ ಆಶ್ರಮದ ತವರಿಗೆ ಎಂದು ಕರೆಸಿ ಕೊಳ್ಳುತ್ತೀರಿ?’

‘ಕ್ಷಮಿಸು ಕಂದವ್ವಾ.... ನಾನು ನಿನಗೆ ಅಪ್ಪಾಜಿಯಾದರೂ.... ನೀನು ನನಗೆ ಮಗಳೆಂದು ಹೇಗೆ ಹೇಳಲಿ....’

‘ಹಾಗೆ ಅನ್ನಬೇಡಿರಿ ತಂದೆ...’

‘ಹೌದು ಮಗಳೆ.... ನಾನು ವಿರಕ್ತ.... ಯೋಗಿ.... ಲೋಕದ ಕಂಬನಿ ಕರುಳು ಕಕ್ಕುಲಾತಿಗಳಿಗೆ ಬಲಿ ಬೀಳಲಾರೆ....ನಾನಿರುವದು ದೂರ

ದೂರ.... ಬಹುದೂರ ... ಇಲ್ಲಿಂದಲೇ ಹೋಗಿಬಾರೆಂದು ಹೇಳುವೆ.... ಹೋಗಿ ಬಾ ಕಂದಾ.... ಹೋಗಿ ಬಾ ನನ್ನವ್ವಾ....'

'ನಿಮ್ಮ ಕರುಣೆಯು ಕಣ್ಣಲ್ಲಿ ಕೋಟಿಕೋಟಿ ಸಂಸಾರಗಳು ಉದ್ಧಾರವಾಗಲಿ ತಂದೆ.... ನಿಮ್ಮ ತಾಯ್ತನದ ಅನುಗ್ರಹದಲ್ಲಿ ನನ್ನಂಥ ಕೋಟಿ ಕಂದವ್ವೆಗಳು ಪತಿಗೃಹದಲ್ಲಿ ಸುಖವಾಗಿ ಬಾಳಲಿ'

'ಆಗಲಿ ಮಗು.... ಕಷ್ಟದಲ್ಲಿ ನನ್ನನ್ನು ಕೂಗಿದವರ ಬಳಿಯಲ್ಲಿಯೇ ನಾನಿರುತ್ತೇನೆ.... ಬಾಳಿನ ಸಂಕಟದಲ್ಲಿ ನನ್ನನ್ನು ನೆನೆಸಿ ಎರಡು ಹನಿ ಕಣ್ಣೀರು ಸುರಿಸಿದವರ ಪಕ್ಕದಲ್ಲಿಯೇ ನಾನಿರುತ್ತೇನೆ.

'ಇದು ಸತ್ಯವೇ....?'

'ಸತ್ಯದಾಣೆಯಾಗಿಯೂ ಸತ್ಯ.... ಹೋಗಿ ಬಾ ಮಗಳೆ....'

'ಹೋಗಿಬರುತ್ತೇನೆ' ಎಂದು ಮಾದೇವಿ ಹೇಳಹೋದಳು. ಶಬ್ದ ಬರಲಿಲ್ಲ. ಕಂಠಬಿಗಿದು ಅತ್ತುಬಿಟ್ಟಳು. ಶಿವಯೋಗಿ ಮತ್ತೆ ನಿರಂಜನ ನಿರ್ಲೇಪ ನಿರ್ಗುಣ ನೀರವ ಮಹಾಸಮಾಧಿಯಲ್ಲಿ ಕಣ್ಮುಚ್ಚಿ ಧ್ಯಾನಾಸಕ್ತನಾಗಿ ಕುಳಿತುಬಿಟ್ಟ. ಮಗಳು ... ಅಪ್ಪಾಜೀ.... ಎಂದು ಹಾಲ್ಗೂಸು ಹಸುಗೂಸಿನಂತೆ ಅಳುತ್ತ ಮೇಲೆದ್ದಳು. ಗವಿಯ ಧೂಳನ್ನು ಹಣೆಗೆ ಒತ್ತಿಕೊಂಡು.... ಶಿವಾ.... ಎಂದು ನಡೆದಳು!

೮

ಉಳಿವೆಯ ಅರಣ್ಯಪ್ರಾಂತದಿಂದ ಸಾಗಿಬರುತ್ತಿದೆ ಶರಣರ ತಂಡ. ಅಗಾಧವಾದ ಗುಡ್ಡಗಳು. ದಟ್ಟ ಕಾಡಾರಣ್ಯ. ಆನೆ ಸಿಂಹ ಹುಲಿ ಚಿರ್ಚ ಕಾಡಹಂದಿ ಕರಡಿ ಕಾಡುಪ್ರಾಣಿಗಳು ಚಿಣಿಪಣಿ-ಗುಂಡ-ಬಗರಿ-ಬಗಾಟಬಗರಿ ಆಡಿದಂತೆ ನಕ್ಕು ನಲಿದಾಡುತ್ತಿವೆ. ಒಂದನ್ನೊಂದು ತಿಂದು

ತೇಗುವದಂತೂ ನಡದೇ ಇದೆ. ಈ ಮಹಾಕ್ರೌರ್ಯ ಪ್ರಪಂಚಕ್ಕೆ ಶಾಂತಿಯ ಸಂದೇಶ ಸಾರಿ ಸೌಂದರ್ಯದ ಸ್ವರ್ಗೀಯ ಬಾಗಿಲು ತೆರೆದು ತೋರುತ್ತಿವೆ ಗಗನದ ಗಾನತಪಸ್ವಿಗಳಾದ ಪಕ್ಷಿಗಳು. ಕಾಡಿನ ಮಧ್ಯ ಪ್ರಾಚೀನ ದಾರಿ. ದಾರಿಗುಂಟ ಕಂಟಲಿದನಗಳ ಮೇಲೆ ಪೂಜಾಸಾಮಗ್ರಿ ಗಳನ್ನು ಹೇರಿಕೊಂಡು ಸಾಗಿ ಬರುತ್ತಿದೆ ಒಂದು ಅಪೂರ್ವ ತೇಜೋಮಯ ಪುಣ್ಯಾತ್ಮರಾದ ಶರಣರ ಸಂಘ! ಕಾಡಿನ ಭಯಂಕರ ಭೀತಿಯನ್ನು ತಳ್ಳಿ ಬರುತ್ತಿದ್ದಾರೆ.... ಇಗೋ .. ಈ ಶರಣಶರಣೆಯರು.... ಭಕ್ತಿಯ ಹಾಡು ಗಳನ್ನು ಒಕ್ಕೊರಲಿಂದ ಹಾಡುತ್ತ—

ಗುಡ್ಡವೇರಿ ಕಣಿವೆ ಇಳಿದು ಬಂದೆವಯ್ಯ ನಾವು
ಬರ್‍ವಲಿಲ್ಲ ಕಲ್ಯಾಣಾ
ಕಡಲಗುಂಟ ತೆಂಗು ತೇಗು ಕೌಂಗು ಬಿದಿರು ದಾಟಿ
ಬರ್‍ವಲಿಲ್ಲ ಕಲ್ಯಾಣಾ||

ಬಸವ ತಂದೆ ತಾಯಿ ನೀಲಾದೇವಿ ಗಂಗೆಮಾಯಿ
ನೆನೆದು ನೆಗ್ಗಿ ಹೋದೆವೋ
ಚನ್ನಬಸವ ಶರಣ ಸಿದ್ಧರಾಮ ಅಕ್ಕತಾಯಿ
ಬಯಸಿ ಸುಗ್ಗಿಯಾದೆವೋ||

ಕಲ್ಲು ಕಂಟೆ ಮುಳ್ಳು, ಹೆಂಟೆ ಕೊಳ್ಳ, ಕಂಬಿ ಹಾದು
ಬರ್‍ವ ಲಿಲ್ಲ ಕಲ್ಯಾಣಾ।
ಹುಲ್ಲಿಚಿರ್ಚ ಕಾಡುಕೋಣ ಹಾವು ಹುತ್ತಕಂಡು
ಬರ್‍ವಲಿಲ್ಲ ಕಲ್ಯಾಣಾ ||

ಗುರುವೆ ಲಿಂಗ ಲಿಂಗ ಸಂಗ ಶರಣರಾತ್ಮ ದೀಪ
ಚಾಂಗು ಭಲಾ ಭೋಪರೋ
ಜೀವ ದೇವ ದೇವ ಜೀವ ಬಯಲು ಬೆಳಕು ಭಾಗ್ಯ
ಚಾಂಗು ಭಲಾ ಭೋಪರೋ||

ಕಾಡು ಪ್ರತಿಸ್ಪಂದಿಸುತ್ತಿದೆ. ಗುಡ್ಡಗಳೇ ಹಾಡುತ್ತಿವೆ. ಕಾಡಾನೆ -ಸಿಂಹ-ಹುಲಿಗಳು ಶರಣರ ತಂಡವನ್ನು ಸೀಳಲೆಂದು ಬಂದು ಘೀಳಿ ಘೂರ್ಮಿಸಿ ದೂರ ದೂರ ಸಾಗಿ ಹೋಗುತ್ತಿವೆ. ಪಕ್ಷಿಗಳು ಬಾನಂಚಿನಿಂದ ಮುಗಿಲಂಚಿನವರೆಗೆ ಕಾಶ್ಮೀರ ಪುಚ್ಛದ ಬಣ್ಣದ ಸೇತುವೆ ಕಟ್ಟಿ ಗಾನದ ತೇರನ್ನು ಎಳೆಯುತ್ತಿವೆ. ಓಹೋ.... ಬಂದಿತು.... ಬಂದಿತು.... ಪುಣ್ಯಾತ್ಮ ರಾದ ಶರಣರ ಸಂಘ! ಅಗೋ.... ಕಂಟಲಿದನದ ಮೇಲೆ ಕುಳಿತ ರೂಪಸಿಯೂ ಸುಂದರಿಯೂ ಅಲ್ಲದೆ ವಿರಾಗಿಣಿಯೂ ಶರಣೆಯೂ ಆದ ಆ ಯೌವನದ ಯೋಗಿಣಿ ಹಾಡುತ್ತಿದ್ದಾಳೆ—

ಏನ ಹಾಡಲೇ ಏನ ಹೇಳಲೇ
ಬಂತು ಬಸವ ಭೂಮಿ
ಆಡುತಾಡುತಾ ನೋಡುನೋಡುತಾ
ಹೋತು ಕಲ್ಲು ಭೂಮಿ

ಎದೀ ಹಾಡತೈತಿದೋ ಕೇಳರೇ
ಜನ್ಮ ವ್ಯರ್ಥವಲ್ಲಾ
ಬಸವ ಸಂಗನಾ ನಾಡುಲಿಂಗನಾ
ಜಾಡು ಜೊಳ್ಳು ಅಲ್ಲಾ

ಜಿಂಕಿ ಜಾರ್‍ಯಾವು ಚಿಕ್ಕಿ ಮೂಡ್ಯಾವು
ಬೆಳಕು ಚಂದ್ರ ಬಂತೌ
ಧೂಮ ಕೇತುತಾ ಧೂಮವಾಗ್ಯಾವು
ಸೂರ್ಯ ತೇರು ತಂತೌ

ಕಣ್ಣ ಕಂಬನೀ ಕರುಳಸಿಂಬಿಯಾ
ಹಿಂಡಿ ಕಾರ್ತೊ ರಕ್ತಾ
ಏನೊ ಶಿವಶಿವಾ ಕಳೆದ ಜೀವನಾ
ಕೂಸು ಕೊಂದ ಕಷ್ಟಾ

ನಿಷಾ ಜಾರಿತೌ ಉಷಾ ಹಾಡಿತೌ
ಮೂಡ್ತು ಷುಶುವು ನಾಡಿ
ಪಶೂ ಜೀವನಾ ತಪಾ ನಿಂದಿತೌ
ತೋರ್ತು ಶಿವನ ಬೀದಿ

ಅಹಾ ಬನ್ನಿರೆ ಶಿವಾ ಎನ್ನಿರೆ
ಕಣ್ಣ ನೀರು ಕೊಟ್ಟು
ಎದಿಯ ಆಳದ ಕುದೀ ಜೆಂಕಿಯು
ತಾಯಿ ಶಿವೆಗೆ ಇಟ್ಟು

ಏನ ಚಂದವಾ ಬಸವ ವಚನವಾ
ಅವ್ವ ಎದಿಯು ಹಾರ್ತೌ
ಕಲ್ಲು ಕರಗಿತೌ ಲಿಂಗವಾಯಿತೌ
ಮಣ್ಣು ಭಸಿತವಾಯ್ತೌ

ಶಿವಪೂಜೆ ಸಾಗಿದಂತೆ ಶರಣರ ಸಂಘ ಸಾಗಿತು. ಪ್ರಕೃತಿ ಲಿಂಗದ ಚೈತನ್ಯಪೂಜೆ. ಆನಂದದ ಓಜೆಓಜೆಯ ಮೇಲೆ ಒಟ್ಟಿದ ಆನಂದದ ನಾಗಲಿಂಗಪುಷ್ಪ. ಕೆಲವರು ಚಿಕ್ಕಶರಣರು. ಕೆಲವರು ಮುಪ್ಪಾನ ಮುದುಕರು. ಹರೆಯದವರು. ಸುಂದರರು. ಪುರುಷರು. ಸ್ತ್ರೀಯರು. ಆದರೆ ಭಾವದಲ್ಲಿ ಎಲ್ಲರೂ ಮುಗ್ಧಭಕ್ತಿಯ ದಗ್ಧಕೂಸುಗಳು. ವಯಸ್ಸಿನ ಹಂಗಿಲ್ಲ. ಗಂಡು ಹೆಣ್ತನದ ಸೋಗಿಲ್ಲ. ಬಾಳು ಶಿವಪೂಜೆಯಾದಾಗ ಹೊರವೈಯ ಕುಲಗೋತ್ರವೆಲ್ಲಿ? ಶೀಲಶೂಲವೆಲ್ಲಿ?

* * *

ರಾತ್ರಿಯಾಯಿತು. ಅರಣ್ಯದ ಚಿರ್ಚನ ಕೊಳ್ಳದಲ್ಲಿ ಲಿಂಗಾರ್ಚನೆ-ಪ್ರಸಾದವಾಯಿತು. ದೀವಟಿಗೆಯ ನಾಲ್ವರು ದೂತರು ಕಾವಲು

ನಿಂತರು. ಉಳಿದವರು ನಿದ್ರೆ ಹೋದರು. ಜೀರ್ಜಗಳು ತಮ್ಮಷ್ಟಕ್ಕೆ ತಾವು ಚೀರಾಡಿಹೋದವು. ಇವರು ತಮ್ಮಷ್ಟಕ್ಕೆ ತಾವು ನಿದ್ರೆಹೋದರು. ಮಧ್ಯರಾತ್ರಿ ದಾಟಿದಾಗ ದೀವಟಿಗೆ ಹಿಡಿದವರೂ ನಿದ್ರೆಹೋದರು. ಗಾಢ ನಿದ್ರೆ! ಹುಲಿಗಳು ಬಂದು ಇವರ ಗಲ್ಲ ನೆಕ್ಕಿ ಹೋದರೂ ಎಚ್ಚರವಾಗ ದಂತೆ ದೀವಟಿಗೆಯದೂತರು ನಿದ್ರಾಮುಗ್ನರಾದರು.-ಕೊನೆಕೊನೆಗೆ ದೀವಟಿಗೆ ಗಳೂ ಆರುತ್ತಹೋಗಿ ಕೊನೆಗೆ ಒಂದೇ ಒಂದುದೀವಟಿಗೆ ಉಳಿಯಿತು. ಅದೂ ಗಾಢರಾತ್ರಿಯಲ್ಲಿ ಚಳಿಹತ್ತಿ ಈಗೊ ಆಗೊ ಆರುವ ಸ್ಥಿತಿಯಲ್ಲಿತ್ತು.

ಬಂದಿತು ಒಂದು ಕಾಡಾನೆಗಳ ಹಿಂಡು. ಸೈನ್ಯವೇ ಬಂದಂತೆ ಸಾಗಿ ಬಂದಿತು. ಅವುಗಳಿಗೆ ಇದೊಂದೇ ಒಂದು ದಾರಿ. ಹಾ ಎನ್ನು ವಷ್ಟರಲ್ಲಿ ಎಲ್ಲರೂ ಹೆಣವಾಗುವ ಸ್ಥಿತಿ. ಆನೆಗಳ ಕಾಲಕೆಳಗೆ ಸಿಕ್ಕು ನುಚ್ಚುನುರಿಯಾಗಿ ಸಿಪ್ಪೆಯಾಗುವ ಗಂಡಾಂತರ. ಆದರೆ ಗಾಢನಿದ್ರೆ ಯಲ್ಲಿ ಯಾರು ರಕ್ಷಿಸಬೇಕು. ಆನೆಗಳು ಹಿಂಡುಹಿಂಡಾಗಿ ಪರ್ವತಗಳೇ ಬಂದಂತೆ ಬಂದೇಬಿಟ್ಟವು! ರಾಕ್ಷಸಗಾತ್ರ!! ಸಂಖ್ಯೆಯಲ್ಲಿ ನೂರಾರು!!!

ಇನ್ನೇನು ಈ ಶರಣರೆಲ್ಲಾ ಮಲಗಿದಲ್ಲೇ ಶಿವೈಕ್ಯರಾಗುತ್ತಾರೆಂಬ ಕೊನೆಯ ಸ್ಥಿತಿ ಬಂತು. ಆಕೂಡಲೆ ಒಬ್ಬ ಹುಚ್ಚುಚ್ಚಾಕಾರದ ರುದ್ರ ಯೋಗಿ ಬಾಳೆಯ ತೊಂಗಲು ಕೈಯಲ್ಲಿ ಹಿಡಿದು ಶರಣರಿಗೆಲ್ಲಾ ಮೆಲ್ಲನೆ ಅಪ್ಪಳಿಸುತ್ತ.... ಏಳಿರಿ.... ಏಳಿರಿ.... ಆನೆ ಬಂದವು ಏಳಿರಿ.... ದೊಡ್ಡ ಮರಾ ಏರಿರಿ.... ಗಿಡಾ ಹತ್ತಿರಿ ... ಎಂದು ಚೀರಿದ. ಆತನ ಚೀರುವಿಕೆಗೆ ಆನೆಗಳೂ ನಡುಗಿದವೋ ಏನೊ! ಶರಣರೆಲ್ಲಾ ಎದ್ದರು. ಯೋಗಿ ಚೀರುತ್ತಿದ್ದಾನೆ.—

'ಆನೆಗಳು.... ಆನೆಗಳು .. ಮರಾ ಏರಿರಿ.... ದೊಡ್ಡ ಮರಾ ಏರಿರಿ....'

ಶರಣರು ನಿದ್ರೆಗಣ್ಣಿನಲ್ಲೇ ನೋಡುತ್ತಾರೆ. ಸಮೀಪದಲ್ಲಿ ನಕ್ಷತ್ರದ ಬೆಳಕಿನಲ್ಲಿ ಆನೆಗಳು ಅರಣ್ಯವನ್ನೇ ಹಿಪ್ಪೆ ಮಾಡುತ್ತ ಸಪ್ಪಳ ಮಾಡದೇ ಭೂತಗಳು ಬಂದಂತೆ ಬರುತ್ತಿವೆ. ತಕ್ಷಣವೇ ಶರಣರೆಲ್ಲ 'ಶಿವಾ' ಎಂದು ಚೀರಿದರು! ಶಿವಪೂಜಾ ಗಂಟುಗದಡಿ, ಆಹಾರ ಪದಾರ್ಥ ಎಲ್ಲಾ ಅಲ್ಲೇ ಬಿಟ್ಟು, ಕಣ್ಣಿಗೆ ಕಂಡ ಮರಗಳನ್ನು ಭರಭರಾ ಏರಿದರು. ಅವರು ಏರುತ್ತಿದ್ದಂತೆ ಕೆಲವರು ಶರಣೆಯರೂ ಏರಿದರು. ಆದರೇನು ನಾಲ್ಕೈದು ಕೂಸುಗಳು ಅಲ್ಲೇ ಉಳಿದವು. ಕೂಸು ಸಾಯುತ್ತವೆಂಬ ಸಂಕಟದಿಂದ ಶರಣೆಯರು ನುಗ್ಗಿ ಹೋಗುವಷ್ಟರಲ್ಲಿ ಆನೆಗಳು ಬಂದೇಬಿಟ್ಟವು. ಎಲ್ಲರೂ ಮತ್ತೆ ಮತ್ತೆ 'ಬಸವಾ.... ಬಸವಾ....' ಎಂದು ಚೀರಿದರು. ಆಗ ಆ ಹುಚ್ಚಯೋಗಿ ಆನೆಗಳ ಎದುರಿಗೇ ನುಗ್ಗಿಬಿಟ್ಟ! ಆನೆಯ ಹಿಂಡಿನಲ್ಲೇ ಹೊಕ್ಕ. ಒಬ್ಬ ಶರಣ ಚೀರಿದ—

'ಶಿವಶಿವಾ.... ಆ ಹುಚ್ಚಾ ಸತ್ತಾ.... ಆ ಹುಚ್ಚಾ ಸತ್ತಾ....'

ಶರಣೆಯರು ಚೀರಿದರು—

'ಬಸವಾ.... ಬಸವಣ್ಣಾ.... ಮಕ್ಕಳು.... ಸತ್ತವು.... ಮಕ್ಕಳು ಸತ್ತವು....'

ಮರ–ಗಿಡ–ಕಂಟಿ–ಪೊದರು–ಬಳ್ಳಿ ಲಟಲಟನೆ ಮುರಿದು ಬಿದ್ದವು. ಬಿದಿರಿನ ಮೆಳೆಗಳು ಚಿಪ್ಪಾಡಿಯಾದವು. ಕಣ್ಣು ಕಾಣುತ್ತಿದ್ದಂತೆ ನೂರಾರು ಆನೆಗಳು ಪರ್ವತದಿಂದ ಉರುಳಿಬೀಳುತ್ತಿರುವ ಮಹಾಬಂಡೆಗಳಂತೆ ನುಗ್ಗಿ ನಡೆದವು. ತನ್ನ ಆರು ತಿಂಗಳ ಕೂಸನ್ನು ಕಳೆದುಕೊಂಡ ಶರಣೆಯೊಬ್ಬಳು ಅಬ್ಬರಿಸಿ ಸಂಕಟದಿಂದ ಆನೆಯ ಹಿಂಡಿನಲ್ಲಿ ನುಗ್ಗಿ ಹೋದಳು. ಸಮೀಪದಲ್ಲಿದ್ದ ಇನ್ನೊಬ್ಬ ಶರಣ ಅವಳನ್ನು ಒತ್ತಾಯದಿಂದ ಎಳೆದು ತಂದ.

ಕೆಲಕಾಲದ ನಂತರ ಆನೆಗಳೆಲ್ಲಾ ಹೋದವು! ಶರಣರೆಲ್ಲಾ ಮರಗಳಿಂದ ಮೆಲ್ಲನೆ ಇಳಿದರು. ಸತ್ತ ಮಕ್ಕಳನ್ನು 'ಶಿವಾ....' ಎನ್ನುತ್ತ

ಹುಡುಕಹೋದರು. ಹುಡುಗರು ಎಲ್ಲಿಯೂ ಸಿಗಲಿಲ್ಲ! ನಾಲ್ಕಾರು ಕಂದಮ್ಮಗಳು.... ಒಂದೂ ಸಿಗಲಿಲ್ಲ!! ಆನೆಯ ಕಾಲಿಗೆ ಬುತ್ತಿಯಾಗಿ ಬಿಟ್ಟವೆ!!!

ಶರಣರೆಲ್ಲಾ ಅರಣ್ಯದಲ್ಲಿ ಎದ್ದು ಬಿದ್ದು ಹುಡುಕಿದರು. ದೀವಟಿಗೆ ಹಚ್ಚಬೇಕೆಂದರೆ ಅವೆಲ್ಲಾ ಆನೆಕಾಲಕೆಳಗೆ ಪುಡಿಪುಡಿಯಾಗಿವೆ. ಎಲ್ಲೆಲ್ಲೂ ಮಕ್ಕಳ ಸುಳಿವಿಲ್ಲ! ಆ ಹುಚ್ಚನ ಸುಳಿವಿಲ್ಲ!!

ಬಹುಶಃ ಅವನೂ ಸತ್ತ!?

* * *

ಬೆಳಗಾಯಿತು. ಈಗ ನೋಡುತ್ತಾರೆ ಎಲ್ಲಾ ಗಂಟುಗದಡಿ ಪೂಜ್ಯಾ ವಸ್ತುಗಳು ಚಿಂದಿಗೆ ನೂರು ಚಿಂದಿಯಾಗಿವೆ. ಎಲ್ಲಿ ನೋಡಿದಲ್ಲಿ ಚಲ್ಲಾ ಪಿಲ್ಲಿಯಾಗಿ.... ಇದು ಯಾರ ಬಟ್ಟೆ.... ಇದು ಯಾರ ಬುಟ್ಟಿ ಎಂಬುದು ತಿಳಿಯದಂತಾಗಿದೆ. ಭಸ್ಮದ ಗಟ್ಟಿಗಳೆಲ್ಲಾ ಪುಡಿಯಾಗಿ ಅರಣ್ಯದಲ್ಲಿ ಬೆಳ್ಳಂಬಿಳಿಯಾಗಿ ಸಾರಿಸಿ ಬಿಟ್ಟಿವೆ.

ಆದರೆ ಮಕ್ಕಳೆಲ್ಲಿ?

ದೂರದ ಮರದ ಹತ್ತಿರಕ್ಕೆ ಹೋದ ಇಬ್ಬರು ಒಮ್ಮೆಲೇ ಚೀರಿದರು. ಎಲ್ಲರೂ 'ಶಿವಾ....' ಎಂದು ಒಂದೇ ಏಟಿಗೆ ಓಡಿದರು. ಅಲ್ಲೊಂದು ದೊಡ್ಡ ಮರ. ಮರದಲ್ಲಿ ದೊಡ್ಡದೊಂದು ಹಾಳು ಹೊದರು. ಹೊದರಿನಲ್ಲಿ ರತ್ನಗಂಬಳಿ ಹಾಸಿದ್ದಾರೆ. ಅದರ ಮೇಲೆ ಮಕ್ಕಳೆಲ್ಲಾ ಆನಂದದಿಂದ ಮಲಗಿವೆ!

ಎಲ್ಲರೂ ಕೂಗಿದರು—

'ಶಿವಾ.... ಶಿವಾ.... ಇದು ನಿನ್ನ ಮಹಿಮಾ....'

ಮತ್ತೆ ಕೆಲವರು ಕೂಗಿದರು—

'ಅಲ್ಲಾ.... ಅಲ್ಲಾ.... ಆ ಹುಚ್ಚಾ.... ಆ ಹುಚ್ಚಾ.... ನಿನ್ನೆ ನಮ್ಮನ್ನು ಕೂಗಿ ಎಬ್ಬಿಸಿದನಲ್ಲಾ.... ಅವನ ಮಹಿಮಾ....'

ಶರಣೆಯರು ತಮ್ಮ ಕಂದಮ್ಮಗಳನ್ನು ತಬ್ಬಿಕೊಂಡು ಕೇಳಿದರು—

'ಎಲ್ಲಿ.... ಎಲ್ಲಿ.... ಆ ಹುಚ್ಚಯ್ಯ ಎಲ್ಲಿ?'

ಅದಕ್ಕೆ ಉತ್ತರವಾಗಿ ಎಲ್ಲರೂ ಕೇಳಿದರು—

'ಹೌದಲ್ಲಾ.... ಆತನೇ ರಾತ್ರಿ ಆನೆ ಹಿಂಡಿನಲ್ಲಿ ಓಡಿ ಮರೆಯಾದ.... ಎಲ್ಲಿ.... ಎಲ್ಲಿ.... ಆ ಹುಚ್ಚಯ್ಯ ಎಲ್ಲಿ?'

ಶಿವಶಿವಾ....

ಎಲ್ಲಿ ಆ ಹುಚ್ಚಯ್ಯ?

೮

ರುದ್ರಪ್ಪಶೆಟ್ಟರು ಸೂರ್ಯ ಮುಳುಗುವ ಸಮಯಕ್ಕೆ ಯೋಗಿಗಳ ಗುಹಾಮಂದಿರಕ್ಕೆ ಬಂದು ಕೆಲಕಾಲ ಧ್ಯಾನಸ್ಥರಾದರು. ಆದರೆ ಇಂದು ಶಿವಯೋಗಿಗಳ ದರ್ಶನವಿಲ್ಲ. ಶೆಟ್ಟರ ಸಣ್ಣ ಹೆಂಡತಿ ಪ್ರಭಾವತಿಯೂ ಕೈಮುಗಿದು ಕುಳಿತಳು. ಕತ್ತಲು ಕೈಬೀಸಿತು. ಶರಣಶಿವಪ್ಪ ಅರಣ್ಯದ ಆಶ್ರಮಕುಟೀರದಲ್ಲಿ ಶೆಟ್ಟರ ನೆಮ್ಮದಿಗೆಂದು ದೀವಟಿಗೆ ಹೊತ್ತಿಸಿದ. ರಾತ್ರಿ ಧಗಧಗ ಉರಿದಂತಾಯಿತು. ಮಾಯಾ ಹರಿಣಿಯ ಮರಿಗಳೆರಡೂ ಈಗ ಮರಿಗಳಲ್ಲ. ದೊಡ್ಡವಾಗಿವೆ. ಸಂಗಾ ನಿಸ್ಸಂಗಾ ಎರಡೂ ಹೆಣ್ಣು ಜಿಂಕೆ

ಗಳು. ಅವೆರಡೂ ಈಗ ಗೆಳೆಯರನ್ನು ಪಡೆದಿವೆ. ಸಂಗಾ ಹರಿಣಿಗಿಂತಲೂ ನಿಸ್ಸಂಗಾ ಮೊದಲೇ ತುಂಬು ಗರ್ಭಿಣಿಯಾಗಿದೆ! ಸಂಗಾ ಈಗತಾನೆ ಗರ್ಭ ಧರಿಸಿದಂತಿದೆ. ಈ ಋಷ್ಯಾಶ್ರಮದ ಗಾಳಿಯಲ್ಲಿಯೆ ಬರಡನ್ನು ಹಸಿರನ್ನಾಗಿಸಿ, ಬಂಜೆಯನ್ನು ಬಸುರಿಯನ್ನಾಗಿಸುವ ಅನುಗ್ರಹಶಕ್ತಿ ತುಂಬಿದೆಯೋ ಏನೊ! ಈಗ ಪ್ರಭಾವತಿಗೆ ಆರು ತಿಂಗಳು ಗರ್ಭ!! ಈ ವಾತಾವರಣದಲ್ಲಿ ಈ ಹುಚ್ಚಗುರುಸಿದ್ಧೇಶ್ವರ ಮಾನವರಿಗೂ ಪಶುಗಳಿಗೂ ಪಕ್ಷಿಗಳಿಗೂ ವರಗಳನ್ನು ನೀಡುವನೊ ಏನೊ? ಯಾಕೆಂದರೆ ಶರಣಶಿವಪ್ಪ ಆಶ್ರಮದ ಅತಿಥಿಗಳಿಗಾಗಿ ತನ್ನ ಮನೆಯಿಂದ ಒಂದು ಗೊಡ್ಡಾಕಳು ತಂದು ಕಟ್ಟಿದ್ದ. ಅದು ಒಂದು ಹೆಣ್ಗರು ಹಾಕಿ.... ಮತ್ತೆ ಈಗ ತುಂಬು ಗರ್ಭಿಣಿ ಯಾಗಿದೆ! ಶಿವಶಿವಾ.... ಗುಹೆಯಾಳದ ಯೋಗಿ ನಿರಂಜನನಾದರೂ ರಂಜನೆಯ ಲೋಕದ ದುಃಖದುಮ್ಮಾನಗಳನ್ನು ಅರಿತಿರುವನೋ ಏನೊ? ಸಂಸಾರವಂದಿಗರ ಕಂಬನಿಯ ಅರ್ಥ ತಿಳಿದ ನಿರ್ಗುಣಬ್ರಹ್ಮನೇನೋ ಈತ?

ಪ್ರಭಾವತಿ ದೇವರದಾಸಿಮಾರ್ಯ ಶರಣರ ವಚನಗಳನ್ನು ಹಾಡಿದಳು. ಗಾನ ಮುಗಿಯುತ್ತಿದ್ದಂತೆ ಶಿವಯೋಗಿ ಹೊರಬಂದು ಕುಳಿತ. ಅವನೊಂದಿಗೆ ವಿಚಿತ್ರ ಕಂಪನ, ಅನಿರ್ವಚನೀಯ ಪ್ರಕಾಶ ಪುಂಜಗಳು ತೇಲಿ ಮೇಲುಪ್ಪರಿಗೆಗೆ ಬಂದಂತಾದವು. ಪ್ರಭಾವತಿ ಸಾಷ್ಟಾಂಗ ಹಾಕುತ್ತಿದ್ದಂತೆ ಗುರುಸಿದ್ಧಯೋಗಿಗಳು ನಕ್ಕು ಕೇಳಿದರು—

'ಏನವ್ವಾ ಪ್ರಭಕ್ಕಾ.... ನೀ ಏನು ಕಲ್ಲೋ ಕಲಾನೋ....?'

ಅವಳು ಹೇಳಿದಳು—

'ಅಪ್ಪಚ್ಚೀ.... ನಾನು ಮೊದಲು ಕಲ್ಲಿದ್ದೆ.... ಈಗ ಕಲ್ಲರಳಿ ಹೂ ವಾಯಿತು ನಿಮ್ಮಿಂದ... ಶಿಲೆಯಲ್ಲಿ ಕಲೆಯರಳಿತು ನಿಮ್ಮಿಂದ....'

'ಬ್ಹಾಳ ಚಂದ ಮಾತಾಡ್ತೀ ಬಿಡವ್ವಾ.... ನಾ ಏನ ಹುಚ್ಚಾ.... ಬಚ್ಚಬರೇ ಹುಚ್ಚಾ...'

'ಹಾಂಗನಬ್ಯಾಡ್ರೀ ಅಪ್ಪಚ್ಚೀ....'

'ಹೌದವ್ವಾ.... ಬಟಾಬಯ್ಲು... ಬಯ್ಲುsಬಯ್ಲು.... ಎಲ್ಲೆ ನೋಡಿದಲ್ಲೆ ಬಯ್ಲುsತುಂಬೈತಿ ನೋಡವ್ವಾ....'

'ಎಂಥಾ ಬೈಲು ಅಪ್ಪಚ್ಚೀ?'

'ಬಯ್ಲಿನಂಥಾ ಬೈಲವಾ.... ಬೈಯ್ಲಿನಂಥಾ ಬೈಲು....'

'ಅಂದ್ರ?'

'ನಾ ಏನಂತ ಹೇಳ್ಲೆವ್ವಾ.... ಬಯ್ಲಾಗ ಶಬ್ದ ಸಾಯ್ತೈತಿ.... ಸಾವು ಸೈತೆ ಸಾಯಿತೈತಿ....'

ರುದ್ರಪ್ಪಶೆಟ್ಟರು ಮೆಲ್ಲನೆ ಉಸುರಿದರು—

'ತಾವು ತಮ್ಮ ನಿಲುವನ್ನೇ ಹೇಳುತ್ತಿರುವಿರಿ ಬುದ್ದೀ....'

'ಹೌದಪಾ.... ಹೌದು... ಒಳಗಿಂದ ಹೊರಗ ಕಾರತೈತಿ ಶಬ್ದಾ.... ನಿಶ್ಶಬ್ದಕ್ಕ ತೂಕಿಲ್ಲಾ ತಕ್ಡಿಲ್ಲಾ... ತಾಳಿಲ್ಲಾ ಥಟ್ಟೆಲ್ಲಾ....'

'ತಾವು ಶೂನ್ಯಬ್ರಹ್ಮರು.... ಶೂನ್ಯಬ್ರಹ್ಮರು....'

'ಯಪ್ಪಾ ಶೆಟ್ಟಿ.... ಹಗ್ಗಾ ಬಿಗೀಬ್ಯಾಡಪಾ.... ಹಗ್ಗಾ ಬಿಗೀ ಬ್ಯಾಡಾ.... ಅಕಾ ನೋಡಲ್ಲೆ ಮುಗಲಾಗ ಹೊಳಿ ಹರ್‍ಯಾಕತ್ತೈತಿ....'

'ಎಲ್ಲೆ ಬುದ್ಧಿ.... ಏನ ಬುದ್ಧಿ...?'

'ಅಕಾ.... ಅಕಾ.... ಅಲ್ಲೆ.... ಅಲ್ಲೆ.... ಬೆಳಕsಬೆಳಕು.... ಬೆಳಕಿನ ಸಮುದ್ರಾ.... ದಂಡಿಲ್ಲಾಗಿಂಡಿಲ್ಲಾ.... ತಳಾಇಲ್ಲಾ ತುದಿ ಇಲ್ಲಾ.... ಕಣ್ಣಕಂಡತ್ತ ಸಾಗರಾ.... ಬೆಳ್ಳಂಬೆಳಕಿನ ಸಾಗರಾ....'

'ಅಂದ್ರೇನ್ರೀ ಬುದ್ಧಿ?'

'ಜ್ಯೋತಿಪಾ.... ಪರಂಜ್ಯೋತಿ ... ಆ ಜ್ಯೋತಿ ಕರ್‍ಯಾಕತ್ತೈತಿ.... ಈ ಅಂಗಾ ಉಧೋ ಅಂತೈತಿ.... ಲಿಂಗದಾಗ ಅಂಗಾ.... ಅಂಗದಾಗ ಲಿಂಗಾ.... ಯಾಡೂ ಸೇರೀದ್ರ ಮಾಲಿಂಗಾ....'

ಪ್ರಭಾವತಿ ಸೆರಗೊಡ್ಡಿ ಬೇಡಿದಳು—

'ತಂದೇ.... ನಿಮ್ಮ ಶಿಖರಾ ಇಳದ ಬರ್ರಿ.... ನಮ್ಮ ನೆಲೀಗೆ ಇಳದ ಬರ್ರಿ....'

ಶಿವಯೋಗಿಗಳು ನಕ್ಕು ಹೇಳಿದರು—

'ಹೌದವ್ವಾ ಪ್ರಭಕ್ಕಾ.... ನೀ ಎಲ್ಲಾ ಕೆಳಗಿಳದ ಬಾ ಅಂತೀದಿ.... ಆದ್ರ ಮ್ಯಾಲ್ಯಾವ್ದು ಕೆಳಗ್ಯಾವ್ದು ನನಗ ತಿಳೀವಲ್ತವ್ವಾ ತಿಳೀವಲ್ತು....'

'ನಾವು ನಿಮ್ಮ ಭಕ್ತರು.... ಭಕ್ತ ಸ್ಥಲಕ್ಕ ಇಳದ ಬರ್ರೀ ಅಪ್ಪಯ್ಯಾ....'

'ಹುಚ್ಚವ್ವಾ.... ಐಕ್ಯಸ್ಥಲಾ ಮೆಟ್ಟಿನಿಂತ್ರ ಭಕ್ತಸ್ಥಲಾ ಕಾಣತೈತಿ.... ಭಕ್ತಸ್ಥಲಾ ಮುಟ್ಟಿ ನೋಡೀದ್ರ ಐಕ್ಯಸ್ಥಲಾ ನಗತೈತಿ.... ಹೇಳವಾ ... ಯಾರು ಭಕ್ತಾ.... ಯಾರು ಐಕ್ಯಾ?'

'ನೀವು ದೊಡ್ಡೋರು ತಂದೇ.... ಬ್ಹಾಳ ದೊಡ್ಡೋರು.... ನಮಗ್ಹಿಂಗ ಗೊತ್ತಾದೀತು ನಿಮ್ಮ ನಿಲುವು'

'ಮತ್ತ ತಪ್ಪೀದಿ ನೋಡು ತಂಗೆವ್ವಾ.... ದೊಡ್ಡದೊಡ್ಡೋರಂಬೋರು ಬಯಲಾಗ ಬಯಲಾದ್ರು.... ಬೆಳಕಿನ್ಯಾಗ ಬೆಳಕಾದ್ರು....'

'ಅಂತ ಹೇಳೆ ನೀವು ದೊಡ್ಡೋರು ಅಪ್ಪಯ್ಯಾ....'

'ಹುಚ್ಚವ್ವಾ ... ನಾ ಅಂತೇನಿ ನಿನಗ ಹುಚ್ಚವ್ವಾ.... ಲೋಕ ಅಂತೈತಿ ನನಗ ಹುಚ್ಚಯ್ಯಾ.... ಆದ್ರ ಒಳಗಿನ ಗುರುಸಿದ್ಧಾ ನಗತಾನವಾ ತಂಗಿ.... ಒಳಗಿನ ಗುರುಸಿದ್ಧಾ ನಗತಾನವಾ....'

'ಅವನೇ ನೀವು.... ನೀವೇ ಅವನು.... ನೀವೇ ಜನದ್ಗುರು ಗುರುಸಿದ್ಧವಲ್ಲವೇನ್ರೀ ಬುದ್ಧಿ....'

'ನಾಮಕ್ಕ ನಾಮ ಚಂದಾ.... ಆತ್ಮಕ್ಕ ಆತ್ಮ ಚಂದಾ.... ಶೂನ್ಯ

ದಾಗ ಸಕ್ರಿ ಕೂಡ್ಯೈತಿ.... ಸಕ್ರ್ಯಾಗ ಶೂನ್ಯಮೂಡ್ಯೆತಿ.... ತಿಂಬೋರು ತಿಂತಾರು.... ಉಂಬೋರು ಉಂತಾರು ..'

'ಶೂನ್ಯ ಅಂದ್ರ ಏನ್ರೀ.... ಸಕ್ರೆಂದ್ರ ಏನ್ರೀ?'

'ಈ ಎದಿವ್ಯಾಗಿನ ಲಿಂಗಯ್ಯಾ ಗವ್ಯಾಗಿನ ಗೂಥಾ ಸೇರೀದ್ರ ಸಕ್ರಿ.... ಸಕ್ರಿಯಂಥಾ ಮಗನ್ನ ಹಡಿಯವ್ವಾ.... ಸಕ್ರೀಯಂಥಾ ಮಗನ ಪಡಿ....'

'ತಂದೇ ನಿಮ್ಮ ತತ್ವದ ಶಿಖರ ಏರುವ ಶಕ್ತಿ ನನ್ನಲ್ಲಿಲ್ಲ.... ನಿಮ್ಮ ಅನುಗ್ರಹಕ್ಕೆ ಸೆರಗೊಡ್ಡಿ ಬೇಡಿದೆ.... ನೀವು ನೀಡಿದಿರಿ.... ನನ್ನ ಸೆರಗು ತುಂಬಿತು'

ಈಗ ರುದ್ರಪ್ಪಶೆಟ್ಟರು ಮಾತಿಗೆ ಮುತ್ತು ಪೋಣಿಸಿದರು—

'ಹೌದ್ರಿ ಬುದ್ಧಿ.... ನೀವು ನೀಡಿದಿರಿ.... ನನ್ನ ಯಾಲಕ್ಕಿ ವ್ಯಾಪಾರಾ ಈ ಸಲ ಕೈಹಿಡೀತು.... ನೂರ ಹೇರ ಯಾಲಕ್ಕಿ ದಕ್ಷಿಣ ದೇಶಕ್ಕ ಕಳಸೀದ್ಯಾ.... ಮಸಾಲಿ ದೀನಸಾ ಹಿಮಾಲಯದಿಂದ ತರ್ಸೇನಿ.... ಇಲ್ಲೀ ಮಸಾಲಿ ಪೂರ್ವದ ಸಾಗರತನಕಾ ಬಂಡಿ ತುಂಬಿ ಕಳ್ಸೇನಿ....'

'ಆಗ್ಲೆಪಾ ಶೆಟ್ಟಿ.... ನೀ ಅಂದ್ರ ಬಂದ ಮಸಾಲಿ ಸಾರ ಇದ್ದಂಗ.... ಸಾರಿನ್ಯಾಗ ಸಾವಿರ ಮಂದಿನ್ನ ತೇಲಸ್ತೀ ಏನಪಾ?'

'ಏನ ಹೇಳ್ರಿ ತಂದೆ .. ಅಪ್ಪಣೆ ಕೊಡ್ರಿ....'

'ಬೆಳಗಾದ್ರ ಬ್ಹಾಳಮಂದಿ ಬರತಾರಪಾ ಶರಣ್ರು.... ಗುಡ್ಡಾ ಇಳದ ಕಂದರಾ ದಾಟಿ ಆನಿ ಲದ್ದಿ ಎಣಿಸಿ ಬರಾಕತ್ತಾರು.... ಹಸದ ಹೈರಾಣಾಗಿ ಹೊಟ್ಟಿ ಕೊಪ್ಪರಿಗ್ಯಾಗಿ ಬರ್ತಾರು....'

ಶೆಟ್ಟರಿಗೆ ಮಾತು ಅರ್ಥವಾಗಲಿಲ್ಲ. ಪ್ರಭಾವತಿಯೇ ಸೆರಗೊಡ್ಡಿ ಪ್ರಾರ್ಥಿಸಿದಳು —

'ಅಪ್ಪಯ್ಯಾ.... ಕರುಣೆಸಿರಿ ಅಪ್ಪಯ್ಯಾ.... ಇಂದಿನಿಂದ ನಮ್ಮ ಮನೆ ಗುರುಲಿಂಗ ಜಂಗಮುದ ಪ್ರಸಾದ ಮಂದಿರವಾಗಲಿ...'

'ಆಗಲಿ.... ಅಪ್ಪಣೆ ನನ್ನವ್ವಾ.... ಅಪ್ಪಣೆ....'

'ಧನ್ಯಳಾದೆ ತಂದೆ .. ಧನ್ಯಳಾದೆ....'

'ಇನ್ನೂರು ಮಂದಿ.... ನಾನೂರು ಹೊಟ್ಟೆ.... ಅಸಂಖ್ಯ ಪ್ರಸಾದಾ....'

'ಆಗ್ಲಿ ತಂದೇ.... ಆಗ್ಲಿ ತಂದೇ....'

'ಈ ರಾತ್ರಿ ಬೆಟ್ಟದ ವ್ಯಾಗ ಚಂದ್ರನ್ನ ಎಡಿವಿ.... ಪೂರ್ವಕ್ಕ ಹಣಿ ಹಚ್ಚೂದ್ರಾಗ ಅಡಗಿ ಸಿದ್ಧವಾಗಬೇಕು ನೋಡು ನನ್ನವ್ವಾ....'

'ಆಗ್ಲಿ ತಂದೇ.... ಆಗ್ಲಿ ತಂದೇ....'

ಶಟ್ಟರು ಹೇಳಿದರು—

'ಯಾವೂರಿನ ಶರಣ್ರು ಬುದ್ಧಿ.... ಎಲ್ಲಿಗೆ ಹೊರಟಂತಾ ಶರಣ್ರು .. ?'

'ಶರಣ್ರಿಗೆ ದೇಶಿಲ್ಲಾ.... ಕಾಲಿಲ್ಲಾ.... ಶಿವಾ ಅಂದದ್ದs ಕಾಲಾ.... ಹರಾ ಅಂದದ್ದs ದೇಶಾ.... ಯಾ ಕಾಲದ ಬುಟ್ಯಾಗ ಯಾ ಕಾಲದ ಶರಣ್ರನ್ನ ತಂದ ಹಾಕೀದ್ರೂ ನಡೀತೈತಿ.... ಕಾಲಕ್ಕ ಕಿಮ್ಮತ್ತಿಲ್ಲಾ .... ದೇಶಕ್ಕ ದೌಲತ್ತಿಲ್ಲಾ....'

'ಅಂದ್ರ ಬುದ್ಧಿ?'

'ಕಾಲದಾಗ ಹುಟ್ಟಿದವಾ ಕಾಲಕ್ಕ ತುತ್ತಾದವಾ.... ಕಾಲಾ ಮೀರಿದವಾ ಶೂಲಾ ಮೀರಿದವಾ....'

'ಅಂದ್ರ ಬುದ್ಧಿ?'

'ನೋಡಪಾ ಶಟ್ಟೆಪ್ಪಾ.... ನಾ ಹೇಳೂದಿಷ್ಟs.... ಕಾಲಾ ಒಗಿ ....ತತ್ವಾ ಹಿಡಿ....'

'ಆಗ್ಲಿ ತಂದೆ....'

'ಕವಲೆತ್ತಿನಗತೆ ಗೋಣು ಹಾಕಬ್ಯಾಡಪಾ ...'

'ಇಲ್ರೀ ಬುದ್ಧೀ.... ತಮ್ಮ ಬುದ್ಧೆಂದ್ರ ತಕಡ್ಯಾಗೀನ ಉತ್ತತ್ತಿ ಧ್ಹಂಗ....'

'ಅಂತೂ ತಕಡ್ಯಾಗ ಹಾಕೀದ್ಯಪಾ ನಮ್ಮನ್ನ....'

'ತಪ್ಪಾತ್ರಿ ತಂದೆ.... ತಪ್ಪಾತ್ರೀ ಬುದ್ಧಿ....'

'ತಪ್ಪಿಲ್ಲಪಾ.... ತಪ್ಪಿಲ್ಲಾ.... ಮುಂದಿಂದ ಕಾಲದಾಗ ಈ ಆಡಿವೆಲ್ಲಾ ಪಟ್ಣಾಗಿ ಶಟ್ಟರ ತಕಡ್ಯಾಗ ಉತ್ತತ್ತಿಗತೆ ನಾ ಮೆರೀಲಿ.... ದುಡಿನ್ಯಾಗ ದುಡ್ಡ ಹುಟ್ಲಿ.... ಕಸಾ ಚೆಲ್ಲೀದ್ರ ಕಸ್ತೂರಿ ಬೆಳೀಲಿ....'

'ನಮೋ.... ನಮೋ.... ನಮೋ.... ತಂದೇ.... ನಿಮ್ಮ ಮಾತು ಮಹಾಮಂತ್ರಾ.... ಮಹಾಮಂತ್ರಾ....'

'ತೂಕಾ ಹೆಚ್ಚಾತಪಾ ಶಟ್ಟಿ ನಿಂದು....'

'ಆಗದೇನು ಮಾಡೀತು ತಂದೆ.... ಆದ್ರ ನಂದೊಂದು ಪ್ರಾರ್ಥನಾ ಐತಿ....'

'ಕೇಳಪಾ ಕೇಳು.... ನೀ ಏನ ಕೇಳಬೇಕಂತಿಯೋ ನಮಗ ಮೊದ್ಲss ಗೊತ್ತೈತಿ....

'ಹೇಳ್ರಿ ಹಂಗಾದ್ರ.... ನಾ ಏನ ಕೇಳಬೇಕಂತಿದ್ದೆ?'

'ಹುಚ್ಚಪ್ಪಾ.... ಈ ಹುಚ್ಚನ ಗವೀ ಮುಂದ ಒಂದ ದೊಡ್ಡನ್ನ ಮಠಾ ಕಟ್ಟಬೇಕಂತೀ ಹೋದಿಲ್ಲೋ....?'

'ಶಿವಶಿವಾ.... ಶಿವಶಿವಾ.... ಹೌದ್ರಿ ಬುದ್ಧಿ.... ಹೌದ್ರಿ ನನ್ನಪ್ಪಾ....'

'ಕೇಳಪ್ಪಾ ಕೇಳು.... ಕಾಲಾ ಮೀರಿದ ಮಹಿಮರನ್ನ ಕಾಲಕ್ಕ

ತುತ್ತ ಮಾಡಬ್ಯಾಪಪಾ....'

ಪ್ರಭಾವತಿ ಬೆತ್ತಾಸುಬೆಂಡುಗಳನ್ನು ಕೂಸು ಕೇಳಿದಂತೆ ಆತುರದಿಂದ ಕೇಳಿದಳು—

'ಒಪ್ಪಿರಿ ಅಪ್ಪಾಜಿ ಒಪ್ಪಿರಿ... ಇಲ್ಲೊಂದು ದೊಡ್ಡ ಮಠಾ ಆಗ್ಲಿ.... ಮಠದಾಗ ದಾಸೋಹಾ ಆಗ್ಲಿ.... ಶಾಸ್ತ್ರ ಶಿಖರಾ ಆಗ್ಲಿ.... ಕಾವ್ಯಾ ಹೊಳೀ ಆಗ್ಲಿ.... ಅಂಗಾರ ಬಂಗಾರಾಗ್ಲಿ....'

'ನೋಡವ್ವಾ.... ಎಲ್ಲಾ ಆಗ್ಲಿ.... ಎಲ್ಲಾ ಆಗ್ಲಿ... ಹೊಟ್ಟಿ ತುಂಬಿ ಹರಾ ಅಂತ ನಿಡೇನಿ ಆದ್ರ.... ಈಗಲ್ಲಾ....'

'ಯಾವಾಗ ಬುದ್ಧಿ....?'

'ಕಾಲಾ ಹೋಗ್ಲಿ... ಕಾಲಾ ಬರ್ಲಿ.... ಅಂಥಾ ಒಂದು ಕಾಲ ದಾಗ ನಿಮ್ಮ ವಂಶದಾಗ ಬಸವನಂಥಾ ಭಾಗ್ಯವಂತಾ ಮೂಡ್ಲಿ.... ಅವಾ ಮಠಾ ಕಟ್ಲಿ.... ಮಾಡಿ ಕಟ್ಲಿ.... ಅಡವ್ಯಾಗ ಪ್ಯಾಟಿ ಕಟ್ಲಿ.... ಪ್ಯಾಟ್ಯಾಗ ಧ್ವಜಾ ಹಾರಸ್ಲಿ.... ಕೆಸರಾಗ ಬಂಗಾರಾ ತೂರ್ಲಿ.... ಈ ಅಡಿವೆಂಬೂದು ಸತ್ತು ಹಿಣೇ ಊರಾಗ್ಲಿ.... ರೊಕ್ಕಂಬೂದು ಹುಂಚೀಪಕ್ಕಾಗ್ಲಿ.... ಯಾರ ಬ್ಯಾಡಂತಾರವ್ವಾ....'

'ಧನ್ಯಳಾದೆ ತಂದೇ ... ಧನ್ಯಳಾದೆ....'

'ಹಾಂ.... ಧನ್ಯಳಾದೆ ಅಂತ ಕೈಕೊಟ್ಟೇಯಾ ನಮ್ಮವ್ವಾ....'

'ಏನು ಬೇಕು ಬುದ್ಧೀ?'

'ಹಾಂ.... ಹಾಂ.... ಮರ್ತೇಬಿಟ್ಟೇನವಾ.... ಸಕ್ರೀ ಸಾರು.... ಹಂಡೇ ಪ್ರಸಾದಾ....?'

'ಆಗ್ಲಿ ಅಪ್ಪಯ್ಯಾ ಬೆಳಗಂಬೂದ್ರಾಗ ಪ್ರಸಾದಾ ಮಾಡ ಸ್ತೇವಿ.... ನಿಮ್ಮ ದಾಸೋಹದಾಗ ಶಿವಾ ಅಂತ ನೀಡತೇವಿ....'

'ಜಯಾ ಆಗ್ಲಿ.... ಪ್ರಸಾದಕ್ಕ ಜಯಾ ಆಗ್ಲಿ....'

೧೦

ಮುಂದೇನು ಗತಿ?

ಅರಣ್ಯದಲ್ಲಿ ಬೆಳಗಾದರೂ ಶರಣಶರಣೆಯರಿಗೆ ಕತ್ತಲೆಯೇ ಆಯಿತು. ಅವರ ಹಾಡುಗಳು ಬತ್ತಿದವು. ಹಿಗ್ಗು ತಗ್ಗಿದವು. ಭಸ್ಮದ ಪೆಟ್ಟಿಗೆಗಳು ಧೂಳು ದಿಂಡೂರ್ಕಿ ಆಗಿ ಆನಿಕಾಲಾಗ ಪುಂಡಿಪಲ್ಲೆ ಆಗಿ ಈಗ ಗಾಳಿಪೂಜಾಮಾತ್ರ ಉಳಿಯಿತು. ರುದ್ರಾಕ್ಷಿ ಇಲ್ಲ. ಭಸ್ಮ ಇಲ್ಲ. ಮಡಿ ಬಟ್ಟೆ ಇಲ್ಲ. ಮಣ್ಣಿನ ಪೂಜಾಪಾತ್ರೆಗಳಿಲ್ಲ. ಎಡೆ ಮಾಡಲು ಗಂಜಿಗೆ ಹಿಟ್ಟಿಲ್ಲ. ಕೂಸುಗಳಿಗೆ ಹಾಲಿಲ್ಲ. ಹಿರಿಯರಿಗೆ ಪ್ರಸಾದವಿಲ್ಲ. ಮುಂದೇನು ಎಂದು ಕೇಳಿದರೆ ಗತಿ ಇಲ್ಲ. ಇಡೀ ಹಗಲನ್ನು ಶಿವನ ಶಿವರಾತ್ರಿಯಂತೆ ನಡೆಯುತ್ತ ಕಳೆದರು. ದಾರಿಯಲ್ಲಿ ಕಂಡ ಹಳ್ಳದಲ್ಲಿ ಉಟ್ಟಬಟ್ಟೆಯಲ್ಲಿ ಸ್ನಾನ. ಉಡಲು ಮತ್ತೊಂದಿಲ್ಲ. ನಿಂತಲ್ಲೇ ಶಿವಪೂಜೆ. ಕುಳಿತು ಮಾಡಿಕೊಳ್ಳಲು ಪೂಜಾ ಸಾಮುಗ್ರಿಗಳಿಲ್ಲ. ಲಿಂಗಯ್ಯ ಹಸಿದೇನೆಂದರೆ ನೀಡೋರಿಲ್ಲ.

ಆದರೂ ಮಧ್ಯಾಹ್ನದಲ್ಲಿ ದಾರಿಗುಂಟ ಬಂದ ಹಳ್ಳದಲ್ಲಿ ಸ್ನಾನ ಮಾಡಿ ಭಸ್ಮವಿಲ್ಲದೆ ಲಿಂಗಪೂಜೆಗೆ ಕುಳಿತಾಗ; ಅನೇಕರಿಗೆ ವಿಚಿತ್ರ ದರ್ಶನ! ಲಿಂಗದ ಮಧ್ಯದಲ್ಲಿ ಅದೇ ಹುಚ್ಚ.... ರಾತ್ರಿ ಆನಿ ಬಂದಿವೆಯೆಂದು ಎಬ್ಬಿಸಿದ ವಿಚಿತ್ರ ಹುಚ್ಚ.... ನಕ್ಕಂತಾಯಿತು!! ಹಿರಿಯರಾದ ಪೂಜಾನಿಷ ಶರಣರಲ್ಲಿ ಒಬ್ಬರು ಮುಂದೆ ಸಾಗುತ್ತಿದ್ದಂತೆ ತಮ್ಮ ಅನುಭವವನ್ನು ಹೇಳಿದರು—

'ಆತಾ... ಹುಚ್ಚಾ... ಹುಚ್ಚಲ್ಲಾ.... ಮಹಾತ್ಮಾ... ಭೂಲೋಕದ ಕಲ್ಪವೃಕ್ಷಾ....'

ಪ್ರಸಾದವಿಲ್ಲದೆ ಹೊಟ್ಟೆ ಬೆನ್ನಿಗೆ ಹತ್ತಿ ಶಕ್ತಿ ಇಲ್ಲದೆ ಕಂಠ ಕುಗ್ಗಿ ಮುನ್ನಡೆದ ಶರಣರೆಲ್ಲರಿಗೆ.... ಯಾಕೆ... ಎಂದು ಪ್ರಶ್ನಿಸಮಾಡಲು ಆಗಲಿಲ್ಲ. ಕಿವಿಗೊಟ್ಟು ಕೇಳುತ್ತಲೇ ನಡೆದರು—

'....ಯಾಕಂದ್ರ.... ಇವತ್ತ ಲಿಂಗಪೂಜಾದಾಗ ಅವನ ದರ್ಶನಾ ಆತು.... ಲಿಂಗದ ತುಂಬ ಲಿಂಗಾಗಿ ನಗಾಕತ್ತಿದ್ದಾ.... ನಮಗ ಬಂದ ಕಷ್ಟಾ ಕಂಡು ಕೇಕಿ ಹಾಕೀದಾ.... ನಂತ್ರ ಲಿಂಗದ ಬೆಳಗಿನ್ಯಾಗ ಬೆಳಗಾದಾ....'

ಇನ್ನೊಬ್ಬ ವೃದ್ಧ ಶರಣ ಮಾತು ಮುಂದುವರಿಸಿದ—

'ಹೌದಪಾ ಹೌದು.... ಇದು ನನಗೂ ಬಂದ ಅನುಭವಾ.... ನಿನ್ನೀಲಿಂದ ಮುಳ್ಳಕಳ್ಳ್ಯಾಗ ನಿಂತಂಗ ತೋರ್ತಾನು.... ಫಕ್ನ ಮಾಯಾಗತಾನು.... ಮತ್ತ ಕಾಣತಾನು.... ಮತ್ತ ಮರೀ ಆಗತಾನು.... ಆತ್ರ ನಮ್ಮಿಂದ ದೂರಿಲ್ಲಾ.... ನಮ್ಮ ಕೂಡ್ಯ ಆದಾನು.... ಕಂಡೂ ಕಾಣವಲ್ಲಾ.... ನೋಡೀ ನೋಡವಲ್ಲಾ....'

ಎಲ್ಲರಿಗಿಂತಲೂ ಮುದಿಮುತ್ತ್ಯಜ್ಜನಾದ ಮಹಾವೃದ್ಧಯೋಗಿಯೊಬ್ಬ ಈಗ ತನ್ನ ಮಾತು ಮುಂದುವರಿಸಿದ—

'ಹೌದಪಾ .. ಹೌದು.... ಆತ ದೂರಿಲ್ಲಾ.... ಇಲ್ಲೇ ಸಮೀಪದಾಗ ಹೂವಿನ್ಯಾಗ ಹರಾ ಅಡಿಗಿದಂಗ ಅಡಿಗ್ಯಾನು.... ನನಗ ನಿನ್ನೀಲಿಂದ್ಲೂ ಅವನ ಪೂಜಾಗಂಟೆ.... ಜಾಗಟೆ.... ನಗಾರಿ.... ನೌಬತ್ತು.... ಕಾಳಿ.... ಶಂಖಾ.... ಕೇಳಾಕತ್ತಾವು. ಆತಾ ಮಹಾಯೋಗಿ. ಯಾರೋ ಏನೋ ಒಟ್ಟನಮ್ಯಾಲೆ ಸಿದ್ಧಿಪುರುಷ ಗುರುಸಿದ್ಧಯೋಗಿ. ನಮಗ.... ಬಾ...ಬಾ.... ಬಾ ಅಂತ ಕರ್‍ಯಾಕತ್ತಾನು. ಪ್ರಸಾದಕ್ಕ ಲಗೂ ಬಾ

ಎದ್ಯಾಗ ಹೇಳಾಕತ್ತಾನು.... ನಮ್ಮ ಲಿಂಗಯ್ಯಾ.... ನಡೀ ಬರ್ತೇನಿ ಅಂತ ಉತ್ರಾ ಕೊಡಾಕತ್ತಾನು.... ನಡೀರೆಪಾ ನಡೀರಿ....'

ಯೋಗಿಗಳ ಅನುಭವ ಯೋಗಿಗಳೇ ಬಲ್ಲರಲ್ಲವೆ? ಒಬ್ಬ ಶಿವ ಶರಣೆ ತಾಯಿ ಈಗ ಮೆಲ್ಲನೆ ಹೇಳಿದಳು—

'ಅಣ್ಣಯ್ಯಾ.... ನನಗ ಒಂದು ತಿಂಗ್ಳಾತು ಆತಾ ಕನಸಿನ್ಯಾಗ ದರ್ಶನಾ ಕರುಣಿಸಿ.... ಸಾವಿರಾರ ವರ್ಷದ್ದ ಗವಿಯಾಗೀನ ಮಹಾಸಿದ ನಂಗ ಕಾಣತಾನು.... ಜಟಾಜೂಟಾ.... ನೋಡಾಕ ಉಗ್ರಾ.... ಎದ್ಯಾಗ ತಾಯ್ತನಾ ... ಮುಪ್ಪಾನ ಯೋಗಿ ಆದ್ರೂ ನಿರೋಗಿ.... ಉಗ್ರಶರಣಾ.... ಕಾಣಾಕ ಹುಚ್ಚಾ....'

ಯಾರು ಬಲ್ಲರು ಇವರ ಯೋಗದ ಎತ್ತರವನ್ನು? ಅನುಭವದ ಸಿದ್ಧಿಯನ್ನು? ನೋಡಲು ಹರಕು ಮುರುಕು ಜಂಗಮರಂತೆ ತೋರು- ತ್ತಿದ್ದಾರೆ. ಆದರೆ ಇವರ ಆತ್ಮಾನುಭವಗಳೋ ಚಿಂತನ ಪ್ರಜ್ಞೆಯನ್ನು ಮೀರಿ ಅಗಾಧವಾಗಿವೆ. ಅಲೌಕಿಕವಾಗಿವೆ. ಕಾದು ನೋಡಬೇಕು.... ಮುಂದೇನಾಗುತ್ತದೋ ಎಂದು!

* * *

ಬೆಳಗಾಗುವಷ್ಟರಲ್ಲಿ ಪ್ರಭಾವತಿ ರುದ್ರಪ್ಪ ಶೆಟ್ಟರು ತಮ್ಮ ನೂರಾರು ಆಳು ಹೋಳುಗಳನ್ನೆಲ್ಲಾ ತಂದು ಮಡಿಯಿಂದ ಆಶ್ರಮದಲ್ಲಿ ಮಹಾಪ್ರಸಾದ ಮಾಡಿಸಿದರು. ಸಾರು ಸಿದ್ಧವಾಯಿತು! ಸಾರಿನೊಂದಿಗೆ ಹುಗ್ಗಿ. ಹಾಲು ತುಪ್ಪದಲ್ಲಿ ಕುದಿಸಿದ ಸಜ್ಜಕ. ಅದರ ತುಂಬಾ ಕೇರ ಬೀಜ ದ್ರಾಕ್ಷೀಗೊಡಂಬಿ ಉತ್ತತ್ತಿ ಚೂರುಗಳು. ಅರಣ್ಯವೇ ಗಮಗಮಿಸು ವಂತೆ ಯಾಲಕ್ಕಿ ಪುಡಿ. ಬಿಳಿಜೋಳದ ರೊಟ್ಟಿ. ತೊಗರಿಬ್ಯಾಳಿ ಗುಗ್ಗರಿ. ಎಣಗಾಯಿ ಬದನೀಕಾಯಿ. ಬೆಂಡಿಕಾಯಿ. ಹಾಗಲಕಾಯಿ. ಪಡುವಲ

ಕಾಯಿ. ಕುಂಬಳಕಾಯಿ. ಕೈಗೆ ಸಿಕ್ಕ ದೀನಸೆಲ್ಲಾ ಪಲ್ಲೆ! ಮೇಲೆ ಎಂದೆಂದೂ ಊಟಮಾಡದ ಘಮಘಮಾವಾಸನೆಯ ಹೂಬಳ್ಳಿ ಸಾರು! ಕೇವಲ ಇದರ ವಾಸನಿಗೇ ಯೋಗಿಗಳು ಧ್ಯಾನಸಮಾಧಿ ಬಿಟ್ಟುಬಂದು ಎರಡು ಬಟ್ಟಲ ಕುಡಿದು ಹೋಗಬೇಕು!!!

ಬೆಳಗು ಮೂಡಿತು! ಇಡೀ ರಾತ್ರಿ ಅಡುಗೆ ಮಾಡಿ ದಣಿದ ಆಳುಗಳೆಲ್ಲಾ ಒಲೆಯ ಕಿಚ್ಚಿಗೆ ಮೈ ಕಾಸಿಕೊಂಡು ಮಲಗಿದ್ದಾರೆ. ರುದ್ರಪ್ಪ ಶೆಟ್ಟರು ಪ್ರಭಾವತಿ ಇದೇ ಈಗ ಆಶ್ರಮದ ಪರ್ಣಶಾಲೆಯಲ್ಲಿ ನಿದ್ರಾಭಾರದಿಂದ ಕುಳಿತಲ್ಲಿಯೇ ಪವಡಿಸಿದ್ದಾರೆ.

ಕೆಲಕಾಲದ ನಂತರ ಆಕಸ್ಮಿಕವಾಗಿ ಎಚ್ಚತ್ತು ನೋಡುತ್ತಾರೆ- ಸರೋವರದ ಸುತ್ತಲೂ ನೂರಾರು ಶರಣರು ಸ್ನಾನಮಾಡುತ್ತಿದ್ದಾರೆ; ಶಿವಶಿವಾ ಮಹಾನುಭಾವರಾದ ಶರಣಶರಣೆಯರು ಮಜ್ಜನಗೈಯ್ಯುತ್ತಿದ್ದಾರೆ!!

ರುದ್ರಪ್ಪಶೆಟ್ಟರು ಕೈಮುಗಿದು ಎದ್ದರು. ಪ್ರಭಾವತಿ ಕಣ್ತೆರೆದು ಎದ್ದು ಸೆರಗೊಡ್ಡಿ ಸಾಷ್ಟಾಂಗ ಹಾಕಿ ಆಳುಗಳನ್ನು ಎಬ್ಬಿಸಲು ಓಡಿದಳ ಎಲ್ಲರೂ ಎದ್ದರು. ಏಳುತ್ತಿದ್ದಂತೆ ಎಲ್ಲರಿಗೂ ಹೊಸ ಅನುಭವ. ವಿಚಿತ್ರ ಅನುಭವ. ಏಕಾಂತ ಆಶ್ರಮ ಈಗ ಶರಣರ ದೊಡ್ಡ ಸಂಘದಿಂದ ಧ್ವನಿ ಪೂರ್ಣ, ಜೀವನ ಪರಿಪೂರ್ಣವಾಗಿದೆ.

ಮೊದಲೇ ಹಸಿದು ಹೈರಾಣಾಗಿ ಹೊಟ್ಟೆ ಹಾವಾಗಿ ಕಣ್ಣು ಕಂಗಾಲಾದ ಶರಣರು. ಸರೋವರದಲ್ಲಿ ಸ್ನಾನ ತೀರಿಸುತ್ತಿದ್ದಂತೆ ಅವರಿಗೆ ಶೆಟ್ಟರು ಬಿನ್ನಾಯ ಮಾಡಿದರು—.

'ಮಹಾಪ್ರಭುಗಳೇ.... ತಮಗೆಲ್ಲಾ ನಮ್ಮ ಗುರುಸಿದ್ಧ ಯೋಗೀಂದ್ರರ ಅಪ್ಪಣೆಯಾಗಿದೆ.... ಇಲ್ಲೇ ಪ್ರಸಾದಕ್ಕೆ ಬಿನ್ನಹ ಸ್ವೀಕರಿಸ ಬೇಕು ...'

ಎಲ್ಲ ಶರಣರೂ ಸ್ನಾನ ಮಾಡುತ್ತಿರುವವರನ್ನು ಬಿಟ್ಟು ಹುಳು ಹುಳು ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಇನ್ನು ಹೆಚ್ಚಿಗೆ ಮಾತನಾಡಲು ಸಮಯವಿಲ್ಲ. ಕಾರಣ ಅವರ ಲಿಂಗಯ್ಯನಿಗೆ ಎರಡುದಿನ ಗಳಿಂದ ಊಟವಿಲ್ಲ. ದೂರದ ಅರಣ್ಯ ದಾರಿ ನಡೆದು ಉಸಿರು ಸಾವಾಗಿದೆ ಜೀವ ನೋವಾಗಿದೆ. ಮುಂದೆ ಮಾತಿಲ್ಲದೆ ಸ್ನಾನ ತೀರಿಸಿ ಆಶ್ರಮಕ್ಕೆ ಬಂದರು. ಇಲ್ಲಿ ಶಿವಪೂಜೆಗೆ ಯಥೇಚ್ಛ ಅವಕಾಶ. ಬುಟ್ಟಿ ಬುಟ್ಟಿ ಹೂಗಳು. ಕಮಲ. ಮಲ್ಲಿಗೆ. ಸಂಪಿಗೆ. ಕೇದಿಗೆ. ಶಾವಂತಿಗೆ. ನಾನಾ ಕುಸುಮಗಳು. ರಾಶಿ ರಾಶಿ ಬಿಲ್ವಪತ್ರಿಗಳು. ಬೇಕಾದಷ್ಟು ಭಸ್ಮದ ಘಟ್ಟಿಗಳು. ರುದ್ರಾಕ್ಷಿ ಮಾಲೆಗಳು. ಗಂಧ. ಅಕ್ಷತೆ. ದೀಪ. ಧೂಪ. ನೈವೇದ್ಯ. ಇನ್ನೇನು ಬೇಕು!

ಶರಣರೆಲ್ಲಾ ಪೂಜೆಯಲ್ಲಿ ಮೈಮರೆತರು. ಮಹಾಯೋಗಿಯ ಮಹಾಪ್ರಾಣದಲ್ಲಿ ಓಂಕಾರದಲ್ಲಿ ಒಂದಾದರು.ಶಿವಸ್ಥಿತಿಯ ಪ್ರಶಾಂತ ನಿರಂಜನ ನಿರ್ವಾಣಯ ಪ್ರಜ್ಞೆಯ ಅತಿಮಾನಸದ ಅನುಭೂತಿಯಲ್ಲಿ ತೇಲಿ ಹೋದರು. ಪೂಜೆ ಮುಗಿದಾಗ ಬಿಸಿಲು ಏರಿತ್ತು. ದಣಿವು ಆರಿತ್ತು. ಹಸಿವು ಮಾತ್ರ ಪ್ರಸಾದಕ್ಕೆ ದಾರಿ ಕಾಯುತ್ತಿತ್ತು!

ಮಿಂಚಿನ ವೇಗದಲ್ಲಿ ಅವರ ಮುಂದೆ ಬಾಳೆಹಣ್ಣಿನ ಎಲೆಗಳು ಬಂದವು. ಅಡವಿಯಲ್ಲಿ ಗಡ್ಡೆಗೆಣಸಿಗೆ ಗತಿ ಇಲ್ಲದವರಿಗೆ ಹಾಲಿನ ಸಜ್ಜಕ ಬಂತು. ಬಿಳಿಜೋಳದ ರೊಟ್ಟಿ. ಕರಿಂಡಿ. ಕಡಲಿಹಿಂಡಿ. ಅಗಸಿಹಿಂಡಿ. ಮಸರು. ಯಾರಿಗೆ ಏನು ಬೇಕೋ ಅದೆಲ್ಲಾ ಬೇಕಾದಷ್ಟು ಪ್ರಸಾದ. ಶರಣರೆಲ್ಲಾ ಉಂಡೇ ಉಂಡರು. ಸಾರು ಅನ್ನ, ಮೊಸರು ಅನ್ನ ಉಂಡು ಮತ್ತೆ ಮೇಲೆ ತಂಬಿಗೆ ತಂಬಿಗೆ ಸಾರು ಕುಡಿದರು. ಇನ್ನೇನು ಸಾರು ಕುಡಿದು ಶಿವಾ ಎಂದು ಏಳಬೇಕೆನ್ನುವಷ್ಟರಲ್ಲಿ ಗವಿಯ ಗುರುಸಿದ್ಧ ಯೋಗಿ ಹೊರಗೆ ಬಂದು ಅವರ ಎದುರಿಗೆ ಪ್ರತ್ಯಕ್ಷನಾಗಿ ನಿಂತಿದ್ದ!

ಶರಣರು ನೋಡಿದರು! ನೋಡಿ ತಬ್ಬಿಬ್ಬಾಗಿ ಹೋದರು!! ಕೆಲ ಹೊತ್ತು ಮಾತೇ ಬರಲಿಲ್ಲ. ಸಾರು ಕುಡಿಯುತ್ತಿದ್ದವರು ಹಾಗೇ ಸಾರಿನ

ತಂಬಿಗೆ ಎತ್ತಿ ಹಿಡಿದಂತೆ ಕುಳಿತರು ಶಿವಾ ಎಂದು ಬಾಯ್ದೆರೆದವರು ಹಾಗೇ ಬಾಯಿ ಅಗಲ ಮಾಡಿ ಕುಳಿತರು. ಸಜ್ಜಕದಲ್ಲಿ ಕೈ ಇಟ್ಟವರು ಹಾಗೇ ಕೈ ಇಟ್ಟು ಕಣ್ಬಿಟ್ಟು ನೋಡತೊಡಗಿದರು. ಆಶ್ಚರ್ಯವೇ ಅವತಾರ ತಾಳಿತು! ಅದ್ಭುತವೇ ಸುದ್ದಿಯಾಗಿ ಬಂತು!!

ಈಗ ಗುರುಸಿದ್ಧೇಂದ್ರ ಯೋಗಿಗಳು ನಕ್ಕು ಹೇಳಿದರು—

'ಸಾಗಲ್ರಿಪಾ ಪ್ರಸಾದಾ.... ಸಾಗಲ್ರಿಪಾ.... ಸಾಗಲಿ....'

ಶರಣರೆಲ್ಲಾ ಎದೆ ತುಂಬ ಕೌತುಕ ತುಂಬಿ ಕುಳಿತರು. ಆನೆಗಳು ಬಂದಾಗ ಎಚ್ಚರಿಸಿದ ಪುಣ್ಯಾತ್ಮ ಇವನೇ! ಲಿಂಗಪೂಜೆಯಲ್ಲಿ ಶರಣರ ಕನಸಿನಲ್ಲಿ ಕಂಡ ಸಿದ್ಧಾತ್ಮ ಇವನೇ!! ಈಗ ಪ್ರಸಾದ ನೀಡಿ ಪ್ರತ್ಯಕ್ಷನಾದ ಮಹಾತ್ಮ ಇವನೇ!!! ಶರಣರೆಲ್ಲಾ ಶಿವಧೋ ಶಿವಧೋ ಎಂದು ಎದ್ದು ಬಂದು ಸಾಷ್ಟಾಂಗ ಹಾಕಿದರು. ಅನೇಕರು ಅರ್ಧ ಪ್ರಸಾದಕ್ಕೇ ಎದ್ದು ಬಂದು ಸಾಷ್ಟಾಂಗ ಹಾಕಿದರು. ನಂತರ ಶಟ್ಟರು ಪ್ರಭಾವತಿ ಅವರನ್ನು ಕೈಹಿಡಿದು ಕುಳ್ಳಿರಿಸಿ ಪ್ರಸಾದಪೂರ್ಣ ಮಾಡಿಸಿದರು.

* * *

ಅರಣ್ಯದಲ್ಲಿ ಅನುಭವ ಮಂಟಪ ಸಾಗಿತು. ಸರೋವರದ ಬಂಡೆಯ ಮೇಲೆ ಹಾಸಿದ ಚಿತ್ರಾಸನದ ಮೇಲೆ ಗುರುಸಿದ್ಧೇಂದ್ರ ಯತಿಗಳು ವಿರಾಜಮಾನರಾಗಿ ಕುಳಿತಿದ್ದಾರೆ. ಆ ಗುಂಡುಬಂಡೆಯೇ ಮಹಾ ಶೂನ್ಯಸಿಂಹಾಸನ. ಎಡಬಲಕ್ಕೆ ನೂರಾರು ಶರಣ ಶರಣೆಯರು, ಹೂಬಳ್ಳಿ ಪುರದ ಸ್ತ್ರೀಪುರುಷರು, ಗಣ್ಯವ್ಯಕ್ತಿಗಳು, ರುದ್ರಪ್ಪಶೆಟ್ಟರು, ಪ್ರಭಾವತಿ, ಶರಣ ಶಿವಪ್ಪ ಎಲ್ಲರೂ ಕುಳಿತಿದ್ದಾರೆ. ಮಧ್ಯ ಮಧ್ಯ ಮಾಯಾಹರಿಣಿ ಗರ್ಭಿಣಿಯರಾದ ಸಂಗಾ ನಿಸ್ಸಂಗಾ ಓಡಾಡುತ್ತಿದ್ದಾರೆ.

ಅತಿಥಿಗಳಾಗಿ ಬಂದ ಶರಣರಲ್ಲಿ ಎಲ್ಲರಿಗಿಂತಲೂ ಹಿರಿಯನೂ ಪ್ರಭಾವಂಡಲನೂ ಆದ ಮುದಿಮುತ್ತಜ್ಜ ಮಹಾವೃದ್ಧ ಶಿವಯೋಗಿಶರಣ ಈ ಗವಿಗುಂಡದ ವಿಚಿತ್ರ ಹುಚ್ಚೀಶ್ವರ ಸಿದ್ಧನನ್ನು ಕಣ್ಣು ಕವಳಿ ಹಣ್ಣು ಮಾಡಿ ಹುಳುಹುಳು ನೋಡುತ್ತ ಕುಳಿತಿದ್ದ. ಅವನಿಗೆ ಮಾತಿನಲ್ಲಿ ಇಷ್ಟ ವಿಲ್ಲ. ಸಂಭಾಷಣೆಯಲ್ಲಿ ಒಲವಿಲ್ಲ. ಒಂದೇ ರೀತಿಯಾಗಿ ನೋಡುತ್ತಿದ್ದಾನೆ. ಈಗ ಹುಚ್ಚೀಂದ್ರ ಯತಿಗಳೆ ಮುಸಿಮುಸಿ ನಕ್ಕು ಕೇಳಿದರು—

‘ಯಾಕಪಾ.... ಯೋಗಿಕೊಳ್ಳದ ಗಂಗಣ್ಣಾ.... ಹುಳುಹುಳು ಯಾಕ ನೋಡ್ತೀ.... ಗುರ್ತ ಹತ್ಲಿಲ್ಲೇನು ನಂದು....?

ಆ ವೃದ್ಧ ಶರಣ ಈ ಪ್ರಶ್ನೆಯಿಂದ ಕಕ್ಕಾವಿಕ್ಕಿಯಾಗಿ ಹೋದ. ಅವನನ್ನು ನೋಡಿ ಎಲ್ಲರೂ ಕಕ್ಕಾವಿಕ್ಕಿಯಾದರು. ಏನೋ ಇವರಿಬ್ಬರೂ ಅತೀ ಪೂರ್ವದ ಸ್ನೇಹಿತರಿದ್ದಿರಬಹುದು. ಹಾಗಿದ್ದ ಪಕ್ಷದಲ್ಲಿ ಈ ವೃದ್ಧ ಶರಣನ ಬಾಯಿಂದ ನಮ್ಮ ಹುಚ್ಚೀಂದ್ರಯತಿಗಳ ಹಿಂದಿನ ಇತಿಹಾಸ್ನ ಊರು ಸೀಮೆ ಎಲ್ಲಾ ತಿಳಿದೀತೆಂದು ಹೂಬಳ್ಳಿಪುರದ ಜನರೆಲ್ಲಾ ಕಣ್ಣು ಕಿವಿಯಾಗಿ ಕಿವಿ ಕಣ್ಣಾಗಿ ನೋಡುತ್ತ ಕುಳಿತರು.

ಈಗ ಈ ಯೋಗಿಕೊಳ್ಳದ ಗಂಗಣ್ಣ ಕಣ್ಣು ಪಿಳಿಪಿಳಿ ಬಿಟ್ಟು ಧೈರ್ಯತಂದುಕೊಂಡು ಕೇಳಿದ—

ಯಪ್ಪಾ.... ಬುದ್ಧಿ.... ಹುಲಿಗವಿಯೊಳಗ ಹುಲಿಗೂಡ ವಾಸಾ ಆಗಿದ್ರೆಲ್ಲಾ ನಮ್ಮ ಯೋಗಿಕೊಳ್ಳ ಗುಡ್ಡದ ವ್ಯಾಗ.... ನೀವ ಅಲ್ರಿ?

ನಾವ ಅಲ್ಲಪಾ.... ನಾವ ಅಲ್ಲಾ.... ಅವಾ ಸತ್ನಪಾ.... ಸತ್ತಾ....’

‘ಹಾಂ.... ಹಾಂ.... ಹಾಂ.... ಸುಳ್ಳು.... ಸುಳ್ಳು.... ಸುಳ್ಳು.... ನೀವ.... ನೀವ.... ನಿಮ್ಮ ಹೆಸರ ಏನೋ ಇತ್ತಲ್ರೀ?’

‘ಏನಿತ್ತೋ ಏನೊ.... ಮರ್ತ್ಯ ಹೋಗೈತೆಪಾ ನಮಗ....’

‘ಹಾಂ.... ಹಾಂ.... ಹೊಳೀತು.... ಗುಡುಸಿದ್ಧೇಂದ್ರ ಯತಿಗಳು

ಅಂದ್ರ ನೀವೇ ಅಲ್ಲವೇನ್ರಿ....?

‹ಅಲ್ಲೆ ಗುರುಸಿದ್ಧೇಂದ್ರಾ.... ಇಲ್ಲೆ ಈ ಹೂಬಳ್ಳಿ ಜನದ ಕೈಯಾಗ ಸಿಕ್ಕು ಹುಚ್ಚೇಂದ್ರಾ ... ಇನ್ನ ಯಾರ ಯಾರ ಕೈಯಾಗ ಸಿಕ್ಕು ಏನೇನಾ ಗತೇವ್ರೋ ಏನೊ?›

‹ಏನಾದ್ರೂ ನೀವು ನೀವ ಅಲ್ರೀ?'

‹ಹೌದಪಾ ಯೋಗಿಕೊಳ್ಳದ ಗಂಗಣ್ಣಾ.... ಆದ್ರ ಆ ನಮ. ಹುಡಿಗಿ ಎಲ್ಲಿ ಹೋತು.... ಆ ನನ್ನ ಮಗಳು ಎಲ್ಲಿ ಹೋದ್ಲು.... ಏನಾತು ಆ ನನ್ನ ಸಂಸಾರಾ?'

‹ಆಕಿ ನಿಮ್ಮ ಪ್ರೀತಿ ಹುಡಿಗಿ ಸತ್ತು ಹೊದ್ಲು ತಂದೇ....ಇಕಾ ಇಲ್ಲಿ ಕುಂತಾಳ ನೋಡ್ರಿ ಆ ಮಗಳು.... ನಿಮ್ಮ ಮಗಳು... ಮಹಾರಾಣಿ ಆಗ್ಯಾಳ ಈ ನಿಮ್ಮ ಹೊಟ್ಟಿ ಕಂದವ್ವಾ....'

‹ಈಕೇ ಏನಪಾ ನನ್ನ ಮಗಳು....?'

ಆ ಹಿರಿಯ ಶರಣಿ ಕಣ್ಣೀರು ಸುರಿಸುತ್ತಾ ಹೇಳಿದಳು—

‹ಹೌದು ಅಪ್ಪಾ.... ನಾನೇ ನಿಮ್ಮ ಮಗಳು.... ಐವತ್ತ ವರ್ಷದ ಹಿಂದ ನೀವು ನಮ್ಮ ಮನಿ ಬಿಟ್ರಿ... ಬಳಗಾ ಬಿಟ್ರಿ .. ಇಲ್ಲಿ ಸ್ವಾಮಿ ಆಗಿ ಬಂದ ಕುಂತ್ರಿ....'

ಈ ಪೂರ್ವದ ವಿಷಯಗಳನ್ನು ಕೇಳಿದ ಹೂಬಳ್ಳಿಪುರದ ಜನರೆಲ್ಲಾ ತಬ್ಬಿಬ್ಬಾದರು. ಇದೇನು ವಿಚಿತ್ರ? ನಮ್ಮ ಹುಚ್ಚಯ್ಯ ಸ್ವಾಮಿಗಳು ಲಗ್ನವಾಗಿದ್ದರೆ? ಇವರಿಗೆ ಹೆಂಡತಿ ಇದ್ದಳೆ? ಮಗಳು ಇರುವಳೆ? ಯೋಗಿಕೊಳ್ಳದ ಮೇಲಿನ ಹುಲಿಗವಿಯು ಇವರ ಮೂಲ ವಾಸಸ್ಥಾನವೇ? ನೂರೆಂಟು ಸಂಶಯಗಳು ಚಿಗುರಿದವು. ಶರಣರ ಅನುಭವಮಂಟಪದ ಗೋಷ್ಠಿ ಸಾಗಿತು. ಆದರೆ ಹೂಬಳ್ಳಿ ಪುರವಾಸಿಗಳಿಗೆ ತಮ್ಮ ಮಹ

ಯೋಗಿಯ ಪೂರ್ವವೃತ್ತಾಂತವನ್ನು ಅರಿತುಕೊಳ್ಳುವದರಲ್ಲಿ ಅಸಹನೀಯ ಆತುರ ಕಾತುರಗಳು ಉಂಟಾದವು. ಆದರೆ ತಮ್ಮ ಹುಚ್ಚೀಶ್ವರ ಯೋಗಿಗಳ ಮುಂದೆಯೇ ಕೇಳಿದರೆ ಅವರು ಮಾತನ್ನು ಗಾಳಿಪಟಮಾಡಿ ಹಾರಿಸಿ ಬಿಡುತ್ತಾರೆ. ಹೇಗೆ ಕೇಳುವದು? ಹೇಗೆ ತಿಳಿಯುವದು?

* * *

ಇದೇ ದಿನ ರಾತ್ರಿ ಮತ್ತೆ ಶರಣರಿಗೆಲ್ಲಾ ಮಹಾಪ್ರಸಾದವಾಯಿತು. ಹೂಬಳ್ಳಿಯ ಪುರವಾಸಿಗಳು ಹಾಗೂ ರುದ್ರಪ್ಪಶೆಟ್ಟರು ಆ ಮುದಿಮುತ್ತಜ್ಜ ಮಹಾವೃದ್ಧ ಶಿವಯೋಗಿಗಳನ್ನು ಜುಲುಮೆಯಿಂದ ಹೂಬಳ್ಳಿ, ಗ್ರಾಮಕ್ಕೆ ಎತ್ತಿನ ಬಂಡಿಯಲ್ಲಿ ಕುತನಿ ಗಾದಿ ಹಾಸಿ ಕುಳ್ಳಿರಿಸಿ ಕರೆದೊಯ್ದರು. ಶೆಟ್ಟರ ಮನೆಯಲ್ಲಿ ಪ್ರಭಾವತಿಯೇ ಪಾದಪೂಜೆ ಮಾಡಿದಳು. ನೂರಾರು ಭಕ್ತರು ಕೂಡಿದರು. ಪೂಜೆ ದಕ್ಷಿಣೆ ಮುಗಿದ ನಂತರ ಪ್ರಭಾವತಿ ಕೇಳಿದಳು—

'ಅಜ್ಜಯ್ಯ.... ನಮ್ಮ ಹುಚ್ಚೀಂದ್ರಸ್ವಾಮಿಗಳು ನಿಮಗೆ ಗುರ್ತು ಐಂದಿರಿ· ಅವರಿಗೆ ಸಂಸಾರ ಮಗಳು ಅಂತ ಅಂದ್ರಿ....ಅವರು ಎಲ್ಲಿಯವ್ರು ಯಾರು ಅಂಬೂದನ್ನ ಹೇಳಿ ನಮ್ಮನ್ನ ಉದ್ಧಾರ ಮಾಡ್ರಿ....'

ಮುದುಕ ನಾಚಿಕೊಂಡು ಹೇಳಿದ—

'ಅದನ್ನೆಲ್ಲಾ ಹೇಳಾಕ ನನಗ ನಾಚಿಕೆ ಬರತೈತೆವ್ವಾ... ಹರೇದಾಗಿನ ಸುದ್ದಿ ಹರೇದಾಗ ಹೇಳಬೇಕು.... ಇಳಿವಯಸ್ಸಿನ ತಿಳಿವಿನ್ಯಾಗ ಬೆಳಗವನ್ಯಾಗ ಹ್ಯಾಂಗ ಹೇಳೂದು?'

ಈ ಮಾತು ಕೇಳಿ ಎಲ್ಲರ ಹೊಟ್ಟೆ ಧ್ರುಂ ಎಂದಿತು. ಪ್ರಭಾವತಿ ಮೂಕಳಾಗಿ ಕಂಬನಿ ಮಿಡಿದಳು. ಅವಳ ಎದೆ ಒಂದು ತರಹ ನಡುಗಿತು.

ಕೂಡಿದ ಜನರಲ್ಲಿ ಒಬ್ಬ ಮುದುಕ ಕೇಳಿದ—

'ಇಲ್ರಿಹೇಳ್ರಿ ಬುದ್ಧಿ....ಇತಿಹಾಸಕ್ಕ ಮುಪ್ಪಿಲ್ಲಾ ಸಾವಿಲ್ಲಾ.... ಕಾಲಕ್ಕ ಮುಪ್ಪೈತಿ ಸಾವೈತಿ.... ಇಲ್ಲಿ ಹೇಳ್ರಿ....'

ಆ ಮುದಿ ಮುತ್ತಜ್ಜ ಶರಣ ಒಮ್ಮೆ ನಾಚಿ ಒಮ್ಮೆ ನಕ್ಕು ಇನ್ನೊಮ್ಮೆ ಗಂಭೀರವಾಗಿ ಆಲೋಚಿಸಿ ನಿರ್ಧಾರ ತಂದುಕೊಂಡು ಹೇಳ ತೊಡಗಿದ—

'ನೋಡ್ರಿಸಾ.... ನಾ ಈಗ ಏನ ಹೇಳತೇನೋ ಅದು ತತ್ವಕ್ಕ ಸಂಬಂಧಾ ಅಂತ ತೀಳೀರಿ.... ಕಾಲಾ ಹಳೇದಾಕ್ಕೊಂತ ಹೋದ್ರೂ ಇತಿ ಹಾಸಾ ಹೊಸಾದಾಕ್ಕೊಂತ ಬರತೈತಿ.... ವೇದಾ ಹಾಳ ಹಳೇದಾದ್ರೂ ತತ್ವಾ ಹೊಸಾಹರೇದಾಗಿ ಹೊಳಿತೈತಿ.... ಹಾಂಗ ನೋಡ್ರಿ.... ಈ ನಿಮ್ಮ ಹುಚ್ಚೇಂದ್ರ ಮಹಾಯೋಗಿಗಳು ಕಾಲಾ ಮೆಟ್ಟಿ ತತ್ವದಾಗ ಬಾಳಿ ದೋರು.... ಮಹಾಮಹಿಮ ಶಿವಯೋಗೀಶ್ವರರು.... ಅಷ್ಟಸಿದ್ಧಿಗಳು ಎಂದೋ ವಶವಾದ ಸಿದ್ಧಪುರುಷರು... ಪರಮಜ್ಞಾನಿ ಪರಿಪೂರ್ಣರು.... ಇಂಥಾವ್ರು ಅದಾರಂತ್ಹೇಳೆ ಲೋಕ ಬಾಳೈತಿ.... ಪಾಪ ತಾಳೈತಿ....'

ಇಷ್ಟು ಹೇಳಿ ಅವರು ಸುಮ್ಮನಾದರು. ಕುಳಿತವರಲ್ಲಿ ಒಬ್ಬ ಧ್ವನಿ ಏರಿಸಿ ಕೇಳಿದ—

'ಏನ್ರಿ... ನಾವು ಅವರ ಹೆಸರು ದೆಶಿ ಕೇಳೀದ್ರ ನೀವು ಉಳ್ಳಾ ಗಡ್ಡಿ ಹೆಚ್ಚಿದ್ರಿ.... ಅವರು ಮಹಾತ್ಮರು ಅಂಬೂದು ಲೋಕಕ್ಕೆಲ್ಲಾ ಗೊತ್ತಾಗೇದ.... ಅದು ನಮಗೂ ತಿಳಿದ್ವದ.... ಆದ್ರ ನಾವು ಕೇಳಿದ್ದ ಬ್ಯಾರೆ .... ನೀವು ಹೇಳಿದ್ದ ಬ್ಯಾರೆ...'

'ಏನ ಕೇಳಿರೆಪಾ ನೀವು?'

'ಅವರ ಮೂಲಾ ತಳಾಬುಡಾ ಹೆಸರು ದೆಶಿ?'

'ಹೀಂಗಂದ್ರಾ್ಯ.... ಅದನ್ನ ಹ್ಯಾಂಗ ಬರತೈತೆಪಾ ಹೇಳಾಕ....

ಯಾಕಂದ್ರ ಅವರ್ನ ಯೋಗಪರ್ವತದ ಹುಲಿಗವಿಯೊಳಗ ಕಂಡಿದ್ದೆ.... ನಾನು ಆ ಪರ್ವತದ ಕೆಳಗಿನ ಯೋಗಿಕೊಳ್ಳದ ಆಶ್ರಮದಾಗ ಇದ್ದೆ.... ಈಗ ನನಗ ನೂರಾಇಪ್ಪತ್ತು ವರ್ಷ ವಯಸ್ಸು.... ನೂರು ತುಂಬಿ ಇಪ್ಪತ್ತ್ರ ವ್ಯಾಲೆ ಆಗ್ಯಾವು.... ಈಗ ನೂರವರ್ಷದ ಹಿಂದ ನಾ ಬ್ಹಾಳ.... ಬ್ಹಾಳಂದ್ರ ಬ್ಹಾಳ ಹರೇದವಾ ಇದ್ದೆ.... ಚಂದಿದ್ದೆ.... ಚಲುವಿದ್ದೆ.... ಆದಕ್ಕಪಾ ನಾಚಿಗಿ ಬರತೈತಿ ಅಂಬೂದು....’

‘ನಾಚಬ್ಯಾಡ್ರಿ.... ಹೇಳ್ರೀ ಬುದ್ದಿ....’

‘ಆವಾಗ ನನಗ ಇಪ್ಪತ್ತ ತುಂಬಿತ್ತು.... ಹರೇವಂದ್ರ ಹರೇ ಇತ್ತು.... ಸೊಡ್ಡ ಹೊಡಪ ಗುಡ್ಡಾ ಎತ್ತಿ ಒಗಿಯೊ ಹರೇವು... ಹುಲಿ ಹಿಡಿದು ವಿೂಸಿ ಕಿತ್ತೂವಂತಾ ಹರೇವು ... ನನಗಿತ್ತು....’

‘ಅಬಬಬಬಬ.... ಆವಾಗ; ಈ ನಿಮ್ಮಯೋಗಿಗಳಿಗೆ ಎಷ್ಟಿತ್ರಿ ವಯ್ಸ್ಸ?’

‘ಆವಾಗ ಇವ್ರಿಗೆ ಎಷ್ಟ ವಯ್ಸಿತ್ತೋ ಗೊತ್ತಿಲ್ಲಾ.... ಆದ್ರ ನೂರಾಐವತ್ತ ವರ್ಷ ಇವ್ರಿಗೆ ಆಗೈತಿ ಅಂತ ಆವಾಗ ಜನಾ ಇವ್ರಿಗೆ ಅಂತಿದ್ರು....’

‘ಅಪ್ಯಾಂಗ್ರೀ ಬುದ್ಧಿ.... ಈಗ ಅವ್ರು ನೂರು ತುಂಬಿದ ಯೋಗಿಗಳಂತೆ ಕಾಣಸ್ತಾರು.... ಈಗ ನೂರ ವರ್ಷದ ಹಿಂದಕ್ಕ ಅವ್ರಿಗೆ ನೂರಾಐವತ್ತ ವಯ್ಸು ಹ್ಯಾಂಗ ಆದೀತ್ರೀ?

‘ಅದಕ್ಕಪಾ.... ನಾ ತತ್ವದ ಇತಿಹಾಸಾ ಹೇಳ್ತೇನಿ ಅಂಬೂದು.... ಅವರಂದ್ರ ಒಂದು ತತ್ವಾ... ಈಗ ಹ್ಯಾಂಗ ಆದಾರೋ ತದ್ರೂಪ ನೂರ ವರ್ಷದ ಹಿಂದ ಹಾಂಗೇ ಇದ್ರು.... ಆಗೂ ಮುಪ್ಪಿನ ಮುನಿ ಇದ್ರು .... ಈಗೂ ಮುಪ್ಪಿನ ಮುನಿ ಆದಾರು....’

‘ಅಂದ್ರ.... ಹರೇದವ್ರು ಯಾವಾಗ ಇದ್ರು?’

'ಛೇಛೇಛೇಛೇ.... ಅವ್ರು ಮರಣಾ ಗೆದ್ದ ಶರಣಾ ಅಂದಮ್ಯಾಲೆ; ಹುಟ್ಟು, ಹರಂಗ ಗೊತ್ತು.... ಹರೇವು, ಪರಬ್ರಹ್ಮಗ ಗೊತ್ತು....'

'ಸುಳ್ಳು ಹೇಳ್ತೀರಿ....'

'ಸುಳ್ಳಂದ್ರ ನನ್ನ ಲಿಂಗಾ ಸುಳ್ಳಂತ ಬಿಡತೇನಿ.... ಅವ್ರು ಈಗೂ ನೂರರ ಮುನಿ ... ನೂರು ವರ್ಷದ ಹಿಂದೂ ನೂರರ ಮುನಿ.... ಎಷ್ಟು ನೂರು ವರ್ಷದ ಮುನಿಗಳೋ ಏನೋ ಯಾರಿಗ್ಗೆ ಗೊತ್ತು... ಅವರಂದ್ರ ತುಂಬಿದ ಮುನಿ.... ನಿತ್ಯ ನೂರು ತುಂಬಿದ ಮುನಿ....'

'ಮತ್ತ ಅವ್ರ ಸಂಸಾರ....ಹೇಂತಿ....ಪ್ರೀತಿ ಮಗಳು ಅಂದ್ರೆಲ್ರಿ?

'ಥೂಥೂಥೂಥೂ.... ಅದು ಅವ್ರ ಸಂಸಾರಲ್ಲಾ.... ನನ್ನ ಸಂಸಾರಾ.... ನನ್ನ ಹೇಂತಿ.... ನನ್ನ ಹುಡಿಗಿ.... ಆದ್ರ ಅವ್ರು ಅದನ್ನ ಪ್ರೀತಿಲಿಂದ ತಮ್ದು ಅಂತ ಕರುಣಾ ತೋರಿ ಕಾಪಾಡತಿದ್ರು.... ನಂಬು ಕೇವಲ ಸಂಸಾರದಾಗಿನ ಸಂಸಾರಾ.... ಅವರದು ಭಕ್ತ ಸಂಸಾರಾ.... ಭಕ್ತ ರೊಂದಿಗೆ ಸಂಸಾರಾ....'

'ಶಿವಶಿವಾ ... ಶಿವಶಿವಾ.... ತಪ್ಪಾತ್ರಿ.... ತಪ್ಪಾತ್ರಿ....'

'ತಪ್ಪೇನಿಲ್ಲಪಾ.... ಸಂಸಾರವಂದೀಗ್ರೂ ಕೇಳೂದ ಹೀಂಗ... ಆದ್ರ ನಾ ನನ್ನ ಇತಿಹಾಸಾ ಮುಗಸ್ಲಿಲ್ಲಾ ...'

'ಹೇಳ್ರಿ.... ಏನಾತು ...?'

'ನಾ ಆವಾಗ ನೂರು ವರ್ಷದ ಹಿಂದ ಹರೇದವಾ ಇದ್ದೆ.... ತುಂಬಿದ್ದ ಯೌವನಾ.... ಆಗ ದೇವಲೋಕದಿಂದ ಇಳಿದು ಬಂದಂಥಾ ಒಬ್ಬಾಕಿ ಭರ್ಜರಿ ಸುಂದ್ರಿ ದಿನಾ ಇವರ ಗವಿಗೆ ಹೋಗಿ ಆಕಳ ಹಾಲು ಕೊಟ್ಟು ಪಾದಪೂಜಾ ಮಾಡಿ ಬರತಿದ್ಲು....'

'ಹೂಂ....?

‹ಹೂಂ ಏನಂತೀರಿ.... ಆಕಿ ಅಂಥಾ ಸುಂದ್ರಿ ಇದ್ಲು.... ಆಕೀನ್ನ ನೋಡಿ ನಾ ಬಾಯಿಬಾಯಿ ಬಿಟ್ಟೆ.... ನಾ ಬ್ಯಾಡ್ರಂವಾ.... ಅಂದ್ರ ಬ್ಯಾಟಿ ಆಡತಿದ್ದೆ.... ಲಿಂಗಿದ್ದಿದ್ದಿಲ್ಲಾ....'

‹ಮುಂದೇನಾತ್ರಿ....'

‹ನನ್ನ ಪ್ರೇಮಾ ತಡೀಲಿಕ್ಕೆ ಆಗಲಿಲ್ಲಾ.... ಆ ಹುಡಿಗೀ ದಾರ್ಯಾಗ ತರುಬಿ ಕೇಳಿದೆ....'

‹ಏನಂತ?'

'ಮದುವಿ ಆಗೂ ಅಂತ....'

‹ಏನಂದ್ಲು?'

‹ಥೂ ಅಂದ್ಲು'

ಎಲ್ಲರೂ ಗೊಳ್ಳನೇ ನಕ್ಕರು. ಮುಂದೆ ಆತ ಹೇಳತೊಡಗಿದ—

‹ಅದಕ್ಕ್ಯಪಾ ನಾಚಿಗಿ ಬರತೈತಿ ಅಂಬೂದು.... ನಾ ಮುಂದ ನನ್ನ ಹಟಾ ಬಿಡ್ಲಿಲ್ಲಾ.... ಅವರ ಗವಿಗೆ ಹೋಗಿ ಪಾದಕ್ಕ ಬಿದ್ದು ಬೇಡಿ ಕೊಂಡೆ.... ಮೊದ್ಲsss ತಾಯಿ ಕರಳು.... ಹೂಂ ಅಂದ್ರು.... ಆ ಹುಡಿಗಿ ನನ್ನಂಥಾ ಬ್ಯಾಡನ್ನ ಲಗ್ನಾ ಆಗಾಕ ಅಂಜಿ ಥರಾ ಥರಾ ನಡಗತು.... ಆದ್ರೂ ಅವ್ರು ಕೇಳಲಿಲ್ಲಾ.... ನನಗ ಲಿಂಗಾ ಕಟ್ಟೇದ್ರು ... ಮಾಂಸಾ ಗೀಂಸಾ ತಿಂಬೂದು ಬಿಡಿಸೀದ್ರು..... ಪಾದೋದಕ ಪ್ರಸಾದದ್ದ ನೆಲಿಬೆಲಿ ತಿಳಿಸೀದ್ರು .... ಹೀಂಗ ಆಕಿ ನನ್ನ ಹೇಂತಿ ಆದ್ಲು .. ಹೀಂಗ ನಾ ಆಕಿ ಗಂಡಾದೆ... ಹೀಂಗ ನಾ 'ಅವ್ರ ಸೇವಾ ಮಾಡಿ ಶರಣಾದೆ....'

'ಎಲ್ಲಿದಾಳ್ರಿ ಆ ತಾಯಿ.... ನಿಮ್ಮ ಹೇಂತಿ?'

'ಸತ್ಲಪಾ.... ಆಕಿ ಸತ್ಲು....'

‹ಶಿವಶಿವಾ.... ಶಿವಶಿವಾ ...'

'ಈಗ ಬಂದಾಕಿ ನನ್ನ ಮಗಳು.... ಆ ಕೆಂಪನ್ನ ಹುಡಿಗಿ ಹಾಡ ಅಂದಾಕಿ ನನ್ನ ಮೊಮ್ಮಗ್ಳು--- ನಾನೂ ನನ್ನ ಮಗಳೂ ಆ ಯೋಗಿಗಳ ಸೇವಾ ಮಾಡೀದ್ವಿ....'

'ಮುಂದ್ರಿ?'

'ಇವರು ನಿರ್ರಂಜನ ಪುರುಷರು.... ಭಕ್ತರ ಸಂಖ್ಯಾ ಹೆಚ್ಚಾದ ಕೂಡ್ಲೆ ಒಂದ ದಿನಾ ಮಠಾಮಾಯಾ ಆದ್ರು.... ಇವತ್ತ ಮರಳಿ ನಮಗ ದಕ್ಕೀದ್ರು....'

'ಇವರ ಹೆಸರೇನ್ರಿ?'

'ನಮಗೂ ಗೊತ್ತಿಲ್ಲಪಾ.... ನಮಗೂ ಗೊತ್ತಿಲ್ಲಾ.... ಆದ್ರ ಯಾವಾಗರೆ ಒಮ್ಮೆ ಇವರು ನಾ ಗುರುಸಿದ್ದಾ ಅಂತ ಬಡಬಡಸತಿದ್ರು.... ಆದರ ವ್ಯಾಲಿಂದ ಇವರು ಗುರುಸಿದ್ಧೇಂದ್ರರ್ರು

'ಇವರ ತಂದಿ.... ತಾಯಿ.... ಊರು?'

.ಯಾರಿಗೆ ಗೊತ್ತಪಾ.... ನನ್ನ ಹರೇದ ಕಾಲಕ್ಕ ನನಗಿಂತಾ ಹಾಳ ಹಳೇದ ಹಳಬ್ರು ಒಬ್ರು ಇದ್ರು... ಅವ್ರಿಗೂ ಈ ಮಾತುಮುನ ನೆಲೀ ಗೊತ್ತಾಗಿದ್ದಿಲ್ಲಾ.... ನೂರವರ್ಷದ ಹಿಂದ ಒಬ್ಬಾ ನೂರಾ ಐವತ್ತ ವರ್ಷದ್ದ ಮುದುಕ ಇದ್ದಾ... ಅವಾ ಒಂದು ಮಾತ ಅಂತಿದ್ದಾ....'

ಏನಂತ್ರೀ?'

'ಇವ್ರು-ಹಿಮಾಲಯುದ ಹಿಮಪರ್ವತದ ಮಹಾಯೋಗಿಗಳೂ ಅಂತ,...'

'ಹಾಂಗಾದ್ರ ಇವ್ರ ಹಿಮಾಲಯುದವರೇನ್ರೀ?'

'ಯಾರಿಗ್ಗೊತ್ರೆಪಾ... ಯಾರಿಗ್ಗೊತ್ತು.... ಒಟ್ಟ ಇವ್ರು ಹಿಮಾ ಲಯುದವ್ರೋ ಶ್ರೀಶೈಲದವ್ರೋ ಉಳಿವಿಯವ್ರೋ ನಮಗಗೊತ್ತಾಗಿಲ್ಲಾ.... ಒಟ್ಟಿನ ವ್ಯಾಲೆ ಇವ್ರು ನಮ್ಮೋರು ಅಂತ ತಿಳಿದ ಬಿಡಬೇಕ್ರೆಸಾ....'

'ನಮ್ಮೋರಂದ್ರೀ?'

'ನಮ್ಮೋರಂದ್ರ ನಮ್ಮ ಮಾನವ ಕುಲದವರು.... ಇವರು ಮಾನವತೆ ಆರಳಿ ದೇವತ್ವವಾದ ಆತ್ಮನಂದಾದೀಪ.... ಲೋಕದ ಆಧ್ಯಾತ್ಮ ಪ್ರಪಂಚದ ಒಂದು ಗುಪ್ತ ಶಿಖರ.... ಇವರು ಯಾವ ದೇಶದವರೇ ಇರಲಿ.... ಯಾವ ಕಾಲದವರೇ ಇರಲಿ.... ಮುಂಚಿರಲಿ.... ಹಿಂಚಿರಲಿ.... ಭೂತಕಾಲದವರಿರಲಿ....ಭವಿಷ್ಯ ಕಾಲದವರಿರಲಿ.... ಇವರು ಇವರೇ....'

'ಶಿವಶಿವಾ.... ಶಿವಶಿವಾ.... ಶಿವಶಿವಾ....'

ಓಂಕಾರವೇ ಇಳಿದು ಬಂದಂತೆ ಎಲ್ಲರ ಮಧ್ಯದಲ್ಲಿ ಮಹಾಮೌನ ಇಳಿಯಿತು! ಆ ಅನಂತ ಮೌನದ ಮಹಾಶಾಂತಿಯಲ್ಲಿ ಗುರುಸಿದ್ಧರಾಜ ಯೋಗೀಂದ್ರರು.... ಕಾಲದೇಶವರ್ತಮಾನಗಳನ್ನು ಮೀರಿದ ಯುಗಪುರುಷ ರಾಗಿ ತೋರಿದರು!!!

೧೧

ಹನ್ನೊಂದು ದಿನಗಳು ಏಕಾದಶ ರುದ್ರಾಭಿಷೇಕದಂತೆ ಕಳೆದವು. ಕಲ್ಯಾಣಕ್ಕೆ ಹೊರಟ ಶರಣರು ಕಲ್ಯಾಣವನ್ನೇ ಮರೆತು ಹೂಬಳ್ಳಿ ಪುಣ್ಯಾ ರಣ್ಯದಲ್ಲಿ ತಂಗಿದರು, ಗುರುಲಿಂಗಜಂಗಮದ ಶ್ರೀದರ್ಶನ ಗವಿಗುಂಡದ ಸರೋವರದ ದಂಡೆಯ ಮೇಲಾಯಿತು. ಆಶ್ರಮದ ಪರ್ಣಕುಟೀರಗಳೆಲ್ಲಾ ಶಿವ-ಶಕ್ತಿಯರ ಲಗ್ನದ ಹಂದಿರವಾದವು. ಸರೋವರ ಓಂಕಾರದ ಕಂಪು

ತುಂಬಿ ತಂಗಾಳಿ ಬೀಸಿತು. ಪಕ್ಷಿಗಳು ಶಿವಪ್ರಜ್ಞೆಯ ಆನಂದ ಧ್ಯಾನಕ್ಕೆ ಸೌಂದರ್ಯದ ಭಾಷ್ಯ ಬರೆದವು. ಗವಿಯಾಳದ ಗುರುಸಿದ್ಧೇಶ ಈ ವಿಶ್ವದ ಸತ್ಯದರ್ಶನಕ್ಕೂ ಸೌಂದರ್ಯ ಪ್ರಜ್ಞೆಗೂ ಶಿವತತ್ವದ ಪರಮಜ್ಞಾನ ಮೂರ್ತಿಯಾಗಿ ಕಂಗೊಳಿಸಿದ. ಹೀಗಿರುವಾಗ ವಿಶ್ವದ ಪರಿಪೂರ್ಣ ರೂವಾರಿತನ ಈ ಹೂಬಳ್ಳಿ ಸ್ವರ್ಗದಲ್ಲಿ ಸಂಗಮಿಸಿದಾಗ ಕಲ್ಯಾಣವ್ಯ ಮಾತೇಕೆ? ಆದರೂ ಶರಣರ ಕೂಗು ಕೂಗಿತು! ಹನ್ನೊಂದು ದಿನವಿದ ಮೇಲೆ ನೂರೊಂದು ಸ್ಥಲ ಪಡೆದಂತಾಯಿತು. ಬಸವನ ಕಲ್ಯಾಣ 'ಸಂಗಾ' ಎಂದು ಕೂಗಿ ಕರೆದಾಗ ಶರಣರ ಆತ್ಮಲಿಂಗಗಳು ವಿಕಂಪಿಸಿದವು. ಹನ್ನೊಂದನೆಯ ದಿನ ಸಾಯಂಕಾಲದಲ್ಲಿ ಶರಣರು ಗವಿಗುಂಡದ ಹುಚ್ಚೀಶ್ವರ ಯತಿವರನಲ್ಲಿ ಅಪ್ಪಣೆ ಕೇಳಿದರು—

'ಪ್ರಭು.... ತಾವು ನಮ್ಮನ್ನು ಬಿಡಲಾರದೆ ಉಳಿಸಿಕೊಂಡಿರಿ.... ಹೂಬಳ್ಳಿಯ ಶರಣಜನ ಅತಿಥಿಸತ್ಕಾರವನ್ನು ಹಗಲೆನ್ನದೆ ರಾತ್ರಿಯನ್ನದೆ ಮಾಡಿದರು....'

ಗುರುಸಿದ್ಧೇಂದ್ರಯೋಗಿಗಳು ಮಾತನಾಡಲಿಲ್ಲ. ಗಂಭೀರವಾಗಿ ರುದ್ರಶೈಲಿಯಲ್ಲಿ ಶಿಲಾವೀರಭದ್ರನಂತೆ ಮಂದಹಾಸವಿರಹಿತ ಭಾವದಲ್ಲಿ ಕುಳಿತಿದ್ದರು. ಶರಣರಲ್ಲಿ ಒಬ್ಬಳು ತಾಯಿ ಮಾತು ಮುಂದುವರಿಸಿದಳು....

'ತಂದೇ.... ಅಡವಿಯಲ್ಲಿ ಕಲ್ಪವೃಕ್ಷ ಕಂಡೆವು.... ಭೂಲೋಕದಲ್ಲಿ ಪರಲೋಕ ಕಂಡೆವು.... ಇನ್ನೇನು ತಂದೆ.... ಇನ್ನು ಅಪ್ಪಣೆ ಕೊಡು ಹೋಗುತ್ತೇವೆ. ನಾವೆಲ್ಲಾ ಕಲ್ಯಾಣಕ್ಕೆ....'

ಯೋಗಿಗಳು ಮಾತನಾಡಲಿಲ್ಲ. ಅದೇ ಗಾಂಭೀರ್ಯ. ಅದೇ ರುದ್ರಶೈಲಿ. ಅದೇ ಉರಿಗಣ್ಣು. ಅದೇ ಭಯಂಕರ ಮೌನ.

'ಹೌದು ತಂದೆ.... ತಾವು ನಮಗೆ ಕಲ್ಯಾಣಕ್ಕೆ ಹೋಗಲು ಅಪ್ಪಣೆ ಕೊಡಬೇಕು.... ಅಲ್ಲಿ ಶೂನ್ಯ ಸಿಂಹಾಸನದ ಮೇಲೆ ಅಲ್ಲಮ ಪ್ರಭುದೇವರು ಓಂಕಾರವೇ ನುಡಿದಂತೆ ನುಡಿಯುವ ಮಂತ್ರೋಕ್ತಿಗಳನ್ನು

ಕೇಳುವ ಬಯಕೆ.... ಬಸವಣ್ಣ.... ಚನ್ನಬಸವಣ್ಣ.... ಸಿದ್ಧರಾಮ.... ಅಕ್ಕಮಹಾದೇವಿ.... ಗಂಗಾಂಬಿಕೆ.... ನೀಲಾಂಬಿಕೆ.... ಅಕ್ಕನಾಗಮ್ಮ.... ಮಡಿವಾಳ ಮಾಚಯ್ಯ.... ಡೋಹರ ಕಕ್ಕಯ್ಯ.... ಅಂಬಿಗರ ಚೌಡಯ್ಯ.... ಕಿನ್ನರಿಯ ಬ್ರಹ್ಮಯ್ಯ.... ಒಬ್ಬರೇ.... ಇಬ್ಬರೇ.... ಅಸಂಖ್ಯಾತರ ಅನಂತಾತ್ಮರ ಅಮರೋಕ್ತಿಗಳನ್ನು ಆಲಿಸಲು ನಮಗೆ ಆಶೀರ್ವದಿಸಿ ಪ್ರಭು.... ನಿಮ್ಮನ್ನೇ ಅಲ್ಲಿ ಕಾಣುತ್ತೇವೆ....ಅವರನ್ನೇ ಇಲ್ಲಿ ಕಂಡಿದ್ದೇವೆ....'

ಯೋಗಿಗಳಿಂದ ಉತ್ತರವಿಲ್ಲ. ಅವರ ಕಣ್ಣಲ್ಲಿ ಅದಾವುದೋ ದೂರದೃಷ್ಟಿ! ಸೂಕ್ಷ್ಮದೃಷ್ಟಿ!! ಕಣ್ಣು ಕೆಂಪಾಗಿವೆ. ನಗುಮುಖದ ಯೋಗಿ ಇಂದು ಕೆಂಡ ಕಿಡಿಯಾಗಿದ್ದಾನೆ. ಕಣ್ಣು ಹೊಗೆ ಕಾರುತ್ತಿವೆ. ಎದೆ ಅಗ್ಗಿಷ್ಟಿಗೆಯಂತೆ ಉರಿಯುತ್ತಿದೆ- ಒಂದು ಶಬ್ದ ಮಾತನಾಡಿದರೆ ಸಾಕು ಬೆಂಕಿಯ ಪ್ರಳಯವೇ ಆಗುತ್ತದೆಂಬಂತೆ ಹುಚ್ಚೇಶ್ವರಯೋಗಿ ನಿಗಿನಿಗಿತ ಅಗ್ನಿಯೋಗಿಯಾಗಿ ಶೂನ್ಯವನ್ನು ಇರಿದು ನೋಡುತ್ತಿದ್ದಾನೆ. ಶಿವಶಿವಾ ಉತ್ತರವಿಲ್ಲ! ಉತ್ತರಿಸುವ ಭಾವವೂ ಇಲ್ಲ!!

ಈಗ ಇನ್ನೊಬ್ಬ ಶರಣೆ ಸೆರೆಗೊಡ್ಡಿ ಕಣ್ಣೀರು ಸುರಿದು ಪ್ರಾರ್ಥಿಸಿದಳು—

'ಅಪ್ಪಾಜಿ.... ತಾವು ಮಹಾತ್ಮರು.... ನಾವಿನ್ನೂ ಬೆಂದದ ಬೇಯುದ ಜೀವಾತ್ಮರು.... ತಾವು ಲೋಕೋತ್ತರ ಪುಣ್ಯಾತ್ಮರು.... ಹೇಳಿರಿ ತಂದೆ ಯಾವುದು ನಿಮ್ಮ ಸಂಕಟ.... ಏನು ನಿಮ್ಮ ದುಃಖ.... ಏನು ನಿಮ್ಮ ಪರಿತಾಪ?'

ಆದರೂ ಉತ್ತರವಿಲ್ಲ! ಅಗ್ನಿಲಿಂಗದಂತೆ ಶಿವಯೋಗಿ ಏನನ್ನೋ ಧ್ಯಾನಿಸುತ್ತ ಕ್ರುದ್ಧನಾಗಿ ಕುಳಿತಿದ್ದಾನೆ. ವಾತಾವರಣ ಪ್ರಕ್ಷುಬ್ಧವಾಗಿದೆ. ಓಂಕಾರ ತುಂಬಿದ ಶಾಂತಿ ಸ್ಮಶಾನ ಶಾಂತಿಯಾಗಿದೆ. ಈಗ ಅದೇ ಆ ಮುದಿ ಮುತ್ತಜ್ಜ ಮಹಾವೃದ್ಧ ಜಂಗಮ ಕೈ ಮುಗಿದು ಕಂಠ ಏರಿಸಿ ಗಂಭೀರವಾಗಿಯೇ ಕೇಳಿದ—

‹ಇದೇನಿದು ಗುರುಸಿದ್ಧೇಂದ್ರ ಮಹಾಪ್ರಭು.... ಏನು ಸಂದೇಶ....ನಾವೆಲ್ಲರೂ ಕಲ್ಯಾಣಕ್ಕೆ ನಡೆದಿದ್ದೇವೆ.... ಹುಂ.... ಸಾರಿಬಿಡಿರಿ ನಿಮ್ಮ ಸಂದೇಶ....'

‹ರಕ್ತಾ.... ರಕ್ತಾ.... ರಕ್ತಾ....'

ಎಲ್ಲರೂ ಗಡಗಡ ನಡುಗಿದರು. ಈ ಉಗ್ರ ಮಾತುಗಳನ್ನು ಕೇಳಿ ಶರಣರಿಗೆಲ್ಲಾ ಸಾಯುವಂತಾಯಿತು. ಹೂಬಳ್ಳಿ ಜನರೆಲ್ಲಾ ಕುದಿಯುತ್ತಿರುವ ರಕ್ತದ ಕುಂಡದಲ್ಲಿ ಚಲ್ಲಿದಂತೆ ಒಂದುಸಲ ಚೀರಿಬಿಟ್ಟರು. ಮತ್ತೆ ಅದೇ ಮಹಾವೃದ್ಧ ಜಂಗಮ ಅಷ್ಟೇ ಗಂಭೀರವಾಗಿ ಕೇಳಿದ—

‹ಆಗಲಿ ಬುದ್ಧಿ.... ತಮ್ಮ ಸಂದೇಶವೇ ಸತ್ಯ.... ಶರಣರು ನಾವು ಅಂಜುವವರಲ್ಲ.. ಉರಿಬರಲಿ ಸಿರಿಬರಲಿ ಸಂಗಶರಣೆಂಬುದೇ ನಮ್ಮ ಧರ್ಮ.... ಸಾವುಶೂಲಗಳು ಕೇಕೆಹಾಕಿದರೂ ಶಿವಾರ್ಪಿತವೆನ್ನುತ್ತೇವೆ.... ಹುಂ ಹೇಳಿಬಿಡಿರಿ ನಿಮ್ಮ ಸಂದೇಶದ ಪೂರ್ತಿವಾಕ್ಯ.... ಮಹಾವಾಕ್ಯ....'

ಈಗ ಶಿಲೆಯು ಶ್ರೀಗಂಧವಾದಂತೆ, ಸಿಡಿಲು ಹೂವಿನ ಕುಡಿಯಾದಂತೆ ಶಾಂತಸುಂದರ ಸಹಜ ಸ್ಥಿತಿಗೆ ಗುರುಸಿದ್ಧರಾಜಯೋಗೀಂದ್ರರು ಮೆಲ್ಲನೆ ಇಳಿದು ಬಂದು, ತಾಯ್ತನದ ಅಪೂರ್ವ ಕಳಕಳಿಯಿಂದ ಒಂದೊಂದೇ ಶಬ್ದಗಳನ್ನು ಹೇಳಿದರು. ಎಲ್ಲರೂ ಶರೀರವೇ ಕಿವಿಯಾಗಿ ಕೇಳತೊಡಗಿದರು....

‹ಕೇಳಿರಿ ಶರಣರೇ.... ಸತ್ಯವು ಎಷ್ಟೇ ಕಠೋರವಾಗಿರಲಿ ಸತ್ಯವು ಸತ್ಯವೇ.... ಬಸವಣ್ಣನವರು ಕಲ್ಯಾಣ ಕಟ್ಟಿದರು.... ಶೂನ್ಯಸಿಂಹಾಸನ ಬೆಳಗಿಸಿದರು.... ಪ್ರಭುದೇವ ಮೂಡಿಬಂದ.... ಚನ್ನಬಸವ ತತ್ವಸಾರಿದ.... ಅಸಂಖ್ಯಾತರು ದರ್ಶನಕಿಡಿಗಳಾಗಿ ದಿಗಂತಗಳನ್ನು ರಾರಾಜಿಸಿದರು.... ಆದರೆ.... ಆದರೆ.... ಆದರೆ'....

‹ಆದರೇನು ತಂದೆ.... ಹೇಳಿಬಿಡಿರಿ.... ಹೇಳಿರಿ....'

‹ಆದರೆ.... ಹೇಳಲಾಗದ ಭವಿಷ್ಯ ಕಾದು ಬರುತ್ತಿದೆ.... ಮುಂದೆ

ಶರಣರಿಗೆ ಕಲ್ಯಾಣದಲ್ಲಿ ಉಳಿಗಾಲವಿಲ್ಲ.... ರಕ್ತದ ಕೋಡಿಗಳು ಹರಿಯಲು ಸಿದ್ಧವಾಗಿವೆ.... ರುಂಡಗಳು ಚೆಂಡಾಡಲು ದಾರಿ ಕಾಯುತ್ತಿವೆ.... ಶರಣರ ಮಹಾ ಅವಸಾನಕ್ಕೆ ಪರಮಾತ್ಮ ಸಂಕಲ್ಪಿಸಿದ್ದಾನೆ....'

ಎಲ್ಲರೂ ಒಮ್ಮೆಲೇ ಕೂಗಿ ಕೇಳಿದರು—

'ಮುಂದೇನು.... ಮುಂದೇನು.... ಮುಂದೇನು....'

'ಕೇಳಿರಿ.... ಭವಿಷ್ಯದಲ್ಲಿ 'ಏನಾಗುತ್ತದೆ ಎಂಬುದನ್ನೆಲ್ಲಾ ಬಿಚ್ಚಿ ಹೇಳಲು ನಾವು ಜಾತಕ ಹೇಳುವವರಲ್ಲ.... ಆದರೆ ಪುಣ್ಯಾತ್ಮರ ಆ ರಕ್ತದ ಹೊಳೆಯಲ್ಲಿ ಅವರ ಮಹಾತತ್ವಶಾಸ್ತ್ರಗಳು ವಚನ ವೇದಗಳು ಹೊಳೆಗೂಡಿ ಹೋಗಬಾರದು.... ಅದಕ್ಕೆಂದೇ ಇಲ್ಲಿ ಹೂಬಳ್ಳಿಪುರದ ಹೊರವಲಯದಲ್ಲಿ ಓಲೆ ಮಠವನ್ನು ನಮ್ಮ ಶಿಷ್ಯರಿಂದ ಕಟ್ಟಿಸಲಾಗುತ್ತಿದೆ.... ನೀವು ಹೋಗಿ ಚನ್ನಬಸವಣ್ಣನವರಿಗೆ ಮಾತ್ರ ನಮ್ಮ ಸಂದೇಶ ಮುಟ್ಟಿಸಿರಿ .. ಶರಣರೆಲ್ಲಾ ಇಲ್ಲಿಗೆ ಬರಲಿ.... ಅವರ ವಚನಗಳ ತಾಳೋಲೆ ಗ್ರಂಥಗಳನ್ನು ರಕ್ಷಿಸುವ ಭಾರ ನಮ್ಮದು....ಆದರೆ ಅವರನ್ನೆಲ್ಲಾ ರಕ್ಷಿಸುವ ಭಾರ ಮಾತ್ರ ನಮ್ಮದಲ್ಲ....'

ಎಲ್ಲರೂ ಒಮ್ಮೆಲೇ.... ಶಿವಾ.... ಎಂದು ಚೀರಿದರು. ಹೆಣ್ಣು ಮಕ್ಕಳು ಅತ್ತರು. ಮಕ್ಕಳು ಸಂಕಟಪಟ್ಟವು.

* *

ಹನ್ನೆರಡನೆಯ ದಿನ ಬೆಳಗಿನ ಜಾವ ಶಿವಪೂಜೆ ಪ್ರಸಾದ ಮುಗಿಸಿ ಶರಣರೆಲ್ಲಾ ನಡೆದರು. ಹೂಬಳ್ಳಿಯ ಪುರಜನರು ಅವರಿಗೆ ಎಲ್ಲ ಪೂಜಾವಸ್ತ್ರಗಳನ್ನೂ ಸಕಲವಸ್ತುಗಳನ್ನೂ ನೀಡಿ ಮಂಗಲವಾದ್ಯಗಳನ್ನು ಬಾರಿಸುತ್ತ ಬಹುದೂರದವರೆಗೆ ಕಳಿಸಿ ಬಂದರು.

೧೨

ಅಂತಃಪುರದಲ್ಲಿ ಮಾದೇವಿ ಒಬ್ಬಳೇ ಮಲಗಿದ್ದಾಳೆ. ಮಧ್ಯಾಹ್ನದ ಬಿಸಿಲು ತಾಪ ತುಂಬಿದೆ. ಅವಳ ಮಗ್ಗುಲಿಗೆ ಪ್ರೇಮದ ಪತಿ ಇಲ್ಲ. ವಿರಹ ಕೂಗಿದೆ. ಸುಂದರಿಯರಾದ ಸೇವಿಕೆಯರು ಬಾಳದ ಬೀಸಣಿಕೆ ಬೀಸುತ್ತಿದ್ದಾರೆ. ಮಾದೇವಿಯ ಗಂಡ ವಿಘ್ನೇಶ್ವರ ತೆಂಕಣ ನಾಡಿನ ರಾಕ್ಷಸಮಲ್ಲನೊಂದಿಗೆ ಯುದ್ಧಕ್ಕೆ ಹೋಗಿದ್ದಾನೆ. ಯುದ್ಧ ಭೀಕರವಾಗಿ ಸಾಗಿದ ವಾರ್ತೆಗಳು ದಿನದಿನಕ್ಕೆ ಬರುತ್ತಿವೆ. ಗೆಲುವಿನ ಸುದ್ದಿಯೂ ಇಲ್ಲ. ಮಲಗಿದಲ್ಲೇ ಮಾದೇವಿಗೆ ಸಂಕಟದ ಕನಸು. ಗಂಡ ಗಂಡಾಂತರದಲ್ಲಿ! ಸುತ್ತಲೂ ವೈರಿಗಳು ಭರ್ಚಿಗಳಿಂದ ಖಡ್ಗಗಳಿಂದ ಇರಿದಂತೆ!! ಆಗ ಆತ.... ಮಾದೇವೀ.... ಮಾದೇವಿ.... ಎಂದು ಚೀರಿದಾತೆ!!!

ಚೀರುತ್ತಲೇ ಮಾದೇವಿ ಎಚ್ಚತ್ತಳು. ಮತ್ತೆ ಅದೇ ಅಂತಃಪುರ ಮತ್ತೆ ಅದೇ ಪತಿ ಇಲ್ಲದ ಕಳಾಹೀನ ವಿರಹದ ಹಗಲು. ಕರುಣಾರಹಿತ ಬಿಸಿಲು. ಹತ್ತಾರು ಸೇವಿಕೆಯರು ಒಮ್ಮೆಲೇ ಓಡಿಬಂದು ಈ ಶೃಂಗಾರದ ರಾಣಿಯನ್ನು ಉಪಚರಿಸಿದರು. ಹೊರಮೈಗೆ ಉಪಚಾರ ಉಂಟು. ಒಳಮೈಗೆ ಎಲ್ಲಿಯ ಉಪಚಾರ?

ಶೋಕಾಕುಲೆಯಾಗಿ ಮಾದೇವಿ ಹಗಲು ಕಳೆದಳು. ಅರಮನೆಯಲ್ಲಿ ಹುಚ್ಚಿಯಂತೆ ಓಡಾಡಿದಳು. ಸಂಜೆ ಯುದ್ಧದಲ್ಲಿ ಒಬ್ಬ ಬಲಾಢ್ಯ ದಂಡನಾಯಕ ಸತ್ತ ಸುದ್ದಿ ಬಂತು. ಇಡೀ ಸುರಪುರದ ರಾಜಧಾನಿಯೇ ಕಳವಳಗೊಂಡಿತು. ಇಡೀ ರಾತ್ರಿ ಮಾದೇವಿಗೆ ನಿದ್ರೆ ಇಲ್ಲ. ಪತಿಧ್ಯಾನ. ನಡುರಾತ್ರಿ ದಾಟಿ ಕೊನೆಗೆ ಬ್ರಾಹ್ಮೀಮುಹೂರ್ತದಲ್ಲಿ ನಕ್ಷತ್ರಗಳು ಹನಿ

ಹನಿ ತುಂತುರು ಗಾಳಿ ಸುರಿದಾಗ ಅವಳಿಗೆ ನಿದ್ರೆಹತ್ತಿತು. ಮತ್ತೊಂದು ಕನಸು ಕಂಡಳು. ಕನಸಿನಲ್ಲಿ ಅದೇ ಹೂಬಳ್ಳಿಯ ಸರೋವರ. ಅದೇ ಗವಿ. ಅದೇ ಶ್ರೀ ಗುರುಸಿದ್ಧಶಿವಯೋಗಿಯ ಶ್ರೀ ಸನ್ನಿಧಾನ. ಗುರು ಸಿದ್ಧಯತಿ ನಸುನಕ್ಕು ಕೇಳಿದ—

‹ಯಾಕವಾ ಮಾದೇವಿ.... ಮರೆತುಬಿಟ್ಟೆಯಾ ನನ್ನನ್ನ....'

ಮಾದೇವಿ ಮುಗ್ಧ ನಗೆ ಸೂಸಿ ಹೇಳಿದಳು—

‹ಹೌದು ಅಪ್ಪಾಜಿ.... ತೌರುಮನೆ ಮರೆಯುವಂತಾ ಮನೆ ನೋಡಿ ನೀವೇ ಕೊಟ್ಟೀರಿ.... ಅಂದಮ್ಯಾಲೆ ನಾ ಮರತರ ಏನು ತಪ್ಪು ಹೇಳ್ರಿ'

'ಅಂತೂ ಮಹಾರಾಣಿ ಆದೆವ್ವಾ.... ನಾವೆಲ್ಲಾ ಗಂಜಿಸಾಧು ಗೋಳು....'

'ಅಲ್ಲ ಅಪ್ಪಾಜಿ.... ನೀವು ನೀರು ಮುಟ್ಟಿದರೆ ಅಮೃತಾ ಮಾಡೂ ಸಿದ್ಧರು...'

‹ಮಾದೇವಕ್ಕಾ.... ,ಕ್ಯಾದಿಗಿ ಹೂವಿನ್ಯಾಗ ಹಾವು ಹೊಗತಾ ವವ್ವಾ.... ಮಲ್ಲಿಗೀ ಹೂವು ಚಂದಾ ಅಂದ್ರೂ ಕಟ್ಟಿರಿವಿ ಮೂಗು ಕಡಿ ತಾವು....'

‹ಯಾಕೆ ಅಪ್ಪಾಜಿ.... ಹೀಗೇಕೆನ್ನುವಿರಿ?'

‹ಮಾದೇವಕ್ಕಾ.... ನೀ ನನ್ನ ಮರತ್ರೂ ನಾ ನಿನ್ನ ಮರೆಯೂ ದಿಲ್ಲವ್ವಾ.... ಅದಕ್ಕs ಈ ಮಾತು ಹೇಳಿದ್ದು....'

‹ಹೇಳ್ರಿ ಅಪ್ಪಯ್ಯಾ.... ಏನ ಹೇಳ್ರಿ....'

‹ನಿನಗ ಭಯಂಕರ ಕಷ್ಟದ ಕಾಲಾ ಬಂದೈತೆವ್ವಾ... ಐದ ದಿನಾ ದಿನಕ್ಕ ಸಾವಿರದಾ ಒಂದು ಸಲಾ ಶಿವಮಂತ್ರಾ ಅನ್ನು.... ಯಾರ ಜೋಡಿ ಮಾತಾಡಬ್ಯಾಡಾ.... ಅರಮನಿಲಿಂದ ಹೊರಗ ಹೋಗಬ್ಯಾಡಾ.... ಮಡಿ

ಲಿಂದ ನನ್ನ ಪೂಜಾ ಮಾಡು....'

'ಆಗ್ಲಿ ಅಪ್ಪಯ್ಯಾ.... ಆಗ್ಲಿ ಅಪ್ಪಯ್ಯಾ....'

ಎಚ್ಚರಾಯಿತು! ಕನಸಿನ ಮಹಾವಾಕ್ಯವನ್ನು ಮನಗಂಡು ಆಗಲೇ ದಾಸಿಯರನ್ನು ಎಬ್ಬಿಸಿದಳು. ಅಂತಃಪುರವನ್ನೆಲ್ಲಾ ಕಸಗೂಡಿಸಿ ಧೂಳುಜಾಡಿಸಿ ತೊಳೆದು ಮಡಿ ಮಾಡಿಸಿದಳು. ದಾಸಿಯರೆಲ್ಲಾ ಮಡಿಯಿಂದಲೇ ಮಡಿ ಮಾಡಿದರು. ಮಹಾದೇವಿ ಅರಮನೆಯ ಹೂದೋಟಕ್ಕೆ ನಸುಕಿನಲ್ಲೇ ದಾಸಿಯರ ಸಂಗಡ ಹೋಗಿ ಸ್ನಾನಮಾಡಿ ಒದ್ದೆಬಟ್ಟೆಯಿಂದ ಬಂದಳು. ಅಂತಃಪುರದಲ್ಲಿ ಮಡಿಯನುಟ್ಟು ಪೂಜಾಮಂದಿರವನ್ನು ಅಲಂಕರಿಸಿದಳು. ತುಪ್ಪದ ದೀಪಗಳು ಬೆಳಗಿದವು. ಹೂಪತ್ರಿಗಳು ಹೂಬುಟ್ಟೆಯಲ್ಲಿ ಬಂದವು. ಶ್ರೀಗಂಧದ ಬೆಂಕಿ ಸಿದ್ಧವಾಯಿತು. ಕಿಚ್ಚಿಗೆ ಗುಗ್ಗುಳ ಹಾಕಿದಳು. ಅತ್ತ ಬೆಟ್ಟದ ಮೇಲೆ ಸೂರ್ಯೋದಯವಾಗುತ್ತಿದ್ದಂತೆ ಇತ್ತ ಪದ್ಮಾಸನ ಹಾಕಿ ರುದ್ರಾಕ್ಷಿಮಣಿಯನ್ನು ತಿರುವುತ್ತ ಮಹಾಪಂಚಾಕ್ಷರಿ ಮಂತ್ರವನ್ನು ಜಪಿಸಲು ಆರಂಭಿಸಿದಳು.

* * *

ಮಾದೇವಿಯೊಂದಿಗೆ ಅಂತಃಪುರ ತೊಳೆದು ಮಡಿಮಾಡಿ ಹೂವು ತಂದು ಕೊಟ್ಟ ದಾಸಿ ಗೌರವ್ವ. ಕೆಂಪು ಬಣ್ಣದ ಹದಿನೈದು ವರ್ಷದ ಬಡವರ ಹುಡುಗಿ. ಅರಮನೆಗೆ ಎರಡು ಕೂಗಳತೆಯಲ್ಲಿ ಅವಳ ಮನೆ. ಹೆಸರಿಗೆ ಮನೆಯಾದರೂ ಅದೊಂದು ಗುಡಿಸಲು. ಬಿದಿರಿಗೆ ಬಿದಿರು ಹೆಣೆದು ಸಗಣಿ ಸಾರಿಸಿದ ಗೋಡೆ. ಮೇಲೆ ತೆಂಗಿನ ಗರಿಯ ಚಪ್ಪರ. ಒಳಗೆ ಇದ್ದದ್ದೇ ಒಂದೇ ಒಂದು ಕೋಣೆ. ಅದರಲ್ಲಿ ತಂದೆ ಮಾದೇವಯ್ಯ, ತಾಯಿ ಗಿರಿಜಾದೇವಿ, ಅಣ್ಣ ಭೀಮಣ್ಣ, ಅವನ ಹೆಂಡತಿ ಸರಸ್ವತಿ, ಅವರ ಮೂರು ಮಕ್ಕಳು, ತಂಗಿ ಗೌರಿ, ಇವಳ ತಮ್ಮ ಶರಣಪ್ಪ,

ಪುಟ್ಟ ತಂಗಿ ಮಲ್ಲವ್ವ, ಚಿಕ್ಕ ಕೂಸು ಭಾರತಿ. ತಾಯಿ ಗಿರಿಜಾದೇವಿಯೂ ಅವಳ ಸೊಸೆ ಸರಸ್ವತಿಯೂ ಕೂಡೇ ಹಡೆದರು. ಸರಸ್ವತಿ ಮುಂಜಾನೆ ಹಡೆದರೆ ಅವಳ ಅತ್ತೆ ಸಂಜೆ ಹಡೆದಳು. ಅತ್ತೆ ಸೊಸೆ ಬಾಣಂತನ ಇದೇ ಗುಡಿಸಲಲ್ಲಿ. ಕಾರಣ ಸರಸ್ವತಿಗೆ ತೌರುಮನೆಯೇ ಇಲ್ಲ. ಅನಾಥ ಕೂಸನ್ನು ಇವರೇ ತಂದು ಇವರೇ ಜೋಪಾನ ಮಾಡಿ ಇವರೇ ತಮ್ಮ ಮಗ ಭೀಮಣ್ಣನಿಗೆ ಮದುವೆ ಮಾಡಿಕೊಂಡಿದ್ದಾರೆ. ಇಷ್ಟೆಲ್ಲಾ ಸಂಸಾರ ಒಂದು ಗುಡಿಸಲಲ್ಲಿ. ಮಳೆ ಬಂದರೆ ಒಳಗೂ ಮಳೆ. ಹೊರಗೂ ಮಳೆ ದೊಡ್ಡ ಗಾಳಿಮಳೆ ಬಂದರೆ ಗುಡಿಸಲು ನೀರಿನ ಪಾಲು. ಇವರು ಗುಡಿಯ ಪಾಲು ಮಳೆ ನಿಂತ ಮೇಲೆ ಮತ್ತೆ ಗುಡಿಸಲು ಕಟ್ಟಿ ಒಳಗೆ ಹೋಗಬೇಕು.

ಗೌರಿ ಬಹಳ ಸುಂದರ ಹುಡುಗಿ. ಮಲೆನಾಡಿನ ರಾಜಕುಮಾರ ವಿಘ್ನೇಶ್ವರ ಅವಳನ್ನು ದಾಸಿಯಾಗಿ ಅಂತಃಪುರಕ್ಕೆ ಸ್ವೀಕರಿಸಿದರೂ ತಂಗಿ ಯಾಗಿ ಸಲುಹಿದ್ದಾನೆ. ಅವನಿಗೂ ಇವಳಿಗೂ ಅಣ್ಣತಂಗಿಯರ ಅಂಟಿದ ನಂಟು. ಆದರೂ ಇವಳು ಒಮ್ಮೆಯಾದರೂ ರಾಜಕುಮಾರನ ಮುಂದೆ ತನ್ನ ಬಡತನ ತೋಡಿಕೊಂಡಿಲ್ಲ. ಯಾವಾಗ ಕೇಳಿದರೂ ಚಪಾತಿ ಆಲೂ ಗಡ್ಡಿಪಲ್ಲೆ ಉಂಡುಬಂದಿದ್ದೇನೆ ಎಂದು ಹೇಳುವಳು. ಆದರೆ ಮನೆಯಲ್ಲಿ ಗಂಜಿಗೆ ಕೂಡಾ ಗತಿ ಇಲ್ಲ. ಅರೆಹೊಟ್ಟೆ, ಅರೆಬಟ್ಟೆ ಅರಮನೆಯ ಸೇವಕಿಯೆಂದು ಮನೆಯವರೆಲ್ಲಾ ಗೌರವ್ವನಿಗೆ ಮನೆಯಲ್ಲಿದ್ದ ಬಟ್ಟೆ ಯನ್ನೆಲ್ಲಾ ಹೊಚ್ಚಿ ಮರ್ಯಾದೆ ಮುಚ್ಚಿ ಕಳಿಸುತ್ತಾರೆ. ವಿಘ್ನೇಶ್ವರ ನಾದರೂ ಅರಮನೆಯ ಸೀರೆಗಳನ್ನು ಕೊಡಬಂದರೆ... 'ನಮ್ಮ ಮನೆ ಯಲ್ಲೇ ಬೇಕಾದಷ್ಟು ಸೀರೆ ಅವೆ....ಅವನ್ನೇ ಉಡಲಿಕ್ಕೆ ನನಗೆ ಬೇಸರಾ.... ಇವನ್ನೆಲ್ಲಿಂದ ಉಡಲಿ ಇನ್ನ?' ಎಂದು ಮರು ಸವಾಲು ಹಾಕಿ ಬಿಟ್ಟು ಬಿಡುವಳು.

ಇನ್ನೊಂದು ಸಂಗತಿ! ಹೇಳಬಾರದ ಸಂಗತಿ. ಗೌರಿಗೆ ಮದುವೆಯೂ ಆಗಿತ್ತು. ಆದರೆ ಇವಳು ಋತುಮತಿಯಾಗುವ ಮುನ್ನವೇ ಗಂಡ ಕಾಮಣಿರೋಗದಿಂದ ಸತ್ತು ಹೋಗಿದ್ದ. ಈಗ ಇವಳು ಹೆಸರಿಗೆ

ಗೌರಿ. ವಯಸ್ಸಿಗೆ ತರುಣಿ. ರೂಪಿಗೆ ಸುಂದರಿ. ಆದರೇನು ಫಲ?

ಗೌರಿಯ ಅಣ್ಣ ಭೀಮಣ್ಣನೂ ಅರಮನೆಯ ಕುದುರೆ ಸೈನಿಕ. ಈಗ ನಡೆದ ಭಾರಿ ಯುದ್ಧದಲ್ಲಿ ನಿನ್ನೆ ಸತ್ತ ದಂಡನಾಯಕ ತಿಮ್ಮರಸನ ಸಹಾಯಕ್ಕೆ ನಿಂತು ಯುದ್ಧ ಮಾಡುವಾಗ ವೈರಿಗಳು ಭೀಮಣ್ಣನಿಗೆ ಹಗ್ಗದ ಕುಣಿ ಒಗೆದು ದರದರನೆ ಎಳೆದುಕೊಂಡು ಒಯ್ದರಂತೆ! ಮರು ದಿನ ಸುದ್ದಿ ತಿಳಿದ ಗೌರಿ ಏನು ಮಾಡಿಯಾಳು?

ಅವಳಿಗೆ ಮಾದೇವಿಯ ಜೀವನದಲ್ಲಿ ಅಪಾರ ನಂಬುಗೆ. ಭಕ್ತಿಯ ಉತ್ಕಟತೆಯಲ್ಲಿ ಪ್ರಾಣ ಪ್ರಾಣ ಕೂಡಿವೆ. ಅರಮನೆಯ ಅಂತಃ ಪುರದಲ್ಲಿ ಮಾದೇವಿ ಏಕೆ ವ್ರತ ತೊಟ್ಟಳು.... ಅವಳ ಪೂಜೆಗೆ ಏನು ಕಾರಣ.... ಎಲ್ಲಾ ಇವಳು ಬಲ್ಲಳು. ತಾನೂ ಮನೆಗೆ ಹೋಗಿ ವ್ರತ ತೊಟ್ಟಳು. ಆದರೆ ಅದು ಅರಮನೆ. ಇದು ಗುಡಿಸಲು. ಏನು ತೊಳೆಯಬೇಕು? ಎಷ್ಟು ತೊಳೆಯಬೇಕು? ಇವಳ ವ್ರತಕ್ಕೆ ತೊಂದರೆ ಆಗಬಾರದೆಂದು ಜಡ್ಡಿನಲ್ಲಿ ಮಲಗಿದ ತಂದೆ ಮಹದೇವಯ್ಯನೂ ತಣ್ಣೀರು ಸ್ನಾನ ಮಾಡಿದ. ತಾಯಿತಂಗಿ, ಅಣ್ಣನ ಹೆಂಡತಿ ಎಲ್ಲರೂ ಸ್ನಾನ ಮಾಡಿದರು. ತೊಟ್ಟಿಲ ಕೂಸುಗಳ್ನ ಮೈ ತೊಳೆದರು. ಕೂಸುಗಳಿಗೆ ಹೊಚ್ಚುವ ಚಿಂದಿಚೂರುಗಳನ್ನೂ ಒದ್ದೆಮಾಡಿದರು. ಮಾದೇವಿ ಅರ ಮನೆಯಲ್ಲಿ ಮೌನಿಯಾಗಿ ಪೂಜೆ ಆರಂಭಿಸಿದರೆ ಇವಳಿಗೆಲ್ಲಿ ಆ ಅವಕಾಶ? ಅಣ್ಣನ ರಕ್ಷಣೆಗಾಗಿ ದೇವರಲ್ಲಿ ಹರಕೆ ಹೊತ್ತು ಉಗ್ರಪೂಜೆ ನಡೆಸಿದಳು. ಆದರೆ ಪೂಜೆಗೆ ಕುಳಿತಾಗಲೇ ಫಜೀತಿ ಬಂತು! ಮಾದೇವಿ ಯಾವ ಮಂತ್ರ ಅನ್ನುವಳೋ ಇವಳಿಗೆ ಗೊತ್ತಿಲ್ಲ!! ಮಂತ್ರ ಎಣಿಸಲು ರುದ್ರಾಕ್ಷಿ ಯೂ ಇಲ್ಲ!!! ಕೊನೆಗೆ ತಂದೆಯ ಸೂಚನೆಯ ಮೇರೆಗೆ ನೂರಾಒಂದು ಹುಣಸೀಕಪ್ಪ ಕೂಡಿಸಿದಳು. ಅವನ್ನು ಒಂದು ಮಣ್ಣಿನ ಹರಿವಾಣದಲ್ಲಿ ಟ್ಟಳು. ಲಿಂಗ ಪೂಜಿಸಿದಳು. ಹುಣಸೀಕಪ್ಪದಲ್ಲೇ ರುದ್ರಾಕ್ಷಿ ಭಾವ ಕಂಡಳು. ಇನ್ನು ಯಾವ ಮಂತ್ರ ಜಪಿಸಬೇಕು? ಅದೂ ಗೊತ್ತಿಲ್ಲ. ಅದಕ್ಕೂ ಪರಿಹಾರ ಕಂಡು ಕೊಂಡಳು. ಅರಮನೆಯ ಅಂತಃಪುರದಲ್ಲಿ ಮಾದೇವಿ ದಿನಕ್ಕೆ ಹತ್ತಾರು ಸಲ ಹುಚ್ಚೇಶ್ವರ ಗುರುಸಿದ್ಧನ ಕಥೆ ಹೇಳಿ

ಹೇಳಿ ಆನಂದದಲ್ಲಿ ಮೈಮರೆಯುತ್ತಿದ್ದಳು. ಅದೇ ಇವಳಿಗೆ ಮಂತ್ರ ವಾಯಿತು. ಇವಳು ಹುಚ್ಚೀಶ್ವರನನ್ನು ನೋಡಿಲ್ಲ. ಅವನ ಊರು ಕಂಡಿಲ್ಲ. ಪ್ರತ್ಯಕ್ಷ ತಿಳಿದಿಲ್ಲ. ಆದರೂ ಭಾವ ಅರಿತಿದೆ. ಅಂತರಂಗ ಬಾಗಿದೆ. ಮಣ್ಣಿನ ಹರಿವಾಣದಲ್ಲಿಟ್ಟ ಒಂದೊಂದೇ ಹುಣಸೀಕಪ್ಪವನ್ನು ಇನ್ನೊಂದು ಮಣ್ಣಿನ ಗಡಿಗೆಗೆ ಒಂದು ಮಂತ್ರಕ್ಕೆ ಒಂದರಂತೆ ಹಾಕುತ್ತ.... ಓಂ ಹುಚ್ಚೀಶಾ ಗುರುಸಿದ್ಧೇಶಾ' ಎಂದು ಜಪಿಸತೊಡಗಿದಳು. ಹಗಲೂ ರಾತ್ರಿ ಹುಣಸೀಕಪ್ಪದೊಂದಿಗೆ ಮಂತ್ರದ ಎಣಿಕೆಯೂ ಆಯಿತು. ಲೆಕ್ಕಕ್ಕೆ ಮಂತ್ರಗಳು ಸಿಗಲೇ ಇಲ್ಲ. ದಿನಾಲು ಸಾವಿರ ಮಂತ್ರವಾಗುವ ಬದಲು ಸಾವಿರಾರು ಮಂತ್ರಗಳಾದವು. ಪ್ರಸಾದಕ್ಕೆ ಹಾಲಿಲ್ಲ. ಹಣ್ಣಿಲ್ಲ. ಅದೇ ಹಿಟ್ಟಿನ ಗಂಜಿ. ಅದೇ ನೈವೇದ್ಯ. ಆ ಗಂಜಿಯಲ್ಲಿ ಇವಳ ಕಣ್ಣಿನಿಂದ ಪಳಕ್ಕೆಂದು ಬಿದ್ದ ಎರಡು ಕಣ್ಣೀರಿನ ಹನಿಗಳೇ ಅತ್ಯಂತ ರುಚಿಕಟ್ಟಾದ ಉಪ್ಪಿನ ಹರಳುಗಳು!

* * *

ಹತ್ತು ದಿನಗಳು ಇದೇ ರೀತಿ ಸಾಗಿದವು. ಹತ್ತನೆಯ ದಿನ ವಿಘ್ನೇಶ್ವರನ ದಿಗ್ವಿಜಯದ ಸುದ್ದಿ ಬಂತು. ಮಾದೇವಿ ಅಂತಃಪುರದ ತುಂಬ ಕುಣಿದಾಡಿದಳು ತನ್ನ ಮಹಾಪೂಜಾವ್ರತವನ್ನು ಗಂಡ ಅರಮನೆಗೆ ಬಂದ ದಿನವೇ ಪರಿಸಮಾಪ್ತಿ ಮಾಡಲು ನಿರ್ಧರಿಸಿದಳು. ಊರಲ್ಲೆಲ್ಲಾ ದೀಪಾವಳಿ. ಮನೆಮನೆಯಲ್ಲೆಲ್ಲಾ ಪಂಚಮಿ. ದೇವಾಲಯಗಳಲ್ಲಿ ಕಾರ್ತೀಕ. ಅರಮನೆಯ ತುಂಬಾ ಮಾನೋಮಿ. ಸಡಗರವೇ ಸಡಗರ. ಹಿಗ್ಗೇ ಹಿಗ್ಗು. ಕೂಗೇ ಕೂಗು. ಹಾಡೇ ಹಾಡು.

ಮುಂದೆ ನಾಲ್ಕು ದಿನಗಳಲ್ಲೇ ರಾಜಕುಮಾರ ವಿಘ್ನೇಶ್ವರ ಬಂಗಾರದ ರಾಜರಥದಲ್ಲಿ ಬಂದ. ಸಹಸ್ರಾರು ಪುರದ ಸುರಸುಂದರ ಸ್ತ್ರೀಯರು ಆರತಿ ಬೆಳಗಿ ಅಕ್ಷತೆ ತೂರಿದರು, ಗಂಧ ಮಲ್ಲಿಗೆ ಸುರಿಸಿದರು.

ವಿಘ್ನೇಶ್ವರನ ಮೈತುಂಬಾ ಘಾಯದ ದೊಡ್ಡ ದೊಡ್ಡ ಪಟ್ಟೆಗಳಿದ್ದವು. ಈತ ಸಾವಿನ ದವಡೆಯಿಂದ ವಿಜಯಶಾಲಿಯಾಗಿ ಬಂದಿದ್ದಾನೆಂದು ಯಾರಿಗಾದರೂ ತಿಳಿಯುವಂತಿತ್ತು.

ಅರಮನೆಯಲ್ಲಿ ಆದೇದಿನ ಮಾದೇವಿಯ ಪೂಜೆಯ ಮಹಾ ಸಮಾಪ್ತಿಯೂ, ಮಹಾಮಂಗಳ ಪೂಜೆಯೂ, ಮಹಾಪ್ರಸ್ಥವೂ ನಡೆದವು. ಸಾವಿರಾರು ಜನರು ಹೊಟ್ಟೆಯನ್ನು ನಾಲ್ಕು ಪಟ್ಟು ಮಾಡಿ ರಾಜ ಭೋಜನದ ಲೀಲಾವಿಲಾಸದಲ್ಲಿ ಅರಮನೆಯ ವಿಶಾಲ ಆವರಣದಲ್ಲಿ ಊಟಕ್ಕೆ ಕುಳಿತಾಗ ರಾಜಕುಮಾರ ವಿಘ್ನೇಶ್ವರ ಅಲ್ಲೆಲ್ಲಾ ಬಂದ. ಆತ ಸುತ್ತಾಡಿ ಹೊರಳಿ ಬರುತ್ತಿದ್ದಂತೆ ಹಿಂದಿನಿಂದ ಒಂದು ಸ್ತ್ರೀವಾಣಿ ಕೇಳಿತು—

'ಅಣ್ಣಾ....'

ರಾಜಕುಮಾರ ಹೊರಳಿ ನೋಡಿದ. ಸೋತು ಸಣ್ಣಾದ, ಸೊರಗಿ ರವದಿಯಾದ ತಂಗಿ ಗೌರಿ! ಕಣ್ತುಂಬಾ ನೀರು ಧಾರಾಕಾರವಾಗಿ ಸುರಿಯುತ್ತಿವೆ. ಅವಳ ಸಂಕಟದ ಸ್ಥಿತಿ ಕಂಡು ರಾಜಕುಮಾರನಿಗೆ ದಿಗ್ಭ್ರಾಂತಿಯಾಯಿತು. ಅಪರಾಧಿ ನಿಂತಂತೆ ನಿಂತು ಬಿಟ್ಟ. ಮಾತನಾಡಲು ಬಾಯಿ ಬರಲಿಲ್ಲ. ತರುವಾಯ ತಂಗಿಯೇ ಕಣ್ಣೀರು ಒರೆಸಿಕೊಂಡು ಅಣ್ಣನ ಪಾದಕ್ಕೆ ಬಿದ್ದು ಎದ್ದು ಕೇಳಿದಳು—

'ಅಣ್ಣಾ.... ಅಣ್ಣಾ....'

'ಏನು ತಂಗಿ?'

'ವಿಜಯಶಾಲಿಯಾಗಿ ಬಂದೆಯಾ ಅಣ್ಣಾ?

'ಹೌದು ಗೌರಿ.... ಹೌದು ತಂಗಿ....'

'ಈ ತಂಗಿಗೆ ಏನು ತಂದೆ?'

'ಏನು ತರಬೇಕಾಗಿತ್ತು ತಂಗಿ?'

‹ನನ್ನ ಭೀಮಣ್ಣನನ್ನು ವೈರಿಯ ಉಡಿಯಲ್ಲಿ ಹಾಕಿ ಬಂದೆಯಾ ಅಣ್ಣಾ?'

‹ತಂಗೀ....'

ಬಾಣ ನಟ್ಟಂತಾಯಿತು ರಾಜಕುಮಾರನ ಎದೆಗೆ! ಆತನ ಗೆಲುವಿನ ಕೋಟಿ ಕೋಟಿ ಸಂಭ್ರಮಗಳು ಹಾಳುಧೂಳಾದವು. ಅವನೆ ದುರಿಗೆ ಈಗ ತಂಗಿಯ ಬಾಳಿನ ಕಣ್ಣೀರಿನ ಗೋಪುರ ಕಂಡಿತು. ಅವಳ ಕಷ್ಟದ ಜೀವನದ ಕರುಳಿನ ಆಕ್ರಂದನ ಕೇಳಿತು. ಅವಳ ಮುಂದೆ ತಾನು ಅಪರಾಧಿಯಾದ. ಹೇಡಿಯಾದ. ಕನಸಿನಲ್ಲಿ ಕನವರಿಸುವಂತೆ ತಂಗಿಗೆ ಹೇಳಿದ—

‹ಗೌರಿ.... ಕ್ಷಮಿಸು ಈ ಹೇಡಿ ಅಣ್ಣನನ್ನು.... ನಿನ್ನ ಭೀಮಣ್ಣ ನನ್ನು ವೈರಿಗಳಿಗೆ ಕೊಟ್ಟು ರಾಜ್ಯ ಗೆದ್ದುಕೊಂಡು ಬಂದೆ.... ಕ್ಷಮಿಸ ಲಾರೆಯಾ ತಂಗಿ?'

ಮುಂದೆ ಮಾತನಾಡಲಾಗಲಿಲ್ಲ. ತಂಗಿಯ ಕಣ್ಣೀರು ಒರಸ ಲಾಗಲಿಲ್ಲ. ಭರ್ರನೇ ಹೋಗಿಬಿಟ್ಟ. ಗೌರಿ ಕರುಣೆಯ ಕಂಬನಿಯ ಕಾರಂಜಿಯಂತೆ ಅಣ್ಣನನ್ನು ನೋಡುತ್ತ; ಹಗಲು ನಿಂತ ರಾತ್ರಿಯ ದೇವತೆಯಂತೆ ನಿಂತುಬಿಟ್ಟಳು!

* * *

ಇದೇ ದಿನ ರಾತ್ರಿ! ಗೌರಿಯ ಗುಡಿಸಲಲ್ಲಿ ಎಲ್ಲರೂ ಮಲಗಿ ದ್ದಾರೆ, ಭೀಮಣ್ಣನ ವಾರ್ತೆಯನ್ನು ಕೇಳಿ ಎಲ್ಲರೂ ಅತ್ತು ಅತ್ತು ಸಾವು ಬಂದು ಬಿದ್ದಂತೆ ದಣಿದು ಮಲಗಿದ್ದಾರೆ. ಹೆತ್ತ ತಂದೆ ಮಾದೇವಯ್ಯ ತನ್ನ ಹರಕು ರುಮಾಲನ್ನೇ ಹೊದ್ದು ಮೂಲೆಗೆ ಬಿದ್ದಿದ್ದಾನೆ. ಭೀಮಣ್ಣನ ಎರಡುಮಕ್ಕಳು ಅವನ ಎದೆಮೇಲೆ ತಲೆಇಟ್ಟು ಮಲಗಿವೆ. ಇನ್ನೊಂದೆಡೆಗೆ

ಗೌರಿಯ ತಾಯಿ ಗಿರಿಜಾದೇವಿ ಬಡತನದ ಭೂದೇವಿಯಾಗಿ ಬಚ್ಚಲದ ಕಟ್ಟೆಗೆ ಅತ್ತು ಅತ್ತು ಬೇಸತ್ತು ತೊಗಲಬಾವಲಿಯಂತೆ ಜೋತು ಬಿದ್ದು ಮಲಗಿದ್ದಾಳೆ. ಭೀಮಣ್ಣನ ಪ್ರೀತಿಯ ಹೆಂಡತಿ ಸರಸ್ವತಿ ಗಂಡನನ್ನು ವೈರಿಗಳು ಎಳೆದುಕೊಂಡು ಹೋದ ದಾರುಣಸಂಕಟದಲ್ಲಿ ನೂರುಸಲ ಎದೆಯೊಡೆದು ಚಿಂತೆಯಿಂದ ಸುಟ್ಟು ಹಾಳು ಹಂಚಾಗಿ ಬಿದ್ದಿದ್ದಾಳೆ. ಆವಳ ಮೊಲೆಗೂಸು ತಾಯಿಯ ಮೊಲೆಯನ್ನು ಕುಡಿಯುತ್ತಲೇ ಮೊಲೆಯ ತೊಟ್ಟನ್ನು ತುಟಿಯಲ್ಲಿ ಇಟ್ಟುಕೊಂಡೇ ನಿದ್ದೆ ಹೋಗಿವೆ. ಆ ಕೂಸಿನ ಕಣ್ಣಲ್ಲಿಯೂ ಎರಡು ಹನಿ ನೀರಿವೆ. ಪಾಪ ಅದೂ ಅಪ್ಪನಿಗಾಗಿ ಅತ್ತು ಹಾಲು ಕುಡಿಯುವದನ್ನು ಬಿಟ್ಟು ಮಲಗಿದೆಯೋ ಏನೋ! ಇವರೆಲ್ಲರ ಮಧ್ಯದಲ್ಲಿ ಕಣ್ಣೀರಿನ ತೋಟದಲ್ಲಿ ಸಂಕಟದ ದೇವತೆ ಕುಳಿತಂತೆ ಕುಳಿತಿದ್ದಾಳೆ ಗೌರಿ!! ಬಿಕ್ಕಿಬಿಕ್ಕಿ ಅಳುತ್ತಿದ್ದಾಳೆ. ಅಳುತ್ತಲೆ ಒಂದೊಂದು ಹುಣಸೀಕಪ್ಪವನ್ನು ಮಣ್ಣಿನ ಹರಿವಾಣದಿಂದ ಎತ್ತಿ.... 'ಓಂ ಹುಚ್ಚೇಶಾ ಗುರುಸಿದ್ಧೇಶಾ' ಎಂದು ಮಂತ್ರ ಹೇಳುತ್ತ ಇನ್ನೊಂದು ಮಣ್ಣಿನ ಮಗಿಯಲ್ಲಿ ಹಾಕುತ್ತಿದ್ದಾಳೆ. ಪ್ರತಿಯೊಂದು ಹುಣಸಿಕಪ್ಪದೊಂದಿಗೆ ಒಂದೊಂದು ಹನಿ ಕಣ್ಣೀರು ಮಣ್ಣಿನ ಮಗಿಯಲ್ಲಿ ಬೀಳುತ್ತಿವೆ. ಸಂಕಟದಿಂದ ಕರಳು ಕಿತ್ತು ಬರುತ್ತಿವೆ. ಎದೆ ದುಃಖದಿಂದ ಒಡೆಯುತ್ತಿದೆ. ತಲೆ ಸಿಡಿಯುತ್ತಿದೆ. ಆದರೂ ಹೇಗೋ ತಡೆದುಕೊಂಡು ಹುಣಸೀಕಪ್ಪವನ್ನು ... 'ಓಂ ಹುಚ್ಚೇಶಾ ಗುರುಸಿದ್ಧೇಶಾ' ಎಂದು ಹಾಕುತ್ತ; ಕೊನೆಗೊಮ್ಮೆ ಬಿಕ್ಕಿಬಿಕ್ಕಿ ಅಳುತ್ತ ಮಗಿಯ ಮೇಲೆ ಹಣೆ ಹಚ್ಚಿ ಅಳತೊಡಗಿದಳು. ಆಗ ಆಶ್ಚರ್ಯ! ಒಂದು ಅಪೂರ್ವ ದೇವವಾಣಿಯೊಂದು ಕೇಳಿ ಬಂತು!!

'ಚಿಂತಿಸದಿರು ಮಗಳೇ.... ನಾನಿದ್ದೇನೆ.... ನಾನಿದ್ದೇನೆ....'

ಫಕ್ಕನೇ ಗೌರಿ ತಲೆ ಎತ್ತಿ ನೋಡುತ್ತಾಳೆ ಮುಂದೆಯೆ ನಿಂತಿದ್ದಾನೆ ವಿಚಿತ್ರ ವೇಷದ ಹುಚ್ಚೇಶ್ವರಯೋಗಿ! ಕೂಸನ್ನು ಪ್ರೀತಿಯಿಂದ ನೋಡಿದಂತೆ ಗೌರಿಯನ್ನು ಅಕ್ಕರತೆಯಿಂದ ನೋಡಿ ಕೈತುಂಬಿ ಆಶೀರ್ವದಿಸುತ್ತಿದ್ದಾನೆ!! ಗೌರಿ.... ತಂದೇ!.... ಎಂದು ಚೀರಿ ಆವನ ಪಾದಕ್ಕೆ

ಹಣೆ ಇಟ್ಟಳು. ಮತ್ತೊಮ್ಮೆ ತಲೆ ಎತ್ತಿ ನೋಡುತ್ತಾಳೆ ಆ ಮಹಾಯೋಗಿ ಮಟಾಮಾಯವಾಗಿದ್ದಾನೆ! ಗೌರಿಯ ರೋಮ ರೋಮ ನಡುಗಿದವು!! ಕೂದಲು ಸೆಡೆದು ನಿಂತವು!!! ಮೈಯಲ್ಲಾ ಗುಗ್ಗರಿಗಟ್ಟಿತು!!!!

*   *   *

ನಾಲ್ಕು ದಿನ ಕಳೆದಿರಲಿಲ್ಲ!

ಗೌರಿಯ ಗುಡಿಸಲಿನ ಹೊರಗೆ ಯಾರೋ.... ‘ತಂಗೀ....' ಎಂದು ಎತ್ತರದ ಕಂಠದಿಂದ ಕೂಗಿದರು. ಮನೆಯಲ್ಲಿ ಪೂಜೆ ಮಾಡುತ್ತ ಕುಳಿತ ಗೌರಿ, ಮಹಾದೇವಯ್ಯ, ಗಿರಿಜಾದೇವಿ, ಸರಸ್ವತಿ, ಮಕ್ಕಳು ಮರಿ ಎಲ್ಲರೂ ಒಂದೇ ಏಟಿಗೆ ಹೊರಗೋಡಿ ನೋಡುತ್ತಾರೆ.... ಬಿಳಿಯ ದೊಡ್ಡ ಕುದುರೆ ಏರಿ ಬಂದಿದ್ದಾನೆ ಅಣ್ಣ ಭೀಮಣ್ಣ! ‘ಭೀಮಣ್ಣಾ....' ಎಂದು ಗೌರಿ ಆಕಾಶವೇ ಉದುರಿ ಬೀಳುವಂತೆ ಚೀರುತ್ತಿದ್ದಂತೆ ಅಣ್ಣ ಅವಳನ್ನು ಎಳೆದು ಕುದುರೆಯ ಮೇಲೆ ಕುಳ್ಳಿರಿಸಿಕೊಂಡು ತಾನು ವೈರಿ ರಾಜ್ಯದಿಂದ ಬಂದ ಸುದ್ದಿ ಹೇಳಲು ಅರಮನೆಗೆ ಧಾವಿಸಿದ. ಮನೆಯವರೆಲ್ಲರೂ ಅರಮನೆಗೆ ಓಡಿದರು. ಓಣಿಯ ಜನರೆಲ್ಲರೂ ಅರಮನೆಯ ಕಡೆಗೆ ಓಡಿದರು. ಭೀಮಣ್ಣನ ವೀರಾವೇಶದ ಆಗಮನವನ್ನು ಕಂಡು ರಾಜಬೀದಿಯ ಪುರಜನರೆಲ್ಲಾ ಅರಮನೆಗೆ ಓಡಿದರು. ಭೀಮಣ್ಣ ನೇರವಾಗಿ ಅರಮನೆಯ ಅಂತಃಪುರಕ್ಕೇ ನುಗ್ಗಿದ. ಅಲ್ಲಿ ಅವನಿಗೆ ರಾಜಕುಮಾರ ವಿಘ್ನೇಶ್ವರನಿಂದ ವಿರೋಚಿತ ಸ್ವಾಗತವೇ ದೊರೆಯಿತು. ಮಾದೇವಿ ಭೀಮಣ್ಣನಿಗೆ ಆರತಿ ಬೆಳಗಿದಳು. ಮಹಾರಾಜ ಮಹಾರಾಣಿ ಇಬ್ಬರೂ ಬಂದು ಅಕ್ಷತೆ ಹಾಕಿದರು. ಭೀಮಣ್ಣನನ್ನು ಕೈಹಿಡಿದುಕೊಂಡು ಹೋಗಿ ರಾಜಕುಮಾರ ಅಂತಃಪುರದ ಮಣೆಕೊಟ್ಟು ಕುಳ್ಳಿರಿಸಿದ. ಮಾದೇವಿ ಹಾಲುಸಕ್ಕರೆ ಕುಡಿಸಿದಳು. ಭೀಮಣ್ಣ ಹಾಲು ಕುಡಿಯುತ್ತಿ

ದ್ದಂತೆ ರಾಜಕುಮಾರ ಗೌರಿಗೆ ಹೇಳಿದ—

'ನೋಡು ಗೌರಿ.... ಈ ತಂಗಿಗೆ ಏನು ತಂದೆ ಅಣ್ಣಾ ಅಂತ ನನಗೇ ಕೇಳಿದ್ದೆ.... ಇಗೋ.... ನಿನಗೆ ನಿನ್ನ ಅಣ್ಣನನ್ನೇ ತಂದಿದ್ದೇನೆ....'

ಈ ಮಾತಿಗೆ ಗೌರಿ ಸ್ವರ್ಗವೇ ಮಲ್ಲಿಗೆ ಮಾಲೆಯಾಗಿ ಕೊರಳಲ್ಲಿ ಬಿದ್ದಂತೆ ಹಿರಿಹಿರಿ ಹಿಗ್ಗಿ ಆನಂದದ ಕಣ್ಣೀರುಗಳನ್ನು ಸುರಿಸಿದಳು!

ಈಗ ಎಲ್ಲರೂ ಬಿಟ್ಟೂಬಿಡದೆ ಭೀಮಣ್ಣನಿಗೆ.... 'ಹೇಗೆ ಬಂದೆ.... ವೈರಿರಾಜ್ಯದಿಂದ ಹೇಗೆ ಬಂದೆ.... ಹೇಗೆ ಓಡಿ ಬಂದೆ.... ಹೇಗೆ ಪಾರಾಗಿ ಬಂದೆ.... ನೀನು ಓಡಿಬರುವಾಗ ಅವರು ನಿನ್ನನ್ನು ಹಿಡಿಯಲಿಲ್ಲವೇ.... ಬೆನ್ನತ್ತಲಿಲ್ಲವೇ?' ಎಂದುಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಇದಕ್ಕೆ ಭೀಮಣ್ಣ ಒಂದೇ ಮಾತಿನಲ್ಲಿ ಹೇಳಿದ—

'ನೀವೆಲ್ಲಾ ಸಹನೆಯಿಂದ ಕೇಳುತ್ತೀರಿ ಎಂದರೆ ಹೇಳುತ್ತೇನೆ'

ಇದಕ್ಕೂ ಎಲ್ಲರೂ—

'ಹೂಂ.... ಕೇಳುತ್ತೇವೆ.... ಕೇಳುತ್ತೇವೆ.... ಬೇಗ ಹೇಳು.... ಬೇಗ ಹೇಳು....'

ಎಂದು ಮತ್ತೂ ಮತ್ತೂ ಒತ್ತಾಯಿಸಿದರು.

ಭೀಮಣ್ಣ ತನ್ನ ಕಥೆ ಹೇಳತೊಡಗಿದ—

'ಕೇಳಿರಿ.... ಆ ದಿನ ಸೋಮವಾರ ರಣರಂಗದಲ್ಲಿ ಭಾರೀ ಯುದ್ಧ.... ನಮ್ಮ ತಿಮ್ಮರಸ ದಂಡಾಧೀಶ್ವರರ ಪ್ರಾಣ ಉಳಿಸಲೆಂದು ನನಗೆ ರಾಜಕುಮಾರರು ಆಜ್ಞೆ ಕೊಟ್ಟರು.... ತಕ್ಷಣವೇ ಖಡ್ಗಸಮೇತ ನಾಗಿ ವೈರಿಗಳ ಮಧ್ಯೆ ಜಿಗಿದೆ.... ವೈರಿಗಳನ್ನು ಹಣಾಹಣಿದು ದಂಡಾಧೀಶರನ್ನು ಬಿಡಿಸಿ ತರುತ್ತಿದ್ದೆ.... ಆದರೆ ಎಲ್ಲಿಂದಲೋ ಒಂದು ಬಾಣ ಬಂದು ಅವರ ತಲೆಯಲ್ಲಿ ಆಳದಲ್ಲಿ ನಟ್ಟಿತು.... ದಂಡಾಧೀಶರು ಭೀಮಾ ಎಂದು ಚೀರಿ ಉರುಳಿದರು.... ನನ್ನ ಸಂಕಟಕ್ಕೆ ಪಾರವೇ ಇಲ್ಲದಾಯಿತು.... ಖಡ್ಗ ಎತ್ತಿ ವೈರಿಗಳನ್ನು ನುಗ್ಗುನುರಿ ಮಾಡಿ

ಇರಿಯುತ್ತ ನುಗ್ಗಿದೆ.... ನಾನು ಒಬ್ಬನಾದೆ .. ಅವರು ನೂರಾರು ಜನ.... ಹಗ್ಗ ಒಗೆದು ನನ್ನನ್ನು ದರದರ ಎಳೆದರು.... ಕಚಪಚ ತುಳಿದರು.... ಬಂಧಿಸಿ ವೈರಿಗಳನ್ನು ಇಡುವ ಕಾರಾಗೃಹಕ್ಕೆ ಕಳಿಸಿದರು... ಅಲ್ಲಿ ಕೂಳಿಲ್ಲ.... ನೀರಿಲ್ಲ.... ಹವೆ ಇಲ್ಲ.... ಮೇಲಿಂದ ಮೇಲೆ ಕಾರಾಗೃಹದ ನಾಯಿಗಳನ್ನು ನಮ್ಮ ಮೇಲೆ ಆಟಕ್ಕೆಂದು ಛೂ ಬಿಡುತ್ತಿದ್ದರು.... ಎಲ್ಲಾ ಸಂಕಟ ಅನುಭವಿಸಿದೆ.... ತಾವು ಕೊನೆಯ ಯುದ್ಧದಲ್ಲಿ ಸೋತು ಹಿಮ್ಮೆಟ್ಟಿದ ಸೇಡಿನಲ್ಲಿ; ಸೆರೆಸಿಕ್ಕ ನನ್ನಂಥ ನೂರಾರು ಜನರನ್ನು ಆ ದಿನ ಶೂಲಕ್ಕೆ ಏರಿಸಲು ಶೂಲದ ಮನೆಗೆ ಒಯ್ದರು.... ನಾನು ದೇವರನ್ನು ನೆನೆಸಿ ಸಾವಿಗೆ ಸಿದ್ಧನಾಗಿದ್ದೆ.... ಆದರೆ ಬಂದೀಖಾನೆಯ ಗುಪ್ತದ್ವಾರದಿಂದ ಯಾವನೋ ಒಬ್ಬ ವಿಚಿತ್ರ ಹುಚ್ಚ ಪೊಟ್ಟಿ ಹೊಸೆಯುತ್ತ ಬಂದು ನನ್ನ ಕೈಯ ಸರಪಳಿ ಬಿಚ್ಚಿ.... ರಾಜಮಾರ್ಗದಲ್ಲಿ ಓಡಿಹೋಗು ... ಎಂದು ಆಜ್ಞಾಪಿಸಿದ ನಾನು ಅವನಿಗೆ ಪುಣ್ಯಾತ್ಮಾ ಯಾರೋ ನೀನು .... ಎಂದು ಕೇಳಿದೆ. ಆತ.... ನಾನು ಹುಚ್ಚಾ ದೊಡ್ಡ ಹುಚ್ಚಾ ಹುಂ ಇನ್ನು ಹೊತ್ತು ಇಲ್ಲಾ ಓಡು ಓಡು ಬೇಗ ಓಡಿ ಹೋಗು.... ಎಂದು ನನ್ನನ್ನು ವೇಗವಾಗಿ ತಳ್ಳಿ ಬಿಟ್ಟ. ನಾನು ಆ ರಾಜಮಾರ್ಗದಲ್ಲಿ ಓಡಿದೆ. ಸೈನಿಕರು.... ಹಿಡಿಯಿರಿ .. ಹಿಡಿಯಿರಿ... ಎಂದು ಹಿಂಬಾಲಿಸಿದರು. ನಾನು ಮತ್ತೂ ಓಡಿದೆ. ಅರಮನೆಯ ನಾಲ್ಕು ಉಪ್ಪರಿಗೆಯ ಮಹಡಿಯ ಗೋಡೆಯ ದಾರಿ ಬಂತು. ದಿಕ್ಕು ತೋರದೆ ಅಲ್ಲಿಯೇ ನಿಂತೆ. ಮೇಲಕ್ಕೆ ನೋಡಿದೆ. ಅರಮನೆಯ ನಾಲ್ಕನೆಯ ಮಹಡಿಯ ಕಿಡಕಿಯಲ್ಲಿ ಯಾರೋ ನಿಂತಿದ್ದರು. ಬಹುಶಃ ರಾಜರಾಣಿ ಇರಬಹುದು. ನಾನು ನೋಡು ನೋಡುತ್ತಿದ್ದಂತೆ ಅವರ ಬಗಲಲ್ಲಿಯ ಒಂದುವರ್ಷದ ಗಂಡು ಮಗು ಟಣ್ಣನೆ ಜಿಗಿದು ರಾಣಿಯ ಕೈತಪ್ಪಿ ಕಿಡಿಕಿಯ ಏಣಿಗೆ ಬಿತ್ತು. ರಾಜರಾಣಿ ಚಿಟ್ಟನೇ ಚೀರಿ ಕೂಸನ್ನು ಹಿಡಿಯುವಷ್ಟರಲ್ಲಿ ಕೂಸು ಏಣಿಯ ಮೇಲಿಂದ ಪುಟಿದು ನಾಲ್ಕನ ಅಂತಸ್ತಿನಿಂದ ಕೆಳಗೆ ಬಿತ್ತು. ರಾಜರಾಣಿ ಭಯಂಕರವಾಗಿ ಚೀರಿದರು. ದಾರಿಯ ಜನ ಚೀರಿದರು. ನನ್ನನ್ನು ಹೊಡೆಯಲು ಬಂದ ಸೈನಿಕರೂ ಚೀರಿದರು. ಕೂಸು ಬೀಳಬೀಳುತ್ತಿದ್ದಂತೆ ನಾನು

ಓಡಿಹೋಗಿ ರೆಪ್ಪೆ ಬಡಿಯುವಷ್ಟರಲ್ಲಿ ನೆಲಕ್ಕೆ ಬೀಳುವಷ್ಟರಲ್ಲಿ ಕೈಚಾಚಿ ಹಿಡಿದೆ. ಒಬ್ಬರು ಕೂಸನ್ನು ತೂರಿದಾಗ ಇನ್ನೊಬ್ಬರು ಅದನ್ನು ವಿನೋದವಾಗಿ ಹಿಡಿದಂತೆ ಕೂಸು ನನ್ನ ತೋಳತೆಕ್ಕೆಯಲ್ಲಿ ಹೂವಾಗಿ ಬಂದು ಬಿತ್ತು. ನನ್ನ ಮೇಲೆ ಬಿದ್ದಾಗ ಆ ಮುದ್ದು ಮಗು ಅಂಜಿರಲಿಲ್ಲ. ನಗುತ್ತಿತ್ತು!! ಅದಕ್ಕೇನು ಗೊತ್ತು ಸಾವಿನ ಅನುಭವ?.... ಹಾ.... ಎನ್ನುವಷ್ಟರಲ್ಲಿ ಮೇಲಿನಿಂದ ರಾಜರಾಣಿ ಇಬ್ಬರೂ ಕೆಳಗೋಡಿ ಬಂದರು. ನನ್ನ ಕೈಯಲ್ಲಿ ಸುರಕ್ಷಿತವಾಗಿದ್ದ ತಮ್ಮ ಕೂಸನ್ನು ಕಂಡು.... ನಾನು ಯಾರು ಏನು.... ಎಂದು ಕೇಳದೇ ನೇರವಾಗಿ ನನ್ನ ಕಾಲಿಗೇ ಸಾಷ್ಟಾಂಗ ಬಿದ್ದರು!.... ಬೇಡಾ ಬೇಡಾ.... ಎಂದು ನಾನು ಚೀರಿದೆ. ಆದರೆ ಅವರು ....ಪುಣ್ಯಾತ್ಮಾ ನೀನೇ ನಮ್ಮ ಪಾಲಿನ ದೇವರು.... ಎಂದು ಮತ್ತೊಮ್ಮೆ ನನ್ನ ಕಾಲಿಗೆ ಎರಗಿದರು. ಅವರಿಗೆ ನಾನು ಇದ್ದ ಸಂಗತಿ ಹೇಳಿದೆ. ಯುದ್ಧದಲ್ಲಿ ಸೆರೆಸಿಕ್ಕ ಕೈದಿ ನಾನೆಂದು ಹೇಳಿದೆ.... ತಕ್ಷಣವೇ ನಿನ್ನನು ಬಿಡುಗಡೆ ಮಾಡಿದ್ದೇವೆ ಏನು ಬೇಕೊ ಬೇಡಿಕೋ.... ಎಂದರು. ನಾನೂ ಬುದ್ಧಿ ಉಪಯೋಗಿಸಿ.... ಮಹಾರಾಜರೇ ತಾವು ನಮ್ಮ ಸುರಪುರ ದೊರೆಗಳ ಕೂಡ ಇನ್ನು ಯುದ್ಧ ಮಾಡುವದನ್ನು ಬಿಟ್ಟು ಒಡಂಬಡಿಕೆ ಮಾಡಿಕೊಂಡು ಸಖ್ಯದಿಂದ ಬಾಳಬೇಕು.... ಎಂದು ಕೇಳಿಕೊಂಡೆ. ತಕ್ಷಣವೇ ಮಹಾರಾಜರು ಒಪ್ಪಿದರು. ಆ ದಿನವೇ ತಮ್ಮ ಅರಮನೆಯಲ್ಲಿ ಊಟ ಮಾಡಿಸಿ, ರಾಜೋಚಿತ ಉಡಿಗೆ ಕೊಟ್ಟು, ತಮ್ಮ ಅತ್ಯಂತ ಪ್ರೀತಿಯ ಬಿಳಿಯ ಕುದುರೆ ಮೇಲೆ ನನ್ನನ್ನು ಕೊಡ್ರಿಸಿ ಕಳಿಸಿದರು. ಕಳಿಸುವಾಗ ನನಗೆ.... ನಿಮ್ಮ ಮಹಾರಾಜರಿಗೆ ಹೇಳಪ್ಪಾ ನಾವು ನಿಮ್ಮ ಮಲೆನಾಡಿನ ಸಾವಿರ ಹಳ್ಳಿಗಳನ್ನು ನಿಮಗೇ ಬಿಟ್ಟುಕೊಟ್ಟದ್ದೇವೆಂದು.... ಒಪ್ಪಂದ ಪತ್ರ ನಮ್ಮ ರಾಯಸದವರಿಂದ ಬರುವ ಹುಣ್ಣಿಮೆಯೊಳಗೆ ಕಳಿಸುತ್ತೇವೆ... ಎಂದರು.'

ಭೀಮಣ್ಣ ಕಥೆ ಮುಗಿಸಿದಾಗ ಎಲ್ಲರೂ ಅಂತ:ಪುರದಲ್ಲಿರಲಿಲ್ಲ! ಆನಂದ ಅಭಿಮಾನಗಳ ಗೌರಿಶಂಕರ ಶಿಖರದ ತುಟ್ಟ ತುದಿಯ ಮೇಲಿದ್ದರು!!

* * *

ಮರುದಿನವೇ ಸುರುಪುರದ ಮಹಾರಾಜರು ರಣರಂಗದಲ್ಲಿ ಸತ್ತುಹೋದ ದಂಡನಾಯಕ ತಿಮ್ಮರಸನ ಹುದ್ದೆಗೆ ಭೀಮಣ್ಣನನ್ನು ಏರಿಸಿದರು! ಗುಡಿಸಲಿನ ಭೀಮಣ್ಣ ಈಗ ಅರಮನೆಯ ಭೀಮೇಶ್ವರ ದಂಡನಾಯಕನಾಗಿ ತನಗಾಗಿ ಮೀಸಲಿದ್ದ ರಾಜವಾಡೆಯ ಮಹಲಿನ ಮನೆಗೆ ಪರಿವಾರ ಸಮೇತನಾಗಿ ಬಂದು ನೆಲೆಸಿದ!!

ಗೌರಿ ಆನಂದದ ಕಂಬನಿ ಸುರಿಸಿ ಪ್ರಾರ್ಥಿಸಿದಳು—

'ಓ ಜಗದ್ಗುರು ಗುರುಸಿದ್ಧೇಶಾ.... ನೀನು ಬಡವರ ಬಂಧು.... ಅಂಬಲಿಯ ಮಕ್ಕಳ ಬಂಧು.... ಗುಡಿಸಲಿನ ಜೀವರ ಜೀವಾಳ'....'

೧೩

ಬಂದರು.... ಬಂದರು.... ಮೂವರು ಮಹಾಜಂಗಮರು! ಹೂಬಳ್ಳಿ, ಗ್ರಾಮದ ಪುಣ್ಯವೋ ಏನೋ?

'ಲಾಂಛನವನು ಕಂಡು ಶರಣೆಂಬೆ ಅವರ ಅಂತರಂಗವ ನೀವೇ ಬಲ್ಲಿರಿ'.... ಎಂದು ಬಸವಣ್ಣನವರು ಅತ್ತ ಕಲ್ಯಾಣದಲ್ಲಿ ಹಾಡಲಿಲ್ಲವೆ? ಕಳ್ಳ—ಹಾದರಿಗ -ಹಾವಾಡಿಗ- ಪುಂಡ- ಬಂಟ- ಕುಡುಕ- ಕುಹಕ ಎನಿಸಿದ್ದರೇನು ಸರ್ವರೂ ಕೂಡಲಸಂಗ ಎಂಬ ಅಧಿಕಾರ ಮುದ್ರೆ ಬಸವಣ್ಣನವರ ಮುಗ್ಧ ಭಕ್ತಿಯ ವಚನಗಳಿಂದ ದೊರೆತಾಗ, ನಿಜವಾಗಿಯೂ ಅದನ್ನೇ

ಬಯಸುತ್ತಿದ್ದ ಅನೇಕ ವಿಟಜಂಗಮರೂ, ಸಟಿಜಂಗಮರೂ, ಸುಳ್ಳೀ ಜಂಗಮರೂ ಬಸವಣ್ಣನವರ ವಚನವನ್ನು ದುರುಪಯೋಗ ಮಾಡಿ ಕೊಂಡು ಕಲ್ಯಾಣವನ್ನು ಹೊಗಲು ಪ್ರಯತ್ನಿಸಿದರು. ಅನೇಕರು ಹೊಕ್ಕೇಹೊಕ್ಕರು. ಅದೇ ರೀತಿ ನಾನಾ ದಿಗ್ದೇಶಗಳಿಂದ ಭಿಕ್ಷೆ ಬೇಡುತ್ತ ಅಜ್ಞರನ್ನು ಮೋಸ ಮಾಡುತ್ತ ನಂಬಿಗೆ ನೀಡಿದ ಭಕ್ತರನ್ನು ಸುಲಿಯುತ್ತ ಮೂವರು ಜಂಗಮವೇಷದ ಕಪಟಿಗಳು ಕಲ್ಯಾಣಕ್ಕೆ ಹೋಗುತ್ತೇವೆಂಬ ನೆಪದಿಂದ ಹೂಬಳ್ಳಿ ಗ್ರಾಮಕ್ಕೂ ಬಂದರು.

ಆ ಮೂವರಲ್ಲಿ....

ಗೋಕರ್ಣ ಕ್ಷೇತ್ರದಿಂದ ಬಂದಿದ್ದಾನೆ ಒಬ್ಬ ಜಂಗಮ! ಹೆಸರು ಶಿವಪುತ್ರದೇವ!!

ಕಾಶಿಕ್ಷೇತ್ರದಿಂದ ಬಂದಿದ್ದಾನೆ ಇನ್ನೊಬ್ಬ ಜಂಗಮ! ಹೆಸರು ಬೋಳೇಶಂಕರಯ್ಯ ಸ್ವಾಮಿ!!

ಶಿವಕಂಚಿಕ್ಷೇತ್ರದಿಂದ ಬಂದಿದ್ದಾನೆ ಮತ್ತೊಬ್ಬ ಜಂಗಮ! ಹೆಸರು ಶ್ರೀ ಗುರುಪಾದಯ್ಯನವರು!!

ಗೋಕರ್ಣದ ಶಿವಪುತ್ರದೇವರು ಸಾಮಾನ್ಯರಲ್ಲ. ನಿರ್ಮಾಯ ನಿರಂಜನ ಕಾಮವೈರಿ ಜಂಗಮರೆಂದು ಅವರ ಖ್ಯಾತಿ. ಅವರೊಂದಿಗೆ ಮಹಾರೂಪವತಿಯೂ ಹೆಣ್ತನದ ತುಂಬಿದ ಲಕ್ಷಣವತಿಯೂ ಆದ ಒಬ್ಬಳು ಕೇವಲ ಶಿಷ್ಯೋತ್ತಮಳೇ ಬಂದಿದ್ದಾಳೆ. ಅವಳ ಹೆಸರು ಪ್ರಾಣದಾಸಿ.

ಕಾಶಿಯ ಬೋಳೇಶಂಕರಯ್ಯನವರೇನು ಕಡಿಮೆಯೇ? ಸಚ್ಚಿದಾ ನಂದ ಬೋಳೇಶಂಕರಯ್ಯನವರೆಂದೇ ಇವರ ಖ್ಯಾತಿ. ಇವರ ಒಬ್ಬ ಮಹಾಶಿಷ್ಯ ಗಿಡ್ಡಾನ ವೀರಭದ್ರ. ಅವನ ಗುಪ್ತಪೂಜಾಪೆಟ್ಟಿಗೆಯಲ್ಲಿ ಸಣ್ಣ ಹಾರಿ, ಕೈ ಗುದ್ದಲಿ, ಚೂರಿ ಏನೆಲ್ಲಾ ಇದೆ. ಯಾಕೊ ಏನೊ ಅವನಿಗೇ ಗೊತ್ತು!

ಇನ್ನು; ಕಂಚಿಯ ಶ್ರೀ ಗುರುಪಾದಯ್ಯನವರೇನು ಸಣ್ಣವರೆಂದು ಪ್ಯಾಡಿದ್ದೀರಾ? ಊಹುಂ.... ದೊಡ್ಡೋರು.... ಅಷ್ಟೇ ಅಲ್ಲ ಥೊಡ್ಡೋರು! ಆದರೆ ಅವರ ಹಗಲಿನ ಅವತಾರವೇನು ರಾತ್ರಿಯ ಅವತಾರವೇನು ಯಾರಿಗೂ ತಿಳಿಯದು. ಒಬ್ಬ ಕರಿಯ ಹುಂಬಮಾತ್ರ ದಿನಕ್ಕೆ ಇಪ್ಪತ್ತು ಸಲ ಅವರಿಗೆ ಸಾಷ್ಟಾಂಗ ಹಾಕುತ್ತಲೇ ಅವರೊಂಗೆ ಇರುತ್ತಾನೆ. ಆ ಶಿಷ್ಯ ಪುಂಗವನ ಹೆಸರು ಜೋಕುಮಾರ ಸ್ವಾಮಿ.... ಆದರೆ ಗುರುಗಳು ಅವ ನನ್ನು ಪ್ರೀತಿಯಿಂದ ಕರೆಯುತ್ತಿದ್ದುದು 'ಜೋಕ್ಯಾ' ಎಂದು!

* * *

ಆ ದಿನ ಸಂಜೆ! ಸಂಜೆಯ ನಸುಬಿಸಿಲೂ ರಾತ್ರಿಯ ಬೆಳದಿಂಗ-ಳವೂ ಕಡ್ಲೀಚಟ್ನಿಯಲ್ಲಿ ಕುಸುಬಿ ಎಣ್ಣಿ ಕೂಡಿಸಿದಂತೆ ಮಧುರವಾಗಿ ಕೂಡಿದ್ದವು. ಆಗ ಶರಣರ ಈ ಗುಂಪು ಶಿವಭಜನೆಯನ್ನು ಮಾಡುತ್ತ ಹೂಬಳ್ಳಿಗೆ ಬಂತು. ಊರು ಬಂದ ಕೂಡಲೆ ಇವರ ಭಜನೆಯ ಕಂಠ ಇನ್ನೂ ಜೋರಾಯಿತು. ರುದ್ರಪ್ಪ ಶೆಟ್ಟರ ಮನೆಬಾಗಿಲು ತಲುಪಿದಾಗ ಲಂತೂ ಅನೇಕ ಶರಣರು ಭಕ್ತಿಯಲ್ಲಿ ಆನಂದ ಉಕ್ಕಿ ಕಣ್ತುಂಬಾ ಅಳುತ್ತಿ ದ್ದರು! ಅವರನ್ನು ಭಕ್ತಿಯಿಂದ ಕೈಮುಗಿದು ನೋಡುತ್ತಿದ್ದ ಊರ ಹೆಣ್ಣುಮಕ್ಕಳು ಅವರು ಅಳುವದನ್ನು ನೋಡಿ ತಾವೂ ಅಳತೊಡಗಿದರು. ಒಬ್ಬ ಮುದುಕಿ.... 'ಯೆಂಥಾ ಮಹಾತ್ಮರವ್ವಾ ಈ ಪುಣ್ಯಾತ್ಮರು!' ಎಂದು ಉದ್ಗಾರ ತೆಗೆದಳು. ಅವಳ ಸೊಸಿ ಅವಳಿಗೆ.... 'ಯತ್ತೀ.... ಅವ್ರನ್ನ ಕರೀ ನಮ್ಮನೀಗೆ.... ಪೂಜಾಮಾಡಿ ಪುಣ್ಯ ಪಡಿಯೂನು....' ಎಂದಳು. ಇನ್ನೂ ಅನೇಕರು ಅವರಿಗೆ ಸಾಷ್ಟಾಂಗ ಹಾಕಿ.... ಬರ್ರಿಪಾ ತಂದೆ ನಮ್ಮನೀಗೆ.... ಉದ್ಧಾರಮಾಡಬರ್ರಿ ನಮ್ಮನಿ.... ಎಂದು ಕೇಳಿಕೊಂಡರು.

ಆದರೆ ಶರಣರು ಯಾರ ಆಶೆ ಆಮಿಷಕ್ಕೂ ಓಗೊಡದ ಪುಣ್ಯಾತ್ಮರು. ಬಡವರು ಕರೆದರಂತೂ ಹೊರಳಿ ಕೂಡಾ ನೋಡದ ವ್ರತ ನಿಷ್ಠರು. ಶ್ರೀಮಂತರು ಕರೆಯದಿದ್ದರೂ ಅವರ ಮನೆಗೆ ಹೋಗಿ ಅವರ ಪಾಪಗಳನ್ನೆಲ್ಲಾ ತಮ್ಮ ಜೋಳಿಗೆಯಲ್ಲಿ ತುಂಬಿಕೊಂಡು ಅವರ ಮನೆ ತೊಳೆದು ಶುದ್ಧ ಮಾಡುವವರು!

ಪ್ರಭಾವತಿ ರುದ್ರಪ್ಪಶೆಟ್ಟರೊಂದಿಗೆ ಆರತಿ ತಂದು, ಈ ದೊಡ್ಡ ಶರಣರ ಪಾದಕ್ಕೆ ಬೆಳ್ಳಿಕೊಡದಲ್ಲಿ ನೀರು ಹಾಕಿ, ಆರತಿ ಬೆಳಗಿ ಹಣೆ ಹಚ್ಚಿ ವಂದಿಸಿದಳು. ಏನೂ ವಿಚಾರ ತಿಳಿಯದೆ ರುದ್ರಪ್ಪಶೆಟ್ಟರು.... ಇವರು ಜಂಗಮರೋ ಅಥವಾ ವೇಷಗಾರರೋ.... ಎಂದು ಆಲೋಚಿಸುತ್ತ ನಿಂತಿದ್ದರು. ಆದರೆ ಪ್ರಭಾವತಿ ಗಂಡನಿಗೆ ಸಿಟ್ಟಿನಿಂದ ಕಣ್ಣೋಟ ಪಿಸುದನಿಯಲ್ಲೇ ಬಯ್ದು.... ಅವರನ್ನು ಒಳಗೆ ಕರೆಯಿರಿ.... ಎಂದಳು. ಹೆಂಡತಿಯ ಆಜ್ಞೆ ಎಂದ ಮೇಲೆ ಮುಗಿದೇ ಹೋಯಿತು! ಕೂಡಲೆ ರುದ್ರಪ್ಪಶೆಟ್ಟರು ಪ್ರಾರ್ಥಿಸಿದರು....

'ಬನ್ರಿ ಮಹಾತ್ಮರೆ.... ಒಳಗೆ ಬನ್ರಿ.... ಇವತ್ತ ನಿಮ್ಮ ಪೂಜಾ ಪ್ರಸಾದಾ ನಮ್ಮನೆಯಲ್ಲೇ ಆಗಬೇಕು....'

ಬೋಳೇಶಂಕರಯ್ಯ ಸ್ವಾಮಿಗಳು ಹೇಳಿದರು—

'ಊಹುಂ.... ನಾವು ಊಟದ ಜಂಗಮರಲ್ಲ.... ಪೂಜಾ ಜಂಗಮರು.... ನಿಮ್ಮ ಸಿರಿಸಂಪತ್ತು ಮರ್ತು ಬಾ ಅಂದ್ರ ಬರ್ತೇವಿ.... ಇಲ್ಲಾಂದ್ರ ನಡೀತೇವಿ....'

ಪ್ರಭಾವತಿಯೂ ಗಲ್ಲಗಲ್ಲ ಬಡಿದುಕೊಂಡು ಬೇಡಿಕೊಂಡಳು—

'ಆಗ್ಲಿ.... ನೀವು ಹೇಳಿದಂತೆ ನಡಸಿಕೊಡ್ತೇವಿ.... ಬರ್ರಿ.... ಈ ಸಿರಿಸಂಪತ್ತು ನಮ್ದಲ್ಲಾ ನಿಮ್ದು.... ದಯಮಾಡಸ್ರಿ....'

ದಯಮಾಡಿಸಿದರು ಶರಣರು!

ಈ ದಿನ ಪೂಜೆಪ್ರಸಾದ ಹೆಗ್ಗಳವಾಗಿ ನಡೆಯಿತು. ರುದ್ರಪ್ಪ ಶೆಟ್ಟರೆಂದರೇನು ಸಾಮಾನ್ಯರೆ? ಅವರಿಗೆ ಹತ್ತಾರು ಮನೆಗಳು. ಅತಿಥಿಗಳಿಗಾಗಿಯೇ ಮೂರು ಮಹಲುಗಳನ್ನು ಕಟ್ಟಿಸಿ ಒಗೆದಿದ್ದಾರೆ. ಆ ದಿನ ರಾತ್ರಿ ಮೂರು ಮಹಲುಗಳಲ್ಲಿ ಮೂವರು ಜಂಗಮರೂ ಅವರ ಪರಿವಾರ ವಾಸ. ಅವರಿಗಾಗಿ ಸೇವೆ ಮಾಡಲು ಶೆಟ್ಟರು ತಮ್ಮ ತೋಟಗಳಲ್ಲಿ ದುಡಿಯುತ್ತಿದ್ದ ಸುಶೀಲ ಆಳುಗಳನ್ನೇ ಕೊಟ್ಟರು. ತಮ್ಮ ಅಂಗಡಿಗಳನ್ನೆಲ್ಲಾ ಅವರ ಬೇಡಿಕೆಗಾಗಿ ತೆರವು ಮಾಡಿದರು. ಪ್ರಭಾವತಿಯು ಗಂಡನ ಕದ್ದು ಅನೇಕ ಬೆಲೆ ಬಾಳುವ ವಸ್ತ್ರಗಳನ್ನೂ ಪೂಜಾಸಲಕರಣೆಗಳನ್ನೂ ಧಾರಾಳವಾಗಿ ಕಳಿಸಿದಳು. ಜೊತೆಗೆ ಆಕಳತುಪ್ಪ, ಹಣ್ಣು-ಹಾಲು, ಕೇರಬೀಜ ಕಲ್ಲುಸಕ್ಕರಿ, ದ್ರಾಕ್ಷಿ, ಗೋಡಂಬಿ, ಉತ್ತತ್ತಿಗಳನ್ನು ಬುಟ್ಟಿಗಟ್ಟಲೆ ಕಳಿಸಿದಳು. ಎಲ್ಲರಿಗೂ ಪೂಜೆಗೆ ಬೆಳ್ಳಿಯ ಕೊಡಗಳು, ಬೆಳ್ಳಿಯ ತಾಟು-ಬಟ್ಟಲಗಳು, ಬೆಳ್ಳಿಯ ಸಮೆ, ಬಂಗಾರದ ಪಂಚಾರತಿಗಳು, ಬಂಗಾರದ ಗಂಟಿಗಳು, ಪ್ರಸಾದಕ್ಕೆ ಹೇರಳವಾಗಿ ಮಸಾಲಿ ದೀನಸು, ಅಡಗಿ ಸಾಮುಗ್ರಿಗಳನ್ನು ಬುಟ್ಟಿ ಬುಟ್ಟಿ ತುಂಬಿ ಕಳಿಸಿದಳು.

ಮತ್ತೇನು ಕೇಳುವದು?

ಒಂದೇ ರಾತ್ರಿ ಇರಬಂದ ಈ ಮಹಾಜಂಗಮರು ಏಳು ದಿನವಾದರೂ ತಳ ಕೀಳಲಿಲ್ಲ! ಊರು ಬಿಡುವ ಸೂಚನೆಯೂ ಕಾಣಲಿಲ್ಲ!! ತೆಳ್ಳಗಿದ್ದವರು ದಪ್ಪಗಾದರು.... ಕಪ್ಪಗಿದ್ದವರು ಕೆಂಪಗಾದರು!!!

* * *

ಹತ್ತನೆಯ ದಿನ ರಾತ್ರಿ ರುದ್ರಪ್ಪಶೆಟ್ಟರಿಗೆ ಸಂಶಯ ಬಂತು. ಮಧ್ಯರಾತ್ರಿಯಲ್ಲಿ ಮೆಲ್ಲನೆ ಎದ್ದು ನಡೆದರು. ಪ್ರಭಾವತಿ ಎಚ್ಚತ್ತು ಅವರನ್ನು ತಡೆದು ಕೇಳಿದಳು—

'ಎಲ್ಲಿ ಹೋಗುತ್ತಿರಿ?'

ಶೆಟ್ಟರು ಉತ್ತರ ಕೊಡಲಿಲ್ಲ. ಪಡಪಡನೆ ಹೊರಗೆ ನಡೆದರು. ಪ್ರಭಾವತಿಯೂ ಉಟ್ಟ ಸೀರೆಯ ಮೇಲೆ ಸೆರಗು ಹೊದ್ದುಕೊಳ್ಳದೆ ಬೆಂಬತ್ತಿ ಕೇಳಿದಳು—

'ಯಾಕ್ರಿ.... ಎಲ್ಲೆ.... ಯಾಕೆ?'

ಶೆಟ್ಟರು ಗಂಭೀರವಾಗಿ ಹೇಳಿದರು—

'ಆ ಜಂಗಮರನ್ನು ನೋಡಲಿಕ್ಕೆ....'

'ಯಾಕ್ರಿ.... ಈಗ್ಯಾಕ....?'

'ಅವರ ದರ್ಶನಾ ಪಡಕೋಬೇಕಂತ ನನಗ ಬ್ಹಾಳ ಭಕ್ತಿ ಬಂದೈತಿ....'

'ಸುಳ್ಳು.... ನಿಮ್ಮ ಕಳ್ಳಾಗ ಸಂಶಯ ಪಿಶಾಚಿ ಹೊಕ್ಕೈತಿ....'

'ಊಹುಂ.... ಇಲ್ಲಾ.... ಇಲ್ಲಾ....'

'ನೋಡ್ರೀ ಮತ್ತ.... ಶರಣ್ರು ಜಂಗಮ್ರು ಅವರನ್ನ ಪರೀಕ್ಷಾ ಮಾಡಾಕ ಹೋಗಬಾರ್ದು.... ಮಹಾಪಾಪಾ.... ಪಂಚಕೋಟಿ ಮಹಾ ಪಾಪಾ....'

ಶೆಟ್ಟರು ನಕ್ಕು ನಡೆದರು. ಅವಳು ಸಿಟ್ಟಿನಿಂದ ಹಿಂಬಾಲಿಸಿದಳು.

* * *

ಒಂದನೆಯ ಮಹಲು ಬಂತು. ಇಲ್ಲಿ ಕಾಶಿಯ ಸಚ್ಚಿದಾನಂದ ಬೋಳೇಶಂಕರ ಹಾಗೂ ಅವನ ಶಿಷ್ಯ ಗಿಡ್ಡಾನ ವೀರಭದ್ರ ಇದ್ದದ್ದು. ಶೆಟ್ಟರು ಭರಭರನೆ ಹೊರಗಿನ ಮೆಟ್ಟಲುಗಳಿಂದ ಮಾಳಿಗೆಗೆ ಏರಿದರು.

ಬೆಳಕಂಡಿಯಿಂದ ಬೆಳಕು ಕಂಡಿತು. ಸದ್ದು ಮಾಡದೇ ನೋಡಿದರು.

ಒಳಗೆ ತುಪ್ಪದ ದೊಡ್ಡದೀಪ. ಸಚ್ಚಿದಾನಂದ ಬೋಳೀ ಶಂಕರಯ್ಯಸ್ವಾಮಿಗಳು ಕುಳಿತು ಎಣಿಸುತ್ತಿದ್ದಾರೆ. ಬಂಗಾರದ ದಾಗೀನು ಗಳು! ಮುತ್ತು!! ರತ್ನ!!! ಶಟ್ಟರ ಎದೆ ಹೌಹಾರಿತು. ಪ್ರಭಾವತಿಯೂ ಬಂದು ನೋಡಿ ಮೈತುಂಬಾ ಬೆವರಿದಳು. ಆ ಜಂಗಮನ ಮುಂದೆ ಅವನ ಶಿಷ್ಯ ಗಿಡ್ಡಾನ ವೀರಭದ್ರ. ಅವನ ಪಕ್ಕದಲ್ಲಿ ಹಾರಿ, ಕೈಗುದ್ದಲಿ, ಬರ್ಚಿ ವಗ್ಯೆರೆ ಕನ್ನ ಕೊರೆಯುವ ಚಿಕ್ಕಚಿಕ್ಕ ಆಯುಧಗಳು. ಈಗ ಮೂರು ನಾಲ್ಕು ದಿನಗಳಿಂದ ಊರಲ್ಲಿ ಕೆಲವು ಶ್ರೀಮಂತರ ಮನೆಯ ದರೋಡೆ ಗಳಾಗಿ ಆಭರಣಗಳು ಮುತ್ತುರತ್ನ ಕಳುವಾಗಿದ್ದವು. ಶಟ್ಟರ ಓಣಿಯ ಸರಾಫಿ ಅಂಗಡಿಯೂ ಕಳುವಾಗಿತ್ತು. ಇಲ್ಲಿ ಈಗ ಇವರು ಆಭರಣಗಳನ್ನು ಎಣಿಸುತ್ತಿದ್ದಾರೆ! ಏನಿದು ವಿಚಿತ್ರ?

ಶಟ್ಟರಿಗೆ ಬಾಯಿ ಬರಲಿಲ್ಲ. ಎದೆ ಆದುರಿತು. ಹೊಟ್ಟೆಯಲ್ಲಿ ಉರಿಹಚ್ಚಿ ಉದರ ಕಿಚ್ಚಿನಲ್ಲಿ ಮುಂಗಲಿ ಒಗೆದಂತಾಯಿತು!

* * *

ಮೆಲ್ಲನೆ ಇಳಿದು ಎರಡನೆ ಮಹಲಿಗೆ ನಡೆದರು. ಇಲ್ಲಿ ಗೋಕರ್ಣದ ನಿರ್ವಾಣಿಯ ನಿರಂಜನ ಕಾಮುಷ್ಯೆರಿ ಜಂಗಮ ಶಿವಪುತ್ರದೇವ ರಿದ್ದಾರೆ. ಅವರ ಶಿಷ್ಯೆ ಪ್ರಾಣದಾಸಿ ಇದ್ದಾಳೆ. ಶಟ್ಟರು ಮಾಳಿಗೆ ಏರಿ ದರು. ಸುಶೀಲೆಯಾದ ಪ್ರಭಾವತಿ ದೂರವೇ ನಿಂತಳು. ಶಟ್ಟರೂ ಸುಸಂಸ್ಕೃತರಾದುದರಿಂದ ಅವರ ಮನಸ್ಸು ಅವಿವೇಕದ ಕೃತ್ಯಗಳನ್ನು ನೋಡಲು ಬೇಡೆಂದಿತು. ಪ್ರಭಾವತಿ ಮನೆಯ ಆಳು ಸಂಗಪ್ಪನನ್ನು ಎಬ್ಬಿಸಿದಳು. ಶಟ್ಟರು ಅವನ ಕಿವಿಯಲ್ಲಿ ಹೇಳುವದನ್ನೆಲ್ಲಾ ಹೇಳಿ ಕಳಿಸಿದರು.

ಇಲ್ಲಿ ಎಲ್ಲ ಬೆಳಕಂಡಿಗಳು ಮುಚ್ಚಿವೆ. ಒಂದು ಮಾತ್ರ ತೆರೆದಿದೆ. ಶಟ್ಟರ ಆಳು ಸಂಗಪ್ಪ ಅಲ್ಲಿಂದ ಒಳಗೆ ನೋಡಿದಾಗ ಆ ಮಹಾಜಂಗಮನು ವಿಟಜಂಗಮನಾದುದು ತಿಳಿಯಿತು. ಅವನೊಂದಿಗೆ ಆ ಪ್ರಾಣದಾಸಿ ಇದ್ದಾಳೆ. ಒಂದೇ ಮಂಚದ ಮೇಲೆ ವಿಲಾಸದಲ್ಲಿ ಹರಟೆ ಹೊಡೆಯುತ್ತಿದ್ದಾರೆ. ಆದರೆ ಪ್ರಾಣದಾಸಿಯಲ್ಲದೆ ಇನ್ನೊಬ್ಬಳೂ ಇದ್ದಾಳೆ! ಯಾರವಳು? ಶಿವಶಿವಾ.... ಮತ್ತಾರೂ ಅಲ್ಲ.... ತೋಟದ ಕಾವಲು ಆಳಿನ ಮಗಳು ಲಕ್ಷ್ಮವ್ವ! ತಕ್ಷಣ ಸಂಗಪ್ಪ ಕಣ್ಮುಚ್ಚಿದ!! ಶಟ್ಟರು ಸುದ್ದಿ ತಿಳಿದು ಮೂರ್ಛೆ ಬಂದು ಕುಳಿತರು!!!

§ § /

ಪ್ರಭಾವತಿ ಈ ದೃಶ್ಯಗಳನ್ನು ನೋಡಲಾರದೆ ಅಳುತ್ತ ಮನೆಗೆ ನಡೆದಳು. ಸಾತ್ವಿಕರೂ ಪೂಜಾನಿಷ್ಠ ಶರಣರೂ ಆದ ಶಟ್ಟರಿಗೆ ಸಾತ್ವಿಕ ಸಂತಾಪ ಉಕ್ಕಿ ಬಂತು. ಅವರು ಆವೇಶಭರಿತರಾಗಿ ಮೂರನೆಯ ಮಹಲಿಗೆ ಸಂಗಪ್ಪನೊಂದಿಗೆ ನಡೆದರು. ಆದರ ಮೇಲೆ ಹತ್ತಿ ನೋಡುವ ಅವಶ್ಯಕತೆಯೇ ಇರಲಿಲ್ಲ! ಸಮೀಪದಿಂದಲೇ ಮೀನಿನ ವಾಸನೆ ಬಂತು!! ಸಂಗಪ್ಪ ಮೇಲೆ ಹತ್ತಿ ನೋಡಿದಾಗ ಒಳಗಿರುವ ಕಂಚಿಯ ಶ್ರೀಗುರು ಪಾದಯ್ಯನ ಮುಂದೆ ಇದೇ ಗ್ರಾಮದ ಒಬ್ಬಳು ವೇಶ್ಯೆ ಕುಳಿತಿದ್ದಾಳೆ. ಶಿಷ್ಯ ಜೋಕುಮಾರಸ್ವಾಮಿ ಅವರಿಗೆ ಹೆಂಡಖಂಡಗಳ ಎಡೆಮಾಡುತ್ತಿದ್ದಾನೆ!

• • •

ಮರುದಿನ ಸುದ್ದಿ ಊರಿಗೆ ಊರೇ ಗೊತ್ತಾಗಿ ಜನರೆಲ್ಲಾ ಖಾರವಾಗಿ ಬಂದು ಮೂರು ಮಹಲುಗಳನ್ನೂ ಮುತ್ತಿಗೆ ಹಾಕಿದರು. ಆಗ ಅವರ ಕೈಗೆ ಸಿಕ್ಕವಸ್ತುಗಳು ಮುತ್ತು-ರತ್ನ-ಬಂಗಾರ-ಬೆಳ್ಳಿ-ಒಬ್ಬಳು ವೇಶ್ಯೆ ಒಬ್ಬಳು ತೋಟದ ಹುಡುಗಿ-ಹೆಂಡ-ಖಂಡ-ಇತ್ಯಾದಿ-ಇತ್ಯಾದಿ! ಹಳ್ಳಿಯ ಜನರೆಲ್ಲಾ ಮಗ್ಗಲು ಮುರಿಯುವಂತೆ ಈ ವೇಷಗಾರ ಭಂಡರನ್ನು ಥಳಿ. ಸುತ್ತ, ಜಪ್ಪರ ಹಣ್ಣು ಜಜ್ಜಿದಂತೆ ಜಜ್ಜಿ. ನೇರವಾಗಿ ಅರಣ್ಯಕ್ಕೆ ಎಳೆದು ತಂದು, ಹಳ್ಳ ದಾಟಿ, ಸರೋವರದ ಗವಿಗುಂಡಕ್ಕೆ ಬಂದು, ಅವರನ್ನೆಲ್ಲಾ ಹೆಡಮುರಿಗೆ ಕಟ್ಟಿ ಹುಚ್ಚನ ಗವಿಯ ಮುಂದೆ ಒಗೆದರು.

ಕೆಲಕಾಲದ ನಂತರ ಪೂಜೆ ಮುಗಿಸಿದ ಗುರುಸಿದ್ಧಯೋಗೀಂದ್ರರು ಹೊರಬಂದು ಈ ದೃಶ್ಯ ಕಂಡು ಕೋಪಿಷ್ಟರಾಗಿ ಹೇಳಿದರು—

'ಛೀ.... ಛೀ.... ಬಿಚ್ರಿಪಾ.... ಬಿಚ್ರಿ.... ಇವರೆಲ್ಲಾ ಶರಣರು ... ಜಂಗಮರು.... ಪುಣ್ಯಾತ್ಮರು.... ಹಾಗೆ ಹೊಡೀಬಾರ್ದು....'

ಈ ಮಾತು ಕೇಳಿ ಊರಜನ ನಾನಾರೀತಿ ಕೂಗಿ ಹೇಳಿದರು—

'ಇವರು ಪುಂಡರು'

'ಇವರು ಕಳ್ಳರು'

'ಇವರು ಹಾದರಿಗರು'

'ಇವರು ಹೆಂಡಕುಡುಕರು'

'ಇವರು ಮಾಂಸಾಹಾರಿಗಳು'

'ಇವರನ್ನು ಕೊಲ್ಲಬೇಕು'

'ಜೀವಂತ ಹುಗೀಬೇಕು'

ಹುಚ್ಚಯೋಗಿಗಳು ನಕ್ಕು ಹೇಳಿದರು—

'ಹಾಗಿದ್ದರೆ ಇವರನ್ನೆಲ್ಲಾ ಇಲ್ಲೇಕೆ ತಂದ್ರಿಪಾ.... ಇದು ಧರ್ಮಸ್ಥಾನ.... ಶಿಕ್ಷಾಸ್ಥಾನವಲ್ಲ.... ಇಲ್ಲಿ ಸಿಗುವದು ಕ್ಷಮೆ.... ಕರುಣೆ....

ಕಂಬನಿ.... ಅನ್ನದಾಸೋಹ ಜ್ಞಾನದಾಸೋಹ ಭಕ್ತಿದಾಸೋಹಗಳು ಬೇಕಾದವರು ಮಾತ್ರ ಇಲ್ಲಿ ಬನ್ನಿರಿ.... ಇಲ್ಲವೆ ತೊಲಗಿರಿ....'

ಎಲ್ಲರೂ ಗಪ್ಪುಗಡದು ನಿಂತರು. ಒಬ್ಬರ ಮುಖವನ್ನೊಬ್ಬರು ನೋಡಿದರು. ರುದ್ರಪ್ಪಶೆಟ್ಟರು ಕೈಮುಗಿದು ಪ್ರಾರ್ಥಿಸಿದರು—

'ತಂದೇ.... ನಾವು ಮಾನವರು.... ಮಾನವರು ಮಾನವರಿಗೆ ಶಿಕ್ಷೆಯನ್ನಲ್ಲದೆ ಬೇರೆ ಏನನ್ನೂ ಕೊಡಲಾರರು.... ಆದ್ದರಿಂದ ತಮ್ಮ ರಕ್ಷೆಗಾಗಿ ತಂದಿದ್ದೇವೆ... ಅಪ್ಪಣೆ ಕೊಡಿರಿ....'

'ಹಾಗಿದ್ದರೆ ಇವರನ್ನು ಬಿಚ್ಚಿಬಿಡಿರಿ.... ಪಾಪ ಜಂಗಮರು ಹಸಿದಿದ್ದಾರೆ.... ಊಟ ಮಾಡಿಸಿರಿ.... ಇವರು ಮಹಾತ್ಮರು.... ಕಲ್ಯಾಣದ ಮಹಾತ್ಮರು....'

ಈಗ ಆ ವಿಟಜಂಗಮ ಶಿವಪುತ್ರದೇವ ಯೋಗಿಗಳ ದಿವ್ಯದರ್ಶನ ಸ್ಪರ್ಶಧಿಂದ, ಸೂರ್ಯನ ಮುಂದೆ ಕತ್ತಲೆ ಓಡಿ ಹೋಗುವಂತೆ, ತನ್ನ ಪೈಶಾಚಿಕ ಗುಣಗಳನ್ನು ಕಳೆದುಕೊಂಡು, ಹೂವರಳಿದಂತೆ ಮಾನವತೆ ಆರಳಿ; ಕೈಮುಗಿದು ಅಳುತ್ತ ಹೇಳಿದ—

'ಮಹಾಪ್ರಭು.... ನಾನು ಶಿವಪುತ್ರದೇವನಲ್ಲ.... ವೇಷಧಾರಿ.... ನನ್ನ ಹೆಸರು ವಿಷ್ಣುಭಟ್ಟ.... ನಾನು ಬ್ರಾಹ್ಮಣ.... ದಯವಿಟ್ಟು ನನ್ನನ್ನು ಕ್ಷಮಿಸಬೇಡಿರಿ.... ಮನಸಿಗೆ ಬಂದ ಶಿಕ್ಷೆ ಕೊಟ್ಟು ಕರುಣಿಸಿರಿ.... ಉದ್ಧಾರ ಮಾಡಿರಿ....'

ಸೂರ್ಯನ ಮುಂದೆ ಕತ್ತಲೆ ಏನು ಮಂಜೇನು? ಈಗ ಆ ಇನ್ನೊಬ್ಬ ಕಳ್ಳಜಂಗಮ ಶಿವಪುತ್ರದೇವನೂ ತನ್ನ ಪಾಪಕರ್ಮಕ್ಕೆ ಮಮ್ಮಲ ಮರುಗಿ, ಸೂರ್ಯತೇಜಸ್ಸಿನ ಈ ಮಹರ್ಷಿಯ ಎದುರು ಮಂಜಿನಂತಿರುವ ತನ್ನ ರಾಕ್ಷಸೀ ಕಾಮವೃತ್ತಿ ಭಸ್ಮವಾಗಿ, ಶಿವಭಕ್ತಿ ಮೂಡಿ, ಕೈಮುಗಿದು ಕಂಬನಿ ಸುರಿಸುತ್ತ ಪ್ರಾರ್ಥಿಸಿದ—

'ತಂದೆ....ನಾನು ಸಚ್ಚಿದಾನಂದ'ಜೋಳೀಶಂಕರನಲ್ಲ.... ನಾನೂ ವೇಷಧಾರಿ.... ನನ್ನ ಹೆಸರು ಶಂಕರಪ್ಪ.... ನಾನು ಲಿಂಗಾಯತ.... ದಯ ವಿಟ್ಟು ತಾವು ನನ್ನನ್ನೂ ಕ್ಷಮಿಸಬೇಡಿರಿ.... ಮಾಡದ ಅಪರಾಧ ಮಾಡಿದ ಮಹಾಪರಾಧಿ ನಾನು....ದಂಡಿಸಿರಿ .... ನನ್ನನ್ನು ತುಂಡರಿಸಿರಿ....'

ಹುಚ್ಚ ಯೋಗೀಂದ್ರರ ಪರಂಜ್ಯೋತಿ ಪ್ರಕಾಶದ ಪ್ರಭಾವಪೂರ್ಣ ಮುಖಮಂಡಲದ ಅಸ್ಖಲಿತ ನಿರ್ಮಳ ತೇಜಸ್ಸು; ಪುಂಡಜಂಗಮ ಗುರು ಪಾದಯ್ಯನನ್ನೂ ಬಿಡಲಿಲ್ಲ. ಅವನೂ ಸೆರಗೊಡ್ಡಿ, ಭೂಮಿಗೆ ತಲೆ ಜಜ್ಜಿ, ಕೂಸಿನಂತೆ ಅತ್ತು ಕೇಳಿಕೊಂಡ—

'ಮಹಾಪುಣ್ಯಾತ್ಮಾ.... ಧನ್ಯಧನ್ಯ.... ಇಂದು ನಾನು ಬಾಳಿದ್ದೂ ಬದುಕಿದ್ದೂ ಧನ್ಯ.... ಆದರೆ ನಾನು ಗುರುಪಾದಯ್ಯ ಜಂಗಮನಲ್ಲ.... ನಾನೂ ವೇಷಧಾರಿ.... ನನ್ನ ಹೆಸರು ಲಕ್ಷ್ಮಣ.... ನಾನು ಕುಲದಿಂದ ಕ್ಷತ್ರಿಯ.... ದಯವಿಟ್ಟು ನನ್ನನ್ನೂ ಕೊಂದು ಈ ಪುಣ್ಯವಂತ ಗ್ರಾಮದಲ್ಲಿ ಸುಡದೇ ದೂರ ಒಯ್ದು ಹದ್ದುಕಾಗೆಗಳಿಗೆ ಒಗೆಯಿರಿ....'

ಹುಚ್ಚಯೋಗಿಗಳು ನಕ್ಕರು—

'ನೀವೆಲ್ಲಾ ಉಚ್ಚ ಕುಲದವರು.... ಬ್ರಾಹ್ಮಣ.... ಲಿಂಗಾ ಯತ.... ಕ್ಷತ್ರಿಯ.... ಆದರೆ ಹೀನಕುಲದವರೆಂದು ಹೀಯಾಳಿಸುವ ಜನ ರಿಗಿಂತ ಹೀನ ಕೃತ್ಯಗಳನ್ನು ಮಾಡಿದ್ದೀರಿ.... ಅದಕ್ಕ ಅಣ್ಣ ಬಸವಣ್ಣ ನವರು ಹೇಳಿದ್ದು.... ಹೊಲಸು ತಿಂಬವನೇ ಹೊಲೆಯ.... ಏನಂತೀರಿ ಇದಕ್ಕ?'

ಮೂವರೂ ಕೂಗಿದರು—

'ಹೌದ್ರಿ.... ಹೌದ್ರಿ.... ನಾವು ಹೊಲೆಯರು.... ನಾವು ಹೊಲೆಯರು....'

'ಊಹುಂ.... ಅಲ್ಲಪಾ ಅಲ್ಲಾ.... ಈಗ ನೀವು ಹೊಲೆಯರಲ್ಲ.... ಶುದ್ಧಾತ್ಮರು.... ಶರಣರು.... ನಿಮ್ಮ ಪಶ್ಚಾತ್ತಾಪದ ಕಣ್ಣೀರು ಈ

ಆಶ್ರಮದ ನೆಲಕ್ಕೆ ಮುಟ್ಟದೆ.... ಎಂಥ ದೊಡ್ಡ ಪಾಪಿಗಳೇ ಇರಲಿ... ನನ್ನ ಬಳಿ ಬಂದು ನಿಜವಾದ ಪಶ್ಚಾತ್ತಾಪದಿಂದ ಎರಡು ಹನಿ ಕಣ್ಣೀರು ಸುರಿಸಿದರೆ ಅವರು ನನ್ನವರು.... ನನ್ನ ಬಳಗ.... ಶರಣ ಬಳಗ....'

ಮೂವರೂ ಕೂಗಿದರು—

'ಅಲ್ಲ.... ಅಲ್ಲ.... ನಾವು ಶರಣರಲ್ಲ.... ಶರಣರಲ್ಲ ಪಾಪಿಗಳು.... ಪಾಪಿಗಳು.... ಪಾಪಿಗಳು ನಮ್ಮನ್ನು ಶಿಕ್ಷಿಸಿರಿ....'

ಈಗ ಮುನಿಗಳು ಗಂಭೀರವಾಗಿ ವಿಚಾರಿಸಿ ಕೆಲಹೊತ್ತು ತಡೆದು ಅಷ್ಟೇ ಗಾಂಭೀರ್ಯದಿಂದ ಹೇಳಿದರು—

'ಹಾಗಾದರೆ ನಿಮಗೆ ಶಿಕ್ಷೆ ಇದೆ.... ನಿಮಗೆ ಶಿಕ್ಷೆ ಇದೆ.... ನೀವು ನಾವು ಕೊಟ್ಟ ಶಿಕ್ಷೆ ಭೋಗಿಸಲು ಸಿದ್ಧರಿದ್ದೀರಾ?'

ಗ್ರಾಮದ ಸಾವಿರಾರು ಜನರೆಲ್ಲಾ ಕಣ್ಣು ರೆಪ್ಪೆ ಬಡಿಯದೆ ಆಶ್ಚರ್ಯದಿಂದ ಕಿವಿ ಚಾಚಿ ನಿಂತರು. ಅಪರಾಧಿಗಳು ಕೈಮುಗಿದು ಹೇಳಿದರು—

'ಆಗಲಿ ತಂದೆ.... ಶಿಕ್ಷೆ ಕೊಡಿರಿ.... ಸಿದ್ಧರಿದ್ದೇವೆ.... ಇಗೋ ನಮ್ಮ ರುಂಡ ಚಾಚುತ್ತೇವೆ.... ಹೋಳು ಮಾಡಿಸಿರಿ....'

ಮುನಿಗಳು ಮತ್ತೂ ಗಂಭೀರವಾಗಿ ಹೇಳಿದರು—

'ರುದ್ರಪ್ಪ ಶೆಟ್ಟರೆ.... ಇವರ ಸಂಪರ್ಕದಲ್ಲಿ ಬಂದ ಆ ತಂಗೆವ್ವ ಗಳನ್ನು ಇಲ್ಲಿ ತಂದು ನಿಲ್ಲಿಸಿರಿ....'

ಆ ಕೂಡಲೇ ಜನರು ಕೈಗೆ ಹಗ್ಗ ಕಟ್ಟಿ ಹಿಂದೆ ನಿಲ್ಲಿಸಿದ್ದ ಆ ಪ್ರಾಣದಾಸಿಯನ್ನೂ, ಮರುಳಾಗಿ ರಾತ್ರಿ ಹೋಗಿದ್ದ ತೋಟದ ಆಳಿನ ಮಗಳನ್ನೂ, ಹೆಂಡ ಖಂಡ ನೀಡುತ್ತಿದ್ದ ಆ ವೇಶ್ಯೆಯನ್ನೂ ಹೀಗೆ ಮೂವರನ್ನೂ ತಂದು ನಿಲ್ಲಿಸಿದರು. ಯೋಗಿಗಳು ಅವರನ್ನು ನೋಡಿ,

ಅವರ ಆತ್ಮಗಳನ್ನು ಪರೀಕ್ಷಿಸಿ, ಒಮ್ಮೆ ಲಟಗಿ ಹೊಡೆದು, ಒಮ್ಮೆ ನಕ್ಕು ಇನ್ನೊಮ್ಮೆ ಕನಿಕರಿಸಿ, ಮತ್ತೊಮ್ಮೆಗೆ ಗಂಭೀರವಾಗಿ ಶೆಟ್ಟರಿಗೆ ಹೇಳಿದರು—

'ರುದ್ರಪ್ಪ ಶೆಟ್ರೇ....'

'ಹುಂ ಹೇಳ್ರೀ ಬುದ್ಧಿ....'

'ನೀವು ಈ ಮೂವರಿಗೂ ಆ ಮೂವರು ದುರ್ದೈವಿ ತಂಗಿಯರಿಗೂ ನಿಮ್ಮ ಮನೆ ಮುಂದೆಯೇ ಲಗ್ನ ಮಾಡಿಸಿರಿ.... ಅಷ್ಟೇ ಅಲ್ಲ ಅವರಿಗೆ ಕಾಯಕ ಕೊಡಿರಿ.... ಆಶ್ರಯ ಕೊಡಿರಿ.... ದುಡಿಸಿರಿ.... ದುಡಿದು ಅವರು ಪ್ರಸಾದವನ್ನು ಸೇವಿಸಲಿ....'

ಶೆಟ್ಟರು ಸಾಷ್ಟಾಂಗ ಹಾಕಿದರು!

ಆ ಮೂವರೂ ಅಪರಾಧಿಗಳು.... ಆಗಲಿ ತಂದೆ.... ಎಂದು ಒಪ್ಪಿ ಆನಂದದಿಂದ ಸಾಷ್ಟಾಂಗ ಹಾಕಿದರು!!

ಆ ಮೂವರೂ ಸ್ತ್ರೀಯರು ಆನಂದ ಬಾಷ್ಪಗಳನ್ನು ಸುರಿಸುತ್ತ, ಸಾಷ್ಟಾಂಗ ಹಾಕುವದು ಮಾತ್ರವಲ್ಲ, ಆ ಶಿವಯೋಗಿಯ ಮಣ್ಣ ಭೂಮಿಯ ಅಂಗಾರದ ನೆಲದ ಮೇಲೆ ಉರುಳಾಡಿ.... ತಂದೇ.... ತಂದೇ.... ಹೆತ್ತ ತಂದೇ.... ಎಂದು ಕೂಗುತ್ತ, ಬಿಕ್ಕುತ್ತ, ಆ ಪವಿತ್ರ ಮಣ್ಣನ್ನು ತಲೆಗೆ ಸವರಿಕೊಂಡರು!!!

* * *

ವಿವಾಹವಾಗಿ ಆರುತಿಂಗಳು ಕಳೆದವು!

ಈಗ ಅವರು ಕಾಯಕ ಪ್ರೇಮಿಗಳು. ಗುರು ಸೇವಕರು. ಲಿಂಗ ಪ್ರಾಣಿಗಳು. ಸನ್ಮಾರ್ಗದ ಶರಣರು.

ಶಿವಶಿವಾ....

ಈಗ....

ಆ ವಿಟಜಂಗಮ ನಿಜವಾಗಿಯೂ ದಿಟಜಂಗಮ!

ಆ ಕಳ್ಳಜಂಗಮ ನಿಜವಾಗಿಯೂ ಸತ್ಯಶುದ್ಧಜಂಗಮ!!

ಆ ಪುಂಡಜಂಗಮ ನಿಜವಾಗಿಯೂ ಪ್ರಸಾದಪ್ರೇಮಿ ಜಂಗಮ!!!

ಇನ್ನು ಆ....
ಗಿಡ್ಡಾನ ವೀರಭದ್ರ?

ಇನ್ನೊಬ್ಬ ಆ....
ಜೋಕುಮಾರಸ್ವಾಮಿ??

ಊಹುಂ.... ಈಗವರು ರುದ್ರಪ್ಪಶಟ್ಟರ ದ್ರಾಕ್ಷಿತೋಟದ ನಿಷ್ಠಾವಂತ ಆಳುಗಳು. ಕಾಯಕ ಯೋಗಿಗಳು. ವೀರಭದ್ರ.... ಶಾಂತವೀರನಾಗಿದ್ದಾನೆ! ಜೋಕುಮಾರ.... ಶಿವಕುಮಾರನಾಗಿದ್ದಾನೆ!!

೧೩

ಶರಣರಿದ್ದ ಕ್ಷೇತ್ರವೇ ಸುಕ್ಷೇತ್ರವಲ್ಲವೆ? ಈ ಮಾತು ಅಕ್ಷರಶಃ ಸತ್ಯವಾಯಿತು! ಮಹಾಯೋಗಿ ಗುರುಸಿದ್ಧೇಶ್ವರ ತನ್ನ ಹಚ್ಚುಲೀಲಾ ವಿಲಾಸದಿಂದ ಅರಣ್ಯದ ಕಲ್ಪಡಿಯ ಆಳವಾದ ಗವಿಯಲ್ಲಿ ಗುಪ್ತವಾಗಿ ಅಡಗಿ ಕುಳಿತರೂ ಲೋಕ ಬಿಡಲಿಲ್ಲ!! ಈಗ ಹೂಬಳ್ಳಿ ಗ್ರಾಮ ಹಿಗ್ಗಿ ಪಡುವಲ ಕಾಯಿಯಾಯಿತು. ನಿತ್ಯವೂ ಸಾವಿರಾರು ಭಕ್ತರು ದೇಶದೇಶಗಳಿಂದ

ಬರತೊಡಗಿದರು. ಮಲೆನಾಡು, ಬೆಳವಲನಾಡು, ಪಶ್ಚಿಮ ಸಮುದ್ರ ಪೂರ್ವ ಸಮುದ್ರ, ದಕ್ಷಿಣ ಸಮುದ್ರ, ಉತ್ತರದ ಕಾಶಿ-ಕಾಶ್ಮೀರ-ಕೇದಾರ-ಹಿಮಾಲಯಗಳಿಂದ ಅಸಂಖ್ಯ ಭಕ್ತರು ಬರತೊಡಗಿದರು. ಈಗ ಆಶ್ರಮವು ಜಂಗಮ ಶಕ್ತಿಯ ಚಲನೆ ತುಂಬಿದ ಶ್ರೀಮಠವಾಯಿತು. ಅಸಂಖ್ಯಕೋಟಿ ಭಕ್ತರ ಏಕ್ಯೈಕ ಮುಕ್ತಿಶ್ರೀಯ ಓಂಕಾರವಾಯಿತು.

ಅನೇಕರು ದಿನವೂ ಬಂದು ಶಿವಯೋಗಿಗಳನ್ನು ಕಾಡಿಸಿ ಪೀಡಿಸಿ ಹತ್ತಾರು ಹಂಬಲಗಳನ್ನು ಕೇಳಿ ಈಡೇರಿಸಿಕೊಳ್ಳತೊಡಗಿದರು. ಒಬ್ಬೊಬ್ಬರಿಗೆ ಒದೊಂದು ಹಂಬಲು. ಕೇಳಬೇಕೊ ಕೇಳಬಾರದೊ ಎಂಬ ಪರಾಮರ್ಶೆ ಇಲ್ಲದೆ ಸಿಕ್ಕಸಿಕ್ಕದ್ದನ್ನು ಕೇಳತೊಡಗಿದರು—

‘ಮಕ್ಕಳು ಬೇಕು ಶಿವನೇ....’

‘ಹೆಣ್ಣುಮಕ್ಕಳು ಸಾಕು ತಂದೇ....’

‘ನಮ್ಮ ಎಮ್ಮಿ ಹಾಲು ಹಿಂಡವಲ್ತು.... ಅಂಗಾರಾ ಕೊಡ್ರಿ ಸ್ವಾಮಿ....’

‘ಮನೆ ಕಟ್ಟಬೇಕಾಗಿದೆ.... ಮೂರ್ತಾ ಹೇಳ್ರಿ ಬುದ್ಧಿ....’

‘ನನ್ನ ಕೂಸಿಗೆ ಜ್ವರಾ ಬಂದಾವ.... ತಾಯ್ತಾ ಕಟ್ರಿ ತಂದೇ....’

‘ನನ್ನ ಸೊಸೀಗೆ ಬಾಜುಮನಿ ದೆವ್ವ ಬಡದೈತಿ.... ಬಿಡಸ್ರಿಯಪ್ಪಾ....’

‘ನಮ್ಮ ಹೇಂತಿಗೆ ಬ್ರಹ್ಮಪಿಶಾಚಿ ಗಂಟ ಬಿದ್ದೈತಿ.... ದೂರ ಮಾಡ್ರಿ ಯಜ್ಜಾ....’

‘ಕಾಮಣೀ ರೋಗಾ ಕಳೀರಿ....’

‘ಕುಷ್ಟರೋಗಾ ದೂರ ಮಾಡ್ರಿ ...’

‘ಮಾರಿ ಊರಾಗ ಹೊಕ್ಕಾಳ.... ಓಡಸ್ರೀಯಪ್ಪಾ....’

ಒಂದೇ ಎರಡೇ? ಎಲ್ಲರೂ ಸಂಸಾರದ ತಾಪತ್ರಯಗಳನ್ನೇ ಬೇಡಿಕೊಳ್ಳುವವರು! ಭಕ್ತಿಯನ್ನು ಬೇಡುವವರು ತೀರ ಅಲ್ಪ. ಆದರೂ ಶಿವಯೋಗಿ ತನ್ನ ಮಟ್ಟಿಗೆ ತಾನು ಸನ್ಯಾಸಿಯಾದರೂ ಲೋಕದ ತಾಯಿ! ಮಾನವತೆಯ ದಾಸ!! ಆದ್ದರಿಂದ ಶಿವಯೋಗಿಗಳು ಒಂದಕ್ಕೂ ಬೇಸರ ಪಟ್ಟುಕೊಳ್ಳಲಿಲ್ಲ. ಗವಿಗುಂಡಕ್ಕೆ ಹಣೆಹಚ್ಚಿ ಎರಡು ಹನಿ ಕಂಬನಿ ಸುರಿದವರ ಉಡಿಯಲ್ಲೇ ಹೋಗಿ ಕೊಡುತ್ತಿದ್ದ ಈ ಕರುಣಾಯೋಗಿ.

ಈಗ ನಿತ್ಯ ಜಾತ್ರೆ. ನಿತ್ಯ ಜನಸಂದಣಿ. ಬೀದಿಯ ಭಿಕ್ಷುಕರಿಂದ ಹಿಡಿದು ಅರಮನೆಯ ರಾಜರೂ, ರಾಷ್ಟ್ರದ ಚಕ್ರವರ್ತಿಗಳೂ, ಮಂತ್ರಿಗಳೂ, ಸೇನಾಪತಿಗಳೂ, ಕವಿಗಮಕಿವಾದಿ ವಾಗ್ಮಿಗಳೂ.... ಎಲ್ಲರೂ ದರ್ಶನಕ್ಕೆ ಬರುವವರೇ. ಮಹಾಯೋಗಿಯ ಶ್ರೀದರ್ಶನವೇ ಬಾಳಿನ ಮಹಾಪುಣ್ಯ! ಈತನ ಸುಕ್ಷೇತ್ರದ ಒಂದು ಹಿಡಿಮಣ್ಣು ಕೋಟಿ ಜನ್ಮಗಳ ಕರ್ಮತಾರಕ.... ಪಾಪ ನಿವಾರಕ!!

* * *

ಒಂದು ದಿನ ಒಂದು ವಿಚಿತ್ರ ಪ್ರಸಂಗ ನಡೆಯಿತು!

ಒಬ್ಬಳು ತುಂಬಿದ ಗರ್ಭಿಣಿ ತನ್ನ ಗಂಡನೊಂದಿಗೆ ಗವಿಗೆ ಬಂದಳು. ಆಗಲೆ ಸಾವಿರಾರು ಭಕ್ತರು ದರ್ಶನಕ್ಕೆಂದು ನಾಮುಂದು ತಾಮುಂದು ಎಂದು ಕಾದು ನಿಂತಿದ್ದರು. ಶಿವಯೋಗಿ ಯಾರಿಗೂ ದರ್ಶನ ಕರುಣಿಸಿರಲಿಲ್ಲ. ಎಲ್ಲರೂ ಸ್ತಬ್ಧವಾಗಿ ನಿಂತಿದ್ದರು. ಆದರೆ ಆ ಗರ್ಭಿಣಿ ಎಲ್ಲರನ್ನೂ ಹಿಂದೆ ಸರಿಸಿ ಮುಂದೆ ಬಂದು ಗವಿಗುಂಡದ ಪೀಠದ ಮೇಲೆ ಕುಳಿತ ಮಹಾಯೋಗಿಗೆ ಸಾಷ್ಟಾಂಗ ಹಾಕಿ ಪ್ರಾರ್ಥಿಸಿದಳು—

'ತಂದೇ.... ನನ್ನ ಉದ್ಧಾರಾ ಮಾಡ್ರಿ.... ನನ್ನ ಉದ್ಧಾರಾ ಮಾಡ್ರಿ....'

ಶಿವಯೋಗಿಗಳು ಕೇಳಿದರು—

'ಏನು ಬೇಕು ತಾಯಿ?'

ಆವಳು ದೊಡ್ಡ ಧ್ವನಿ ತೆಗೆದು ಹೇಳಿದಳು—

'ನಾ ತುಂಬ ಹೊಟ್ಟಿಲೆ ಆದೇನ್ರಿ ತಂದೆ.... ಈತಾ ನನ್ನ ಗಂಡಾ ಹೆಣ್ಣ ಹಡಿ ಅಂತಾನು.... ನಾನು ಹೆಣ್ಣೊಲ್ಲೆ ಗಂಡಹಡೀವಾಕಿ ಅಂತೇನಿ.... ನೋಡ್ರೀ ತಂದೆ.... ನಾ ಹಡದ್ರ ಗಂಡುs ಹಡೀವಾಕಿ ನೋಡ್ರಿ....'

ಕೂಡಿದ ಜನರೆಲ್ಲ ಘೊಳ್ಳನೇ ನಕ್ಕರು! ಶಿವಯೋಗಿಯೂ ನಕ್ಕ!!

ಆ ಅವಳ ಗಂಡನೂ ಮುಂದೆ ಬಂದು ಸಾಷ್ಟಾಂಗ ಹಾಕಿ ಅಷ್ಟೇ ಬಿರುಸಿನಿಂದ ಬೇಡಿದ—

'ಬ್ಯಾಡ್ರೀ ತಂದೆ.... ಬ್ಯಾಡ್ರೀ.... ಈಕಿ ಮಾತೀಗೆ ಒಪ್ಪ ಬ್ಯಾಡ್ರಿ.... ಈಗಾಗ್ಲೇ ಯಾಡ ಗಂಡ ಹಡದಾಳ ಈಕಿ.... ನನಗ ಮೂರನೇದ್ದು ಹೆಣ್ಣ ಬೇಕಾಗ್ಯೆತಿ.... ಹೆಣ್ಣಿದ್ರ ಮನಿ ತಂಪಂತ.... ಆದಕ್ಕ ನನ್ನ ಮಾತ ಕೇಳ್ರೀಯಪ್ಪಾ.... ಗಂಡ ಕೊಡಬ್ಯಾಡ್ರಿ.... ಹೆಣ್ಣs ಕೊಡ್ರಿ....'

'ಊಹುಂ.... ನಾವೊಲ್ಲೆ ತಂದೇ.... ಹೆಣ್ಣ ಕೊಡಬ್ಯಾಡ್ರಿ.... ಗಂಡs ಕೊಡ್ರೀಯಪ್ಪಾ....'

ಕೂಡಿದ ಜನವೆಲ್ಲಾ ಬಿದ್ದು ಬಿದ್ದು ನಕ್ಕರು! ಶಿವಯೋಗಿಯೂ ನಕ್ಕ!! ಗಂಡ ಹೆಂಡರಿಬ್ಬರೂ ಯೋಗಿಯ ಮುಂದೆಯೇ ಜಗಳಾಡತೊಡಗಿದರು. ಕೊನೆಗೆ ಶಿವಯೋಗಿ ನಗುನಗುತ್ತ ತನ್ನ ಗವಿಯ ಬಾಗಿಲಲ್ಲಿದ್ದ ಒಂದು ವಜ್ರದುಂಡಿ ಕಲ್ಲು ಅವರ ಮುಂದೆ ಒಗೆದು ಹೇಳಿದ—

'ಹುಂ.... ಈ ಕಲ್ಲು ನಿಮಗ ಏನಬೇಕು ನೆನಿಸಿ ಎತ್ರಿ....ಹಗುರು ಬಂದ್ರ ಗೆದ್ರಿ.... ವಜ್ಜಿ ಬಂದ್ರ ಸೋತ್ರಿ....'

ಇಬ್ಬರೂ ... ಆಗ್ಲಿ ತಂದೇ.... ಎಂದು ಮುಂದೆ ಬಂದರು! ನಾ ಎತ್ತುವಾಕಿ ... ಎಂದಳು ಅವಳು.... ಇಲ್ಲ ಇಲ್ಲ ನಾ ಎತ್ತುವ್ವಾ.... ಎಂದ ಅವಳ ಗಂಡ ಕಡೆಗೆ ಅವನೇ ಗೆದ್ದು ಮುಂದೆ ಬಂದು ಆ ವಜ್ರ ದುಂಡಿ ಕಲ್ಲಿಗೆ ಹಣೆಹಚ್ಚಿ.... ಯಪ್ಪಾ ತಂದೇ ನನಗ ಹೆಣ್ಣು ಕೊಡುದಾದ್ರ ಹಗರ ಬಾ.... ಗಂಡ ಕೊಡೂದಾದ್ರ ವಜ್ಜೀ ಬಾ.... ಎಂದು ಎತ್ತಿದ! ವಜ್ರ ದುಂಡೀಕಲ್ಲು ಹಗುರು ಬೆಂಡಾಗಿ ಅವನ ಕೈಗೆ ಬಂತು!! ಅವನು—

ಹೆಣ್ಣು.... ಹೆಣ್ಣು.... ನಾ ಗೆದ್ದೆ.... ನಾ ಗೆದ್ದೆ....'

ಎಂದು ಕುಣಿಯುತ್ತ ಶಿವಯೋಗಿಗಳಿಗೆ ಸಾಷ್ಟಾಂಗ ಹಾಕಿದ! ಆವಳು.... ಅದ್ಯಾಕಾದೀತು.... ನಾನೂ ನೋಡೂವಾಕಿ.... ಎಂದು ಬಂದು ಆ ವಜ್ರದುಂಡಿ ಕಲ್ಲಿಗೆ ಹಣೆಹಚ್ಚಿ.... ಯಪ್ಪಾ ತಂದೇ ನನಗ ಗಂಡ; ಬೇಕು... ಗಂಡ ಕೊಡೂದಾದ್ರ ಹಗರ ಬಾ.... ಹೆಣ್ಣ ಕೊಡೂದಾದ್ರ ವಜ್ಜೀ ಬಾ.... ಎಂದು ಎತ್ತಿದಳು! ವಜ್ರದುಂಡಿಕಲ್ಲು ಬೆತ್ತಾಸದಂತೆ ಅವಳ ಕೈಗೆ ಹಗುರವಾಗಿಯೇ ಬಂತು!! ಅವಳು—

'ಗಂಡು.... ಗಂಡು.... ನಾ ಗೆದ್ದೆ.... ನಾ ಗೆದ್ದೆ....'

ಎಂದು ಕೂಗಿದಳು!

ನೋಡಿದ ಜನವೆಲ್ಲಾ ಈ ಹುಚ್ಚುಯೋಗಿಯ ಲೀಲಾವಿನೋದ ವನ್ನು ತಿಳಿದು ನಕ್ಕೇ ನಕ್ಕರು.

ವಿಚಿತ್ರವೆಂದರೆ ಅದೇ ದಿನ ಅವಳಿಗೆ ಹೆರಿಗೆಯಾಯಿತು ಏನು ಹಡೆದಳು.... ಏನು ಹಡೆದಳು ... ಎಂದು ಊರ ತುಂಬ ಜನ ಕೇಳಿದರು. ಆದರೆ ಆವಳು ಹಡೆದದ್ದು.... ಒಂದು ಹೆಣ್ಣು ... ಒಂದು ಗಂಡು.... ಅವಳಿಜವಳಿ!

• • •

ಜನರ ಗದ್ದಲಕ್ಕೆ ಕೊನೆಮೊದಲೆ ಸಾಲಲಿಲ್ಲಿ. ದಿನಾಲೂ ಗವಿಯ ಮುಂದೆ ನೂರಾರು ಎತ್ತಿನ ಬಂಡಿಗಳು, ಅರಸುಮನೆತನದವರ ರಥಗಳು, ಕುದುರೆಗಳು ಬರತೊಡಗಿದವು. ರುದ್ರಪ್ಪಶೆಟ್ಟರು ಆಶ್ರಮ ದಲ್ಲಿ ನಿತ್ಯದಾಸೋಹ ನಡೆಸಿದರು. ಈಗ ಅವರ ಧರ್ಮ ಪತ್ನಿ ಪ್ರಭಾವತಿಗೆ ಹಿಗ್ಗೋ ಹಿಗ್ಗು. ಯಾಕೆಂದರೆ ಅವಳ ಬಂಜೆತನ ನೀಗಿ ಒಂದು ಹುಣ್ಣಿವೆ ಚಂದಪ್ಪನಂತಹ ಗಂಡುಮಗು ಹುಟ್ಟಿದೆ. ಶಿವಯೋಗಿಗೆ ನಡಕೊಂಡರೆ ತೊಟ್ಟಿಲಿಲ್ಲದ ಮನೆಯಲ್ಲಿ ತೊಟ್ಟಿಲು ತೂಗುತ್ತದೆ, ಅನ್ನವಿಲ್ಲದ ಮನೆ ಯಲ್ಲಿ ಅನ್ನಪೂರ್ಣಾದೇವಿ ತುಂಬಿ ಬರುತ್ತಾಳೆ, ಗಂಡದೊರೆಯದ ಕನ್ಯೆ ಯರಿಗೆ ಗಂಡ ದೊರೆಯುತ್ತಾನೆ, ಕಣ್ಣೀರು ಕಷ್ಟಗಳು ತುಂಬಿದ ಮನೆ ಯಲ್ಲಿ ಕೋಗಿಲೆ ಕೂಗುತ್ತದೆ.. ಜೇನುತುಪ್ಪ ಹರಿಯುತ್ತದೆ! ಈ ಸುದ್ದಿ ತಿಳಿದು ಜನವೆಲ್ಲಾ ಜನಕೋಟಿಯಾಗಿ ಶಿವಯೋಗಿಯ ಶ್ರೀಕ್ಷೇತ್ರಕ್ಕೆ ಹುಡಿಯಾಗಿ ಪುಡಿಯಾಗಿ ತಲೆಬಾಗಿ ಎದೆಬಾಗಿ ಬಾಳನ್ನೇ ಸಮರ್ಪಿಸಿ ಬರತೊಡಗಿದರು.

ಏಕಾಂತ ಲೋಕಾಂತವಾಯಿತು!
ಆಶ್ರಮ ದಾಸೋಹದ ಮಹಾಮಠವಾಯಿತು!!
ಸರೋವರ ಪಟ್ಟಣದ ಪ್ರಸ್ತದ ಹೊಂಡವಾಯಿತು!!!

* * *

ಜನರ ಸದ್ದುಗದ್ದಲಕ್ಕೆ ಬೇಸತ್ತ ಶಿವಯೋಗಿಗಳು ಗುಪ್ತವಾಗಿ ಈ ಸ್ಥಳವನ್ನು ಬಿಟ್ಟು ಬಹುದೂರದ ಅರಣ್ಯಕ್ಕೆ ಹೋಗಬೇಗೆಂದು ನಿರ್ಧರಿ

ಸಿದರು. ಅವರ ನಿರ್ಧಾರ ಅದೆಂತೊ ರುದ್ರಪ್ಪಶೆಟ್ಟರಿಗೂ ಪ್ರಭಾವತಿಗೂ ತಿಳಿದು ಬಂತು. ಕೂಡಲೇ ಪ್ರಭಾವತಿಯು ತನ್ನ ಮೂರು ತಿಂಗಳ ಕೂಸನ್ನು ಹೊತ್ತುಕೊಂಡು ಆಶ್ರಮಕ್ಕೆ ಬಂದು ಶಿವಯೋಗಿಗಳಿಗೆ ಸಾಷ್ಟಾಂಗ ಹಾಕಿ ಪ್ರಾರ್ಥಿಸಿದಳು—

'ಅಪ್ಪಯ್ಯಾ.... ನೀವು ಈ ಕ್ಷೇತ್ರಾ ಬಿಟ್ಟು ಎಲ್ಲಿಯೂ ಹೋಗ ಕೂಡದು.... ಇಲ್ಲಿಯೇ ಇರಬೇಕು....'

ಶಿವಯೋಗಿಗಳು ನಕ್ಕರು—

'ನೋಡಬೇಕವಾ ತಂಗಿ.... ಇರೂದು ಹೋಗೂದು ನಮ್ಮ ಕೈಯಾಗಿಲ್ಲಾ.... ಶಿವಾ ಏನಂತಾನೋ ಹಾಂಗ ನೋಡವಾ.... ಆತಾ ಹೋಗಂತಾನು.... ನಾವು ಹೋಗಿ ಬಿಡತೇವಿ....'

ಪ್ರಭಾವತಿ ಕೂಸನ್ನು ಮುಂದೆ ಹಾಕಿ ಸೆರಗೊಡ್ಡಿ ಪ್ರಾರ್ಥಿಸಿ ನಿಷ್ಠುರವಾಗಿಯೇ ಹೇಳಿದಳು—

'ಎಲ್ಲೀ ಶಿವಾ ಗಿವಾ ತಂದೇ.... ನಮಗ ನೀವ ಶಿವಾ.... ನೀವ ಹರಾ.... ನೋಡ್ರೀ ತಂದೆ.... ನೀವು ಈ ಕ್ಷೇತ್ರ ಬಿಟ್ಟ ಹೋದ್ರ ನಿಮಗ ಶಿವಭಕ್ತರ ಆಣಿ.... ಕಲ್ಯಾಣದ ಶರಣರ ಆಣಿ....'

ಯೋಗಿಗಳಿಗೆ ಅಂತರ್ವಾಣಿಯಾದಂತಾಯಿತು. ಕೆಲಕಾಲ ದಿಗ್ಭ್ರಾಂತರಾಗಿ ಕುಳಿತರು. ಅವಳ ನಿಷ್ಠುರಆಜ್ಞೆಗೆ ಅವಾಕ್ಕಾಗಿ ಹೋದರು ಕೊನೆಗೊಮ್ಮೆ ನಕ್ಕು ಹೇಳಿದರು—

'ಆಗಲವ್ವಾ ತಾಯಿ.... ಶಿವನಿಗಿಂತ ಶಿವಭಕ್ತರು ಮೇಲು.... ಅವರ ಆಣಿ ಹಾಕಿಬಿಟ್ಟೆ.... ನಮ್ಮನ್ನ ಇಲ್ಲೇ ಕಟ್ಟಿ ಒಗದಬಿಟ್ಟೆವ್ವಾ.... ನಾ ಸೋತ್ನೆವಾ ಪ್ರಭವ್ವಾ.... ನಿನ್ನ ಭಕ್ತಿಗೆ ಸೋತು ಹೋದೆ....'

ಪ್ರಭಾವತಿ ಹರ್ಷಾತಿರೇಕದಿಂದ ಗಳಗಳ ಅತ್ತು ಬಿಟ್ಟಳು! ರುದ್ರಪ್ಪಶೆಟ್ಟರೂ ಆನಂದದ ಕಂಬನಿ ಸುರಿಸಿದರು!! ಅವರ ಆ ಮೂರು

ತಿಂಗಳದ ಕೂಸು ತಲೆಯೆತ್ತಿ ಶಿವಯೋಗಿಯನ್ನು ಹುಳುಹುಳು ನೋಡಿ ಕೇಕೆ ಹಾಕಿತು!!!

* * *

ಮತ್ತೆ ಕೆಲಕಾಲ ಜಾರಿತು. ಒಂದು ದಿನ ಶಿವಯೋಗಿಗಳು ತಮ್ಮ ಆಶ್ರಮದ ಸೇವೆಯಲ್ಲಿದ್ದ ಶರಣಶಿವಪ್ಪ, ಭೈರವರುದ್ರ, ಶಿವ ಪುತ್ರದೇವ, ಶರಣಶಂಕರಯ್ಯ, ಗುರುಪಾದಯ್ಯ, ರುದ್ರಪ್ಪಶಟ್ಟರು, ಮುಂತಾದವರನ್ನು ಕರೆದು ತಮ್ಮ ಮನದ ಸಂಕಲ್ಪವೊಂದನ್ನು ಹೇಳಿದರು—

'ನೋಡ್ರಿಪಾ.... ನಾವು ಈಗ ಏನ ಹೇಳ್ತೇವೊ ಅದಕ್ಕ ನೀವು ಇಲ್ಲಾ ಅನಬಾರ್ದು.... ದಿನಾಲೂ ಅಸಂಖ್ಯ ಭಕ್ತರು ಬರಾಕತ್ತೀದ್ರು.... ಬರ್ಲಿ....ಬರ್ಲಿ.... ಬ್ಯಾಡಂಬೂದು ತಪ್ಪು.... ಅವರೆಲ್ಲಾ ನನ್ನ ಮಕ್ಳು ಬರ್ಲಿ.... ಬರ್ಲಿ.... ಆದ್ರ ಕೆಲಕಾಲ ಯೋಗ ಸಮಾಧಿಯಲ್ಲಿ ಗವಿಯಲ್ಲೇ ಗುಪ್ತವಾಗಬೇಕೆಂದಿದ್ದೇವೆ.... ನಾವು ಸಮಾಧಿಯಿಂದ ಹೊರಬರುವವರೆಗೆ ಆಶ್ರಮದ ಯೋಗಕ್ಷೇಮವೆಲ್ಲಾ ನಿಮ್ಮ ಮೇಲೆ....'

ಶಟ್ಟರು ಕೈಮುಗಿದು ಕೇಳಿದರು—

'ಬುದ್ಧೀ.... ಎಷ್ಟ ದಿನಾ ಹೋಗ್ತಿರಿ ಸಮಾಧಿಯೊಳಗ?'

'ದಿನಾಗಿನಾ ಲೆಕ್ಕಿಲ್ಲಪಾ.... ಕಡಿಮೆಂದ್ರ ಮೂರು ತಿಂಗ್ಳು ಹೋಗ್ತೇವಿ....'

'ನಿಮ್ಮ ಪೂಜಾ.... ಪ್ರಸಾದಾ....?'

'ಹುಚ್ಚಪ್ಪಾ.... ಸಮಾಧಿಯೇ ಪೂಜಾ.... ಸಮಾಧಿಯೇ ಪ್ರಸಾದಾ....'

'ಏನೂ ಇಲ್ಲವೇ?'

'ಇದು ಸಮಾಧಿಪಾ.... ಸಮಾಧಿ....'

'ಎಂದ ಬರತೀರಿ ಹೊರಗ?'

'ಬರ್ತೇವಪಾ.... ಬರ್ತೇವಿ.... ಒಂದು ದಿನಾ ಬರತೈತಿ.... ಅಂದ ಬಂದ್ವ ಬರ್ತೇವಿ....'

ಎಲ್ಲರೂ ಗಂಭೀರವಾಗಿ ಕಂಬನಿಗರೆಯತೊಡಗಿದರು. ಶಿವ ಯೋಗಿಗಳು ಗಂಭೀರವಾಗಿ ಆಕಾಶದತ್ತ ಶೂನ್ಯದೃಷ್ಟಿ ಚಲ್ಲಿ ಕೆಲಕಾಲ ನೋಡಿದರು. ಕೊನೆಗೊಮ್ಮೆ ಗಂಭೀರವಾಗಿ ಹೇಳಿದರು—

'ನಾಳೆ ಬೆಳಗ್ಗೆ ಯಾರೂ ನನ್ನ ದರ್ಶನಾ ಬಯ್ಸಬ್ಯಾಡ್ರಿ....'

ಮುಗ್ಧ ಶರಣರೆಲ್ಲಾ ಹಸುಗೂಸಿನಂತೆ ಅತ್ತರು!

ಶಿವಯೋಗಿಗಳು ಸಮಾಧಿಗುಹೆಯಲ್ಲಿ ಇಳಿದು ಹೋದರು!!

ಪಶ್ಚಿಮದಲ್ಲಿ ಸೂರ್ಯಾಸ್ತವಾಯಿತು!!!

* * *

ಮರುದಿನ ಸುದ್ದಿ ತಿಳಿದ ಅಸಂಖ್ಯ ಜನರು ಬಂದರು. ಆದರೇನು ಶಿವಯೋಗಿ ಶ್ರೀಸಮಾಧಿಯಲ್ಲಿ ತನ್ನ ಗವಿಯಾಳದ ಗುಪ್ತಗವಿಯಲ್ಲಿ ಸಮಾಧಿಯಲ್ಲಿ ತೇಲಿಹೋಗಿದ್ದಾನೆ. ಆಶ್ರಮದ ಶರಣ ಶಿವಪ್ಪ ಮುಂತಾದವರು ಗವಿಯ ಬಾಗಿಲು ನಿಷ್ಠೆಯಿಂದ ಕಾಯುತ್ತಿದ್ದಾರೆ.

ಸುದ್ದಿ ದೂರದೂರಿನ ಊರುಗಳಿಗೆಲ್ಲಾ ಹೋಯಿತು. ಭೋ ಎಂದು ಭಕ್ತರು ಸಮುದ್ರದಂತೆ ಬಂದರು. ಬಂದವರೆಲ್ಲಾ ಕೇಳುತ್ತಿದ್ದುದು ಒಂದೇ ಒಂದು ಪ್ರಶ್ನೆ—

'ಎಂದು ಬರುತ್ತಾರೆ.... ಹೊರಳಿ ಎಂದು ಬರುತ್ತಾರೆ?'

ಅವರೆ ಉತ್ತರ ಕೊಡುವವರಾರು?

* * *

ಒಂದು ತಿಂಗಳಾಯಿತು!

ಎರಡು ತಿಂಗಳಾದವು!!

ಮೂರು ತಿಂಗಳಾದವು!!!

ಶಿವಯೋಗಿಗಳು ಬರಲಿಲ್ಲ. ನಾಡಿನದಿಗ್ದೇಶಗಳಿಂದೆಲ್ಲಾ ಭಕ್ತ ಕೋಟಿ ಬಂದೇ ಬರುತ್ತಿದೆ. ಯಾರಿಗೂ ಶಿವಯೋಗಿಯ ದರ್ಶನವಿಲ್ಲ. ಮಲೆನಾಡಿನ ಸುರಪುರದ ವಿಘ್ನೇಶ್ವರ ರಾಜಕುಮಾರನ ಮಡದಿ ರಾಣಿ ಮಹಾದೇವಿ ರಥವೇರಿ ಶರವೇಗದಿಂದ ಬಂದಳು. ಅರಮನೆಯ ಜನರೆಲ್ಲಾ ಬಂದರು. ಸುರಪುರದ ಮಹಾಮಂಡಲೇಶ್ವರ ತ್ರಿಲೋಕಪಾಲ ಬಂದ. ಯಾರಿಗೂ ಶಿವಯೋಗಿಯ ದರ್ಶನವಿಲ್ಲ.

ಮಾದೇವಿ ಗವಿಯ ಬಾಗಿಲಿಗೆ ಹಣೆ ಹಣೆ ಜಜ್ಜಿ ಅತ್ತಳು!

ಆ ಹೆಣ್ಣು ಚಿಗರಿ 'ಮಾಯಾ' ಅವಳ ಗಲ್ಲ ನೆಕ್ಕಿ ಕಣ್ಣೀರು ಸುರಿಸಿತು!!

ಮಾಯಾ ಹರಿಣಿಯ ಆ ಮಕ್ಕಳು 'ಸಂಗಾ' 'ನಿಸ್ಸಂಗಾ' ಅವೂ ತಾಯಿಯನ್ನು ನೆಕ್ಕಿ ಅತ್ತವು!!!

ಆದರೇನು.... ಶಿವಯೋಗಿ ಬರಲಿಲ್ಲ. ಮೂರು ತಿಂಗಳಿಂದಲೂ ಗವಿಯ ಬಾಗಿಲಲ್ಲಿ ಹಗಲು ರಾತ್ರಿಯೂ ಶಿವಭಜನೆ ನಿಲ್ಲದೇ ಸಾಗಿದೆ. ಶಿವ ಯೋಗಿಯ ಸಮಾಧಿಯೋಗ ಮಂಗಲಕರವಾಗಲೆಂದು ಭಜನೆಯಲ್ಲಿ ಅಸಂಖ್ಯಾತ ಜನ ಪಾಲುಗೊಳ್ಳುತ್ತಿದ್ದಾರೆ. ಹೀಗೆ ಭಕ್ತಿಯಿಂದ ಮೂರ

ದೂರದ ನಗರಗ್ರಾಮಗಳಿಂದ ಬಂದವರೆಲ್ಲಾ ಆಶ್ರಮದ ದಾಸೋಹಕ್ಕೆ ಏನಾದರೂ ತಂದೇ ತರುತ್ತಾರೆ. ರುದ್ರಪ್ಪ ಶೆಟ್ಟರಿಗೆ ಭಕ್ತರಿಂದ ಬಂದ ಕಾಣಿಕೆಯ ಲೆಕ್ಕ ಇಡುವದೇ ಅಸಾಧ್ಯವಾಯಿತು. ಸಾವಿರಾರು ಚೀಲ ಅಕ್ಕಿ-ಗೋದಿ-ಜೋಳ ಅಕ್ಕಡಿಕಾಳು-ಸಾವಿರಾರು ಪೆಂಟೆ ಬೆಲ್ಲ-ಅಸಂಖ್ಯ-ಕುಂಬಳಕಾಯಿಗಳು-ಲೆಕ್ಕಕ್ಕೆ ಹತ್ತದ ಎಲ್ಲಾ ದೀನಸುಗಳು. ನಿತ್ಯವೂ ಆಶ್ರಮದಲ್ಲಿ ನೂರಾರು ಕೊಳಗಗಳ ಮೃಷ್ಟಾನ್ನ ಪ್ರಸಾದ. ನಿತ್ಯವೂ ಗವಿಯ ಮುಂದೆ ನಿರಂತರ ಭಜನೆ. ಹಗಲೆನ್ನದೆ ರಾತ್ರಿಯನ್ನದೆ ಭಕ್ತಿಯ ಭಜನೆ ಸಾಗಿದೆ. ಶಿವಗಾನ ಶಿವಯೋಗಿಯ ಓಂಕಾರಯೋಗದ ಆರಾಧನೆ ಮಾಡುತ್ತಿದೆ.

* * *

ನಾಲ್ಕು ತಿಂಗಳಾದವು!

ಐದು ತಿಂಗಳಾದವು!!

ಆರು ತಿಂಗಳಾದವು!!!

ಶಿವಯೋಗಿಗಳು ಬರಲಿಲ್ಲ. ಇದೇನು ವಿಚಿತ್ರ? ಬರುವರೋ ಇಲ್ಲವೋ? ಹೋಗುವಾಗ ಸಮೀಪದ ಭಕ್ತರಿಗೆ ಏನು ಹೇಳಿದರು? ಬರುತ್ತೇನೆಂದು ಹೇಳಿದರೆ? ಅಥವಾ ಬರುವದಿಲ್ಲವೆಂದು ಹೇಳಿದರೆ?

ಎಲ್ಲರೂ ಸಾವಿರ ಪ್ರಶ್ನೆ ಕೇಳುವರು ಆದರೆ ಉತ್ತರಿಸಲು ಯಾರಿಗೂ ಉತ್ತರವೇ ಇಲ್ಲ. ಮತ್ತೆ ದಿನಗಳು ಜಾರಿದವು. ವಾರಗಳು ಉರುಳಿದವು. ತಿಂಗಳುಗಳು ಸಾರಿದವು. ಶಿವಶಿವಾ....

ಏಳು ತಿಂಗಳಾದವು!

ಎಂಟು ತಿಂಗಳಾದವು!!

ಒಂಬತ್ತು.... ಹತ್ತು.... ಹನ್ನೊಂದು....

ಹನ್ನೆರಡು ತಿಂಗಳಾದವು!!!

ಶಿವಯೋಗಿ ಬರಲಿಲ್ಲ....

ಶಿವಶಿವಾ.... ಶಿವಯೋಗಿ ಬರಲಿಲ್ಲ!!!!

*　　　*　　　*

ಕಲ್ಯಾಣದಿಂದ ಭಗ್ಗನೇ ಬೆಂಕಿ ಬಂದಂತೆ ಸುದ್ದಿ ಬಂತು! ಮಹಾಶರಣರಾದ ಹರಳಯ್ಯ ಮಧುವರಸರ ಕಣ್ಣು ಕಿತ್ತು, ಆನೆಕಾಲಲ್ಲಿ ಹಾಕಿ ತುಳಿಸಿದರಂತೆ. ಶರಣರ ಕಗ್ಗೊಲೆ! ಬಸವಣ್ಣನವರು ಕಲ್ಯಾಣ ತೊರೆದು ಕೂಡಲಸಂಗಮಕ್ಕೆ ನಿರ್ಗಮಿಸಿದರಂತೆ!! ಶಿವಶಿವಾ.... ಯಾ ಕಾಲಕ್ಕ ಯಾರ ಹೆಣಾ ಎಲ್ಲೆ ಹಾರತೈತೊ ದೇವರೇ ಬಲ್ಲ!!! ಈಗ ಕಲ್ಯಾಣವಲ್ಲ.... ರಣ.... ರಣ.... ರಣಕ್ಷೇತ್ರ.... ಹೆಣಕ್ಷೇತ್ರ.... ಮಸಣದ ಹಸಿದು ಬಾಯ್ದೆರೆದ ಕುಣಿಗಳ ಭಯಂಕರ ರುದ್ರಭೂಮಿ....

ಇನ್ನೇನು?

ಮುಂದೇನು??

*　　　*　　　*

ಒಂದು ದಿನ.... ತುಂಬಿದ ಹುಣ್ಣಿವೆ ಗಗನದಲ್ಲಿ ತೊಟ್ಟಿಲು ಕಟ್ಟಿದ ಸುಂದರ ದಿನ! ಸೂರ್ಯನೂ ಶೀತಲ. ಶಾಂತ. ಮುಗಿಲು ಮಧುರ. ನೆಲಬಾನು ಜಲವೆಲ್ಲಾ ಓಂಕಾರ ಹಾಡಿವೆ. ಲೋಕವೇ

ನಂದಾದೀಪವಾಗಿದೆ. ಗಗನವೇ ಮಹಾಲಿಂಗವಾಗಿದೆ. ಅನಂತಕಾಲವೇ ವಿಶ್ವವನ್ನು ತೂಗುತ್ತಿದೆ. ಅತ್ತಿದ ಜೋಗುಳ ಜಲಪಾತಗಳು ಧೋ ಧೋ ಎಂದು ಬಣ್ಣಹೊಂಬಣ್ಣದಿಂದ ತಡಸಲು ಸುರಿಯುತ್ತಿವೆ. ಅಸಂಖ್ಯ ಭಕ್ತರು ಹಸಿವೆ ನಿದ್ರೆ ಮರೆದು ಶಿವಧ್ಯಾನದಲ್ಲಿ ಮಗ್ನರಾಗಿದ್ದಾರೆ. ಒಮ್ಮೆಲೇ ಗುಡುಗಿತು ಗಗನ.... ಆದರೆ ಮೋಡವಿಲ್ಲ! ಒಮ್ಮೆಲೇ ನಡುಗಿತು ಭೂಮಿ.... ಆದರೆ ಭೂಕಂಪವಿಲ್ಲ!! ಬಾನು ಮಿಂಚಿತು. ನೆಲ ಪ್ರತಿ ಬಿಂಬಿಸಿತು. ಶರಣರ ಶರೀರದ ರೋಮ ರೋಮಗಳು ವೀಣಾವಾದನದ ತಂತಿಯಂತೆ ಕಂಪಿಸಿದವು. ಅಗೋ.... ಅಗೋ.... ಬಂದ.... ಬಂದ.... ಗವಿಯಾಳದ ಮಹಾಯೋಗಿ, ಶಿವಶಿವಾ.... ಸೂರ್ಯಕೋಟಿಕಾಂತಿ ಪ್ರಭಾಪೂರ್ಣ ಪ್ರಸನ್ನಯೋಗಿ!! ಶಿವಶಿವಾ....ಮರುಸಿದ್ಧ ರಾಜಯೋಗೀಂದ್ರ ಸದ್ಗುರುಯೋಗಿ!!!

ಕಂಡವರ ಕಣ್ಣು ನಡುಗಿದವು. ಎದೆ ಅಮರಿತು. ನೆಲ ತತ್ತರಿಸಿತು. ಆತ್ಮ ಹೌಹಾರಿತು. ಇಗೋ.... ಇಗೋ ... ಮಹಾಯೋಗಿ ಬಂದ.... ಶಿವಾ.... ಶಿವಾ.... ಶಿವಯೋಗಿ ಬಂದ.... ಹರಹರಾ.... ಮಹಾದೇವಾ.... ಮಹೋನ್ನತ ಮಹಿಮಾಸಿಂಧೂ.... ಭೂಗತ ಕೈವಲ್ಯಾ.... ಆತ್ಮಾನಂದ ಪರಬ್ರಹ್ಮಾ.... ವಿಶ್ವಾನಂದ ಪರಿಪೂರ್ಣಾ.... ಕರುಣಾರಸ ಭರಿತ ಶಿವಯೋಗಿ.... ಸತ್ಯಲೋಕದ ಸತ್ಯಜ್ಞಾನಿ.... ಭೂಲೋಕದ ಜಂಗಮಜ್ಞಾನಿ.... ಅಜ್ಞಾನದ ಸುಜ್ಞಾನಿ.... ಪಾಪದ ನಿಷ್ಠುರ ನಿಜೈಕ್ಯ ಜ್ಞಾನಿ.... ಓ.... ಓ.... ಓ.... ಬಂದೆಯಾ.... ಗವಿಯಾಳದಿಂದ ಬಂದೆಯಾ.... ಯೋಗ ಸಮಾಧಿಯಿಂದ ಬಂದೆಯಾ.... ಆನಂದಸಮಾಧಿಯಿಂದ ಬಂದೆಯಾ....ಓಂ.... ಓಂ.... ಓಂ.... ಹರಹರಾ ಮಹಾದೇವಾ.... ಜಯವಕ್ಕೆ.... ಜಯವಕ್ಕೆ.... ಹರಹರಾ ಮಹಾದೇವಾ.... ಇಗೋ ನಿನಗೆ ಪಂಚಾರತಿ.... ಕೋ ಎಮ್ಮ ಕರುಣಾರತಿ.... ಶುಭದಾರತಿ.... ಲೋಕಲೋಕದ ಶರಣು ನಿನಗೆ.... ವಿಶ್ವ ವಿಶ್ವದ ನಮನ ನಿನಗೆ.... ಕುಲಕೋಟಿ ಕುಟುಂಬ ಶರಣಾರತಿ.... ಜೀವ ಜಡಕೋಟಿ ಶರಣಾರತಿ.... ಉಘೇ....

ಉಘೇ.... ಉಘೇ.... ಹುಚ್ಚೀಂದ್ರ.... ಉಘೇ.... ಉಘೇ.... ಉಘೇ.... ಶ್ರೀಗುರುಸಿದ್ಧೇಂದ್ರ....

೧೫

ಕೊಲೆ....! ಕೊಲೆ....!! ಕೊಲೆ...!!!

ಯಾರ ಕೊಲೆ? ಯಾರ ಕೊಲೆ??

ಶಿವಶಿವಾ.... ಶಿವಶಿವಾ....

ಚಾಲುಕ್ಯ ಚಕ್ರವರ್ತಿ ಕಲ್ಯಾಣದ ಬಿಜ್ಜಳ ರಾಜನ ಕಗ್ಗೊಲೆ!

ಯಾರಿಂದ? ಏಕೆ??

ಶರಣರಿಂದ! ಶರಣರ ಕೊಲೆಯ ಸೇಡಿಗೆ ಸೇಡು!!

ಸುಳ್ಳು.... ಸುಳ್ಳು.... ಶುದ್ಧಸುಳ್ಳು.... ಮಹಾಸುಳ್ಳು....

ಆದರೇನು?

ಕಲ್ಯಾಣದಲ್ಲಿ ಶರಣರ ರಕ್ತದ ಕಾಲುವೆ ಹರಿಯುತ್ತಿದೆ. ಅಳಿಯ ಬಿಜ್ಜಳನ ಸೈನ್ಯ ವಿಭೂತಿ ಕಂಡವರನ್ನು ಕೊಲ್ಲುತ್ತಿದೆ. ರುದ್ರಾಕ್ಷಿ ಕಟ್ಟಿದವರನ್ನು ಚಂಡಾಡುತ್ತಿದೆ. ಲಿಂಗ ಕಂಡಲ್ಲಿ ಇರಿಯುತ್ತಿದೆ. ವಚನಗಳ ತಾಳೋಲೆ ಗ್ರಂಥಗಳನ್ನು ಸುಟ್ಟು ಕೇಕೆ ಹಾಕಿ ಬರುತ್ತಿದೆ.

ಮುಂದೇನು ಗತಿ?

ಶಿವನೇ ಗತಿ.... ಶರಣರ ರಕ್ಷಣೆಗೆ ವೀರ ಮಡಿವಾಳ ಮಾಚಣ್ಣನ ಪ್ರುಂಚಡ ಸೇನೆ ಸಿದ್ಧವಾಗಿದೆ. ಶರಣರ ಪ್ರಾಣ ರಕ್ಷಣೆ ಮಾತ್ರವಲ್ಲ ಅವರ

ಅಸಂಖ್ಯಾತ ವಚನಗಳ ಸಹಸ್ರಾರು ತಾಳೋಲೆಗಳ ರಕ್ಷಣೆಗಾಗಿ; ಶರಣರೆಲ್ಲಾ ಮಡಿವಾಳ ಮಾಚಣ್ಣನ ಸೇನಾನಾಯಕತ್ವದಲ್ಲಿ ಸಾಗಿಬರುತ್ತಿದ್ದಾರೆ ಮಲೆನಾಡಿನ ಕಾನನಕೋಟೆಯಲ್ಲಿ ತಲೆಮರೆಸಲು ಪ್ರಾಣಕ್ಕೆ ಪ್ರಾಣ ಕೊಟ್ಟು ತಮ್ಮ ಅಮೌಲ್ಯ ವಚನಗಳ ಮಹಾರಾಶಿಯನ್ನು ರಚಿಸಲು ಚನ್ನಬಸವಣ್ಣನವರು ಹಗಲೆನ್ನದೆ ರಾತ್ರಿಯನ್ನದೆ ಸಾಗಿಬರುತ್ತಿದ್ದಾರೆ. ಗಂಗಾಂಬಿಕೆ, ಅಕ್ಕನಾಗಮ್ಮ, ಕಿನ್ನರಿ ಬೊಮ್ಮಯ್ಯ, ಡೋಹರ ಕಕ್ಕಯ್ಯ.... ಮುಂತಾದ ನೂರಾರು ಅಗ್ರಗಣ್ಯ ಶರಣರೆಲ್ಲಾ ಸೇನೆಯ ಶಿಬಿರಗಳನ್ನು ಸಾಗಿಸಿಕೊಂಡು ಬರುತ್ತಿದ್ದಾರೆ.

ಶಿವಶಿವಾ.... ಆಳಿಯ ಬಿಜ್ಜಳನ ಕ್ರೂರ ಕ್ರುದ್ಧ ಪ್ರಕ್ಷುಬ್ಧ ಕುದುರೆ ಸೈನಿಕರು; ಶರಣರು ಹೊಕ್ಕಲ್ಲಿ ಹೊಕ್ಕು, ಸಿಕ್ಕಲ್ಲಿ ಕೊಂದು, ರಕ್ತಪಾನ ಮಾಡುತ್ತಿದ್ದಾರೆ! ಬಿಜ್ಜಳ ರಾಜನ ಒಂದೊಂದು ಹನಿರಕ್ತಕ್ಕೆ ಸಾವಿರ ಸಾವಿರ ಜಂಗಮರನ್ನು ಪ್ರತಿಯಾಗಿ ಬಲಿಕೊಡುತ್ತಿದ್ದಾರೆ!!

ಮುಂದೇನು? ಮುಂದೇನು??

ಶಿವನೇ ಬಲ್ಲ.... ಶಿವನೇ ಬಲ್ಲ....

ಕರ್ನಾಟಕ ಗಡಗಡ ನಡುಗಿತು. ದಕ್ಷಿಣ ಹಿಂದುಸ್ಥಾನಕ್ಕೆ ಬೆಂಕಿ ಬಿದ್ದಿತು. ಭಾರತದ ಅಪೂರ್ವ ಆಧ್ಯಾತ್ಮಿಕ ಕನಸಿನ ಮಹಾ ಗೋಪುರನೋಡನೋಡುತ್ತಿದ್ದಂತೆ ಭಗ್ಗನೇ ಉರಿಹತ್ತಿ ಉರುಳತೊಡಗಿತು. ಸಂಸ್ಕೃತಿಯ ಕೊಲೆ. ಆಧ್ಯಾತ್ಮದ ಕೊಲೆ. ಯೋಗಸಾಧನೆಯ ಕೊಲೆ. ಶಿವಶಿವಾ.... ಕಲ್ಯಾಣದ ಕಗ್ಗೊಲೆ!

ಕಲ್ಯಾಣದ ತ್ರಿಪುರಾಂತಕ ಸರೋವರದ ಮೇಲೆ ಚಂಡಾಡಿದ ಶರಣರ ರುಂಡಗಳಿಂದ ಹರಿದ ರಕ್ತ ನೀಲ ಸರೋವರವನ್ನು ಕೆಂಪು ಸರೋವರವನ್ನಾಗಿಸಿದೆಯಂತೆ! ಕಲ್ಯಾಣದಿಂದ ಹೊರಟ ಎಲ್ಲ ದಾರಿಗಳ ಮೇಲೂ ಶರಣರ ತಂಡಗಳು ಆತ್ಮ ರಕ್ಷಣೆಗಾಗಿ ಹಿಂಡು ಹಿಂಡಾಗಿ ಹೊರಟಾಗ....

ಹಿಂಡು ಹಿಂಡಾಗಿ ಕೊಲೆ ನಡೆದು.... ಹೆಣಗಳನ್ನು ಎತ್ತಲೂ ಕೂಡ ಜನರಾರೂ ಭಯಗೊಂಡು ಹೋಗದೆ.... ಸುತ್ತಲೂ.... ಎತ್ತೆತ್ತಲೂ ಮಹಾಶರಣರ-ಪುಣ್ಯಶರಣರ-ದಿವ್ಯಜ್ಞಾನಿಗಳಾದ ಶಿವಶರಣೆಯರ ಶರೀರ ಗಳು ರೊಜ್ಜು ಗೊಜ್ಜಾಗಿ, ನುಚ್ಚುನುರಿಯಾಗಿ, ಕಲ್ಲಿಗೆ ಖಿಚಡಿಯಾಗಿ, ಧೂಳಿಗೆ ರಕ್ತಪಾನ ಮಾಡಿಸಿ ಬಿದ್ದಿವೆಯಂತೆ!!

ಓ ಕಾಲಪುರುಷ.... ಕರುಣೆ ಇಲ್ಲವೇ ನಿನಗೆ.... ಶರಣರ ಮಹಾ ಗಾನದ ಮಂಗಳ ಗೀತೆಗಳನ್ನು ಕೇಳಿದವನು ನೀನಲ್ಲವೇ.... ಇಂದೇಕೆ ಹೀಗೆ ಮಾಡಿದೆ....ಅನುಭವಮಂಟಪದ ದಿವ್ಯಜ್ಞಾನದ ಅಮರವಾಣಿಯನ್ನು ಕೇಳಿ ದವನು ನೀನಲ್ಲವೇ....ದೇಶದಿಗ್ದೇಶಗಳಿಂದ ಶರಣರ ಮಹಾತ್ಮರ ಆಧ್ಯಾತ್ಮದ ಆಕರ್ಷಣೆಯ ಕೇಂದ್ರಬಿಂದುವಾದ ಕಲ್ಯಾಣದಲ್ಲಿ ನಿನ್ನ ವಿಷದ ಬೆಂಕಿಯ ಉಂಡಿಯನ್ನು ಉಗುಳಿದೆಯಾ.... ಕೊನೆಗೂ ನೀನು ನಿರ್ಧಯನೆಂದು ತೋರಿದೆಯಾ.... ಲೋ ಮೂರ್ಖಾ.... ಎಲ್ಲಿ ಹೋದರು ಬಸವಣ್ಣ ನವರು.... ಎಲ್ಲಿ ಹೋದ ಶಿದ್ಧರಾಮ.... ಆ ಷಟ್‌ಸ್ಥಲಬ್ರಹ್ಮ ಚನ್ನ ಬಸವನೆಲ್ಲಿ.... ಶಿವಶಿವಾ ಶೃಂಗಾರವನ್ನು ಮೆಟ್ಟಿ ಸುಟ್ಟು ನಿಂದ ಶ್ರೀಶೈಲದ ನೆಚ್ಚಿನ ವಿರಾಗಿಣಿ ಅಕ್ಕಮಹಾದೇವಿಯೆಲ್ಲಿ.... ಲೋ ಧೂರ್ತಾ ಎಲ್ಲಿಟ್ಟೆ ಆ ನೀಲಾಂಬಿಕೆಯ.... ಎಲ್ಲಿ ಆ ಗಂಗಾಂಬಿಕೆ.... ಎತ್ತ ಹೋದಳು ನಾಗ ಲಾಂಬಿಕೆ.... ಮುಗಿದು ಹೋಯಿತೆ ಶೂನ್ಯಸಿಂಹಾಸನದ ಅನುಭವ ಅನು ಭಾವಗಳ ಮಂಥನದ ಮಹಾ ತತ್ವಮೇರು....ಓ....ಓ.... ಕಲ್ಯಾಣ ಉರಿದು ಹೋಯಿತೇ.... ಓ..... ಓ..... ಓ.....ಕಲ್ಯಾಣ ಹಾಳಾಯಿತೇ.... ಶರಣ ಶರಣೆಯರ ಮಹಾಸಂಘ ಭಕ್ತಿಸಂಘ ಧೂರ್ತರ ಕುಹಕಿಗಳ ಕೇಡಿಗಳ ಹುಚ್ಚಾಟಕ್ಕೆ ಈಡಾಯಿತೆ.... ಓ ಲಿಂಗಯ್ಯ.... ಕೂಡಲಸಂಗಮದ ಬಸವ ಲಿಂಗಯ್ಯ.... ಬಸವನನ್ನು ನುಂಗಿದೆಯಾ.... ಓ ಗುಹೇಶ್ವರ.... ಕೊನೆಗೂ ಗುಹೆಯೊಳದ ಗುಹೆ ಸೇರಿದೆಯಾ ಓ.... ಚನ್ನಮಲ್ಲಿಕಾರ್ಜುನ.... ಮಾನ ವತೆಯ ದಬ್ಬಾಳಿಕೆಗೆ ಅಂಜಿ ಕದಳಿಯಲ್ಲಿ ಅಡಗಿ ಕುಳಿತಿರುವೆಯಾ.... ಇಗೋ.... ಶಾಂತಿಯ ದೇವದೂತರು ರಕ್ತವನ್ನು ಕುಡಿದರು....

ಲೋಕಕ್ಕೆ ಅನಂತದ ಪ್ರಜ್ಞೆಯನ್ನು ತೋರಬಂದವರು ಮಣ್ಣು ಸೇರಿದರು.... ಶಿವಶಿವಾ.... ಈ ಮಣ್ಣಭೂಮಿಗೆ ಕಲ್ಲುಭೂಮಿಗೆ ಕರುಣೆ ಎಲ್ಲಿಂದ ಬರಬೇಕು?.... ಇದು ಕಟುಕರ ಕಾಡಾರಣ್ಯವಲ್ಲವೇ?.... ರಾಜಕೀಯ ಪಿಪಾಸುಗಳ ಪೈಶಾಚಿಕ ನೆಲೆವನೆಯಲ್ಲವೇ.... ಓ ಕಾಲ.... ಓ ಭೂಮಿ.... ಓ ಕಲ್ಲು.... ಓ ಮಣ್ಣು..... ಧಿಕ್ಕಾರ.... ಭಾರತ ಮಾತೆಯ ಇತಿಹಾಸದ ಪುಟಪುಟಗಳಲ್ಲೂ ಕೇವಲ ಇದೇ ಹಾಳು ಗೋಳು.... ಇದೇ ಹೋಹುಯ್ಲು.... ಎಲ್ಲಿಲೂ ಆಶ್ರಮಗಳ ನಾಶ.... ಎಲ್ಲೆಲ್ಲೂ ಮಹಾತ್ಮರ ಕೊಲೆ.... ಎಲ್ಲೆಲ್ಲೂ ಗುಡಿಗುಂಡಾರಗಳ ನೆಲ ಸಮ.... ಎಲ್ಲೆಲ್ಲೂ ದೇವತಾವಿಗ್ರಹಗಳನ್ನು ಭಗ್ನನಗ್ನ ಮಾಡಿದ ವ್ಯಂಗ್ಯ ದೃಶ್ಯ.... ಎಲ್ಲೆಲ್ಲೂ ಪ್ರಾಚೀನ ಸಂಸ್ಕೃತಿಯ ಸಮಾಧಿ.... ಎಲ್ಲೆಲ್ಲೂ ದೇವತೆಗಳಂತಿದ್ದ ಸುರಸುಂದರ ಸ್ತ್ರೀಯರ ಮಾನಭಂಗ.... ಸಿಂಹಗಳಂತಿದ್ದ ಧರ್ಮಸಾಮ್ರಾಜ್ಯಗಳ ತೇಜೋಭಂಗ.... ಶಿವಶಿವಾ.... ಶಿವಶಿವಾ.... ಕಾಲವೇ ಕಗ್ಗಲ್ಲು.... ಭೂಮಿಯೇ ವಿಷಮುಳ್ಳು.... ಮಾನವನೇ ಮಾಯಾಮೃಗ ....ಬಂದು ಬಂದೀತು ಈ ಭುವಿಗೆ ದೇವಪೃಥ್ವಿ? ಎಂದು ಬಂದೀತು ಭಾರತದ ಈ ಭಗ್ನ ಭೂಮಿಗೆ ಮರಳಿ ಬಾರದ ಆ ಕಲ್ಯಾಣ? ಎಂದು? ಮತ್ತೆಎಂದು??ಓ ಕಲ್ಯಾಣ.... ಓ ಓ ಕಲ್ಯಾಣ.... ಕಲ್ಯಾಣ.... ಕಲ್ಯಾಣ....

* * *

ರುದ್ರಪ್ಪಶೆಟ್ಟರೊಂದಿಗೆ ಹೂಬಳ್ಳಿಯ ಅನೇಕ ಪುರಪ್ರಮುಖರು ಗವಿಯ ಗುರುಸಿದ್ಧೇಶ್ವರನ ಬಳಿಗೆ ಬಂದು ಕುಳಿತಿದ್ದಾರೆ. ಈಗ ಅವರು ಬಂದುದು ದರ್ಶನಕ್ಕಲ್ಲ. ಶಿವಯೋಗಿಯ ಕರೆಯನ್ನು ಕೇಳಿ ಕಾರ್ಯ ಮಗ್ನರಾಗಿ. ಶೆಟ್ಟರು ಮಾತೆತ್ತಿದರು—

‘ಬುದ್ಧೀ.... ಯಾಕೆ ಕರೆಸಿದಿರಿ.... ಏನಪ್ಪಣೆ?’

‘ಓಲೆಮಠ ಪೂರ್ಣ ಸಿದ್ಧವಾಯಿತೆ?’

‘ಆಗಿದೆ ಬುದ್ಧೀ.... ತಾವೇ ಇನ್ನು ಬೇಕಾದರೆ ಆ ಮಠದಲ್ಲಿ ವಾಸ ಮಾಡಬಹುದು....’

‘ಊಹುಂ.... ಅದು ನಮಗಲ್ಲ ಮಠ.... ಅದು ಶರಣರ ಓಲೆ ಮಠವಪ್ಪಾ....’

‘ಯಾವ ಶರಣರು ಬುದ್ಧೀ?’

‘ಕಲ್ಯಾಣ’

ಕಲ್ಯಾಣ ಹಾಳಾಯಿತಲ್ಲ ಬುದ್ಧೀ.... ತಮಗೆ ಸುದ್ದಿ ಬಂದಿಲ್ಲವೇ?’

ಶಿವಯೋಗಿಗಳು ನಕ್ಕರು. ನಗುತ್ತಲೇ ಹೇಳಿದರು—

‘ಹಾಳಾಯಿತಪಾ ... ಕಲ್ಯಾಣಾ ಹಾಳಾಯಿತು....’

‘ಏಕೆ ಹಾಳಾಯಿತು ಬುದ್ಧಿ?’

‘ಏಕೆ ಅಂತ ಕಾಲಕ್ಕ ಕೇಳಬಾರ್ದು.... ಹೇಗೆ ಅಂತ ಶಿವನ ಕೇಳಬಾರ್ದು....’

‘ಯಾಕ್ರಿ?’

‘ಅದು ಹಂಗ್ವಪಾ.... ಅದು ಹಂಗs....’

ದುಷ್ಟ್ರು.... ಚಂಡಾಲ್ರು.... ನೀಚ್ರು.... ಶರಣರನ್ನ ಚಂಡಾಡೀದ್ರಂತ ಬುದ್ಧೀ....’

‘ರುದ್ರಪ್ಪಾ.... ಇದು ಪೃಥ್ವಿ ತತ್ವಾ.... ನಡೆಯೂದs.... ನಡೆಯೂದs....’

‘ಇದೇನ್ರೀ.... ನೀವs ಹೀಗಂದ್ರ ಹ್ಯಾಂಗ?’

‘ನಾನಲ್ಲಪಾ.... ಆ ಶಿವಾ.... ಆಡೂನ ಬಾ ಕೆಡಿಸೂನ ಬಾ ಅಂತಾನು ಆ ಶಿವಾ... ಅವನ ಕೂಡ ಕಾಲಾ ಆಡತೈತಿ.... ಭೂಮಿ ಕುಣೀತೈತಿ.... ಈ ಮಾನವರು ಅವನ ಆಟಕ್ಕ ಆಣಿಕಲ್ಲು....’

'ಏನ ಶಿವಾನೋ.... ಏನ ಆಟಾನೋ.... ನಮಗ ಮಾತ್ರ ಹೊಟ್ಯಾಗ ಬೆಂಕಿ ಬಿದ್ದೈತ್ರಿ....'

.ಹೊಟ್ಯಾಗ ಅಷ್ಟೇ ಅಲ್ಲಪಾ.... ತಲಿವ್ಯಾಗೂ ಬೆಂಕಿ ಬೀಳ್ಹೊದೈತಿ....'

'ಅಂದ್ರ ಏನ್ರೀ?'

'ನೋಡೂವಂತಿ.... ಬರೂಸೋಮವಾರಾ ಬರ್ತಾರು ಹೊಟ್ಯಾಗಿನ ಕಳ್ಳ ಕಾರಿ ಜಂಗಮ್ರು....'

'ಎಲ್ಲಿಗ್ರೀ?'

'ಇಲ್ಲೇ.... ನಿನ್ನ ಮನೀ ಬಾಗಲ್ಲೇ....

'ಅದ್ಯಾಂಗ್ರಿ ... ಹೂಬಳ್ಳಿಲ್ಲೆ ಕಲ್ಯಾಣೆಲ್ಲೆ.... ಬ್ಹಾಳ ದೂರಾ.... ಬ್ಹಾಳ ದೂರಾ....'

'ಭೂಮಿಗೆ ಭೂಮಿ ದೂರಾದ್ರೂ.... ರಕ್ತಕ್ಕ ರಕ್ತಾ.... ಕಳ್ಳಿಗೆ ಕಳ್ಳು.... ಕಾಮಕ್ಕ ಕಾಮಾ.... ಕ್ರೋಧಕ್ಕ ಕ್ರೋಧಾ.... ಬ್ಹಾಳ ಹತ್ರಾ.... ಬ್ಹಾಳ ಹತ್ರಾ....'

'ಹಂಗಾದ್ರ ಅವ್ರು ಬರ್ಲಿ ಶರಣ್ರು ಬುದ್ಧಿ.... ಅವರನ್ನ ನಾವು ಕಾಪಾಡೂನು....'

'ಹುಚ್ಚಪ್ಪಾ.... ಸತ್ತಮ್ಯಾಲೆ ತುಪ್ಪಾ ತಂದಂಗಾದೀತು ನಿನ್ನ ಬುದ್ಧಿ... ಅವ್ರ ರುಂಡಾ ಮುಂಡಾ ಕಾಪಾಡೂದು ಕಳಿಯೂದು ಶಿವಾ ನಮ್ಮ ಕೈಯಾಗ ಕೊಟ್ಟಲ್ಲಾ....'

'ಏನ ಕೊಟ್ಟಾನ್ರೀ?'

'ಅದನ್ನ ಹೇಳಾಕs ನಿಮ್ಮನ್ನ ಕರಸಿದ್ದು.... ಶರಣ್ರ ವಚನ ಉಳದ್ರ ಸಾಕು.... ಶರಣ್ರs ಉಳದಂಗ.... ಈ ಲೋಕಕ್ಕ ಈಗ ಆ ಶರಣ್ರ ದೇಹಾ ಮಹತ್ವದ್ದಲ್ಲಪಾ ಅವ್ರ ವಚನಾ ಮಹತ್ವದ್ದು.... ಆ ಸಂದೇಶಾ ಮಹತ್ವಾ.... ಆ ವಚನಾ ಸತ್ರ ಶರಣ್ರೂ ಸತ್ತಂಗ....'

'ಹೀಂಗಂತೀರೇನೂ?'

'ಹೂಂನಪಾ.... ಅವ್ರ ತಾಳೋಲಿ ವಚನಾ ಎಲ್ಲಾ ಓಲಿಮಠ ದಾಗ ನೂರ ಸಂದೂಕದಾಗ ಭದ್ರವಾಗಿ ಬಚ್ಚಿಡ್ರಿ.... ಶರಣ್ರನ್ನ ಶಿವಪೂಜಾ ಪ್ರಸಾದಕ್ಕ ಆದರಗುಂಚಿಗೆ ಕಳಸ್ರಿ.... ಉಳದ ಶರಣ್ರನ್ನ ರೇವಣಸಿದ್ಧನ ಮಠದಾಗ ಪ್ರಸಾದಾ ಮಾಡೀಸಿ ಬೂದನ ಗುಡ್ಡದಾಗ ಅಡಗಸ್ರಿ.... ನಮ್ಮ ಹತ್ರ ಮಾತ್ರ ಒಬ್ರೂ ಶರಣ್ರನ್ನ ಕಳಸಬ್ಯಾಡ್ರಿ....'

'ಮತ್ತ ಯಾರ್ನ ಕಳೂಸೂನ್ರೀ?'

'ಆ ಬಿಜ್ಜಳನ ಸೈನಿಕ್ರು ಬರತಾರಲ್ಲಾ.... ಅವ್ರೀಗೆ ಶರಣ್ರ ತಾಳೋಲಿ ಗ್ರಂಥಗೋಳು ಓಲಿಮಠದಾಗ ಅದಾವಂತ ಹೇಳ ಬಾಡ್ರಿ.... ನಮ್ಮ ಗವಿಯಾಗ ಅದಾವಂತ ಹೇಳಿ ನಮ್ಮ ಕಡೇನ ಕಳಸ್ರಿ ...'

'ಶಿವಶಿವಾ.... ಆ ಹೇಸಿ ಸೈನಿಕ್ರು ನಿಮಗ ಏನರ ಮಾಡಿದ್ರ ಹ್ಯಾಂಗ್ರಿ ಬುದ್ಧಿ?'

'ನಾವು ಹೇಳಿದಷ್ಟ ಕೇಳ್ರಿಪಾ.... ಕಾಲಾ ಬಾಳಿಲ್ಲಾ.... ಶಿವಗ ಬುದ್ಧಿಲ್ಲಾ.... ಹುಂ.... ಏಳ್ರಿ.... ಹೋಗ್ರಿ....'

• • •

ಕಾಲ ತುತ್ತೂರಿ ಬಾರಿಸಿತು! ರಾತ್ರಿಗಳು ಚೀರಿದವು. ಹಗಲುಗಳು ಸುಟ್ಟವು. ಕಣ್ಣೀರಿನ ಉರಿಯೇ ಸುರಿಯುತ್ತ ಬಂದಂತೆ ಮೂರುಸಾವಿರ ಶರಣರ ಒಂದು ಮಹಾತಂಡ ನೇರವಾಗಿ ಗುರುಸಿದ್ಧೇಶ್ವರನ ಗವಿಗೇ ಬಂದಿತು, ಅದೇ ಶರಣರ ಇನ್ನೊಂದು ದೊಡ್ಡತಂಡ ಅದರಗುಂಚಿಗೆ ಹೋಯಿತು. ಆದರಗುಂಚಿಯ ತಂಡದಲ್ಲಿ ಚನ್ನಬಸವಣ್ಣನವರು ಹಾಗೂ ಮಡಿವಾಳ ಮಾಚಯ್ಯನವರಿದ್ದಾರೆ. ಗುರುಸಿದ್ಧೇಶ್ವರನ ಗವಿಗೆ ಬಂದ

ಮೂರುಸಾವಿರ ಶರಣರ ತಂಡದ ಮುಂದಾಳು ಮಹಾಯೋಗಿ ಗಂಗಾಧರ ಮುನೀಂದ್ರ! ಅಲ್ಲಮ ಪ್ರಭುದೇವರ ಶೂನ್ಯಸಿಂಹಾಸನದ ಅನುಭಾವ ಚರ್ಚೆಯ ಅಸಂಖ್ಯ ವಚನಗಳ ಏಕನಿಷ್ಠಾಧಿಪತಿ ಈ ಗಂಗಾಧರೇಂದ್ರ!! ಅನೇಕ ಶರಣರಿಂದ ದ್ವಿತೀಯ ಅಲ್ಲಮಪ್ರಭುದೇವನೆಂದೆನಿಸಿಕೊಂಡ ಅದ್ವಿತೀಯ ಶಿವಯೋಗೀಂದ್ರ!!!.... ಮೂರುಸಾವಿರ ಶರಣರ ಮುಖಂಡ. ನಾದುದರಿಂದ ಇವನಿಗೆ ಮೂರುಸಾವಿರದಪ್ಪನೆಂದೂ ಹೆಸರು....

ಮಧ್ಯರಾತ್ರಿ ಉರಿಕಾರುತ್ತಿತ್ತು. ಗಗನಕ್ಕೆ ಬೆಂಕಿ ಬಿದ್ದಿತ್ತು. ಮೂರುಸಾವಿರ ಶರಣರು ಆರು ದಿನಗಳಿಂದ ಉಪವಾಸ. ಅನ್ನ ನೀರಿಲ್ಲ. ಹಗಲೂ ರಾತ್ರಿ ಗುಡ್ಡಕೊಳ್ಳ ನಡೆದು ಹಳ್ಳಕ್ಕೆ ಹಳ್ಳ ಬಿದ್ದು ಬಂದಿದ್ದಾರೆ. ಮೈತುಂಬಾ ಘಾಯಗಳು. ಕಾಲ್ತುಂಬಾ ಹುಣ್ಣುಗಳು. ಹೊಟ್ಟೆ ಬೆನ್ನಿಗೆ ಹತ್ತಿದೆ. ಕಿವಿಮೂಗಿನಲ್ಲಿ ರಕ್ತ ಸೋರಿದೆ. ಎಲ್ಲರ ಮೇಲೂ ಅಸಂಖ್ಯ ವಚನದ ಕಟ್ಟುಗಳು. ಮಹಾತಪಸ್ವಿ ಗಂಗಾಧರ ಮುನೀಂದ್ರನ ನೇತೃತ್ವದಲ್ಲಿ ಬಂದ ಈ ಮೂರುಸಾವಿರಪಡೆಗೆ....ಶಿವಶರಣರ ತಾಳೋಲೆಯ ಸಹಸ್ರಾರು ವಚನದ ಕಟ್ಟುಗಳನ್ನು ಕಾಪಾಡುವದೇ ಮುಖ್ಯ ಕರ್ತವ್ಯ. ಚನ್ನಬಸವಣ್ಣನವರಿಂದ ಸೂಚನೆ ಪಡೆದು ಈ ಸೈನ್ಯ.... ಓಲೆಕಟ್ಟಿನ ರಕ್ಷಣಾಪಡೆಯಾಗಿ.... ಆಯುಧಗಳಿಂದ ಸುಸಜ್ಜಿತವಾಗಿ ಬಂದಿದೆ. ಆದರೂ ಇವರಿಗೆ ಈಗ ಅವನ್ನು ರಕ್ಷಿಸುವ ಭರವಸೆ ಹಾರಿ ಹೋಗಿದೆ. ಶರಣರು ಇತ್ತಂಡವಾಗಿ ಒಂದು ತಂಡ ಆದರಗುಂಚಿಗೆ ಹೋದರೆ; ಈ ತಂಡ ಗುರು ಸಿದ್ಧೇಶ್ವರ ಶಿವಯೋಗಿಯ ಆಶ್ರಮಕ್ಕೆ ಬಂದಿದೆ. ತೀರ ಕೆಲವೇ ಅಂತರದ ಹಿಂದಿನಿಂದ ಬಿಜ್ಜಳನ ಸೈನ್ಯ ಇವರನ್ನು ಪ್ರಬಲವಾಗಿ ಬೆನ್ನತ್ತಿ ಬಂದಿದೆ. ಬಹುಶಃ ಆ ಸೈನ್ಯ ಬಂದರೆ ಒಂದು ದಿನ ಘನಘೋರ ಯುದ್ಧವಾಗ ಬಹುದು, ಗೆದ್ದರೆ ತಾಳೋಲೆಯ ಕಟ್ಟುಗಳು ಬಾಳುತ್ತವೆ. ಇಲ್ಲವಾದರೆ ಶರಣರ ಪ್ರಾಣದೊಂದಿಗೆ ಅವೂ ಸುಟ್ಟು ಬೆಂಬೂದಿಯಾಗುತ್ತವೆ. ಆದರೆ ಬಹುಜನರಿಗೆ ಈಗ ಗೆಲ್ಲುವ ವಿಶ್ವಾಸ ಕುಂದಿದೆ. ಏಕೆಂದರೆ ಇವರು ಕೇವಲ ಕಾಲುನಡಿಗೆಯಲ್ಲಿ ಓಡಿ ಬರುತ್ತಿದ್ದಾರೆ. ಆದರೆ ಬಿಜ್ಜಳ ಸೇನೆ ಮಿಂಚಿನ

ವೇಗದ ಕಾಠೇವಾಡದ ಕುದುರೆಗಳ ಮೇಲೆ ಧಾಳಿಟ್ಟು ಬರುತ್ತಿದೆ. ಇವರ ಹತ್ತರ ಏನೂ ಇಲ್ಲ. ಏನೂ ಇಲ್ಲ. ಅವರ ಹತ್ತಿರ ಅತ್ಯಾಧುನಿಕ ಸುಸಜ್ಜಿತ ಯುದ್ಧಾಸ್ತ್ರಗಳಿವೆ. ಅಲ್ಲದೆ ಲಿಂಗ ಹಿಡಿದು ಮಂತ್ರ ಜಪಿಸಿದ ಕೈ ಯುದ್ಧ ಮಾಡೀತೆ? ಯುದ್ಧ ಮಾಡಿದರೂ ಗೆಲವು ಸಿಕ್ಕೀತೆ? ಅದೇ ವಿಚಿತ್ರ! ಆದರೂ ಮೂರಸಾವಿರ ಜಂಗಮರ ಈ ವಿಶಿಷ್ಟ ಸೈನ್ಯಕ್ಕೆ ಬಲಿದಾನದ ಅಂಜಿಕೆ ಇಲ್ಲ. ಕಾರಣ ಇವರ ಮುಂದಾಳುವೂ, ಅಲ್ಲಮಪ್ರಭುದೇವನ ಅಂತರಂಗದ ಶಿಷ್ಯನೂ, ದಿವ್ಯಜ್ಞಾನಿಯೂ, ನಿರಂಜನನೂ ಆದ ಮೂರು ಸಾವಿರದಪ್ಪನಾದ ಗಂಗಾಧರಯೋಗೀಂದ್ರನ ಅಸಾಧಾರಣ ಸಂಕಲ್ಪಶಕ್ತಿಯ ಆಧ್ಯಾತ್ಮಿಕ ಬೆಂಬಲ ಇವರಿಗಿದೆ. ಅದಕ್ಕಾಗಿಯೇ ಮೂರುಸಾವಿರ ಜಂಗಮರು.... ಬಿಜ್ಜಳ ಸೇನೆಯೊಂದಿಗೆ ಹೋರಾಡಿ ತಾವೆಲ್ಲಾ ರಣ ಕುಂಡಕ್ಕೆ ಬಲಿಯಾಗಿ ಬಿದ್ದರೂ.... ತಮ್ಮ ತಾಳೋಲೆಗಳಿಗೆ ಸುಭದ್ರ ರಕ್ಷಣೆಯನ್ನು ನೀಡಿಯೇ ಪ್ರಾಣಬಿಟ್ಟೇವು ಎಂಬ ಛಲಗಾರಿಕೆಯನ್ನು ಹೊಂದಿದ್ದಾರೆ. ಅಸಾಧಾರಣ ಶ್ರದ್ಧೆಯ ಆತ್ಮಬಲ ಸಂಪನ್ನರಾಗಿದ್ದಾರೆ.

* * *

ಮಧ್ಯರಾತ್ರಿಯಲ್ಲೇ ಗುರುಸಿದ್ಧೇಂದ್ರ ಕೂಗಿದ—

‘ಗಂಗಾಧರಾ.... ಗಂಗಾಧರಾ.... ಗಂಗಾಧರಾ....’

ಆತನ ಕೂಗು ಅರಣ್ಯವನ್ನು ಪ್ರತಿಧ್ವನಿಸಿತು. ಗಾಳಿಯನ್ನು ಪ್ರಕಂಪಿಸಿತು. ಈಗ ತಾನೆ ಸರೋವರದ ದಂಡೆಗೆ ಗುಪ್ತವಾಗಿ ಬಂದು ರಾತ್ರಿಯಲ್ಲಿ ದಾರಿ ಕಾಣದೆ ಕುಳಿತ ಮೂರುಸಾವಿರ ಶರಣರಿಗೆ ಈ ಧ್ವನಿ ಕೇಳಿ ಅತ್ಯಾಶ್ಚರ್ಯವಾಯಿತು. ಯಾರು ಕರೆದರು?.... ಎಂದು ದಿಗ್ಭ್ರಾಂತರಾಗಿ ಕುಳಿತರು. ಕಲ್ಯಾಣದಿಂದ ದಿಕ್ಕುಕಂಡತ್ತ ಸಾಗಿಬಂದ ನಮ್ಮ ಹೆಸರುದೆಶೆ ಗೊತ್ತಿದ್ದ ಪುಣ್ಯಾತ್ಮನಾರು? ಶರಣರೆಲ್ಲಾ ಅರೆಕ್ಷಣ ಹೌಹಾರಿ

.... ಕತ್ತಲೆಯಲ್ಲಿ ಕಣ್ತೂರಿ.... ನಕ್ಷತ್ರ ಬೆಳಕಿನಲ್ಲಿ ಕಾನನವನ್ನು ಕಣ್ಣಿಂದ ಸೋಸುತ್ತ.... ಸೂತ್ತಲೂ ನೋಡಿದರು. ಕತ್ತಲೆ! ಕೇವಲ ಕಗ್ಗತ್ತಲೆ!!

ಮತ್ತೆ ಧ್ವನಿ ಬಂತು--

'ಗಂಗಾಧರಾ.... ಗಂಗಾಧರಾ.... ಗಂಗಾಧರಾ....'

ಈ ಧ್ವನಿಗೆ ಪ್ರತಿಧ್ವನಿಯಾಗಿ.... ಸರೋವರದ ದಂಡೆಯ ಮೇಲೆ ದಣಿದು ಹಣ್ಣಾಗಿ ಕುಳಿತ ಮೂರುಸಾವಿರದಪ್ಪ ಯೋಗೀಂದ್ರ.... ದಿವ್ಯ ಜ್ಞಾನದಿಂದ ಕೂಗಿನಾಳದ ಮಹಾಯೋಗಿಯನ್ನು ಗಮನಿಸಿ ಥಂಗನೇ ಎದ್ದು ನಿಂತು.... ಕೂಗಿಗೆ ಮಾರ್ಕೂಗು ಕೂಗಿದ—

'ಓ.... ಓ.... ಓ.... ಬಂದೇ.... ಬಂದೇ.... ಮಹಾಪ್ರಭೂ ಬಂದೇ....'

ಈ ವಿಚಿತ್ರವನ್ನು ಕಂಡ ಮೂರುಸಾವಿರ ಜಂಗಮರೂ; ಕತ್ತಲೆಯಲ್ಲಿ ಕನಸು ಕಂಡ ಮಗು ಕಕ್ಕಾವಿಕ್ಕಿಯಾಗಿ ಎದ್ದಂತೆ; ಥಿಂಗನೇ ಎದ್ದು ನಿಂತರು! ಗಂಗಾಧರಯೋಗೀಂದ್ರ ಗುರುಸಿದ್ಧ ಮುನೀಂದ್ರನ ಬಳಿಗೆ.... ಸೂರ್ಯನ ಬಳಿಗೆ ಸೂರ್ಯ ನಡೆದಂತೆ ಸಿಂಹಠೀವಿಯಲ್ಲಿ ಸಾಗಿಹೋದ. ಓ.... ಆಗೋ.... ಅರೆಕ್ಷಣದಲ್ಲೇ.... ಗುರುಸಿದ್ಧೇಂದ್ರ ಶಿವಯೋಗಿಯ ಪಾದಪದ್ಮಗಳನ್ನು ಅಪ್ಪಿ ಮುದ್ದಿಟ್ಟು ಸಾಷ್ಟಾಂಗ ಹಾಕಿದ್ದಾನೆ ರಾಜಯೋಗೀಂದ್ರ ಗಂಗಾಧರಯೋಗಿ. ಯೋಗಿಯ ಬಳಿ ಯೋಗಿ ಬಂದ! ಗುರುವಿನ ಬಳಿ ಮಹೋನ್ನತ ಶಿಷ್ಯಬಂದ!! ಮೂರುಸಾವಿರದಪ್ಪ ಕಂಬನಿಯ ಮೊಗ್ಗುಗಳನ್ನು ಆ ಹುಚ್ಚ ಗುರುಸಿದ್ಧಯೋಗಿಯ ಪಾದಕ್ಕೆ ಅರ್ಪಿಸಿದ—

'ತಂದೇ.... ಇಂದು ಕರೆದೆಯಾ.... ನನ್ನನ್ನು ಇಂದು ಕರೆದೆಯಾ....'

ಗುರುಸಿದ್ಧ ಶಿವಯೋಗಿ ಅವನ ತಲೆ ಸವರಿದ—

'ಮಗೂ.... ಇಂದು ಬಂದೆಯಾ.... ನನ್ನ ಬಳಿಗೆ ಇಂದು

ಬಂದೆಯಾ....?'

'ಹೌದು ತಂದೆ.... ತಮ್ಮ ಶ್ರೀಪಾದದತ್ತಣಿಂದ ಕಲ್ಯಾಣ ನನ್ನನ್ನು ದೂರದೂರ ಮುಚ್ಚಿಟ್ಟಿತ್ತು....'

'ಹೌದು ಮಗು.... ನೀನು ಇಂದು.... ಈ ಗಹನ ಪರಿಸ್ಥಿತಿಯಲ್ಲೇ ನಮ್ಮ ಬಳಿ ಬರುವಿಯೆಂದೇ ಗೊತ್ತಿತ್ತು ನಮಗೆ.... ಶಿವಾ ಕರೆದ.... ನೀನು ಬಂದೆ....'

ಈ ಸಂವಾದ ಸೂಕ್ಷ್ಮವನ್ನು ಕದಿರುಗಣ್ಣಿನಿಂದ ನೆಟ್ಟು ನೋಡುತ್ತ ನಿಂತ ಮೂರು ಸಾವಿರ ವಿರಕ್ತ ಪುಂಗವರು ತಬ್ಬಿಬ್ಬಾಗಿ ಹೋದರು. ಅವರಿಗೆಲ್ಲಾ ಗುರುಸಿದ್ಧಯೋಗಿಗಳು ಕೈ ಬೀಸಿ ಹೇಳಿದರು—

'ಹೋಗ್ರಿಪಾ.... ಹೋಗ್ರಿ.... ಸರೋವರದಾಗ ಸ್ನಾನಾ ಮಾಡ್ರಿ.... ಪ್ರಸಾದಾ ತಕ್ಕೊಳ್ರಿ...'

ಒಬ್ಬ ಶರಣ ಕೈಮುಗಿದು ಹೇಳಿದ—

'ಕ್ಷಮಿಸಿ ತಂದೆ.... ನಮ್ಮ ಹಿಂದೆಯೇ ಬಿಜ್ಜಳನ ಕುದುರೆ ಸೈನ್ಯ ಬರುತ್ತಿದೆ.... ನಾವು ಪ್ರಸಾದಕ್ಕೆ ಕುಳಿತರೆ ಪ್ರಸಾದ ಮುಗಿಯುವಷ್ಟರಲ್ಲೇ ನಮ್ಮ ರುಂಡ ನಮ್ಮ ಮುಂಡದ ಮೇಲಿರುವದಿಲ್ಲ....'

ಶಿವಯೋಗಿ ಮಂದಹಾಸ ಬೀರಿದ—

ಹುಚ್ಚಪ್ಪಗೋಳ್ರ್ಯಾ.... ಆ ಕುದರೀ ಸೈನ್ಯಕ್ಕಿಂತ ಸಾವಿರ ಪಟ್ಟು ಶ್ಯಾಣಾ ಅದಾನು ಶಿವಾ.... ಹುಂ.... ಹಸದ ಬಂದೀರಿ.... ಹೋಗ್ರಿ ... ಸ್ನಾನಾ ಮಾಡಿ ಪ್ರಸಾದಾ ತಕ್ಕೊಂಡು.... ಅಷ್ಟs ಅಲ್ಲಾ ಒಂದದಿನಾ ನಿದ್ರಿ ಮಾಡಿ.... ಕೈ ಮೈ ಘಾಯಾ ಮಾಯ್ಸಿಕೊಂಡು ಹೋಗ್ರಿ.... ಹುಂ.... ಬೇಗ.... ಬೇಗ....'

ಆರು ದಿನಗಳಿಂದ ಕಣ್ಣೀರೆ ಕೂಳಾದ ಶಿವಶರಣರು ಶಿವಯೋಗಿಯ ಆಜ್ಞೆಯನ್ನು ನಂಬಿ ಸರೋವರಕ್ಕೆ ನಡೆದರು. ಶಿವಯೋಗಿ

ಗಳ ಪೂರ್ವ ಸೂಚನೆಯಂತೆ ಆಶ್ರಮದಲ್ಲಿ ಶರಣಶಿವಪ್ಪನ ಪ್ರಾಸಾದಿಕ ಸೇವಾದಲ ಮೂರುಸಾವಿರ ಜಂಗಮರಿಗೂ ಅವರು ಬರುವ ಪೂರ್ವದಲ್ಲೇ ಸಜ್ಜೀರೊಟ್ಟಿ– ಬಿಳಿಜೋಳರೊಟ್ಟಿ– ಮಸರು–ಕಡ್ಲಿಹಿಂಡಿ– ಅಗಸೀಹಿಂಡಿ– ಉಸುಳಿ– ಎಣಗಾಯಿ– ಮಾದ್ಲಿ– ತುಪ್ಪ–ಹಾಲು– ಸಂಡಿಗೆ–ಕೋಸಂಬರಿ ಅನ್ನ–ಸಾರು–ಉಪ್ಪಿನಕಾಯಿ–ಹಪ್ಳ–ತಾಟು–ಬಟ್ಲ–ತಂಬಿಗೆ–ಎಲೆ–ಎಲ್ಲಾ ಸಿದ್ಧಮಾಡಿತ್ತು!

ಗುರುಸಿದ್ಧ ಶಿವಯೋಗಿಗಳು ಗಂಗಾಧರ ಯೋಗಿಯನ್ನು ಪ್ರಸಾದಕ್ಕೆಂದು ತಮ್ಮ ಗವಿಯಾಳದ ಯೋಗಗುಹೆಯಲ್ಲಿಯೇ ಕರೆದೊಯ್ದರು.

* * *

ಇತ್ತ ಇವರ ಪ್ರಸಾದ ಮುಗಿಯುತ್ತಿದ್ದಂತೆ ಅತ್ತ ಹೂಬಳ್ಳಿ ಪುರದಿಂದ ರುದ್ರಪ್ಪಶೆಟ್ಟರು ನೂರುಜನರೊಂದಿಗೆ ನೂರುಬಂಡಿಗಳನ್ನು ಹೂಡಿಸಿಕೊಂಡು ಬಂದರು. ಪ್ರಸಾದ ಮುಗಿದ ಮೇಲೆ ಎಲ್ಲಾ ತಾಳೋ-ಲೆಯ ಕಟ್ಟುಗಳನ್ನು ತಮ್ಮ ಗವಿಯ ಮುಂದೆ ತಂದು ಇಳುಹಲು ಗುರು ಸಿದ್ಧಯತಿಗಳು ಆಜ್ಞೆ ಮಾಡಿದರು. ಗಂಗಾಧರ ಶಿವಯೋಗಿ ಅಂತೆಯೇ ಮಾಡಿದ. ಕೊನೆಗೆ ಅವನ್ನೆಲ್ಲಾ ಸೂಕ್ಷ್ಮವಾಗಿ ನಿರೀಕ್ಷಿಸಿ ಗುರುಸಿದ್ಧ ಪ್ರಭುಗಳು ಹೇಳಿದರು—

'ನೋಡ್ರೆಪಾ.... ಈ ತಾಳೋಲೆಯೊಳಗ ಖಾಲಿ ಇದ್ದ ಕಟ್ಟು ಗೋಳ್ನ ಎಲ್ಲಾ ಬಂಡಿ ಮ್ಯಾಳ ಹೇರಿ ಬಿಡ್ರಿ.... ಆ ಮ್ಯಾಲೆ ಅದರ ಚಿಂತಿ ನಮ್ಮ ಚಿಂತಿ.... ನೀವು ನಿಶ್ಚಿಂತಿ....'

ಇಷ್ಟು ಹೇಳಿದ್ದೇ ಸಾಕಾಯಿತು— ಮೂರುಸಾವಿರ ಜಂಗಮರಿಗೆ ಪ್ರತಿಯೊಬ್ಬರಿಗೂ ಹತ್ತು ಮಣ ಭಾರ ಇಳಿಸಿದಂತಾಯಿತು. ಯೋಗಿಗಳು

ಮೂರುಸಾವಿರದಪ್ಪಯೋಗಿಗಳಿಗೆ ಮಾತು ಮುಂದುವರಿಸಿದರು-

'ನೋಡಪಾ ಗಂಗಾಧರಾ.... ಇಲ್ಲೇ ಓಲಿಮುತಧಾಗ ಇವೆಲ್ಲಾ ಗುಪ್ತವಾಗಿ ಇರ್ತಾವು.... ನೀನು ಸ್ವತಃ ಅಲ್ಲಿದ್ದು ಅವನ್ನೆಲ್ಲಾ ಸಂರಕ್ಷಿಸಿ.... ಮುಂದೆ ಐವತ್ತು ವರ್ಷಗಳ ಅವಧಿಯಲ್ಲಿ ಅವುಗಳ ಅನೇಕ ಪ್ರತಿಗಳನ್ನು ಮಾಡಿಸಿ ದಕ್ಷಿಣ ಹಿಂದುಸ್ಥಾನದ ಎಲ್ಲಾ ಪ್ರಮುಖ ಮಠಗಳಿಗೂ ವಿದ್ಯಾ ಕೇಂದ್ರಗಳಿಗೂ ಕಳಿಸಿಕೊಡತಕ್ಕದ್ದು'

'ಆಗಲಿ ಗುರುದೇವಾ.... ನಿಮ್ಮ ಅಪ್ಪಣೆ....'

ಗುರುಗಳು ಮಾತು ಮುಂದುವರಿಸಿದರು—

'ಇನ್ನು ನೀನು.... ಮೂರುಸಾವಿರ ವಿರಕ್ತರು ತಂಗಿದ್ದ ಈ ಸ್ಥಾನದ ಕುರುಹಾಗಿ.... ಗಂಗಾಧರನೂ ಮೂರುಸಾವಿರದಪ್ಪನೆನಿಸಿ ಕೊಂಡು.... ಶರಣಸಂಪ್ರದಾಯವನ್ನು ಮುಂದುವರೆಸು.... ಈ ಆಶ್ರಮ ನಿನ್ನಿಂದ ಮೂರುಸಾವಿರಮಠವಾಗಲಿ....'

'ಆಗಲಿ ಗುರುದೇವಾ.... ಇನ್ನು ನನ್ನೊಡನೆ ಬಂದ ಈ ಮೂರು ಸಾವಿರ ಮಹಾಜಂಗಮರು?'

'ಅವರೆಲ್ಲಾ ಚನ್ನಬಸವಣ್ಣನವರೊಂದಿಗೆ ಮುಂದೆ ಸಾಗಲಿ.... ಕೆಲದಿನದಲ್ಲೇ ದೊಡ್ಡ ಯುದ್ಧಗಳಾಗಲಿವೆ.... ಆಗಲಿ.... ಆಗಲಿ... ಉರಿ ಬರಲಿ ಸಿರಿ ಬರಲಿ.... ಶರಣರಿಗೆಲ್ಲಾ ಮರಣವೇ ಮಹಾನವಮಿ....'

ಈ ಮಾತಿಗೆ ಮೂರುಸಾವಿರ ವಿರಕ್ತರು ಏಕಕಂಠದಿಂದ ಆಕಾಶವೇ ಕಂಪಿಸುವಂತೆ ಕೂಗಿದರು—

'ಆಗಲಿ.... ಆಗಲಿ.... ಮರಣವೇ ಮಹಾನವಮಿ.... ಮರಣವೆ ಮಹಾನವಮಿ.... ಸಿದ್ಧರಿದ್ದೇವೆ....'

ಈ ಕೂಗಿಗೆ ಪ್ರತಿಯಾಗಿ ಮಹಾಯೋಗಿ ಗುರುಸಿದ್ಧೇಂದ್ರನ ಕಣ್ಣುಗಳಿಂದ ಎರಡು ಹನಿ ಕಣ್ಣೀರು ಉದುರಿದವು!

ಶಿವಶಿವಾ....

ಕಣ್ಣೀರು ಮೀರಿದ ಯೋಗಿಯ ಕಣ್ಣಲ್ಲೂ ಕಣ್ಣೀರು ಬಂತೇ?

• • •

ಕಣ್ತುಂಬಾ ನಿದ್ರೆ ಮಾಡಿ ಬೆಳಗು ಕಣ್ತೆರೆದಾಗ ಮುಂದೆ ನಡೆದರು ಮೂರುಸಾವಿರ ವಿರಕ್ತರು!

ಎಲ್ಲರೂ ಯೋಧರಲ್ಲ;.... ಲಿಂಗಪ್ರಾಣಿಗಳು.... ಶಾಂತಮೂರ್ತಿಗಳು. ಆಯುಧಗಳ ದರ್ಶನವಿಲ್ಲದವರು ಆಯುಧ ಹಿಡಿಯಬೇಕಾಗಿ ಬಂದಿದೆ, ಅವರಲ್ಲಿ ಅನೇಕರು ಎಪ್ಪತ್ತು ಎಂಬತ್ತು ವಯಸ್ಸು ಮೀರಿದವರು. ಕೆಲವರಿಗಂತೂ ಖಡ್ಗಗಳನ್ನು ಎತ್ತುವ ಶಕ್ತಿಯೇ ಇಲ್ಲ. ಆದರೆ ಯುದ್ಧವನ್ನೇನು ಮಾಡಿಯಾರು ಎಲ್ಲರೂ ಶಿವಯೋಗದಲ್ಲಿ ಜೀವನವನ್ನೇ ಗಂಧದಂತೆ ತೇಯ್ದ ಪುಣ್ಯಾತ್ಮರು. ಲೌಕಿಕವನ್ನೂ ರಾಜಕೀಯವನ್ನೂ ಅರಿಯದ ಮುಗ್ಧ ಮಹಾತ್ಮರು. ಆದರೆ ಕಾಲ ಅವರನ್ನು ರಣರಂಗದ ಅಂಚಿಗೆ ನಿಲ್ಲಿಸಿ ಚಪ್ಪಾಳೆ ತಟ್ಟುತ್ತಿದೆ. ಜಂಗು ಜೋಳಿಗೆ ಹಿಡಿದವರು ಖಡ್ಗ ಹಿಡಿದಿದ್ದಾರೆ. ದೇಹವೇ ದೇವಾಲಯ, ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವೆಂದು ಕಲ್ಯಾಣದಲ್ಲಿ ಸಾರಿದರು.... ಅದೇ ಅಮೃತ ಧರ್ಮದ ರಕ್ಷಣೆಗಾಗಿ ರಣಕ್ಕಾಗಿ ಕೆಣಕಿ ನಿಂತಿದ್ದಾರೆ. ಇನ್ನೂ ಅನೇಕ ವಯೋವೃದ್ಧ ಜಂಗಮರು ಕುಂಟುತ್ತಿದ್ದಾರೆ, ಬೆನ್ನು ಬಾಗಿ ನಡೆವವರಿದ್ದಾರೆ. ಕೋಲೂರುವವರಿದ್ದಾರೆ. ಆದರೂ ಕರ್ತವ್ಯ ಆ ವೃದ್ಧರನ್ನು ಕೂಗಿ ರಣರಂಗಕ್ಕೆ ಕರೆದಿದೆ.

ಬೆಳಗಿನ ಕಾಲಕ್ಕೆ ಗವಿಯ ಮುಂದಿನ ಸರೋವರದ ದಂಡೆಯ ಮೇಲೆ ಎರಡನೆಯ ಸಲ ಸಾಮೂಹಿಕ ಲಿಂಗಪೂಜೆ, ಮಹಾಪ್ರಸಾದವಾಯಿತು. ಶರಣರೆಲ್ಲಾ ಹೂಬಳ್ಳಿಯ ರೇವಣಸಿದ್ಧನ ಮಠ ಬೂದನ್ನ

ಗುಡ್ಡದ ಮಾರ್ಗವಾಗಿ ಮುನ್ನಡೆದರು. ಅವರನ್ನು ಬೀಳ್ಕೊಡುವಾಗ ರುದ್ರಪ್ಪಶೆಟ್ಟರು ಬಿಕ್ಕಿಬಿಕ್ಕಿ ಅತ್ತರು. ಪುರಜನರು ಕಾಲಿಗೆ ಹಣೆಯೊತ್ತಿ ಕಣ್ಣೀರಿನ ದಕ್ಷಿಣೆ ಕೊಟ್ಟು ಕಳಿಸಿದರು. ಒಬ್ಬಳು ಹಣ್ಣುಹಾಗಲೆ ಮುದುಕಿ ಒಬ್ಬ ಸುಂದರ ಮುಗ್ಧ ಜಂಗಮನ ಗಲ್ಲಕ್ಕೆ ಲಟಗೆ ಹೊಡೆದು ಹೇಳಿದಳು—

'ಯಪ್ಪಾ.... ನನ್ನಪ್ಪಾ.... ಹಡೆದಪ್ಪಾ.... ಎಂಥಾ ಸ್ಥಿತಿ ಬಂತ್ಯ ಯಪ್ಪಾ ನಿಮಗ.... ಹೋಗಿ ಬಾ ಯಪ್ಪಾ.... ಹೋಗಿ ಬಾ....'

ಮುದುಕಿ ಅತ್ತಳು. ಆದರೇನು ಆತ ಹೋಗಿ ಬರಲಾರ! ಮೂರುಸಾವಿರ ಮಹಾನುಭಾವರೆಲ್ಲಾ ಹೋಗಿ ಬರಲಾರರು!! ಬರಲಾರದ ದಿಕ್ಕಿಗೆ ಕರ್ತವ್ಯವನ್ನು ನಂಬಿ ನಡೆದಿದ್ದಾರೆ ಆ ಪುಣ್ಯಾತ್ಮರು!!!

ಒಬ್ಬ ವೃದ್ಧ ಜಂಗಮ ಆ ಮುದುಕಿಗೆ ಉತ್ತರಿಸಿದ—

'ಅಮ್ಮಾ.... ಅಳಬೇಡ ಅಮ್ಮಾ.... ನೋಡು.... ನಾವೆಲ್ಲಾ ನಗನಗತಾ ಹೊರಟಿದ್ದೇವೆ.... ಅಳಬಾರದು ಅಮ್ಮಾ.... ಅಳಬಾರದು....

ಈ ಮಾತಿಗೆ ಎಲ್ಲರೂ ಭೋರನೆ ಅತ್ತು ಬಿಟ್ಟರು, ಇವರಲ್ಲಿ ಒಬ್ಬರಾದರೂ ಉಳಿಯುವ ಆಶೆ ಇಲ್ಲ. ಆದರೂ ಎಲ್ಲ ಮಹಾತ್ಮರೂ ನಗುತ್ತಿದ್ದಾರೆ. ನಗುನಗುತ್ತಲೆ ತಮ್ಮ ಮುಕ್ತಿಯ ಗುರಿಯತ್ತ, ಉಳಿವೆಯತ್ತ ಧೀರರಾಗಿ ನಡೆದಿದ್ದಾರೆ. ಒಬ್ಬಳು ತಾಯಿ ತನ್ನ ಕೂಸನ್ನು ಶರಣರ ಪಾದಕ್ಕೆ ಹಾಕಿ ಹೇಳಿದಳು—

'ತಂದೇ.... ನಿಮ್ಮ ಯುದ್ಧಕ್ಕೆ ನನ್ನ ಮಗನನ್ನೂ ಒಯ್ಯಿರಿ.... ಇವನನ್ನು ಮೊದಲು ರಣರಂಗಕ್ಕೆ ಬಲಿಕೊಟ್ಟು ಹೋರಾಡಿರಿ....'

ಈ ಮಾತಿಗೆ ಈ ವರೆಗೆ ನಗುನಗುತ್ತಿರುವ ಶರಣರೂ ಅತ್ತು ಬಿಟ್ಟರು!

ಮಹಾಯಾತ್ರೆ ಮುಂದೆಸಾಗಿತು!!

ಇದೇ ದಿನಸಂಜೆ!

ಬಂತು.... ಬಂತು.... ಬಂತು.... ಬಿಜ್ಜಳ ಸೇನೆ!!

ಅಗೋ.... ದೂರದ ದಿಬ್ಬಗಳನ್ನು ಪುಡಿಹುಡಿ ಮಾಡುತ್ತ.... ಕುದುರೆಯ ಖರಪುಟಗಳನ್ನು ಸಂಘಟಿಸುತ್ತ.... ಆಕಾಶದಲ್ಲಿ ಆಕ್ರೋಶಿಸುತ್ತ....

ಬಂತು.... ಬಂತು.... ಬಂತು.... ಬಿಜ್ಜಳ ಸೇನೆ!!!

ಬಹುಶಃ ದೂರದಿಂದಲೇ ಕೆಲವರನ್ನು ದಂಡಿಸಿ ಖಂಡಿಸಿ ಮೂರು ಸಾವಿರ ವಿರಕ್ತರು ಸಾಗಿಹೋದ ದಾರಿಯ ಸುಳುಹನ್ನು ಕೇಳಿತಿಳಿದು... ನೇರವಾಗಿ ಶಿವಯೋಗಿಯ ಸರೋವರಕ್ಕೆ ದಾಳಿಟ್ಟು ಬಂದಿತು ಕುದುರೆ ಸೈನ್ಯ! ಹಾ.... ಹಾ.... ಎನ್ನುವಷ್ಟರಲ್ಲಿ ಅರಣ್ಯ ಕೂಗಿತು. ಶಾಂತಿ ಸ್ಫೋಟವಾಯಿತು. ತಂಗಾಳಿ ವಿಷಗಾಳಿಯಾಯಿತು. ಹುಡಿ ಹುಡೇ ಕಟ್ಟಿತು ಹೂಬಳ್ಳಿಗಳೆಲ್ಲ ಜಬ್ಬಿ ಜಿಬ್ಬೆಯಾದವು. ಪಕ್ಷಿಗಳು ಅಂಜಿ ಓಡಿದವು. ಕಾನನದ ಹುಲಿಗಳು ಆನೆಗಳು ಚಿರ್ಜಗಳು ನಾನಾಪ್ರಾಣಿಗಳು ದಿಕ್ಕು ತೋರದತ್ತ ಕಾಲ್ಕಿತ್ತು ಓಡದವು.

ಗವಿಯ ಬಾಗಿಲಿನ ಗುಂಡುಕಟ್ಟೆಯ ಮೇಲೆ ಶಿವಯೋಗಿ ಸ್ಥಿತಪ್ರಜ್ಞನಾಗಿ ಒಬ್ಬನೇ ಕುಳಿತಿದ್ದಾನೆ. ಮನದಲ್ಲಿ ಅನಂತ ಶಾಂತಿಯಿದೆ. ಮುಖದಲ್ಲಿ ಶಿವಸಂಕಲ್ಪಕ್ಕೆ ಓಗೊಡುವ, ಶಿವನಿಗಾಗಿ ಶೂಲಕ್ಕೇರುವ ಶಿವಯೋಗಿಯ ತ್ಯಾಗಭಾವನೆ ಇದೆ. · ಅವನ ಪಕ್ಕದಲ್ಲಿ ಆ ಹೆಣ್ಣು ಚಿಗರಿ 'ಮಾಯಾ' ಎಳೆಯ ಕರಿಕೆ ಮೆಲ್ಲುತ್ತಾ; ಒಮ್ಮೆ ಸಪ್ಪಳವನ್ನು ಕೇಳಿ ಅತ್ತ, ಇನ್ನೊಮ್ಮೆ ಶಿವಯೋಗಿಯತ್ತ ನೋಡಿ ಹೌಹಾರಿತು! ಅದರ ಮಕ್ಕಳು

'ಸಂಗಾ' 'ಸಿಸ್ಸಂಗಾ' ಎಲೆಬಳ್ಳಿಗಳ ತೊಪ್ಪಲಲ್ಲಿ ತಮ್ಮ ಮಕ್ಕಳೊಂದಿಗೆ ಅಡಗಿ ನಿಂತವು. ಶಿವಯೋಗಿಗಳ ಸೇವಕರಾದ ಶರಣ ಶಿವಪ್ಪ, ನಂಬಿಗೆಯ ಭಕ್ತ ಭೈರವರುದ್ರ ಕೈಕಟ್ಟಿ.... ಶಿವಯೋಗಿಯ ಪ್ರಾಣಚಿಂತೆಯನ್ನೂ ಯೋಗಕ್ಷೇಮವನ್ನೂ ಗಹನವಾಗಿ ಚಿಂತಿಸುತ್ತ ನಿಂತಿದ್ದಾರೆ. ಶಿವಯೋಗಿಗಳು ಮಾತ್ರ.... ಬಂದದ್ದು ಬರಲೆಂಬಂತೆ ಸಂತೃಪ್ತ ನಗೆ ತುಂಬಿ.... ಅಂಜಿದ ಆ ಚಿಗರಿಯನ್ನು ಕೊನೆಯ ಬಾರಿಗೆ ಕೈಯಾಡಿಸುತ್ತ ಕುಳಿತಿದ್ದಾರೆ!

ನೂರಾರು ಕುದುರೆಗಳು ಒಮ್ಮೆಲೇ ಛೀಳಿಟ್ಟು, ಶಿವಯೋಗಿಯ ತಲೆಯನ್ನೇ ಕುಟ್ಟುವಂತ ಮುಂಗಾಲುಗಳನ್ನು ಎತ್ತಿ ಕಲ್ಪಡೆಗೆ ಕುಟ್ಟುತ್ತ ಫಕ್ಕನೆ ನಿಂತವು. ಎಲ್ಲರೂ ಉರಿಮೋರೆಯ ಹುರಿಮೀಸೆಯ ಮೊಸಳೆಗಲ್ಲದ ಕ್ರೂರ ರಾಕ್ಷಸರು, ಕಣ್ಣುಗಳು ಗೂಗೆಗಳನ್ನು ಅಂಜಿಸುವಂತಿವೆ. ಅವರಲ್ಲಿ ಪ್ರಮುಖನೊಬ್ಬ ಕುದುರೆಯ ಡುಬ್ಬದಿಂದ ನೆಲಕ್ಕೆ ರೊಪ್ಪನೇ ಜಿಗಿದು, ಸರ್ರನೇ ಖಡ್ಗವನ್ನು ಹಿರಿದು, ಶಾಂತಶಿವನ ಮುಂದೆ ವಿಕ್ರಾಂತ ರಾಕ್ಷಸನು ಬಂದು ನಿಂತಂತೆ ನಿಂತು; ಗದರಿ ಗದ್ದರಿಸಿ ಕೇಳಿದ—

ಲೇ ಹುಚ್ಚಾ.... ಎಲ್ಲಿ ಹೋದ್ರು....ಎಲ್ಲಿ ಹೋದ್ರು ಅವ್ರು....'

ಶಿವಯೋಗಿಗಳು ಶಾಂತವಾಗಿ ಆತನ ಮೇಲೆ ವಿಶ್ವಶಾಂತಿಯ ದಯಾದೃಷ್ಟಿಯನ್ನು ಬೀರಿ ಮೃದುವಾಗಿ ಕೇಳಿದರು—

'ಯಾರು ಹೇಳಪ್ಪಾ? ಯಾರು ಬೇಕಾಗಿತ್ತು ನಿನಗೆ?'

ಕೆಲಕಾಲ ಆ ಪ್ರಶ್ನಬ್ಧ ರಾಕ್ಷಸನಿಗೆ ಸಿಡಿಲು ಹೊಡೆದಂತಾಯಿತು. ಶಿವಯೋಗಿಯ ಮೃದು ಮಧುರ ಮಾತುಗಳೂ ಅವನಿಗೆ ಕಬ್ಬಿಣದ ಒನಕೆಯಿಂದ ಹೊಡೆದಂತಾದವು. ಎರಡು ಹೆಜ್ಜೆ ಅವನೂ ಅವನ ಕುದುರೆಯೂ ತಮಗೆ ತಾವೆ ಹಿಂದೆ ಸರಿದರು. ಆದರೂ ಧೈರ್ಯ ತಂದುಕೊಂಡು ಮತ್ತೆ ಹೇಳಿದ—

'ಏ ಹುಚ್ಚಯ್ಯ.... ಇಲ್ಲಿಗೆ ತಾಳೋಲೆ ಕಟ್ಟುಗಳನ್ನು ಹೊತ್ತ

ಆ ಮೂರುಸಾವಿರ ಜಂಗಮರು ಬಂದಿದ್ದರೇನು?'

ಶಿವಯೋಗಿ ನೇರವಾಗಿ ಹೇಳಿದ—

'ಬಂಧಿದ್ದರು.... ಹೋದರು.... ಯಾಕೆ ಬೇಕಾಗಿತ್ತು ಅವರು?'

'ಅವರನ್ನು ಅವರ ತಾಳೋಲೆ ಕಟ್ಟುಗಳೊಂದಿಗೆ ಸುಡಬೇಕಾಗಿತ್ತು....'

'ಇಷ್ಟೇ ತಾನೇ....'

ಈ ಮಾತಿಗೆ ಆ ಸೇನಾನಾಯಕನಿಗೆ ಮತ್ತೊಂದು ಒನಕೆಯ ಒದೆಯನ್ನು ಕೊಟ್ಟಂತಾಯಿತು. ಅವನ ಬಾಯಿಂದ ಮಾತೇ ಬರಲಿಲ್ಲ, ಗಂಟಲಲ್ಲಿ ಹೆಬ್ಬಾವು ಕೂತಂತಾಯಿತು. ಆಗ ಇನ್ನೊಬ್ಬ ಕ್ರೂರ ಕರಾಳ ಸೈನಿಕ ಅವನ ಬೆಂಬಲಕ್ಕೆ ಬಂದು ಹೇಳಿದ—

'ನಡಿಯೋಪಾ.... ನಡೀ.... ನಡೀ.... ಇವಾ ಹುಚ್ಚಾ.... ಹುಚ್ಚಂಜೋಡಿ ಮಾತಾಡೂದು ಹುಂಚೀಕಪ್ಪಾ ನೆಕ್ಕೊದೂ ಒಂದs.... ನಡೀ.... ನಡೀ....'

ಈ ಮಾತಿಗೆ ಯೋಗಿಯೇ ಉತ್ತರಿಸಿದ—

'ಹೌದಪಾ.... ನಾ ಹುಚ್ಚಾ.... ನಾ ಹುಚ್ಚಾ....'

ಹುಚ್ಚನೆಂದಾದರೂ ತನ್ನನ್ನು ತಾನೇ ಹುಚ್ಚನೆಂದು ಅಂದುಕೊಳ್ಳುವನೇ? ಛೇ ಛೇ.... ಸಾಧ್ಯವೇ ಇಲ್ಲ! ಸಂಶಯ ಬಂದು ಆ ಕ್ರೂರ ಸೈನಿಕ ಶಿವಯೋಗಿಯತ್ತ ಭಯಂಕರವಾಗಿ ಬಂದು.... ಆ ಹುಚ್ಚ ಶಿವಯೋಗಿಯನ್ನು ಒಂದು ಸಲ ಕಣ್ಣಲ್ಲಿ ಕಣ್ಣಿಟ್ಟು ಕ್ರೂರವಾಗಿ ನೋಡಿದ. ಶಿವಶಿವಾ .... ಅವನ ಕಣ್ಣೇ ಸುಟ್ಟಂತಾದವು! ಸುತ್ತಲೂ ನೋಡುತ್ತ.... ಅಯ್ಯೋ .. ಮಬ್ಬು.... ಮಬ್ಬು.... ಎಂದ!!

ಈಗ ಮತ್ತೊಬ್ಬ ಕೋಣನ ಬಣ್ಣದ ಒನಕೆ ತುಟಿಯ ಭಾರೀ ವೀರ ಸೈನಿಕ ಕುದುರೆ ಡುಬ್ಬದಿಂದ ಜಿಗಿದು ಬಂದು ಕೇಳಿದ—

'ಲೇ ಹುಚ್ಚಾ.... ನೀ ಹುಚ್ಚನೋ.... ದೊಡ್ಡ ಹುಚ್ಚನೋ ...'

ಶಿವಯೋಗಿ ನಕ್ಕು ಹೇಳಿದ—

'ನಾ ಹುಚ್ಚಪಾ.... ನಿನಗಿಂತ ದೊಡ್ಡ ಹುಚ್ಚಾ....'

'ನನಗಿಂತ ದೊಡ್ಡ ಹುಚ್ಚಾ?'

ಹೌದಪ್ಪಾ.... ನಿನಗಿಂತ ದೊಡ್ಡ ಹುಚ್ಚಾ'

'ಅಂದ್ರ?'

'ನಿನ್ನ ಬೆನ್ನ ನೋಡಪಾ.... ನಿನ್ನ ಬೆನ್ನ ನೀ ನೋಡು....'

ಎಲ್ಲಾ ಸೈನಿಕರೂಗೊಳ್ಳನೇ ನಕ್ಕರು, ಅವರಲ್ಲಿ ಒಬ್ಬ ಕೂಗಿದ—

'ಈತ ಹುಚ್ಚಲ್ಲಾ.... ಶಾಣ್ಯಾ ಹುಚ್ಚಾ.... ಶಾಣ್ಯಾ ಹುಚ್ಚಾ....'

ಅದಕ್ಕೆ ಇನ್ನೊಬ್ಬ ಸೈನಿಕ ಕೂಗಿ ಕೇಳಿದ—

'ಈತಾ ಶಾಣ್ಯಾ ಹುಚ್ಚಾದ್ರ.... ನಾವು ದಡ್ಡ ಹುಚ್ರೇನು?'

ಎಲ್ಲಾರೂ ನಕ್ಕರು!

ಈಗ ಸೈನಿಕರೆಲ್ಲಾ ಸರೋವರದ ಸುತ್ತ ಕುದುರೆಗಳನ್ನು ಓಡಾಡಿಸಿ ಬಂದರು. ಅನೇಕರು ದಾಸೋಹಕ್ಕೆ ಸುಗ್ಗಿ ಸಜ್ಜಿ ರೊಟ್ಟಿ ಮೊಸರು ತಿನ್ನುತ್ತ ಬಂದರು. ಒಬ್ಬೊಬ್ಬರನ್ನು ಕಂಡು ಎಲ್ಲರೂ ತಿಂದೇ ತಿಂದರು. ಕೆಲವರು ಪುಾದ್ಲಿ ತಿಂದರು. ಕೆಲವರು ಹಾಲು ಕುಡಿದರು. ಕೆಲವರು ಕೇವಲ ತುಪ್ಪಾ ಕುಡಿದರು. ಇನ್ನು ಅನೇಕರು ಕೇವಲ ಹಪ್ಪಳದ ಬುಟ್ಟಿಗಳನ್ನೇ ಆಗು ಮಾಡಿದರು. ಮತ್ತೆ ಕೆಲವರಂತೂ ಉಪ್ಪಿನಕಾಯಿಗಳನ್ನೇ ಹೊಟ್ಟೆ ತುಂಬಾ ಸೀಪಿದರು. ಎಲ್ಲಾ ಗದ್ದಲ ಮಾಡಿ ಮುಗಿಸಿದ ಮೇಲೆ ಸರೋವರದ ಆಜೆಯ ಸಣ್ಣ ಹಳ್ಳದಲ್ಲಿ ಸಾವಿರಾರು ಉಂಡ ಎಲೆಗಳು ಬಿದ್ದುದನ್ನು ಕಂಡರು. ಆ ದೃಶ್ಯ ಕಂಡೊಡನೆಯೇ.... ಇದೇ ಈ ಹುಚ್ಚಯೋಗಿ.... ಆ ಜಂಗಮರಿಗೆಲ್ಲಾ ಹೊಟ್ಟೆ ತುಂಬ ಉಣಿಸಿ ಕಳಿಸಿದ್ದಾನೆಂಬ ಸೂಚನೆ ಹೊಳೆದು.... ಎಲ್ಲರೂ ಕರಕರ ಹಲ್ಲು ಮಸೆಯುತ್ತ ಶಿವ

ಯೋಗಿಯ ಬಳಿಗೆ ಮತ್ತೆ ಬಂದಳು. ಕೆಲವರಂತೂ ಒಂದೇ ಏಟಿಗೆ ಶಿವ ಯೋಗಿಯನ್ನು ಹಾರಿಸಿಯೇ ಬಿಡಬೇಕೆಂದು ಖಡ್ಗಹಿರಿದು ಬಂದರು. ಅವರನ್ನು ಸೇನಾನಾಯಕ ಕೆಲಕಾಲ ತಡೆದು ಮತ್ತೆ ಗದರಿ ಹೇಳಿದ—

'ಏ ಹುಚ್ಚಾ.... ನೀ ಹುಚ್ಚಲ್ಲಾ.... ಬ್ಯಾರೆ ಏನೋ ಆದೀದಿ.... ಏನರೆ ಇರುವಲ್ಲ್ಯಾಕ.... ಆ ಮೂರುಸಾವಿರ ಜಂಗಮ್ರು ತಾಳೋಲಿ ಗಂಟು ಎಲ್ಲಿಟ್ರು.... ಯಾ ಕಡೆ ಹೋದ್ರು.... ಹೇಳು....'

ಶಿವಯೋಗಿಗಳು ಅವರಿಗೆ ಉಣಕಲ್ಲ ಗುಡ್ಡದ ಕಡೆಗೆ ಬೆರಳು ತೋರಿಸಿ ಹೇಳಿದರು—

'ಅಕಾ.... ಅಲ್ಲೆ ನೋಡ್ರಿ...., ಆ ಉಣಕಲ್ಲ ಗುಡ್ಡಾಹತ್ತಿ ಅತ್ಲಾಗ ಇಳದ ಹೋದ್ರು....'

ಆಶ್ಚರ್ಯವೆಂದರೆ ಆ ಗುಡ್ಡದಮೇಲೆ ದೂರದಿಂದಲೆ ಶರಣಸೈನ್ಯದ ಅನೇಕ ಶಿಬಿರದ ಮನೆಗಳು ಕಂಡವು! ಈ ಸೈನಿಕರೆಲ್ಲಾ ವೈರಿಗಳು ಇಷ್ಟರಲ್ಲೇ ಸಿಕ್ಕರೆಂದು ಹಿಗ್ಗಿಬಿಟ್ಟರು. ಹೂಬಳ್ಳಿಯ ರುದ್ರಪ್ಪ ಶಟ್ಟರು ಮಾಡಿದ ಮೋಸ ಅವರಿಗೆ ಎಲ್ಲಿ ಗೊತ್ತಾಗಬೇಕು?

ಈಗ ನಾಯಕ ಗುಡುಗಿದ—

'ಹೂಂ.... ಈ ಹುಚ್ಚ ನಮ್ಮ ವೈರಿಗಳನ್ನು ಉಣಿಸಿ ಕಳಿಸಿದ್ದಾನೆ.... ಅಂದಮ್ಯಾಲ ಇವನೂ ವೈರಿ.... ಹೂಂ.... ಕೊಲ್ಲರಿ ಇವನನ್ನು....'

ಕೊಲ್ಲಲೆಂದು ಆ ಕೋಣದ ಬಣ್ಣದ ಸೈನಿಕ ಖಡ್ಗ ಝಳಪಿಸಿ ಯೋಗಿಯ ರುಂಡದ ಕಡೆಗೆ ಒಮ್ಮೆ ಬಲವಾಗಿ ಬೀಸಿದ. ಇನ್ನೊಮ್ಮೆ ಬೀಸಿದಾಗ ರುಂಡವೇ ಬೀಳಬೇಕು. ಅಷ್ಟರಲ್ಲಿ ಆ ಸೇನಾನಾಯಕ ಅವನನ್ನು ತಡೆದು ಹೇಳಿದ—

ತಡೀಪಾ ... ತಡೀ.... ಮೊದ್ಲು ಆ ತಾಳೋಲೆ ಗ್ರಂಥ ಎಲ್ಲೆದಾವ ಕೇಳು....'

ಶಿವಯೋಗಿಗಳು ಅಲ್ಲಿ ಬಿದ್ದಿದ್ದ ಖಾಲಿ ತಾಳೋಲೆಗಳ ಪುಡಿ ಓಲೆಗಳನ್ನು ತೋರಿಸಿ—

'ಒಳಗ ನಮ್ಮ ಗವ್ಯಾಗ ಆದಾವು....ಬೇಕಾದ್ರ ತೊಗೋಳ್ರಿ....'

ಸೇನಾಪತಿ ಗುಡುಗಿದ—

ನೀನೂ ತೊಗೊಂಡು ಬಾ.... ಹೋಗು.... ಹೋಗು....'

ಶಿವಯೋಗಿ ಗವಿಯಲ್ಲಿ ಇಳಿದು ಹೋದ, ಗವಿಯ ಬಾಗಿಲಿಗೆ ಅಡ್ಡಲಾಗಿ ಆ ಹೆಣ್ಣು ಚಿಗರೆ 'ಮಾಯಾ ಕುಳಿತುಕೊಂಡಿತು. ಅದರ ಮುಂದೆಶಿವಯೋಗಿಯ ರಕ್ಷಣೆಗೆಂದು ಭೈರವರುದ್ರ ನಿಂತ. ಒಳಗೆ ಹೋದ ಶಿವಯೋಗಿ ಹೊರಗೆ ಬರಲೇ ಇಲ್ಲ. ಇವರೆಲ್ಲಾ ಕೂಗಿಯೇ ಕೂಗಿದರು. ಆದರೆ ಶಿವಯೋಗಿ ಬರಲಿಲ್ಲ. ಈಗ ಸೇನಾಪತಿ ಭೈರವರುದ್ರನಿಗೆ ಗುಡು- ಗಿದ—

ಹೂಂ... ಹೋಗು.... ಎಳೆದು ತಾ ಆ ಮುದುಕನನ್ನು....'

ಭೈರವರುದ್ರ ಹಲ್ಲು ಕಿರಿದು ಹೇಳಿದ—

'ಮದಾಂಧಾ.... ಆ ಮಹರ್ಷಿಯನ್ನು ಸಿಕ್ಕಂತೆ ನುಡಿದರೆ ಸುಟ್ಟು ಹೋದೀಯಾ.... ಎಚ್ಚರಿಕೆ....'

ಹಾಂ.... ಎನ್ನುವಷ್ಟರಲ್ಲಿ ಸೇನಾಪತಿ ಖಡ್ಗ ಬೀಸಿದ. ಭೈರವ ರುದ್ರನ ತಲೆಯಲ್ಲಿ ಆಳವಾದ ಪ್ರಾಣಾಂತಿಕ ಘಾಯವಾಗಿ ಭೂಮಿಗೆ ಬಿದ್ದ ದೇಹವೆಲ್ಲಾ ವಿಲಿವಿಲಿ ಒದ್ದಾಡಿ.... ಶಿವಯೋಗಿ ಶಿವಯೋಗಿ ಶರಣ ಧರ್ಮ ಬಾಳಲಿ ತಂದೇ.... ಮೂರು ಸಾವಿರ ವಿರಕ್ತರು ನಿಂದು ಹೋದ ಈ ಸ್ಥಳ ನಿನ್ನ ಧರ್ಮಕೇಂದ್ರವಾಗಿ ಬಾಳಲಿ ತಂದೇ.... ಎಂದು ಪ್ರಾರ್ಥಿ ಸುತ್ತ ಪ್ರಾಣಬಿಟ್ಟ! ಆ ಹೆಣ್ಣು ಚಿಗರಿ 'ಮಾಯಾ' ಕಂಬನಿ ಸುರಿಸುತ್ತ ಅವನ ಪಕ್ಕದಲ್ಲಿಯೇ ನಿಂತಿತು. ಮರುಕ್ಷಣದಲ್ಲಿ ಮತ್ತೊಂದು ಖಡ್ಗದ ಏಟು ಚಿಗರಿಯ ರುಂಡ ಹಾರಿಸಿತು! 'ಮಾಯಾ' ಹರಿಣಿ ಮಹಾ

ಸಂಕಟದಿಂದ ಕೈಕಾಲು ಬಡಿದು ಶಿವಯೋಗಿಯ ಬಾಗಿಲಲ್ಲಿ ಶಿವಾರ್ಪಿತಳೂ ಪ್ರಾಣಾರ್ಪಿತಳೂ ಆಗಿ ಕೊನೆಗೊಮ್ಮೆ ಚಿರಶಾಂತಿಯಲ್ಲಿ ತೇಲಿಹೋದಳು!!

ಸೇನಾಪತಿ ಹಾಗೂ ಆ ಕೋಣನ ಬಣ್ಣದ ಕ್ರೂರ ಸೈನಿಕ; ಇಬ್ಬರೂ ತಮ್ಮ ಆ ರಕ್ತಸಿಕ್ತ ಖಡ್ಗಚಾಚಿ, ಚೀರುತ್ತ ಗವಿಯಲ್ಲಿ ನುಗ್ಗಿದರು. ಗವಿಯ ಆಳಕ್ಕೆ ಧುಮುಕಿದರು. ಕೆಲಕ್ಷಣದಲ್ಲೇ ಚೀರುತ್ತ ಹೊರಗೋಡಿ ಬಂದರು. ಸೇನಾಪತಿಯ ಗಲ್ಲದ ಮೇಲೆ ಸರ್ಪ ಕಚ್ಚಿದೆ! ಇನ್ನೊಬ್ಬನ ಕೊರಳಿಗೆ ಸರ್ಪ ಕಚ್ಚಿದೆ. ಸೈನಿಕರು ಹಾಹಾಕಾರ ಮಾಡುತ್ತಿದ್ದಂತೆ ಬಾಯಲ್ಲಿ ಬುರುಗು ತುಂಬಿ ಪ್ರಜ್ಞಾಶೂನ್ಯರಾಗಿ ಇಬ್ಬರೂ ನೆಲಕ್ಕೆ ಉರುಳಿದರು, ಸೈನಿಕರೆಲ್ಲಾ ರೊಚ್ಚಿಗೆದ್ದು ಕೂಗಿದರು—

'ಸುಡಿರಿ.... ಸುಡಿರಿ.... ಗವಿಯನ್ನೇ ಸುಡಿರಿ.... ಒಳಗೆ ತಾಳೋಲೆ ಗಂಟುಗಳೂ ಸುಡುತ್ತವೆ.... ಆ ಹುಚ್ಚನೂ ಸುಡುತ್ತಾನೆ... ಹೂಂ.... ಗವಿಗೇ ಬೆಂಕಿ ಹಚ್ಚಿಬಿಡಿರಿ....'

ಉಸಿರು ಬಿಡುವಷ್ಟರಲ್ಲಿ ದಾಸೋಹ ಮಂದಿರದ ನೂರಾರು ಒಣಗಿದ ಬಡ್ಡಿಗಳನ್ನು ತಂದು; ಗವಿಯ ಆಳದಲ್ಲಿ ದೊಡ್ಡ ದೊಡ್ಡ ಬಡ್ಡೆಗಳನ್ನು ತೂರಿ ಒಗೆದರು. ಬಡ್ಡಿಗಳಿಂದ ಗವಿ ತುಂಬಿತು. ನಂತರ ಸಾಕಷ್ಟು ಬಡ್ಡಿಗಳನ್ನು ಒಟ್ಟಿ ಗವಿಯನ್ನೇ ಮುಚ್ಚಿಬಿಟ್ಟರು. ಕೆಲವರು ಅದೇ ದಾಸೋಹ ಮಂದಿರದಿಂದ ಎಣ್ಣೆ ತಂದು ಕಟ್ಟಿಗೆಗೆ ಸುರುವಿದರು, ದೀವಟಿಗೆ ಒಗೆದರು. ಧಣಧಣಾ ಉರಿ ಎದ್ದಿತು, ಇಡೀ ಆಶ್ರಮವೇ ಸುಡತೊಡಗಿತು. ಸರೋವರದ ನೀರು ಕೂಡಾ ಕಾಯತೊಡಗಿತು.

• • •

ಸೈನಿಕರೆಲ್ಲಾ ಕೇಕೆ ಹಾಕುತ್ತ ಚೀರುತ್ತ ಅಬ್ಬರಿಸುತ್ತ ಉತ್ತರದ ಉಣಕಲ್ಲ ಗುಡ್ಡದ ಕಡೆಗೆ ನುಗ್ಗಿ ಹೋದರು!

ಮರುದಿನ ಮಹಾದುಃಖಿಗಳಾದ ಹೂಬಳ್ಳಿಯ ಜನ ಅಳುತ್ತ ಕರೆಯುತ್ತ ಗವಿಗೆ ಬಂದರು. ನೋಡುತ್ತಾರೆ ಗವಿಯೆಲ್ಲಾ ಸುಟ್ಟು ಹೋಗಿದೆ. ಗವಿಯ ಕಲ್ಲುಗಳು ಕೂಡ ಬೆಂಕಿಯ ತಾಪಕ್ಕೆ ಒಡೆದು ಸಿಡಿದು ಹೋಗಿವೆ. ರುದ್ರಪ್ಪಶಟ್ಟರು ಗವಿಯ ಬೆಂದು ಉಳಿದ ಕಿಚ್ಚನ್ನು ಕೆಬರಲು ಮುಂದೆ ಹೋದರು. ಊರಜನರು ಅವರನ್ನು ಸರಿಸಿ ತಾವೇ ಮುಂದೆ ಬಂದು ಭರಭರ ಕಿಚ್ಚು ಕೆಬರಿದರು. ಸರೋವರದ ನೀರು ತಂದು ಸುರಿದರು. ಓಲಿಮಠದಿಂದ ಗಂಗಾಧರಯೋಗಿಗಳು ಬಂದು ಕಷ್ಟದ ಶೇರು ನಿಂತಂತೆ; ವೇದನೆಯನ್ನು ನುಂಗಿದ ಶಿವಯೋಗಿಯಾಗಿ ನಿಂತರು. ಏಕಕಂಠದಿಂದ ಎಲ್ಲರೂ—

'ಶಿವಯೋಗಿ.... ಶಿವಯೋಗಿ.... ಅಗ್ನಿಗೆ ಆಹುತಿಯಾದೆಯಾ.... ತಂದೇ.... ತಂದೇ.... ಕೊನೆಗೂ ವಚನದ ಕಟ್ಟುಗಳನ್ನು ರಕ್ಷಿಸಲು ಅಗ್ನಿಗೆ ಬಲಿಯಾದೆಯಾ....'

ಎಂದು ಕೂಗಿ ಕೂಗಿ ಅಳತೊಡಗಿದರು.

ಕೆಲಕ್ಷಣದಲ್ಲಿಯೇ ಆ ಗವಿಯ ಭೂಗತ ಕಲ್ಲುಗಳು ಉರುಳಿ ಬಿದ್ದಂತಾಗಿ.. ಏನೋ ಚಲನೆ ಕಂಡಂತಾಯಿತು. ಮರುಕ್ಷಣದಲ್ಲಿ ಒಳಗಿನಿಂದ ದೊಡ್ಡ ಸಪ್ಪಳವಾದಂತಾಯಿತು. ಎಲ್ಲರೂ ನೋಡುತ್ತಾರೆ.... ಶಿವಶಿವಾ.... ಶಿವಶಿವಾ.... ಇದೇನು ವಿಚಿತ್ರ.... ಕುಲುಕುಲು ನಗುತ್ತ.... ಲೀಲಾವಿನೋದವಮಾಡುತ್ತ.... ಕೈಯಿಂದ ಲಟಿಗೆ ಹೊಡೆಯುತ್ತ.... ಏನೂ ನಡೆದಿಲ್ಲವೇನೋ ಎಂಬಂತೆ ಆ ಗುರುಸಿದ್ಧೇಂದ್ರಶಿವಯೋಗಿ ಸಹಜವಾಗಿ ಹೊರಬರುತ್ತ; ಬಾಯ್ದೆರೆದು ಆಶ್ಚರ್ಯಚಕಿತರಾಗಿ ನಿಂತ ಜನರಿಗೆ ತಾನೇ ಕೇಳಿದ—

'ಯಾಕ್ರಿಪಾ....ಯಾಕಽ ಅಂಜೀರಿ.... ಯಾಕ.... ಏನಾತು....?'

ಈ ಮಾತು ಕೇಳಿ ಎಲ್ಲರೂ ಮತ್ತಷ್ಟು ಅಂಜಿ ಥರಥರ ನಡುಗಿ ಬಿಟ್ಟರು! ಕೆಲವರಂತೂ ನಿಂತಲ್ಲೆ ಮೂರ್ಛೆ ಹೋದರು!!

೧೬

ದಿನಗಳು ಜಾರಿದವು. ಶಾಂತಿ ಸೋಬಾನ ಹಾಡಿತು. ಪ್ರಕೃತಿ ಮತ್ತೆ ಅವರ್ಣನೀಯ ಚಲುವಿನಿಂದ ತುಂಬಿದ ಗರ್ಭಿಣಿಯಾಯಿತು. ಶಾಂತಸರೋವರ ಜೇನಹೊಂಡವಾಯಿತು. ಕಮಲಗಳು ಕುಣಿದಾಡಿದವು ಪಕ್ಷಿಗಳು ಗಗನದಿಂದ ಗಗನಕ್ಕೆ ಗಾನದ ಜೋಕಾಲಿ ತೂಗಿದವು. ಋತುಗಳು ಋತುಮತಿಯಾದವು. ನೆಲದ ತುಂಬಾ ಹೂಬಳ್ಳಿಯ ಹೂವುಗಳು ಅರಿಷಿಣ ಕುಂಕುಮದ ಹುಡಿಚಲ್ಲಿ ಮಘಮಘಿಸಿದವು. ಹೆಣ್ಣುಗಳಲ್ಲಿ ಹೆಣ್ತನ ತುಂಬಿತು. ಪುರುಷರಲ್ಲಿ ಪೌರುಷ ಸಪ್ತವರ್ಣ ಕಾಮನ ಬಿಲ್ಲಿನ ಠೇಂಕಾರ ಮಾಡಿತು. ಜೀವನ ಜೀವಂತ ಸುಂದರವಾಗಿ ಎದೆಯಿಂದ ಎದೆಗೆ ಮುದ ತುಂಬಿ ಕಲ್ಲು ಸಕ್ಕರೆ ಹಂಚಿತು. ಎಲ್ಲವೂ ಶಿವನ ಜೋಕಾಲಿ. ಎಲ್ಲೆಲ್ಲೂ ಶಿವನ ಸೋಬಾನ. ಎಲ್ಲೆಲ್ಲೂ ಶಿವನ ತೊಟ್ಟಿಲು.... ಬಟ್ಟಲು. ಬಾಳುಬೀಗಿತು. ಶಿವಯೋಗಿಯ ಕರುಣೆಯಿಂದ ಕಿಣ್ಣೇರಿನ ದಿಬ್ಬದ ಮೇಲೆ ಗುಲಾಬಿಯ ಹೂವುಗಳು ಅರಳಿ ನಿಂತವು. ಬೆಂಕಿ ಆರಿತು. ಚುಂಬನ ಚುಂಬಿಸಿತು. ಓ.... ಕಾಣ್.... ಕೇಳ್.... ಇದೆ ಇದೇ ಜೀವನಂ.... ಶಿವಂ.... ಸುಂದರಂ.... ಪರಿಪೂರ್ಣಂ....

• • •

ಶಿವಯೋಗಿಯನ್ನು ನಂಬಿದರೆ ಕಲ್ಲು ಬೆಣ್ಣೆಯಾದೀತು. ಮಣ್ಣು ಹೊನ್ನಾದೀತು. ಕಷ್ಟಗಳ ಕಂಬನಿಗಳು ಮುತ್ತಿನ ಕಾಳಾಗಿ ಪಳಪಳ ಬಿದ್ದಾವು. ಕೂಗಿದರೆ ಓಗೊಡಲು ಒಂಟಿಗಾಲಿನ ಮೇಲೆ ನಮಗಾಗಿ ನಿಂತಿದ್ದಾನೆ. ಈ ಶಿವಯೋಗಿ. ಲೋಕಕಲ್ಯಾಣಾರ್ಥವಾಗಿ ಮನೆ ಮನೆಯಲ್ಲಿ ತುಪ್ಪದ ನಂದಾದೀವಿಗೆ ಬೆಳಗಿಸಲು ಸಿದ್ಧವಾಗಿದ್ದಾನೆ ಈ ಪ್ರಭುದೇವ. ಇವನಿಗೆ ದುಡ್ಡು ಬೇಡ. ದೌಲತ್ತು ಬೇಡ. ನಗಾರಿ ಬೇಡ ನೌಬತ್ತು ಬೇಡ ಜೈಜೈಕಾರ ಬೇಡ. ಬಂಗಾರ ಸಿಂಗಾರ ಬೇಡ ಇವನಿಗೆ. ಬೇಕು ಕೇವಲ ಎರಡು ಹನಿ ಕಣ್ಣೀರು. ನಿರ್ಮಲಾಂತಃಕರಣದಿಂದ ಎದೆ ಕೂಸಾಗಿ.... ತಂದೇ.... ಎಂದು ಎರಡು ಕಣ್ಣೀರಿನ ಹನಿ ಇವನ ಪಾದಕ್ಕೆ ಸುರಿದಾಗ....ಓ....ಓ.... ಎನ್ನ ಕಂದಾ.... ಓ ಎನ್ನ ಮುದ್ದು ಕಂದಾ.... ಓ ಬಂದೆ ... ಓ ಬಂದೆ.... ಬಂದೆ.... ಬಂದೆ.... ಓ ಎನ್ನ ಚಿನ್ನಾ.... ನಿನಗಾಗಿ ಬಂದೆ.... ಎಂದು ಕೂಗಿ ಬರುತ್ತಾನೆ. ಇಗೋ.... ಒಮ್ಮೆ ಕೂಗಿರಿ.... ಮಗುವಾಗಿ ಕೂಗಿರಿ.... ತಾಯಿಯಾಗಿ ಬರುವ.... ಮೊಲೆಯೂಡಿ ಹಾಡುವ.... ತೊಟ್ಟಿಲು ತೂಗುವ.... ಇಗೋ.... ಒಮ್ಮೆ.... ಒಮ್ಮೆ ಮಾತ್ರ ಕೂಗಿರಿ....

ಓ ಯೋಗಿ.... ಶಿವಯೋಗಿ.... ಗುರುಸಿದ್ಧ ಶಿವಯೋಗಿ.... ತಂದೇ....

* • •

ಶಿವಶಿವಾ....

ಇಂಥ ಶಿವಯೋಗಿಯ ಬಾಳಿನಲ್ಲೂ ಕೊನೆಯದಿನ ಬಂತು! ಶಿವಶಿವಾ.... ಬರಬಾರದಾಗಿತ್ತು.... ಬರಬಾರದಾಗಿತ್ತು....ಆದರೆ.... ಕೊನೆಗೊಮ್ಮೆ ಬಂತು ಕೊನೆಯ ದಿನ....

ಅಲ್ಲಲ್ಲ.... ತಪ್ಪು ತಪ್ಪು.... ಕೊನೆ ಇಲ್ಲದ ಶಿವಯೋಗಿಗೆ ಕೊನೆ ಎಲ್ಲಿ? ಶಿವಯೋಗಿಗೆ ಸಾವುಂಟೆ? ಶರಣನಿಗೆ ಅವಸಾನ ಉಂಟೆ?.... ಶಿವಶಿವಾ.... ಆದರೂ ಕಳ್ಳು ಕೇಳುತ್ತಿಲ್ಲವಲ್ಲ....! ನಮ್ಮೆಲ್ಲರ ಶಿವಯೊಗಿ ಇನ್ನಿಲ್ಲವೆಂದು ಹೇಗೆ ಹೇಳೋಣ?.... ನಮ್ಮ ಕಣ್ಣುಗಳು ಇನ್ನು ಆ ಪುಣ್ಯಾತ್ಮನನ್ನು ಕಾಣಲಾರವು ಎಂದು ಹೇಗೆ ನಂಬೋಣ?.... ಓ ಕಂಬನಿಗಳೆ ನಿಲ್ಲಿ ನಿಲ್ಲಿ.... ಓ ಎದೆಯಾಳದ ಕರುಳ ಜೋಕಾಲಿಗಳೆ ನಿಲ್ಲಿ ನಿಲ್ಲಿ.... ಓ ಆತ್ಮ ಜೀವನ ಸಂಗಾತಿಗಳೆ ಅಳಬೇಡಿ.... ಅಳಬೇಡಿ....

* * *

ಶ್ರಾವಣ ಮಾಸದ ಮೂರನೆಯ ಸೋಮವಾರ! ಶಿವಯೋಗಿಗಳು ಸೂರ್ಯೋದಯದ ಕಾಲಕ್ಕೆ ಓಲಿಮಠದಿಂದ ಗಂಗಾಧರ ಯೋಗಿಗಳನ್ನೂ ಹಾಗೂ ಹೊಬಳ್ಳಿಯಿಂದ ರುದ್ರಪ್ಪ ಶಟ್ಟರನ್ನೂ ಕರೆಸಿ ಹೇಳಿದರು—

'ಗಂಗಾಧರ ಯೋಗಿ.... ಮೂರುಸಾವಿರ ಜಂಗಮರು ನೆಲೆನಿಂತ ಈ ಕ್ಷೇತ್ರವೇ ಮಹಾಮಠ... ಕಲ್ಯಾಣದ ವಚನಶಕ್ತಿಯನ್ನೂ ಶರಣ ಜ್ಯೋತಿಯನ್ನೂ ಹೊಬಳ್ಳಿಗೆ ತುಂಬಿ ತಂದ ಮೂರುಸಾವಿರಮಠ.... ಈ ಕ್ಷೇತ್ರದಲ್ಲಿ ತಲೆಮಣಿದವರಿಗೆ ಒಂದಕ್ಕೆ ಮೂರುಸಾವಿರಪಟ್ಟು ಸಿದ್ಧಿ....'

ಗಂಗಾಧರಯೋಗಿ ಕೈಮುಗಿದ—

‹ಗುರುದೇವಾ ... ನಿಮ್ಮ ವಾಣಿ ಮಂತ್ರ .. ಮಹಾಮಂತ್ರ...’

‹ಹಾಗಿದ್ದರೆ ನಮ್ಮ ಕೊನೆಯ ಸಂದೇಶವನ್ನು ನಡೆಸಿ ಕೊಡುವೆಯಾ ಗಂಗಾಧರಾ?’

‹ಕೊನೆಯ ಸಂದೇಶ?’

‹ಹೌದು....’

‹ಏನು ತಂದೆ?’

‹ಕೇಳು ಗಂಗಾಧರಾ.... ಈ ಮಹಾಕ್ಷೇತ್ರ ಶರಣಸಿದ್ಧಾಂತದ ಕರ್ಮೋದ್ಯೋಗಭೂಮಿಯಾಗಲಿ.... ಶರಣರ ವಚನಗಳ ಮಹಾವಾಣಿಯ ಪ್ರಯೋಗಶಾಲೆಯಾಗಲಿ.... ಲೋಕಶಾಂತಿಯ ವಿಶ್ವಶಾಂತಿಯ ಸರ್ವ ಧರ್ಮ ಸಮಾನತೆಯ ಸಾಕ್ಷಿಯಾಗಿ ಬಾಳಲಿ....’

‘ಅಪ್ಪಣೆ.... ಅಪ್ಪಣೆ.... ಅಪ್ಪಣೆ ಮಹಾಪ್ರಭೂ....’

ಈಗ ಶಿವಯೋಗಿಗಳು ರುದ್ರಪ್ಪಶಟ್ಟರಿಗೆ ಆಜ್ಞಾಪಿಸಿದರು—

‹ರುದ್ರಪ್ಪಶಟ್ಟರೇ.... ಕೇಳುತ್ತೀರಾ ನಮ್ಮ ಆಜ್ಞೆಯನ್ನು?’

.ಏನು ಪ್ರಭು?’

‹ಈ ಆಶ್ರಮ.... ಈ ಅರಣ್ಯ.... ಮುಂದೆ ಸಂಪತ್ತು ಕಾಲುಕಸವಾಗಿ ಬಿದ್ದ ಮಹಾನಗರವಾದೀತು.... ಆದರೆ ಎಚ್ಚರಿಕೆ.... ಧನವು ದನವಾಗಬಾರದು.... ಶಿವಯೋಗಿಯ ಧರ್ಮ ಕಾರ್ಯಕ್ಕೆ ಶಿವಾರ್ಪಿತವಾಗತಕ್ಕದ್ದು.... ಅದಕ್ಕೆ ಒಂದಕ್ಕೆ ಮೂರು.... ಮೂರಕ್ಕೆ ಮೂರುಸಾವಿರ...’

‹ಆಗಲಿ ತಂದೆ.... ಅಪ್ಪಣೆ.... ಅಪ್ಪಣೆ.... ಮಹಾಕೃಪೆ....’

‹ಕೇಳಿರಿ... ಕೇಳು ಗಂಗಾಧರಾ.... ಕೇಳಿರಿ ಶಟ್ಟರೆ.... ಮುಂದಿನವಾರ.... ಕಡೆಯ ಶ್ರಾವಣ ಸೋಮವಾರ.... ನಾವು ಇದೇ ಗವಿಯಲ್ಲಿ ಮಹಾಸಮಾಧಿಯಲ್ಲಿ ಸೇರಿ ಹೋಗಲು ನಿರ್ಧರಿಸಿದ್ದೇವೆ...’

ಇಬ್ಬರೂ ಚೀರಿದರು—

'ತಂದೇೕ....'

'ಎಚ್ಚರಿಕೆ.... ಯಾರಿಗೂ ಸುದ್ದಿ ಹಬ್ಬಿಸಬೇಡಿರಿ.... ಇಲ್ಲವಾದರೆ ಜನ ಅಲ್ಲೋಲ ಕಲ್ಲೋಲವಾಗಿ ಬಂದು ಆತಂಕ ತಂದಾರು.... ನಾವು ಶಾಂತವಾಗಿ ಮಹಾಸಮಾಧಿಯಲ್ಲಿ ಸೇರಬಯಸಿದ್ದೇವೆ....'

'ತಂದೇೕ....'

'ಹೌದು.... ಹೌದಪಾ ಗಂಗಾಧರಾ ಹೌದಪಾ ರುದ್ರಪ್ಪಾ.... ಶಿವಾ ಕರ್ಕ್ಯಾಕತ್ತಾನು.... ಈ ಸಂಸಾರಾ ಸಾಕು ಅನ್ನಾಕತ್ತಾನು.... ಸಾಕಪಾ.... ಸಾಕು ..'

'ತಂದೇ.... ಬೇಡ.... ಬೇಡ....'

'ಏನು ಗಂಗಾಧರಾ... ನೀನು ಯೋಗಿ.... ಶಿವಯೋಗಿ.... ಶಿವನ ಅಪ್ಪಣೆಗೆ ಬೇಡೆನ್ನಕೂಡದು....'

'ಲೋಕನಾಯಕ ಗುರುಗಳೆ?'

'ನನಗೆ ಕೊಟ್ಟ ಕಾಯಕ ಮುಗಿಯಿತು.... ಇನ್ನು ನಿನ್ನ ಕಾಯಕ.... ವಚನಗಳ ಪರಿಪಾಲನೆ.... ಮುಂದಿನ ಸೋಮವಾರ ನೀವಿಬ್ಬರೂ ಬೆಳಗಿನ ಸೂರ್ಯೋದಯದ ಜಾವದಲ್ಲಿ ಇಲ್ಲಿ ಬರತಕ್ಕದ್ದು.... ಯಾರಿಗೂ ಸುದ್ದಿ ಹೇಳತಕ್ಕದ್ದಲ್ಲ.... ಹಾಂ.... ಕರೆಯಿರಿ ಆ ಶಿವಪ್ಪನನ್ನು....'

ಶರಣ ಶಿವಪ್ಪ ಅಂಜುತ್ತ ಬಂದು ಸಾಷ್ಟಾಂಗ ಹಾಕಿದ. ಶಿವಯೋಗಿಗಳು ಅವನಿಗೆ ಆಜ್ಞೆ ಮಾಡಿದರು—

ಶಿವಪ್ಪಾ.... ನಮ್ಮ ಆಜ್ಞೆಯನ್ನು ಕೇಳುತ್ತೀಯಾ?'

ಶಿವಪ್ಪ ನಡೆದ ಪ್ರಸಂಗದ ಅರ್ಥವಾಗದೆ ದಂಗಾಗಿ ಕೇಳಿದ—

'ಇದೇನು ಬುದ್ಧೀ.... ಹೀಗೇಕೆನ್ನುವಿರಿ.... ಕೇಳುತ್ತೇನೆ ಕೇಳುತ್ತೇನೆ....'

ಶಿವಯೋಗಿಗಳು ಮತ್ತೂ ಉಗ್ರವಾಗಿ ಬೆಂಕಿಯೇ ಮಾತಾಡಿದಂತೆ ಕೇಳಿದರು—

'ಊಹುಂ.... ಬರೇ ಕೇಳುತ್ತೇನೆಂದು ನುಡಿದರೆ ಆಗದು.... ಆಣೆ ಮಾಡು.... ಪ್ರಮಾಣ ಮಾಡು....'

'ಓಹೋ ... ಆಣೆ .. ಆಣೆ.... ನಿಮ್ಮ ಪಾದದ ಆಣೆ ಬುದ್ಧಿ.... ನನ್ನ ಎದೆಯ ಲಿಂಗಯ್ಯನ ಆಣೆ.... ಏನು ಆಜ್ಞೆ ಕೊಡಿರಿ.... ರುಂಡ ಕೊಡೂ ಎಂದರೆ ಕೊಡುವೆ.... ಸಿಡಿಲು ನುಂಗೆಂದರೆ ಸಿಡಿಲು ನುಂಗುವೆ.... ಒಪ್ಪಿದ್ದೇನೆ.... ಸಿದ್ಧನಾಗಿ ನಿಂತಿದ್ದೇನೆ ನಿಮ್ಮ ನಂಬಿಗೆಯ ಸೇವಕ.... ಹೇಳಿರಿ.... ಹೇಳಿರಿ.... ಹೇಳಿರಿ ತಂದೇ....'

'ಹಾಗಾದರೆ ಕೇಳು ಶರಣಾ.... ಬರುವ ಸೋಮವಾರ.... ಆ ದಿನ ಬೆಳಗ್ಗೆ ನೀನು ನಮ್ಮ ಗವಿಯ ಬಾಗಿಲಲ್ಲಿ ಕಲ್ಲುಮಣ್ಣು ನೀರಿನೊಂದಿಗೆ ಸಿದ್ಧನಾಗಿ ನಿಂತಿರಬೇಕು....'

'ಏಕೆ ಬುದ್ಧೀ....'

'ಕೇಳು.... ನಾವು ಆ ದಿನ ಬೆಳಗಿನ ಶಿವಾರ್ಚನೆಯಲ್ಲಿ ನಮ್ಮ ಯೋಗ ಗುಹೆಯಲ್ಲಿ ಕೊನೆಯ ಬಾರಿಗೆ ಸಮಾಧಿಸ್ಥರಾಗಿ ಕೂತುಬಿಡುತ್ತೇವೆ.... ಆಗ ನೀನು ನಮ್ಮ ಗವಿಯಬಾಗಿಲವನ್ನು ಭದ್ರವಾಗಿ ಕಲ್ಲುಮಣ್ಣಿನಿಂದ ಗೋಡೆಕಟ್ಟಿ ಮುಚ್ಚಿಬಿಡಬೇಕು—'

ಶರಣ ಶಿವಪ್ಪ ಬ್ರಹ್ಮಾಂಡಕ್ಕೇ ಕೇಳುವಂತೆ ಚಿಟ್ಟನೇ ಚೀರಿ ಎದೆಹರಿದು ನೆಲದ ತುಂಬಾ ಗಡಗಡ ಉರುಳಾಡಿ, ಕಲ್ಲುಕಲ್ಲಿಗೆ ತಲೆಹಾದು, ಕೂಗಿ ಹೇಳಿದ—

'ಅಯ್ಯೋ.... ಶಿವಶಿವಾ.... ಶಿವಶಿವಾ.... ಮೋಸ ಮಾಡಿದಿರಿ.... ತಂದೇ ನನ್ನನ್ನು ಮೋಸ ಮಾಡಿದಿರಿ.... ಮೊದಲು ಆಣೆ ಮಾಡಿಸಿಕೊಂಡು ಭಯಂಕರ ಕಾರ್ಯಕ್ಕೆ ನೂಕಿದಿರಾ ನನ್ನನ್ನು.... ಇದೇನು ತಂದೇ.... ನೀವು ಹೀಗೆ ಮಾಡುವದೇ.... ಶಿವಶಿವಾ.... ಸಿಡಿಲು ನುಂಗಬಲ್ಲೆ.... ರುಂಡ

ಕಿತ್ತು ಕೊಡಬಲ್ಲೆ.... ಆದರೆ ನಿಮ್ಮ ಸಮಾಧಿಗೆ ಕಲ್ಲೇರಿಸುವ ಈ ಕಾರ್ಯ ಘೋರ.... ಘನಘೋರ.... ಕೋಟಿ ಕೋಟಿ ಮಡಿ ಘೋರ.... ಮೋಸ ಮಾಡಿದಿರಾ.... ತಂದೇ.... ಇಂದು ನನಗೆ ನೀವೇ ಮೋಸ ಮಾಡಿದಿರಾ....? ಬೇಡ ನನ್ನಪ್ಪಾ.... ನಿಮ್ಮ ಉಡಿಯ ತಬ್ಬಲಿಯು ಕೂಸಾಗಿ ಬೇಡಿಕೊಳ್ಳುತ್ತೇನೆ ... ನೀವು ಸಾಕಿದ ಕಂದವ್ವೆಯಾಗಿ ಎದೆಹರಿದು ಕೇಳಿಕೊಳ್ಳುತ್ತೇನೆ.... ಬೇಡ ತಂದೇ.... ಬೇಡ.... ಈ ಘೋರ ಕಾರ್ಯವನ್ನು ಬೆಸಸಬೇಡಿರಿ.... ದಮ್ಮಯ್ಯಾ.... ದಮ್ಮಯ್ಯಾ....'

ಶಿವಯೋಗಿಗಳು ಗಂಭೀರವಾಗಿ ನುಡಿದರು—

'ನೀನು ನನ್ನ ಶಿಷ್ಯ.... ಗುರುವಿನ ಆಜ್ಞೆ ಕಟ್ಟಾಜ್ಞೆ.... ಆಜ್ಞೆ ಆಜ್ಞೆಯೇ.... ಎಚ್ಚರಿಕೆ.... ನಿನ್ನ ಕರ್ತವ್ಯದಲ್ಲಿ ತಿಲಮಾತ್ರವೂ ತಪ್ಪಿದರೆ ಶಿವನಾಣೆ.... ಶಿವಶರಣರ ಪಾದದಾಣೆ.... ಈ ಕಾರ್ಯ ಯಾರೊಬ್ಬರಿಗೂ ತಿಳಿಯದಂತೆ ಗುಪ್ತವಾಗಿ ತಡೆಯತಕ್ಕದ್ದು....'

ಶರಣಶಿವಪ್ಪ.... ಶಿವಶಿವಾ.... ಶಿವಶಿವಾ ಎಂದು ಮತ್ತೆ ಚೀರಿ ನೆಲಕ್ಕೆ ಕುಸಿದ. ಕಿಚ್ಚು ಬಿದ್ದ ಮಗುವಿನಂತೆ ಕಂಗೆಟ್ಟು ಉರುಳಾಡಿದ. ರುದ್ರಪ್ಪಶೆಟ್ಟರು ಕೂಸಿನಂತೆ ಅಳತೊಡಗಿದರು. ಮಹಾಯೋಗಿ ಗಂಗಾಧರ ಯೋಗೀಂದ್ರ ಗುರುವಾಜ್ಞೆಯ ಸಿಡಿಲುಪರ್ವತವೇರಿ ಸೂರ್ಯಸಿಂಹ ನಿಂತಂತೆ ಮಹಾಗಾಂಭೀರ್ಯದಿಂದ ಶೂನ್ಯಗಗನವನ್ನು ನೋಡುತ್ತ ನಿಂತ.

* * *

ಮೂರನೆಯ ಸೋಮವಾರದ ಸಂಜೆಯ ಸೂರ್ಯ ಮುಳುಗಿದ. ಮಂಗಳವಾರ ಬಂತು. ಬುಧವಾರ ಬಂತು. ಗುರುವಾರ ಬಂತು.

ಗುರುವಾರ ಬೆಳಿಗ್ಗೆ ಶರಣ ಶಿವಪ್ಪನಿಗೆ ದೂರದ ಮಲೆನಾಡಿನ ರಾಜನ ಅರಮನೆಯಲ್ಲಿದ್ದ ತನ್ನ ಮಗಳು ಮಾದೇವಿಯ ನೆನಪಾಯಿತು. ಇಲ್ಲಿ ಶಿವಯೋಗಿ ಹೇಳದೆ ಮಹಾಸಮಾಧಿ ಸೇರಿದರೆ ಅಲ್ಲಿ ಮಗಳು ಎದೆ ಯೊಡೆದು ಪ್ರಾಣ ಬಿಡುವಲ್ಲಿ ಸಂದೇಹವೇ ಇಲ್ಲ. ಮಾದೇವಿಯ ಪ್ರಾಣವೇ ಶಿವಯೋಗಿ. ಕೊನೆಯ ಪಕ್ಷ ಅವಳೊಬ್ಬಳಿಗಾದರೂ ಸುದ್ದಿ ಮುಟ್ಟಿಸು-ವದು ಯೋಗ್ಯವೆಂದು ಶರಣಶಿವಪ್ಪ ಅತ್ಯಂತ ಗುಪ್ತವಾಗಿ ಒಂದು ಓಲೆ ಬರೆಯಿಸಿ; ಒಬ್ಬ ಗಟ್ಟಿಮುಟ್ಟಾದ ದೂತನಿಗೆ ಒಪ್ಪಿಸಿಕೊಟ್ಟು, ಆಶ್ರಮದ ಒಂದು ಸೇವೆಯ ಕುದುರೆಯನ್ನು ಕೊಟ್ಟು ಬೆಳಗಾಗುವಷ್ಟರಲ್ಲಿ ಸುರಪುರದ ರಾಜಧಾನಿಗೆ ಓಡಿಸಿದ. ಆ ದೂತ ಈ ಪ್ರಸಂಗದ ಮಹತ್ವ ತಿಳಿಯ ದಿದ್ದರೂ; ಇದೇನೋ ದೊಡ್ಡ ಸಂಗತಿ ಇರಬೇಕೆಂದು ಊಹಿಸಿ ಭರದಿಂದಲೇ ಕುದುರೆ ಓಡಿಸಿದ.

* * *

ದಿವ್ಯಜ್ಞಾನಿಗಳಾದ ಶಿವಯೋಗಿಗಳಿಗೆ ಈ ಸಂಗತಿ ಗೊತ್ತಾಗದೆ ಇದ್ದೀತೆ? ಇದೇ ದಿನ ಸಂಜೆ ಅವರು ಶರಣ ಶಿವಪ್ಪನನ್ನು ಕರೆದು ಹೇಳಿದರು—

‘ಏನಪ್ಪಾ ಶರಣಾ.... ಅಂತೂ ನನ್ನ ಮಗಳನ್ನು ಕರೆಯಕಳಿಸಿದೆ ಏನಪ್ಪಾ.... ಆಕಿ ಬಂದ್ರ ಮುಗಿದೇ ಹೋತು.... ನನಗ ಸಾವಿರ ಆಣೆ ಪ್ರಮಾಣ ಮಾಡಿ ನನ್ನ ಸಮಾಧಿಯನ್ನು ಸಮಾಧಿ ಮಾಡೇ ಬಿಡ್ತಾಳೆ....’

ಶರಣ ಶಿವಪ್ಪ ತಲೆ ಬಾಗಿ ಕುಳಿತ!

ಯೋಗಿಗಳು ಕುಲುಕುಲು ನಕ್ಕರು—

‘ಬರಲಿ.... ಬರಲಿ.... ಅವಳೂ ಬರಲಿ....’

* * *

ಆಶ್ರಮವೆಲ್ಲಾ ಗಂಭೀರವಾಯಿತು. ರುದ್ರಪ್ಪ ಶೆಟ್ಟರು ಹಾಸಿಗೆ ಹಿಡಿದರು. ಏಕೆ ಎಂದು ಹೆಂಡತಿಗೂ ಹೇಳಲಾರರು. ಪತಿದೇವ ಹೀಗೇ ಕೆಂದು ಪ್ರಭಾವತಿಗೆ ತಿಳಿಯದಾಯಿತು. ಗಾಳಿ ಸ್ತಬ್ಧವಾಯಿತು. ಬಿಸಿಲು ಉರಿಯಾಯಿತು. ಹೂಬಳ್ಳಿ ನಗರದ ಮೇಲೆ ಆಕಾಶದಿಂದ ಅದಾವುದೋ ಅವರ್ಣನೀಯ ಕಷ್ಟ— ಕಣ್ಣೀರು.... ನೋವು.... ನಿಟ್ಟುಸಿರು ಭಕ್ತ ಭಕ್ತರ ಹೃದಯದಂಗಳದಲ್ಲಿ ಇಳಿದಂತಾಯಿತು. ಎಲ್ಲರೂ ಅನೇಕ ವಿಚಿತ್ರ ಕನಸುಕಂಡರು. ಕೆಲವರು ಪುಷ್ಪಕವಿಮಾನದಲ್ಲಿ ಮಹಾಯೋಗಿಯ ಲಿಂಗಾರ್ಚನೆಯನ್ನು ಕಂಡರು. ಇನ್ನು ಕೆಲವರು ಗವಿಯೇ ಗುಪ್ತವಾಗಿ ಮಹಾಶೂನ್ಯವಾದಂತೆ ವಿಚಿತ್ರ ಅನುಭವವನ್ನು ಪಡೆದರು.

ಅತ್ತ ಮಾದೇವಿಯನ್ನು ಕರೆಯಹೋದ ಕುದುರೆಯ ಸವಾರ; ಶರಣ ಶಿವಪ್ಪನ ಪ್ರಾರ್ಥನೆಯಂತೆ ಹಗಲೂ ರಾತ್ರಿಯೂ ಕುದುರೆ ಓಡಿಸ ತೊಡಗಿದ. ಆದರೆ ಮಂಡ ಕುದುರೆ! ಅನೇಕ ಸಲ ದಾರಿತಪ್ಪಿಸಿ ಎಲ್ಲೆಲ್ಲೋ ಹೋಯಿತು. ಸುತ್ತಿದ ಗುಡ್ಡವನ್ನೇ ಮರಳಿ ಮರಳಿ ಸುತ್ತು ಹಾಕಿಸಿತು. ಒಂದೊಂದು ಸಲ ಭಾರೀ ದಣಿದಂತೆ ನಿಂತು ಬಿಡುತ್ತಿತ್ತು. ಈ ಕುದುರೆಯ ಈ ಮಂಡತನವೇಕೆ ಎಂದು ಅದರ ಸವಾರನಿಗೇ ಗೊತ್ತಾಗ ಲಿಲ್ಲ!

* * *

ಈ ದಿನ ರವಿವಾರ!

ಮಾದೇವಿಗೆ ಬೆಳಗಿನ ಕನಸು.... ಶಿವಯೋಗಿ ಗುರುಸಿದ್ಧೇಶ್ವರ

ಭವ್ಯವೂ ಬೃಹದಾಕಾರವೂ ಆದ ಆರು ಗಾಲಿಯ ಪ್ರಾಚೀನ ತೇರಿನ ಮೇಲೆ ಲಿಂಗಾರ್ಚನೆಗೆ ಕುಳಿತಿದ್ದಾನೆ. ತೇರಿನ ತುಂಬಾ ಶ್ರೀಗಂಧದ ಕಟ್ಟಿಗೆಯಲ್ಲಿ ಸುರಸುಂದರ ವಿಗ್ರಹಗಳನ್ನು ಕೆತ್ತಿದ್ದಾರೆ. ತೇರಿನ ಮೇಲೆ ಮುಗಿಲೆತ್ತರದ ಗೋಪುರವಿದೆ. ಅದರ ಬಂಗಾರ ಕಳಸ ಕೈಲಾಸಕ್ಕೆ ಚಾಚಿದೆ. ತೇರಿನ ಹಗ್ಗ ಗಾವುದ ಗಾವುದ ದೂರ ಚಾಚಿದೆ. ಆ ಹಗ್ಗ ಎಳೆಯಲು ದೇವಾನುದೇವತೆಗಳೆಲ್ಲಾ ಕೂಡಿದ್ದಾರೆ. ಕಲ್ಯಾಣದ ಶರಣರೆಲ್ಲಾ ಹಗ್ಗ ಎಳೆಯಲು ಬಂದಿದ್ದಾರೆ. ಸೂರ್ಯಚಂದ್ರರೂ ಬಂದಿದ್ದಾರೆ. ತೇರು ಎಳೆಯಲಿಕ್ಕೆ ಸಿದ್ಧವಾಯಿತು. ತೇರಿನ ಮೇಲೆ ಕುಳಿತ ಗುರುಸಿದ್ಧೇಂದ್ರಯೋಗಿಗಳು ಮಾದೇವಿಯನ್ನು ಕೂಗಿ ಕರೆದು ಅವಳ ಕೈಯಲ್ಲಿ ಹೂವು ಕೊಟ್ಟು ಹೇಳಿದರು—

'ಮಗೂ.... ಮಾದೇವಿ.... ಹೋಗಿಬರುತ್ತೇನವ್ವಾ.... ನಾನು ಹೋಗಿಬರುತ್ತೇನೆ....'

ಮಾದೇವಿ ಏನೂ ತಿಳಿಯದೆ ಮುಗ್ಧಳಾಗಿ ಕೇಳಿದಳು—

'ಎಲ್ಲಿಗೆ ಅಪ್ಪಾಜೀ ... ಎಲ್ಲಿಗೆ ಹೋಗುವಿರಿ.... ಎಂದು ಬರುತ್ತೀರಿ?'

ಶಿವಯೋಗಿಗಳು ನಕ್ಕರು! ಮಾದೇವಿಗೆ ಎಚ್ಚರವಾಯಿತು!!

ಅಂತಃಪುರದ ತೂಗುಮಂಚದಿಂದ ಎಚ್ಚೆತ್ತ ಮಾದೇವಿ; ಮಗ್ಗುಲಲ್ಲಿ ಮಲಗಿದ ಪತಿದೇವನನ್ನೂ ಎಚ್ಚರಿಸಿ ಈ ಕನಸನ್ನು ಹೇಳಿ.... ಏನಿದರ ವೃತ್ತಾಂತ.... ಎಂದು ಕೇಳಿದಳು. ಅವನಿಗೂ ಅದರ ಅಂತರಾರ್ಥ ತಿಳಿಯದೆ ತಲೆ ಅಲ್ಲಾಡಿಸಿದ. ಆ ಕೂಡಲೆ ದ್ವಾರಪಾಲಿಕೆ ಒಳಬಂದು ಕೈಮುಗಿದು ಹೇಳಿದಳು—

'ಅಕ್ಕಾಜಿಯವರೇ.... ತಮ್ಮನ್ನು ಕಾಣಲು ಹೂಬಳ್ಳಿ ಆಶ್ರಮದಿಂದ ಒಬ್ಬ ಕುದುರೆಸವಾರ ಪತ್ರ ತೆಗೆದುಕೊಂಡು ಬಂದಿದ್ದಾನೆ....'

'ಹಾಂ....?'

ಎಂದು ಮಾದೇವಿ ಉಟ್ಟ ಸೀರೆಯ ಮೇಲೆ ಎದ್ದು, ಹೇಳಲು ಕಟ್ಟಿಕೊಳ್ಳುವದನ್ನೂ ಮರೆತು ಅಂತಃಪುರದ ತಲಬಾಗಿಲಿಗೆ ಓಡಿದಳು. ನಿಂತಿದ್ದ ಆಶ್ರಮದ ದೂತ ಕೈಮುಗಿದು ಹೇಳಿದ--

'ಅಕ್ಕವ್ಮಾ.... ನಾನು ಹೂಬಳ್ಳಿ ಆಶ್ರಮದಿಂದ ಬಂದೆ.... ನಿಮ್ಮ ತಂದೆಯವರು ಈ ಪತ್ರಾ ಕೊಡೂ ಅಂತ ಹೇಳಿ ನನಗ ಕೊಟ್ರು.... ತೊಗೊಳ್ರಿ....'

ಮಾದೇವಿ ತಂದೆಯ ಪತ್ರ ಬಿಚ್ಚಿ ಓದಿದಳು....

'....ಮಗಳೇ.... ನಿನಗೆ ಹೇಳಬಾರದ ಕಷ್ಟದ ಸುದ್ದಿಯನ್ನು ಈ ಪತ್ರದಲ್ಲಿ ಹೇಳಬೇಕಾಗಿದೆ. ಗತಿ ಇಲ್ಲ. ನಾಳೆ ಕಡೆಯ ಶ್ರಾವಣ ಸೋಮವಾರ ಬೆಳಗಿನ ಜಾವಕ್ಕೆ ಮಹಾಶಿವಯೋಗಿಗಳು ಮಹಾಸಮಾಧಿಯನ್ನು ಸೇರಲು ನಿರ್ಧರಿಸಿಬಿಟ್ಟಿದ್ದಾರೆ. ಅವರ ಕೊನೆಯ ದರ್ಶನ ನಿನಗೆ ಬೇಕಾಗಿದ್ದರೆ ಈಗಿಂದೀಗಲೇ ಹೊರಟು ಬಾ....'

ಪತ್ರವನ್ನು ಓದುತ್ತಿದ್ದಂತೆ ಸುತ್ತಲ ಅಂತಃಪುರ ಗರಗರ ತಿರುಗಿದಂತಾಯಿತು. ನೆಲಕ್ಕೇ ಬೆಂಕಿ ಬಿದ್ದಂತಾಯಿತು. ಸಾವಿರಬಾಣಗಳು ಒಮ್ಮೆಲೇ ಬಂದು ಇರಿದಂತಾದವು. ಮಾದೇವಿ ಮಹಾಸಂಕಟದಿಂದ ಚಿಟ್ಟನೇ ಚೀರಿ ಮೂರ್ಛೆ ಹೋಗಿ ನೆಲಕ್ಕೆ ರೊಪ್ಪನೇ ಬಿದ್ದುಬಿಟ್ಟಳು. ಆಕ್ಷಣವೇ ಪತಿದೇವ ಓಡಿಬಂದ ನೂರಾರು ಸೇವಿಕೆಯರು ಚೀರುತ್ತಲೇ ಓಡಿಬಂದರು. ಮಾದೇವಿಯ ಕೈಕಾಲು ಒತ್ತಿ ಮಂಚಕ್ಕೆ ಒಯ್ದರು. ಮಾದೇವಿಗೆ ಎಚ್ಚರ ಬಂದದ್ದೇ ತಡ ಹಾಲುಣ್ಣುವ ಹಸುಗೂಸಿನಂತೆ ಭೋರನೆ ಅಳತೊಡಗಿದಳು. ಅವಳ ಕಣ್ಣೀರಿನ ಸಂಕಟವನ್ನು ತಡೆಯುವದು ಯಾರಿಂದಲೂ ಸಾಧ್ಯವಾಗಲಿಲ್ಲ. ಅಂತಃಪುರದ ನೆಲದ ಮೇಲೆ ಧೂಳಿಗೆ ಧೂಳಿಯಾಗಿ ಗಡಗಡ ಉರುಳಾಡಿ ರೋಧಿಸತೊಡಗಿದಳು....

ತಂದೇ.... ತಂದೇ.... ಅಪ್ಪಯ್ಯಾ... ನನ್ನ ಅಪ್ಪಾಜೀ.... ಮಗಳಿಗೆ ಹೇಳದೇ ಹೊರಟೆಯಾ ನನ್ನಪ್ಪಾ.... ನಾನೇನು ಅಪರಾಧ ಮಾಡಿದೆ ಅಪ್ಪಯ್ಯಾ.... ಬೇಡಾ.... ಬೇಡಾ ಅಪ್ಪಯ್ಯಾ.... ನಿನಗೆ ಆಣೆ.... ಸಾವಿರ ಸಾವಿರ ಆಣೆ.... ಹೋಗಬೇಡಾ.... ಹೋಗಬೇಡಾ.... ಮಗಳು ಮರೆತಳೆಂದು ಹೊರಟೆಯಾ ನನ್ನಪ್ಪಾ... ಇಲ್ಲಪ್ಪಾ.... ಇಲ್ಲಪ್ಪಾ.... ನಾನು ಮರೆತರೆ ನನ್ನ ನಾಲಿಗೆ ಹೋಗಲಿ.... ಅಪ್ಪಾ.... ಬೇಡ ಬೇಡಪ್ಪಾ.... ಹೋಗಬೇಡಿ ... ಮಗಳನ್ನು ಬಿಟ್ಟು ಹೋದರೆ ನಿನಗೆ ನನ್ನಾಣೆ.... ನನ್ನ ಪತಿಯಾಣೆ.... ಸಾವಿರ ಸಾವಿರ ಆಣೆ.... ಬರುವೆ.... ಬರುವೆ.... ಈಗಿಂದೀಗಲೇ ಬರುವೆ.... ಹೇಗೆ ಹೋಗುವೆಯೋ ನೋಡಿಯೇ ತೀರುವೆ.... ಅಪ್ಪಾ.... ಅಪ್ಪಯ್ಯಾ.... ಅಪ್ಪಾಜಿ....'

ದಿಗ್ಭ್ರಮೆಗೊಂಡ ರಾಜಕುಮಾರ ವಿಘ್ನೇಶ್ವರ ಆ ದೂತ ತಂದ ಪತ್ರವನ್ನು ಬಿಚ್ಚಿ ತಾನೂ ಓದಿದ. ಅದನ್ನೋದಿ ಒಂದು ಕ್ಷಣ ಹುಚ್ಚನಂತೆ ಸುತ್ತಲೂ ನೋಡಿದ. ಮರುಕ್ಷಣದಲ್ಲಿಯೇ ಅಂತಃಪುರದ ಪ್ರಮುಖ ದಾಸಿಗೆ ಆಜ್ಞೆ ಮಾಡಿದ-—

'ಹೋಗು.... ಹೋಗು.... ಈಗಿಂದೀಗಲೇ ಎರಡು ರಥ ಹೂಡಿಸಿ.... ಭಾರೀ ವೇಗದ ಕುದುರೆಗಳನ್ನು ಹೂಡಿಸು.... ಹೂಂ.... ಓಡು....'

ಪಾಪ ಆ ದಾಸಿ ಎಡವಿ ಬಿದ್ದೇನೆಂಬ ಕಬರಿಲ್ಲದೆ ಅಂತಃಪುರದಿಂದ ಓಡಿ, ಕಟ್ಟೆ ಜಿಗಿದು, ಸಮೀಪದ ರಥಗಳ ಶಿಬಿರಕ್ಕೆ ಧಾವಿಸಿದಳು.

* * *

ಎರಡೂ ರಥಗಳು ಶರವೇಗದಿಂದ ಹೂಬಳ್ಳಿಯತ್ತ ಓಡತೊಡಗಿದವು. ಮುಂದಿನ ರಥವನ್ನು ಸ್ವತಃ ರಾಜಕುಮಾರನೇ ಸಾರಥಿಯನ್ನು

ಪಕ್ಕಕ್ಕೆ ಸರಿಸಿ ಭರದಿಂದ ಓಡಿಸುತ್ತಿದ್ದಾನೆ. ಅವನಿಗೆ ಮಾದೇವಿ ಕೂಗಿ ಹೇಳಿದಳು—

'ಬೇಗ.... ಬೇಗ.... ಇನ್ನೂ ಬೇಗ ಹೊಡೆಯಿರಿ....'

ಮಗ್ಗಲು ಕುಳಿತ ಸಾರಥಿ ನುಡಿದ—

'ನಮ್ಮವ್ವಾ.... ಇದಕ್ಕಿಂತ ಇನ್ಯಾಂಗ ಓಡಿಸಬೇಕು ... ಯುದ್ಧದಾಗೂ ಇಟ್ಟು ಜೋರ ಓಡಿದ್ದಿಲ್ಲಾ ಈ ಕುದುರೆಗೋಳು.... ತಾಳು.... ತಾಳು....'

ಮಾದೇವಿ ಗಟ್ಟಿಯಾಗಿ ಹಣೆಯನ್ನು ಹಿಡಿದುಕೊಂಡು ಕುಳಿತಳು ರಥ ಮಾರುತ ವೇಗದಿಂದ ಓಡುತ್ತಿತ್ತು. ಅವಳ ಬೆನ್ನ ಹಿಂದೆ ಯಾರೋ ಬಿಕ್ಕಿಬಿಕ್ಕಿ ಅಳುವ ಸಪ್ಪಳ ಕೇಳಿತು. ಯಾರೆಂದು ಮಾದೇವಿ ಹೊರಳಿ ನೋಡುತ್ತಾಳೆ.... ಶಿವಶಿವಾ.... ಅವಳ ಹಿಂದೆಯೇ ಅವಳಿಗರಿಯದಂತೆಯೇ ಬಂದು ಕುಳಿತಿದ್ದಾಳೆ.... ಗೌರಿ! ಎದೆಯ ಸೆರಗು ತೊಪ್ಪನೇ ತೋದು ಅಳುತ್ತಿದ್ದಾಳೆ ಆ ಮುಗ್ಧ ಗೌರಿ!!

• • •

ರವಿವಾರ ಸಂಜೆ!

ರಥ ಓಡುತ್ತಿದ್ದಂತೆ ಅದರ ಗಾಲಿ ಮಗ್ಗುಲಿನ ಮಹಾಬಂಡೆಗೆ ಘಕ್ಕನೇ ಹಾದು, ಅದರ ಒಂದು ಸೆಕ್ಕೆ ಚಟ್ಟನೆ ಸಿಡಿದು, ಮುಂದಿನ ತಗ್ಗಿಗೆ ಘುಕ್ಕರಿಸಿ ನಿಂತಿತು. ರಾಜಕುಮಾರ ಕೆಳಗೆ ಇಳಿದು ನೋಡಿದ. ರಥದ ಗಾಲಿ ಮುರಿದಿದೆ!

ಹುಚ್ಚಶಿವಯೋಗಿಯ ಈ ಲೀಲೆ ಎಲ್ಲರಿಗೂ ಗೊತ್ತಾಯಿತು. ಕೆಳಗಿಳಿದು ಬಂದ ಗೌರಿ ಅಕ್ಕನನ್ನು ರಥದಿಂದ ಇಳಿಸಿದಳು. ಅಕ್ಕತಂಗಿ

ಯರಿಬ್ಬರೂ ಒಬ್ಬರನ್ನೊಬ್ಬರು ಕಣ್ಣೀರ ತೋಳಿನಿಂದ ತಬ್ಬಿಕೊಂಡು ಅಳ ತೊಡಗಿದರು. ರಾಜಕುಮಾರ ವಿಘ್ನೇಶ್ವರ ತಮ್ಮ ರಥದ ಹಿಂದೆ ಬರುತ್ತಿದ್ದ ರಕ್ಷಣಾಪಡೆಯ ರಥವನ್ನು ನೋಡತೊಡಗಿದ. ಆದರೆ ಅದು ಕಣ್ಣಿಗೆ ಕಾಣದಷ್ಟು ದೂರ ಉಳಿದಿತ್ತು.

ಬಹುಕಾಲ ಕಳೆದ ಮೇಲೆ ರಕ್ಷಣಾದಳದ ಆ ರಥ ಸಾಕಷ್ಟು ವೇಗದಿಂದಲೇ ಬರುವದು ಕಂಡಿತು. ಆ ರಥವನ್ನು ಅದರ ಮುಂಚೂಣಿ ಯಲ್ಲಿ ಎದ್ದು ನಿಂತು ಸ್ವತಃ ಓಡಿಸಿಕೊಂಡು ಬರುತ್ತಿದ್ದಾನೆ ಗೌರಿಯ ಅಣ್ಣ ದಂಡನಾಯಕ ಭೀಮಣ್ಣ!

ಕೆಲಹೊತ್ತಿನಲ್ಲೆ ಮುರಿದ ಗಾಲಿಯ ರಥವನ್ನು ಇಲ್ಲೆ ನಡುದಾರಿ ಯಲ್ಲೇ ಬಿಟ್ಟು ಉಳಿದವರು ಆ ರಕ್ಷಣಾರಥದಲ್ಲಿಯೇ ಏರಿಕುಳಿತರು. ಅದೂ ಕೂಡ ಅಷ್ಟೇ ಪ್ರಬಲವಾಗಿ ಓಡತೊಡಗಿತು.

* * *

ರವಿವಾರ ನಡುರಾತ್ರಿ!

ಬೆಳಗಾದರೆ ಕಡೆಯ ಶ್ರಾವಣ ಸೋಮವಾರ!!

ಆಶ್ರಮದಲ್ಲಿ ಅನಂತ ಶಾಂತಿ. ರುದ್ರಶಾಂತಿ. ನಿಶ್ಶೂನ್ಯ ನೀರವ ನೀಕಲ ಅನಾದ್ಯನಂತ ಶಾಂತಿ. ಅನಂತ ಯೋಗಪ್ರಭೆ ಇಳಿದು ಬಂದು ಭೂತಪಸ್ವಿಯಾಗಿ ಧ್ಯಾನಕ್ಕೆ ಕುಳಿತಿದೆ. ವಾತಾವರಣದಲ್ಲಿ ಓಂಕಾರ ತುಂಬಿದೆ. ಓಂಕಾರದಲ್ಲ ಮಹಾಸಮಾಧಿ ತುಂಬಿ ತುಳುಕುತ್ತಿದೆ.

ನಡುರಾತ್ರಿಯಲ್ಲಿ ನಿದ್ರೆಯಿಲ್ಲದೆ ಆಶ್ರಮದ ಬಾಗಿಲಲ್ಲಿ ಆಜ್ಞೆಯೇ ಅವತಾರ ತೊಟ್ಟು ಕುಳಿತಿದ್ದಾನೆ ಶರಣ ಶಿವಪ್ಪ! ಎದೆ ಕಲ್ಲಾಗಿದೆ. ಆತ್ಮ ವಜ್ರ ಕಠಿಣವಾಗಿದೆ. ಸಂಕಲ್ಪ ಕಠೋರವಾಗಿದೆ. ಮಹಾಮೌನ

ವಲ್ಲಿ ಮೂರ್ಛೆಹೋದ ಮಹಾರಾತ್ರಿಯನ್ನು ನೋಡುತ್ತ ರುದ್ರಶೈಲಿಯಲ್ಲಿ ಕುಳಿತಿದ್ದಾನೆ ಶಿವಪ್ಪ. ಎದುರಿಗೆ ದೊಡ್ಡ ದೊಡ್ಡ ಚಚ್ಚೌಕು ಕಲ್ಲಿನ ಗುಂಪೆ. ಕಲಸಿದ ಜಿಗಟು ಮಣ್ಣು. ಬುಟ್ಟಿ. ಗುದ್ದಲಿ. ಸಲಕಿ. ಎಲ್ಲ ಸಲಕರಣೆಗಳೂ ಸಿದ್ಧವಾಗಿವೆ.

ಆತ ಕುಳಿತಂತೆ ಯಾರದೋ ಅಮೃತಹಸ್ತ ಅವನ ತಲೆಯಮೇಲೆ ಸ್ಪರ್ಶಿಸಿದಂತಾಯಿತು. ಹೊರಳಿ ನೋಡಿದ ಮಹಾಯೋಗಿ ಗುರುಸಿದ್ಧೇಂದ್ರ! ಅವನ ಪಕ್ಕದಲ್ಲಿ ಮೂರುಸಾವಿರದಪ್ಪನಾದ ಗಂಗಾಧರ ಮುನೀಂದ್ರ!! ಗುರುಸಿದ್ಧ ಶಿವಯೋಗಿ ಆತ್ಮತುಂಬಿ ನಗುತ್ತ ಮಹಾಲಿಂಗವೆ ನುಡಿದಂತೆ ಹೇಳಿದ—

'ಶಿವಪ್ಪಾ.... ಸಿದ್ಧವಾಗಿರುವೆಯೇನಪ್ಪಾ?'

ಶಿವಪ್ಪ ಸಿದ್ಧನಾಗಿ ನಿಂತು ಕೈಮುಗಿದು ಸಂಕಲ್ಪವೇ ಶಬ್ದಾವತಾರ ತಾಳಿದಂತೆ ಹೇಳಿದ—

'ಅಪ್ಪಣೆ ಬುದ್ಧಿ.... ಸಿದ್ಧನಾಗಿದ್ದೇನೆ....'

ಶಿವಯೋಗಿಗಳು ಕರುಣೆ ತುಂಬಿದ ಮಂದಹಾಸವಲ್ಲಿ ಅವನನ್ನು ನೋಡುತ್ತ ಹೇಳಿದರು—

'ಶಿವಾ.... ಲೋಕದ ಭಕ್ತರೆಲ್ಲಾ ನಿನ್ನಂತೆ ಸದ್ಭಕ್ತರಾಗಲಿ.... ಜೀವನವೇ ಶಿವಯೋಗವಾಗಲಿ....'

'ಧನ್ಯ ತಂದೇ.... ಧನ್ಯ....'

'ಕೇಳು.... ಇನ್ನು ಒಂದು ಜಾವಕ್ಕೆ ನಾವು ಸಮಾಧಿಗುಹೆಯಲ್ಲಿ ಸೇರಿ ಮಹಾಸಮಾಧಿಯಲ್ಲಿ ತೇಲಿ ಹೋಗುತ್ತೇವೆ. ಆಗ ನೀನು ಪಂಚಾಕ್ಷರ ಮಂತ್ರವನ್ನೇ ಜಪಿಸುತ್ತ ಗವಿಯನ್ನು ಭದ್ರವಾಗಿ ಗೋಡೆ ಕಟ್ಟಿ ಮುಚ್ಚಿಬಿಡು'

'ಆಗಲಿ ತಂದೆ.... ತಮ್ಮ ಮಹದಾಜ್ಞೆ... ಮಹದಾಜ್ಞೆ... !'

* * *

ಶಿವಶಿವಾ....

ಬರಬಾರದು.... ಬರಬಾರದು....

ಆದರೆ.... ಇಗೋ.... ಬಂತು.... ಬಂತು.... ಕಡೆಯ ಶ್ರಾವಣ ಸೋಮವಾರ....

ಮಹಾಕನಸು.... ಸೂರ್ಯೋದಯದ ಪೂರ್ವದ ಬ್ರಾಹ್ಮೀ ಮುಹೂರ್ತ....

ರಥ ಕತ್ತಲೆಯಲ್ಲಿ ನುಗ್ಗಿ ಓಡುತ್ತಿದೆ!

ಮಾದೇವಿ ಕಂಠ ಹರಿವ ಚೀರಿದಳು—

'ಭೀಮಣ್ಣಾ.... ಓಡಿಸು.... ಓಡಿಸು.... ಇನ್ನೂ ದಾರಿ ಬಹಳ ದೂರ.... ಓಡಿಸು.... ಇನ್ನೂ ಜೋರಾಗಿ ಓಡಿಸು....'

ಕುದುರೆಗಳು ಕಂಗೆಟ್ಟಿದ್ದವು. ಸರದಿಯ ಮೇಲೆ ಭೀಮಣ್ಣ ಹಾಗೂ ವಿಶ್ವೇಶ್ವರ ರಥವನ್ನು ಓಡಿಸಿದರು. ದೂರದೂರದಲ್ಲಿ ಹೂಬಳ್ಳಿ ಪುರದ ಪುಟ್ಟದೀಪಗಳು ಕಂಡಂತಾದವು. ಆದರೆ ಸಮೀಪಕ್ಕೆ ಹೋದಾಗ ಅವು ಬೇರೆಯ ಹಳ್ಳಿಗಳೇ ಆಗಿದ್ದವು. ಆತುರ ಕಾತುರಗಳು ಮಾದೇವಿ ಯನ್ನು ತೊತ್ತಳದುಳಿದವು. ಗೌರಿ ಅಕ್ಕನ ತೊಡೆಯ ಮೇಲೆ ತಲೆ ಇಟ್ಟು ನಿಸ್ಸಹಾಯಕಳಂತೆ ಕುಳಿತಿದ್ದಾಳೆ. ರಥ ಅತ್ತೊಮ್ಮೆ ಇತ್ತೊಮ್ಮೆ ಪುಟಿ ಸುತ್ತಿದೆ. ಒಮ್ಮೊಮ್ಮೆ ಉರುಳಿ ಕೊರಕಲಿಗೆ ಬೀಳುವಂತೆ ಮುಗ್ಗು ಲಾಗುತ್ತಿದೆ. ಯಾವುದರ ಕಡೆಗೂ ಯಾರಿಗೂ ಲಕ್ಷವಿಲ್ಲ. ರಾತ್ರಿಯನ್ನು ಸೀಳುತ್ತಿವೆ ರಥದ ಕುದುರೆಗಳು. ದಾರಿಯನ್ನು ಕೊರೆಯುತ್ತಿವೆ ರಥದ ಗಾಲಿಗಳು.

ವಿಚಿತ್ರ! ವಿಚಿತ್ರ!!

....ಹೂಬಳ್ಳಿ ಗ್ರಾಮಕ್ಕೆ ಹೇಗೆ ಸುದ್ದಿಯಾಯಿತೊ.... ಯಾರಿಗೆ ಗೊತ್ತು? ಬಹುಶಃ ರುದ್ರಪ್ಪ ಶಟ್ಟರ ಕರುಣಾಜನಕ ದುಃಖವೂ, ಆಕಸ್ಮಿಕವಾಗಿ ಕುದುರೆ ಸವಾರ ಮಾದೇವಿಯ ಬಳಿ ಹೋದ ಪ್ರಸಂಗವೂ ಸಂಶಯಕ್ಕೆ ಎಡೆಮಾಡಿಕೊಟ್ಟವೋ ಏನೊ? ನಿನ್ನೆ ಸಂಜೆ ಶರಣ ಶಿವಪ್ಪ ಕಲ್ಲುಗಳನ್ನು ಚೂಕಾಗಿ ಹೊಡೆದುಕೊಂಡು ಸಿದ್ಧನಾಗುತ್ತಿದ್ದ? ಅಥವಾ ಮತ್ತೆ ಯಾರಾದರೂ ಸುದ್ದಿ ತಿಳಿಸಿದರೋ ಏನೊ? ಸಂಶಯದ ಸುಳಿ ತಿಳಿದ ಹೂಬಳ್ಳಿಯೂ ಸುತ್ತಲಿನ ಗ್ರಾಮಗಳೂ ನಡುರಾತ್ರಿಯಲ್ಲಿ ಎಚ್ಚತ್ತವು. ಸಾವಿರಾರು ಜನ ಸಾವಿರಾರು ದೀವಟಿಗೆಗಳನ್ನು ಹಿಡಿದುಕೊಂಡು ಮಹಾ ಸಂಕಟದಿಂದ ಸರೋವರದ ಕಡೆಗೆ ಸಾಗಿದರು. ಶಟ್ಟರ ಮಡದಿ ಪ್ರಭಾವತಿ ಎಲ್ಲ ಸಖಿಯರೊಂದಿಗೆ ಕಂಗೆಟ್ಟು ನಡೆದಳು. ಮುದುಕರು ಮಕ್ಕಳು ಪುರುಷರು ಸ್ತ್ರೀಯರು ಓಣಿಗೆ ಒಬ್ಬರಂತೆ ಕೂಡಾ ಉಳಿಯದೆ ನಡೆದರು. ಆದರೆ ಸರೋವರ ಇನ್ನೂ ಎರಡುಕೂಗಳತೆ ಇರುವಾಗ ಚುಮು ಚುಮು ನಸುಗಿನ ಬೆಳಗಿನಲ್ಲಿ ಅವರ ಎದುರಿಗೆ ಗವಿಯ ಕಡೆಯಿಂದ ರುದ್ರಪ್ಪ ಶಟ್ಟರು ಬಂದು ಕೈಮುಗಿದು ನಿಂತರು. ಪುರಪ್ರಮುಖರು ಅವರನ್ನು ಒತ್ತಿ ಹಿಡಿದು ಕೇಳಿದರು—

'ಏನು ರುದ್ರಪ್ಪಶಟ್ಟರೆ.... ನಾವು ಕೇಳಿದ್ದು ನಿಜವೇ?''

ಉತ್ತರ ಕೊಡಲು ಸಾಧ್ಯವಾಗದೆ ಶಟ್ಟರು ಅಳತೊಡಗಿದರು. ಆಗಲೇ ಅತ್ತುಅತ್ತು ಕಣ್ಣುಗಳು ಕೆಂಪಾಗಿದ್ದವು. ಆದರೂ ಉಕ್ಕಿದ ಕಣ್ಣೀರು ಹಸಿಗೊಂಡು ಎಲ್ಲರಿಗೂ ಪ್ರಾರ್ಥಿಸಿದರು—

'ನಿಮಗೆಲ್ಲಾ ನಾನು ಕೈಮುಗಿದು ಬೇಡಿಕೊಳ್ಳುತ್ತೇನೆ.... ಶಿವ ಯೋಗಿಗಳು ಶಾಂತವಾಗಿ ಗುಪ್ತವಾಗಿ ಮಹಾಸಮಾಧಿಯನ್ನು ಸೇರಲು ನಿಶ್ಚಯಿಸಿದ್ದಾರೆ.... ಇದು ಮರಣವಲ್ಲ ಲಿಂಗೈಕ್ಯವಾಗುವುದೆಂದು ಹೇಳಿ.... ಇಂತಹ ಸಮಯದಲ್ಲಿ ಎಲ್ಲರೂ ನಗಬೇಕು.... ಯಾರೂ ಅಳಬಾರದೆಂದು ಶಿವಯೋಗಿಗಳು ನಿನ್ನೆ ಅಪ್ಪಣೆ ಮಾಡಿದ್ದಾರೆ.... ಆದ್ದರಿಂದ ಇದು

ಮಹಾಶಿವಯೋಗಿ ಶಿವನಲ್ಲಿ ಕೂಡುವ ಆನಂದದ ಉತ್ಸವ.... ಅಳ ಬಾರದು.... ನೀವು ಯಾರೂ ದಯಮಾಡಿ ಅಳಬಾರದು....'

ಎಂದು ಹೇಳುತ್ತಲೇ ಶಟ್ಟರು ಭೋರನೆ ಅಳತೊಡಗಿದರು! ಪ್ರಭಾವತಿ ನೆಲಕ್ಕುರುಳಿದಳು!! ಜನರೆಲ್ಲಾ.... ತಂದೇ.... ತಂದೇ.... ಎಂದು ಆಶ್ರಮಕ್ಕೆ ನುಗ್ಗಿದರು.

• • •

ಓ.... ನಿಲ್ಲು ಕತ್ತಲೆಯೆ.... ಓ ನಿಲ್ಲು ಅಜ್ಞಾನವೆ.... ಓ ದೂರ ಸರಿ ಕಾಲಪುರುಷನೆ.... ಇಗೋ ಶಿವಯೋಗಿಯ ಮಹಾಶ್ರೀಸಮಾಧಿಯ ಮಂಗಳಗುಹೆ.... ಶಾಂತಿಯ ಶಾಂತಿ.... ಆನಂದದ ಆನಂದ.... ಓಂಕಾರದ ಓಂಕಾರ.... ಮುಕ್ತಿಯ ಮುಕ್ತಿ.... ಶಿವಶಿವಾ.... ಶಬ್ದವಿಲ್ಲ... ನಿಶ್ಶಬ್ದವಿಲ್ಲ.... ನಾನಿಲ್ಲ.... ನೀನಿಲ್ಲ.... ಬೆಳಗಿಲ್ಲ.... ರಾತ್ರಿಯಿಲ್ಲ.... ಇಗೋ ಈ ಗವಿಯ ಕಲ್ಲು ಮಣ್ಣುಗಳೂ ಜಡತ್ವವನ್ನು ಕಳೆದುಕೊಂಡು ಪ್ರಬುದ್ಧ ಜ್ಞಾನಿಯ ಪ್ರಸನ್ನ ಪ್ರಕಾಶದಲ್ಲಿ ಜ್ಯೋತಿರ್ಲಿಂಗವಾಗಿವೆ.... ಈ ಗಾಳಿ ಜಂಗಮಲಿಂಗವಾಗಿದೆ.... ಇದು ಗವಿಯೋ ಗುಹೇಶ್ವರಲಿಂಗವೋ....?

ಮಹಾಶಿವಯೋಗಿ ಜಗದ್ಗುರು ಗುರುಸಿದ್ದೇಂದ್ರ ಗವಿಯಾಳದ ಗವಿಯಲ್ಲಿ.... ಆ ಗೂಢಗವಿಯಲ್ಲಿ.... ಪದ್ಮಾಸನ ಹಾಕಿ ಕೊನೆಯ ಬಾರಿಗೆ ಕುಳಿತ. ಈಗ ಅವನ ಮುಖದಲ್ಲಿ ನಗುವಿಲ್ಲ. ಮಾತಿಲ್ಲ. ಬೋಧೆಯಿಲ್ಲ. ಮಾನವತೆಯ ಸೋಂಕಿಲ್ಲ. ಕೈಲಾಸದ ಶಿವನೆದೆಯ ವಜ್ರಲಿಂಗದಂತೆ ಸ್ವಯಂಜ್ಯೋತಿಃಪ್ರಭೆಯಿಂದ ರಾರಾಜಿಸುತ್ತಿದ್ದಾನೆ. ತುಪ್ಪದ ದೀಪ ನಗುತ್ತಿದೆ. ರುದ್ರಾಕ್ಷಿ. ಕಮಂಡಲು. ಹೂವುಪತ್ರಿ. ಪೂಜಾಸಲಕರಣೆಗಳು. ಅಪೂರ್ವ ಸುವಾಸನೆ. ಮಹಾಸಮಾಧಿಯ ಪೂರ್ವಸೂಚನೆಯೋ ಎಂಬಂತೆ ಗುಪ್ತವಾದ್ಯಗಳು. ಶಿವಯೋಗಿಯ

ಶರೀರದಿಂದ ಜ್ಯೋತಿಯ ಹೊಳೆಗಳು ಉಕ್ಕಿಬಂದಂತೆ ಪ್ರಕಾಶ ಚಿಮ್ಮು-ತ್ತಿದೆ. ದಿವ್ಯಾನಂದ ರಸಘಟ್ಟಿಯಾಗಿ ತುಂಬಿದೆ. ಪೂಜೆ ಆರಂಭವಾಯಿತು. ಭಕ್ತಸ್ಥಲದಿಂದ ಐಕ್ಯಸ್ಥಲದ ಓಜೆ ಆಳವಟ್ಟಿತು. ಗುಹೆಯು ಆ ಗೂಢ ಪೂಜಾಗವಿಯ ಬಾಗಿಲಿನ ಬಲಬದಿಗೆ ಮಹಾಯೋಗಿ ಜಗದ್ಗುರು ಗಂಗಾಧರ ನಿಂತಿದ್ದಾನೆ! ಎಡಬದಿಗೆ ಮಹಾಭಕ್ತ ಶಿವಪ್ಪ ನಿಂತಿದ್ದಾನೆ!! ಕೆಲಕಾಲ ಧ್ಯಾನಮಗ್ನನಾಗಿ ತನ್ನ ಆತ್ಮದ ಅನಂತದರ್ಶನದ ಸಹಜಸ್ಫುರಣ ವನ್ನು ಒಮ್ಮೆ ಸೇವಿಸಿ, ಮತ್ತೆ ಕಣ್ದೆರೆದು ಗುರುಸಿದ್ಧಯೋಗೀಂದ್ರ ಮೃದುವಾಗಿ ಕೇಳಿದ—

'ಜಗದ್ಗುರು ಗಂಗಾಧರಾ.... ಇನ್ನು ಮಹಾಸಮಾಧಿಗೆ ಅಪ್ಪಣೆ ಯೇ ನಮಗೆ?'

ಗಂಗಾಧರಯೋಗಿ ಕೈಮುಗಿದು ಬಾಗಿಲಿಗೆ ಹಣೆಹಚ್ಚಿ ಹೇಳಿದ-

'ಮಹಾಪ್ರಭೂ.... ನಿಮ್ಮ ಮಹಾಸಮಾಧಿಗೆ ಒಪ್ಪಿಗೆ ಕೊಟ್ಟಿದ್ದೇವೆ....'

ಈಗ ಶಿವಯೋಗಿ ಶರಣ ಶಿವಪ್ಪನಿಗೂ ಕೇಳಿದ—

'ಶಿವಪ್ಪಾ ... ನಮ್ಮ ಸಕಲ ಭಕ್ತರ ಪರವಾಗಿ ನಮ್ಮ ಮಹಾ ಸಮಾಧಿಗೆ ಅಪ್ಪಣೆಕೊಡಪ್ಪಾ....'

ಕಂಠ ಉಕ್ಕಿ ಬಂತು ಶಿವಪ್ಪನಿಗೆ! ಹೂಂ .. ಎನ್ನಲೂ ಆಗಲಿಲ್ಲ. ಭಾರವಾದ ಎದೆಯಿಂದ ಬಾಗಿ ಆ ಪೂಜಾಮಂದಿರದ ಹೊಸ್ತಿಲಿಗೆ ಹಣೆ ಇಟ್ಟ. ಕಣ್ಣೀರು ಪಳಪಳ ಸುರಿದು ಅಪ್ಪಣೆ ಕೊಟ್ಟವು

ಗುರುಸಿದ್ಧೇಂದ್ರ ಶಿವಯೋಗಿ ತನ್ನ ಕರದಿಷ್ಟಲಿಂಗವನ್ನು ಪ್ರಾಣವೇ ನೋಟವಾಗಿ.... ನೋಟವೇ ಪ್ರಾಣವಾಗಿ.... ನೆನಹು ನಿಬ್ಬೆರ ಗಾಗಿ .. ಅರಿವೇ ಗುರುವಾಗಿ.... ಶೂನ್ಯದಿಂದ ಶೂನ್ಯಕ್ಕೆ.... ಆನಂದದಿಂದ ಆನಂದಕ್ಕೆ ಸಾಗುತ್ತ.... ಆ ಮಹಾಘನಸ್ಥಿತಿಯಲ್ಲಿ ಕೆಲಕಾಲ ನಿಂತು....

ಶೂನ್ಯಸಾಗರದ ನಿಶ್ಶೂನ್ಯ ಕ್ಷಿತಿಜವನ್ನು ಸವಿೂಕ್ಷಿಸಿ ... ಮತ್ತೆ ಮೆಲ್ಲನೆ ಶಬ್ದಲೋಕಕ್ಕೆ ಇಳಿದು ಬಂದು ಹೇಳಿದ—

'ಶಿವಾ.... ಆರಂಭಿಸು ಶಿವಾ.... ಗೋಡೆ ಏರಿಸು ಶಿವಾ....'

ಮರುಮಾತಿಲ್ಲದೆ ಶಿವಪ್ಪ ಮಂತ್ರಧ್ಯಾನಮಗ್ನನಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಾಗಿಲಿಗೆ ಇಡುತ್ತ.... ಬಲಿಷ್ಟವೂ ಅಗಲವೂ ಆದ ಗೋಡೆ-ಯನ್ನು ಕಟ್ಟತೊಡಗಿದ. ಗೋಡೆ ಮೆಲ್ಲನೇ ಏರತೊಡಗಿತು. ಒಂದು ಎರಡು.... ಮೂರು.... ಒಂದೊಂದರ ಮೇಲೆ ಒಂದೊಂದು ಕಲ್ಲುಗಳನು ಮನದಲ್ಲಿ ಮಹಾಮಂತ್ರ ಜಪಿಸುತ್ತ ಇಡತೊಡಗಿದ. ಗಂಗಾಧರ ಯೋಗೀಂದ್ರ ಕಣ್ಮುಚ್ಚಿ ನಿಂತ. ಗುರುಸಿದ್ಧಯತೀಂದ್ರ ಲಿಂಗನಿರೀಕ್ಷಣೆಯ ನಿಬ್ಬೆರಗಿನಲ್ಲಿ; ಬಯಲಿನೊಳಗಿನ ಮಹಾಬಯಲಲ್ಲಿ; ಸಾಕಾರ ನಿರಾ ಕಾರಗಳನ್ನು ವಿೂರಿ ... ಅತ್ತತ್ತ.... ಅತ್ತತ್ತ.... ತೇಲುತ್ತ ಓಂಕಾರ ಯೋಗದಲ್ಲಿ ನೆಲೆನಿಂತ ಕಲ್ಲುಗಳು ಏರತೊಡಗಿದವು. ಗೋಡೆ ಏರ ತೊಡಗಿತು. ಬಹುಶಃ ಗೋಡೆ ಶಿವಯೋಗಿಯ ಎದೆಮಟ ಬಂದಿರಬಹುದು ಗುರುಸಿದ್ಧೇಂದ್ರಯೋಗಿಗಳು ಲಿಂಗ ನಿರೀಕ್ಷಣೆಯನ್ನು ಬಿಡದೇ; ಆತ್ಮದ ಶಿವಸಮುದ್ರದ ಚಿರಂತನ ತರಂಗಮಾಲೆಗಳ ನಿಸ್ತರಂಗ ಶಾಂತಿಯಲ್ಲಿ ಶಾಶ್ವತವಾಗಿ ಮುಳುಗುವ ಮೊದಲು; ಇನ್ನೊಮ್ಮೆಗೆ ಮರಳಿ ಶಬ್ದ ಲೋಕಕ್ಕೆ ಇಳಿದು ಬಂದು ಶರಣ ಶಿವಪ್ಪನಿಗೆ ಮತ್ತೆ ಹೇಳಿದರು—

'ಶಿವಾ.... ನನ್ನ ದರ್ಶನಕ್ಕಾಗಿ ಬಹಳ ಜನಭಕ್ತರು ಬರುತ್ತಿದ್ದಾರೆ.... ರಥವೂ ಬರುತ್ತಿದೆ.... ಅವರಿಗೆಲ್ಲಾ ನನ್ನ ಆಶೀರ್ವಾದ ತಿಳಿಸು.... ಹೂಗಳನ್ನು ಅರ್ಪಿಸು ...'

ಮತ್ತೆ ಅನಂತಕ್ಕೆ ಶಿವಯೋಗಿ ಏರಿಹೋದ....!

ಮತ್ತೆ ಕಲ್ಲುಗಳು ಏರತೊಡಗಿದವು ...!!

ಮತ್ತೆ ಗೋಡೆ ಏರತೊಡಗಿತು....!!!

ಶಿವಶಿವಾ.... ಶಬ್ದಲೋಕ ನಿಶ್ಶಬ್ದದಲ್ಲಿ ಕಳಚಿ ಬಿತ್ತು....

ದ್ವಂದ್ವ ಇಂಗಿತು.... ಐಕ್ಯನ ಹಂಗು ಹರಿಯಿತು.... ಮುಕ್ತಿಯು ಗೊತ್ತು ಮೀರಿತು.... ಆಚೆಗೆ.... ಆಚೆಯಾಚೆಗಿನ ಆಚೆಗೆ.... 'ಆಚೆ' ಎಂಬ ಶಬ್ದವನ್ನೂ ಮೀರಿ ಆಚೆಗೆ.... ಅರಿಯಬಾರದ ಮಹಾಘನವನರಿತು.... ಅರಿಯದಂತಾದ.... ಶಿವಶಿವಾ.... ಅರಿಯದಂತಾದ....!!!

§ § §

ಇನ್ನೇನು ಕಲ್ಲಿನ ಒಂದು ಸಾಲು ಇಟ್ಟರೆ ಮುಗಿಯುತ್ತಿತ್ತು! ಅಷ್ಟರಲ್ಲಿ ಹೂಬಳ್ಳಿಯ ಜನರು ಗವಿಯನ್ನು ಮುತ್ತಿದರು.... ಗುರುಸಿದ್ಧೇಶಾ.... ಗುರುಸಿದ್ಧೇಶಾ.... ಗುರುಸಿದ್ಧೇಶಾ.... ಎಂದು ಆತ್ಮದ ಅಂಗಳಕ್ಕೂ ಕೇಳುವಂತೆ ಕೂಗಿದರು.

ಆದರೆ ಶಿವಯೋಗಿ ಕಣ್ತೆರೆಯಲಿಲ್ಲ!

ಶರಣ ಶಿವಪ್ಪ ಗೋಡೆ ಕಟ್ಟುವದನ್ನು ನಿಲ್ಲಿಸಲಿಲ್ಲ!!

ಗವಿಯ ಬಾಗಿಲಿಗೆ ಬಂದ ಭಕ್ತರೆಲ್ಲಾ ಗವಿಯ ಕಲ್ಲಿಗೆ ಹಣೆಜಜ್ಜಿ ಅಳತೊಡಗಿದರು. ಸಂಕಟದಿಂದ ಉರುಳಾಡತೊಡಗಿದರು. ಅನೇಕರು ಕೈಮೈ ಹರಿದುಕೊಂಡು ಹುಚ್ಚರಂತೆ ಚೀರಿದರು.

ಆಗ ಜಗದ್ಗುರು ಗಂಗಾಧರಯೋಗಿಗಳಾದ ಮೂರುಸಾವಿರರಾಜಯೋಗೀಂದ್ರರು ಹೊರಬಂದು ಅವರೆಲ್ಲರಿಗೂ ಕೈಯೆತ್ತಿ ಹೇಳಿದರು—

'ಕೇಳಿರಿ.... ಎಲ್ಲರೂ ಕೇಳಿರಿ.... ಮಹಾಶಿವಯೋಗಿ ಮಹಾಸಮಾಧಿಯಲ್ಲಿ ಕುಳಿತಿದ್ದಾನೆ .... ನಿರ್ವಿಕಲ್ಪಸಮಾಧಿಯಲ್ಲಿ ಕುಳಿತಿದ್ದಾನೆ.... ಎಲ್ಲರೂ ಆನಂದದಿಂದ ಭಜನೆ ಮಾಡಿರಿ.... ಮಂತ್ರ ಜಪಿಸಿರಿ.... ಯಾರೂ ಅಳಕೂಡದು.... ಎಚ್ಚರಿಕೆ ಯಾರೂ ಅಳಕೂಡದು.... ಆ ಮಹಾಯೋಗಿ ತಾನು ಮಹಾಸಮಾಧಿಯಲ್ಲಿ ಗುಪ್ತವಾಗುವ ಮುನ್ನ ನಿಮಗೆಲ್ಲಾ ಮಹಾಶೀರ್ವಾದ ಹೇಳಿದ್ದಾನೆ.... ಹಾಂ....

ಎಚ್ಚರಿಕೆ.... ಬೇಗ ಆರಂಭಿಸಿ ಮಹಾಮಂತ್ರವನ್ನು....'

ಉರಿಯುತ್ತಿರುವ ಅಗ್ನಿಗೆ ಮಂತ್ರ ಜಪಿಸಲು ಹೇಳಿದಂತಾಯಿತು! ಸಮುದ್ರಕ್ಕೆ ಶಾಂತಿಯಿಂದಿರಲು ತಿಳಿಸಿದಂತಾಯಿತು!! ಆದರೂ ಶ್ರೀಗುರುವಿನ ಆಜ್ಞೆಯೆಂದು ಅಳುತ್ತಲೇ ಎಂತೆಂತೋ ಮಂತ್ರ ಜಪಿಸ ಹೋದರು. ಆದರೆ ಸಾಧ್ಯವಾಗಲಿಲ್ಲ. ಎಲ್ಲರೂ ಹುಚ್ಚುಚ್ಚಾಗಿ ಬಿಕ್ಕಿ ಬಿಕ್ಕಿ ಅಳತೊಡಗಿದರು.

ಮತ್ತೊಮ್ಮೆ ಮೂರುಸಾವಿರದ ಗಂಗಾಧರಯೋಗೀಂದ್ರರು ಕೈಯೆತ್ತಿ.... ಶಾಂತಿ.... ಶಾಂತಿ ... ಶಾಂತಿ ... ಎಂದು ಎಚ್ಚರಿಸಿ ಗವಿಯಾಳಕ್ಕೆ ಇಳಿದು ಹೋಗುವಷ್ಟರಲ್ಲಿ ... ನಸುಕಿನ ಕತ್ತಲೆಯನ್ನು ಕತ್ತರಿಸುತ್ತ ರಾಜರಥವೊಂದು ಆರ್ಭಟಿಸುತ್ತಲೇ ಬಂದು ಗವಿಯ ಒಂದ ಪಕ್ಕಕ್ಕೆ ಅಪ್ಪಳಿಸಿ ನಿಂತಾಗ.... ಆದರಲ್ಲಿದ್ದವರನ್ನೆಲ್ಲಾ ಹೊರಚೆಲ್ಲಿದಂತಾಯಿತು. ಎಲ್ಲರೂ ಹಾ ಎನ್ನುತ್ತಿದ್ದಂತೆ.... ಅಪ್ಪಯ್ಯಾ.... ಅಪ್ಪಾಜೀ.... ಎಂದು ಚೀರುತ್ತ ರಥದಿಂದ ಮಾದೇವಿ ನುಗ್ಗಿದಾಗ ಎಲ್ಲರೂ ಕಂಬನಿಗೆ ಕಂಬನಿ ಹೂವೇರಿಸಿ ಅಳತೊಡಗಿದರು. ಈಗ ಯಾರುಹೇಳಿದರೂ ದುಃಖ ಕೇಳದು. ಭೋರನೇ ಅಳುತ್ತ ಗವಿಗೆ ನುಗ್ಗಿದ ಮಾದೇವಿಯನ್ನು ಕೆಲವರು ತಡೆದು ನಿಲ್ಲಿಸಿದರು. ಮಾದೇವಿಯ ಸಂಕಟದ ಕೂಗಿನಿಂದ ಆ ಪ್ರಶಾಂತತಪೋವನವೇ ಶೋಕಿಸತೊಡಗಿತು. ಗವಿಯ ಕಲ್ಲುಗಳು ಕಂಬನಿ ಸುರಿಸತೊಡಗಿದವು. ನೆಲ ತತ್ತರಿಸಿತು. ಗಾಳಿ ಆಕ್ರಂದಿಸಿತು. ಶಿವಶಿವಾ.... ಆ ಸಮಗ್ರ ಆಶ್ರಮ.... ಆ ಗಿಡಮರಬಳ್ಳಿ.... ಆ ಸರೋವರ.... ಆ ವಾತಾವರಣ.... ಆ ಬಾನು.... ಬಯಲು.... ಎಲ್ಲವೂ ಭೋರನೇ ಭೋರ್ಗರೆದು ಅಳತೊಡಗಿದವು. ಅವರೆಲ್ಲರ ಅಳುವೇ ಮಹಾಮಂತ್ರವಾಯಿತು! ದುಃಖವೇ ಮಹಾಸಮಾಧಿಯ ಮಹಾಪ್ರಾರ್ಥನೆಯಾಯಿತು!!

ತಾಯಿಯನ್ನು ಅಗಲಿಸಿ ಒಯ್ದ ಮಗು; ಅವ್ವಾಽಽ ಎಂದು ಕೂಗುತ್ತ ಬಂದು ತಾಯಿಯನ್ನು ಬರಸೆಳೆದು ಅಪ್ಪಿದಂತೆ.... ಮಾದೇವಿ

ರಭಸದಿಂದ ಕೈಕೊಸರಿ ಗವಿಗೆ ನುಗ್ಗಿದಳು. ಒಂದೇ ಬಾರಿಗೆ ಗವಿ ಆಳದ ಮೆಟ್ಟಲುಗಳ ಮೇಲೆ ಉರುಳಿ ಕೆಳಗಿಳಿದಳು. ಆ ಮಹಾಯೊ ಗುರುಸಿದ್ಧೇಂದ್ರನ ಕಟ್ಟಕಡೆಯ ಆ ಮಹಾಸಮಾಧಿಯ ದರ್ಶನಕ್ಕಾಗಿ, ಆಳಗವಿಯ ಪೂಜಾಮಂದಿರದ ಗುಪ್ತಗವಿಗೆ ಅವಳು ನುಗ್ಗಿ ಹೋದಾಗ, ಶಿವಶಿವಾ.... ಶಿವಶಿವಾ.... ಆ ಶರಣ ಶಿವಪ್ಪ ಕೊನೆಯ ಕಲ್ಲನ್ನು ಆಗ ಇಟ್ಟು ಭದ್ರವಾಗಿ ಗೋಡೆ ಮುಚ್ಚಿಬಿಟ್ಟಿದ್ದ!

ತಂದೇ೦೦.... ಎಂದು ಮಾದೇವಿ ಕರುಳು ಕಿತ್ತು ಬೀಳುವ ಕೂಗಿ; ಗಂಗಾಧರಯೋಗಿಯ ಪಾದದ ಮೇಲೆ ಪ್ರಜ್ಞೆತಪ್ಪಿ ಕುಸಿ ಬಿದ್ದಳು.

• • •

ಮಹಾಸಮಾಧಿಯ ಐಕ್ಯೋತ್ಸವದಲ್ಲಿ ಸರ್ವರಿಗೂ ಮೂ ಸಾವಿರದಷ್ಟಗಳು ಮಹಾಪ್ರಸ್ಥವನ್ನು ಆಶ್ರಮದಲ್ಲಿ ಏರ್ಪಡಿಸಿದರು.

ಶಿವಶಿವಾ.... ಒಂದಲ್ಲ.... ಎರಡಲ್ಲ.... ಸಾವಿರಾರು ನಗರಗ್ರಾ ಗಳಿಂದ ಅಸಂಖ್ಯ ಸ್ತ್ರೀಪುರುಷರು ಸುದ್ದಿ ತಿಳಿಯುತ್ತಿದ್ದಂತೆಯೇ ಭರದಿ ಸಾಗಿಸಾಗಿ ಬಂದರು! ಎಂಟು ದಿಕ್ಕುಗಳೂ ಹಾಹಾಕಾರ ಮಾಡು ಹೌಹಾರಿ ಬಂದವು!!

ಆದರೇನು?

ಮೊದಲೇ ಹುಚ್ಚುಹೋಗಿ.... ಲೀಲಾಪುರುಷ.... ಕೊನೆ ಎಲ್ಲರಿಗೂ ಹುಚ್ಚು ಹಿಡಿಸಿ.... ಯಾರಿಗೂ ಗೊತ್ತಿಲ್ಲದಂತೆ ಮಹಾಸಮಾ ಯಲ್ಲಿ ಚಿರಂತನವಾಗಿ ನೆಲೆಸಿಂತುಬಿಟ್ಟಿದ್ದ!

-ಶುಭಂ-



